ಮಂಗಳೂರು
ಮಂಗಳವಾರ, 26 ಮೇ 2026
ಸಂಪುಟ 48, ಸಂಚಿಕೆ 68 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಗೋ-ಎಲ್‌ಎಕ್ಸ್ ಡಿಜಿಟಲ್ ವೇದಿಕೆ ಸಜ್ಜು | ೦೨
3 ಎಐಎಡಿಎಂಕೆ ಶಾಸಕರು ಟಿವಿಕೆಗೆ | ೦೨
ಚಾಂಪಿಯನ್ನರಿಗೆ ಜಿಟಿ ಚಾಲೆಂಜ್ | ೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಹಸ್ತ

ದಿನದ ಮಾತು

ಪ್ರತಿಯೊಬ್ಬರಿಗೂ ಅವರ ಯೋಗ್ಯತೆ, ನಿಷ್ಠೆ, ಶ್ರದ್ಧೆಗಳ ಪ್ರಕಾರ ಅವಕಾಶ ಕೊಡಬೇಕು.
▲ಕೌಟಿಲ್ಯ

ಮೋದಿಯ ಪತ್ರಿಕಾಗೋಷ್ಠಿ ಎಂಬ ಚಿನ್ನದ ಜಿಂಕೆ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
• ಪುಟ ೬

ಕಿರುಸುದ್ದಿ

ಇಂಧನ ಬೆಲೆ ಮತ್ತೆ 2.61 - 2.71ರೂ. ಹೆಚ್ಚಳ

• **ಹೊಸದಿಲ್ಲಿ:** ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾದ ಹಿನ್ನೆಲೆಯಲ್ಲಿ ದೇಶಾದ್ಯಂತ ಸೋಮವಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಮತ್ತೊಮ್ಮೆ ಹೆಚ್ಚಿಸಲಾಗಿದೆ. ಕಳೆದ ಎರಡು ವಾರಗಳಿಗಿಂತ ಕಡಿಮೆ ಅವಧಿಯಲ್ಲಿ ನಡೆದಿರುವ ನಾಲ್ಕನೇ ಇಂಧನ ದರ ಏರಿಕೆ ಇದಾಗಿದೆ. ಸೋಮವಾರ ಪೆಟ್ರೋಲ್ ದರದಲ್ಲಿ ಪ್ರತಿ ಲೀಟರ್‌ಗೆ 2.61 ರೂ. ಹಾಗೂ ಡೀಸೆಲ್ ದರದಲ್ಲಿ 2.71 ರೂ. ಹೆಚ್ಚಳ ಮಾಡಲಾಗಿದೆ. ಈ ಮೂಲಕ ದಿಲ್ಲಿಯಲ್ಲಿ ಪೆಟ್ರೋಲ್ ಬೆಲೆ 102.12 ರೂ. ಹಾಗೂ ಡೀಸೆಲ್ ಬೆಲೆ 95.20 ರೂ.ಗೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ ಲೀಟರ್‌ಗೆ 111.21 ರೂ., ಡೀಸೆಲ್ 97.83 ರೂ. ಆಗಿದೆ. ಮೇ 15ರಿಂದ ಇಂದಿನವರೆಗೆ ಒಟ್ಟಾರೆಯಾಗಿ ಇಂಧನ ದರದಲ್ಲಿ ಸುಮಾರು 7.5 ರೂ. ಏರಿಕೆಯಾಗಿದೆ. ➡ಪುಟ ೪

ತಾಜ್‌ಮಹಲ್, ಆಮೇರ್ ಕೋಟೆ ವೀಕ್ಷಿಸಿದ ರೂಬಿಯೊ
• ಪುಟ ೨

ರಾಜಸ್ಥಾನದಲ್ಲಿ ದಾಳಿಗೆ ಉಗ್ರರ ಸಂಚು: ಎನ್‌ಐಎ
• ಪುಟ ೨

ಭಯೋತ್ಪಾದನೆಗೆ ನಿಧಿ ಸಂಗ್ರಹ: ಎನ್‌ಐಎ ದಾಳಿ
• ಪುಟ ೨

ಭಟ್ಕಳ ದುರಂತ: ಮೃತರ ಸಂಖ್ಯೆ 11ಕ್ಕೆ ಏರಿಕೆ
• ಪುಟ ೫

ಸಾರ್ವಜನಿಕ ಸ್ಥಳದಲ್ಲಿ ಪ್ರಾಣಿ ವಧೆಗೆ ಅನುಮತಿಯಿಲ್ಲ: ಸಿಎಂ ಯೋಗಿ ಆದಿತ್ಯನಾಥ್
• ಪುಟ ೨



ಭಾರತಕ್ಕೆ ಮರಳಿದ ಅನ್ನೈಮಂಗಲಂ ತಾಮ್ರಶಾಸನ
• ಪುಟ ೨
ಸುದ್ದಿ ಸಮಗ್ರ

ಆಂತರಿಕ ಆರ್ಥಿಕ ಪರಿಸ್ಥಿತಿ ಸ್ಥಿರ | ಎಫ್‌3ಗೆ ಆದ್ಯತೆ: ನಿರ್ಮಲಾ

ಪಿತೂರಿಗೆ ಭಾರತ ಜಗ್ಗಲ್ಲ



"ಕೆಲವು ಜೊಳ್ಳು ಟೀಕಾಕಾರರು ಎಲ್ಲವೂ ಕುಸಿಯ ತೊಡಗಿದೆ ಎಂದು ಸುಳ್ಳು ಪ್ರಚಾರದಲ್ಲಿ ನಿರತರಾಗಿರುವುದು ಸರಿಯಲ್ಲ.
■ **ನಿರ್ಮಲಾ ಸೀತಾರಾಮನ್** ಕೇಂದ್ರ ಹಣಕಾಸು ಸಚಿವೆ

• **ಮುಂಬೈ:** ಪಶ್ಚಿಮ ಏಷ್ಯಾ ಸಂಘರ್ಷ ಮಧ್ಯೆ ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯಗಳಿಗೆ (3ಎಫ್) ಹೆಚ್ಚಿನ ಒತ್ತು ನೀಡುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದ್ದಾರೆ. ದೇಶೀಯ ಆರ್ಥಿಕತೆ ಕ್ರಿಯಾತ್ಮಕವಾಗಿ ಮುಂದುವರಿದಿರುವುದಾಗಿ ಅವರು ಹೇಳಿದ್ದಾರೆ.

ಸಂಯಮ ಕಾಯ್ದುಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ದೇಶ ವಾಸಿಗಳಲ್ಲಿ ವಿನಂತಿಸಿದ ನಂತರ, ಎಲ್ಲವನ್ನೂ ಸದಾ ವಿರೋಧಿಸುವ ಪ್ರವೃತ್ತಿಯ ಟೀಕಾಕಾರರು ಸಿನಿಕತನ ಮತ್ತು ನಿರಾಶಾವಾದ ಹುಟ್ಟು ಹಾಕುತ್ತಿರುವುದು ಖಂಡನಾರ್ಹವೆಂದು ಖಂಡಿಸಿದ ಸಚಿವರು, ಇಂತಹ ಭಯ ಹುಟ್ಟಿಸುವಿಕೆಗಳಿಗೆ ಭಾರತ ಜಗ್ಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದರು. ಜನರಲ್ಲಿ ಆತ್ಮವಿಶ್ವಾಸ ಮೂಡಿಸುವುದು ಅತ್ಯಗತ್ಯ ಎಂದವರು ಎಸ್‌ಐಡಿಬಿಐನ 37ನೇ ವಾರ್ಷಿಕೋತ್ಸವದಲ್ಲಿ ಪ್ರತಿಪಾದಿಸಿದರು.

ಸುಳ್ಳು ಪ್ರಚಾರ ಸರಿಯಲ್ಲ: ಆರ್ಥಿಕ ಬೆಳವಣಿಗೆಯನ್ನು ಸಂರಕ್ಷಿಸುವುದು ಭಾರತದ ನೀತಿ ನಿಯಮಗಳ ಆಶಯವಾಗಿದೆ. ಡೀಸೆಲ್, ಪೆಟ್ರೋಲ್ ಮೇಲಿನ ಅಬ್ಕಾರಿ ಸುಂಕ ಕಡಿತದಿಂದ ಬೊಕ್ಕಸಕ್ಕೆ ಒಂದು ಲಕ್ಷ ಕೋಟಿ ರೂ. ನಷ್ಟವಾಗುತ್ತಿದೆ. ಕಚ್ಚಾ ತೈಲಗಳ ದರದಲ್ಲಿ ಏರಿಕೆಯಾಗಿದ್ದು, ರಸಗೊಬ್ಬರಗಳ ದರದಲ್ಲಿ ಕಲ್ಪನಾತೀತ ಹೆಚ್ಚಳವಾಗಿದೆ. ಗಗನಕ್ಕೇರಿರುವ ಚಿನ್ನದ ದರ ವಿದೇಶದಲ್ಲಿ ಕೆಲವು ಸವಾಲುಗಳನ್ನು ಸೃಷ್ಟಿಸುತ್ತಿದೆ. ➡ಪುಟ ೪

ಪ್ರಾದೇಶಿಕ ಸಂಘರ್ಷದ ಪ್ರಭಾವ

ಅಮೆರಿಕ ಮತ್ತು ಇಸ್ರೇಲ್ ಜತೆ ಇರಾನ್ ನಡೆಸುತ್ತಿರುವ ಸಂಘರ್ಷದ ಸಂದರ್ಭದಲ್ಲಿ ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿರುವುದು ಜಾಗತಿಕ ಪೂರೈಕೆ ಜಾಲದ ಮೇಲೆ ಪರಿಣಾಮ ಬೀರಿದೆ. ಈ ಪ್ರಾದೇಶಿಕ ಬಿಕ್ಕಟ್ಟಿನಿಂದಾಗಿ ಇಂಧನ ವೆಚ್ಚ ಹೆಚ್ಚಳ, ಸರಕು ಸಾಗಣೆ ವಿಳಂಬ, ದುಬಾರಿ ಹಡಗು ಯಾನ, ಕಚ್ಚಾ ಪದಾರ್ಥಗಳ ಕೊರತೆ ಮತ್ತು ರಫ್ತು ಆರ್ಡರ್‌ಗಳಲ್ಲಿ ಅನಿಶ್ಚಿತತೆ ಎದುರಾಗಿದೆ ಎಂದು ಅವರು ವಿವರಿಸಿದರು.

ಸರ್ಕಾರದ ಆದ್ಯತೆಗಳು

ಪ್ರಸ್ತುತ ಸಂದರ್ಭದಲ್ಲಿ ನಾಗರಿಕರ ರಕ್ಷಣೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಬೆಂಬಲ, ರಫ್ತುದಾರರ ಹಿತರಕ್ಷಣೆ ಮತ್ತು ಪೂರೈಕೆ ಸರಪಳಿಯನ್ನು ಸುಗಮವಾಗಿಡುವುದು ಸರ್ಕಾರದ ಆದ್ಯತೆ. ಬಾಹ್ಯ ಒತ್ತಡಗಳ ನಡುವೆಯೂ ಭಾರತದ ಆಂತರಿಕ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿದೆ ಮತ್ತು ಸದೃಢವಾಗಿದೆ ಎಂದು ಸೀತಾರಾಮನ್ ಸ್ಪಷ್ಟಪಡಿಸಿದರು.

ದೇಶೀಯ ಆರ್ಥಿಕ ಸನ್ನಿವೇಶ ಧನಾತ್ಮಕ


ಸರಕಾರವು ಜನಸಾಮಾನ್ಯರೊಂದಿಗೆ ಕೈ ಜೋಡಿಸಿಕೊಂಡು ಮಾಡಿದ ಉತ್ತಮ ಸಾಧನೆ ಗಳೆಲ್ಲವೂ ಮರೆತುಹೋದಂತೆ ಹಾಗೂ ಸರಕಾರದ ವಿರೋಧಿಗಳು ಇದೀಗ ತೀರಾ ನಿರಾಶಾವಾದದ ಮತ್ತು ಸಿನಿಕತನದ ವ್ಯಾಖ್ಯಾನ ಮಾಡುತ್ತಿರುವುದು ತೀರಾ ಅಸಂಬದ್ಧ ಮತ್ತು ಸರಿಯಲ್ಲ. ಸವಾಲುಗಳ



ಮೂಲ ವಿದೇಶ ಅಥವಾ ವಿದೇಶ ಗಳಲ್ಲಿನ ಸಂಘರ್ಷ ದಿಂದಾಗಿ ಸವಾಲುಗಳು ಸೃಷ್ಟಿಯಾಗಿವೆ ಎಂಬ ವಾಸ್ತವದ ಬಗ್ಗೆ ನಾವು ಮೆಚ್ಚುಗೆ ವ್ಯಕ್ತಪಡಿಸಬೇಕು. ಇಂದಿಗೂ ದೇಶದ ದೇಶೀಯ ಆರ್ಥಿಕ ಸನ್ನಿವೇಶ ಧನಾತ್ಮಕ ಮತ್ತು ಕ್ರಿಯಾಶೀಲವಾಗಿದೆ ಎಂಬುದನ್ನು ಗುರುತಿಸಬೇಕೆಂದು ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದರು.

108 ಆರೋಗ್ಯ ಕವಚ ಕೇಂದ್ರೀಕೃತ ಕಂಟ್ರೋಲ್ ಕೇಂದ್ರಕ್ಕೆ ಸಿಎಂ ಚಾಲನೆ

ತುರ್ತು ಆರೋಗ್ಯ ಸೇವೆ ಇನ್ನಷ್ಟು ಕ್ಷಿಪ್ರ



• **ಬೆಂಗಳೂರು:** ರಾಜ್ಯದಲ್ಲಿ ತುರ್ತು ವೈದ್ಯಕೀಯ ಸೇವೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಒದಗಿಸುವ ಉದ್ದೇಶದಿಂದ ದೇಶದ ಮೊದಲ ಸರ್ಕಾರಿ ಸ್ವಾಮ್ಯದ 108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ (ಸಿಸಿಸಿ) ಕಾರ್ಯಾರಂಭವಾಗಿದೆ. 2008ರಿಂದ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 108 ಆರೋಗ್ಯ ಕವಚ ಸೇವೆ ಕಾರ್ಯನಿರ್ವಹಿಸಲಿದೆ.

ಒಂದು ಕರೆ ನಮಗೆ, ಎಲ್ಲಾ ತುರ್ತು ಸೇವೆ ನಿಮಗೆ

ತುರ್ತು ಆರೋಗ್ಯ ಸೇವೆಗಳನ್ನು ಇನ್ನಷ್ಟು ಚುರುಕುಗೊಳಿಸುವ ಮತ್ತು ಜನಸಾಮಾನ್ಯರಿಗೆ ಸಕಾಲದಲ್ಲಿ ಚಿಕಿತ್ಸೆ ಒದಗಿಸುವ ಮಹತ್ತರ ಉದ್ದೇಶದಿಂದ, ಸಿಎಂ ಸಿದ್ದರಾಮಯ್ಯ ಅವರು ಸೋಮವಾರ ಬಸವೇಶ್ವರ ನಗರದಲ್ಲಿ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯ 108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್, ಕಂಟ್ರೋಲ್ ಕೇಂದ್ರವನ್ನು ಉದ್ಘಾಟಿಸಿದರು. ➡ಪುಟ ೪

ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆಯಿಂದ ಬದುಕುವ ಸಾಧ್ಯತೆ ಹೆಚ್ಚು

ರಸ್ತೆ ಅಪಘಾತ, ಹೆರಿಗೆ, ಹೃದಯ ಸಂಬಂಧಿ ತುರ್ತು ಪರಿಸ್ಥಿತಿಗಳಲ್ಲಿ ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆ ದೊರೆತರೆ ರೋಗಿಗಳ ಬದುಕುಳಿಯುವ ಸಾಧ್ಯತೆ ಹೆಚ್ಚಿರುತ್ತದೆ. ಘಟನೆಯ 1 ಗಂಟೆಯೊಳಗಾಗಿ ನೀಡಿದ ಚಿಕಿತ್ಸೆಯಿಂದ ಶೇ.80ರಷ್ಟು ಜನರು ಬದುಕುಳಿದಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಆಂಬುಲೆನ್ಸ್ ಸೇವೆ ಲಭ್ಯವಾಗಿದ್ದು, ಬೆಂಗಳೂರು ನಗರದಲ್ಲಿ 65 ರಿಂದ 70 ಆಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ➡ಪುಟ ೪



ಪದ್ಮಭೂಷಣ ಶತಾವಧಾನಿ ಆರ್.ಗಣೇಶ್

ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳಿಗಾಗಿ ರಾಷ್ಟ್ರಪತಿ ಮುರ್ಮು ಸೋಮವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕದ ಶತಾವಧಾನಿ ಆರ್. ಗಣೇಶ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಿದರು.

ಹಿಂದು ಶ್ರದ್ಧಾಕೇಂದ್ರ ಮೂರಿನಕಟ್ಟೆ ಧ್ವಂಸ | 6 ಜನರ ಬಂಧನ

ಭಟ್ಕಳದಲ್ಲಿ ನಾಳೆವರೆಗೂ ನಿಷೇಧಾಜ್ಞೆ

• **ಭಟ್ಕಳ:** ಹಿಂದು ಧರ್ಮೀಯರ ಧಾರ್ಮಿಕ ಆರಾಧನಾ ಸ್ಥಳವಾಗಿರುವ ಭಟ್ಕಳ ತಾಲೂಕಿನ ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿರುವ ಮೂರಿನಕಟ್ಟೆಯನ್ನು ಮುಸ್ಲಿಂ ಗುಂಪೊಂದು ಧ್ವಂಸ ಮಾಡಿರುವ ಘಟನೆ ನಗರದಲ್ಲಿ ಉದ್ವಿಗ್ನ ಸ್ಥಿತಿ ಸೃಷ್ಟಿಸಿದೆ. ಘಟನೆ ಸಂಬಂಧ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಈ ಕೃತ್ಯ ತಡೆಯಲು ಬಂದ ಪೊಲೀಸರ ಮೇಲೂ ಹಲ್ಲೆ ನಡೆದಿದೆ. ಭಟ್ಕಳದ ಶಾಂತಿ ಕದಡಲು ಯತ್ನಿಸಿದ ಈ ಕೃತ್ಯಕ್ಕೆ ಸಂಬಂಧಿಸಿದಂತೆ ಎಲ್ಲೆಡೆಯಿಂದ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದ್ದು, ಭಟ್ಕಳ ಪುರಸಭೆ ಮತ್ತು ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇ 25 ಬೆಳಗ್ಗೆ 6 ಗಂಟೆಯಿಂದ ಮೇ 27ರ ಬೆಳಗ್ಗೆ 6 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಪ್ರಕಟಣೆ ತಿಳಿಸಿದೆ. ➡ಪುಟ ೪

ಮೂಲ ಕಟ್ಟೆಗೆ ಹಾನಿಯಾಗಿಲ್ಲ

ಸಾಂಪ್ರದಾಯಿಕ ಹೊರೆ ಇಡುವ ಮೂಲ ಕಟ್ಟೆಗೆ ಯಾವುದೇ ಹಾನಿ ಆಗಿಲ್ಲ. ಹೆದ್ದಾರಿ ಕಾಮಗಾರಿ ಹಿನ್ನೆಲೆಯಲ್ಲಿ ಸ್ಥಳಾಂತರಿಸುವ



ಉದ್ದೇಶದಿಂದ ನಿರ್ಮಿಸಲಾಗಿದ್ದ ಹೊಸ ಕಟ್ಟೆಯನ್ನು ಮಾತ್ರ ಕಿಡಿಗೇಡಿಗಳು ನಾಶಪಡಿಸಿದ್ದಾರೆ. ಸಾರ್ವಜನಿಕರು ಯಾವುದೇ ತಪ್ಪು ಮಾಹಿತಿ, ವದಂತಿಗಳಿಗೆ ಕಿವಿಗೊಡದೆ ಶಾಂತಿ ಕಾಪಾಡಲು ಸಹಕರಿಸಬೇಕು ಎಂದು ಉತ್ತರಕನ್ನಡ ಜಿಲ್ಲಾಡಳಿತ ವತಿಯಿಂದ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ➡ಪುಟ ೪

ದಿಲ್ಲಿಗೆ ತೆರಳಿದ ಸಿಎಂ, ಡಿಸಿಎಂ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದಿಲ್ಲಿಗೆ ಪ್ರಯಾಣ ಬೆಳೆಸಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಕರೆಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ತೆರಳಿದ್ದು, ಕೇಂದ್ರ ಸಚಿವರ ಭೇಟಿಗಾಗಿ ಉಪ ಮುಖ್ಯಮಂತ್ರಿ ದಿಲ್ಲಿಗೆ ತೆರಳಿದ್ದಾರೆ. ವಿಶೇಷ ವಿಮಾನದಲ್ಲಿ ಸೋಮವಾರ ರಾತ್ರಿ ಸಿದ್ದರಾಮಯ್ಯ ಅವರು ದಿಲ್ಲಿಗೆ ತೆರಳಿದ್ದು, ಮಂಗಳವಾರ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ. ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಿದ್ದಾರೆ.

ಸಿದ್ದರಾಮಯ್ಯಗೆ ಕಾಂಗ್ರೆಸ್ ಹೈಕಮಾಂಡ್ ಕರೆ

ಮೊದಲು ಸಿದ್ದರಾಮಯ್ಯ ಅವರು ಮಾತ್ರ ದಿಲ್ಲಿಗೆ ತೆರಳುವುದು ನಿಗದಿಯಾಗಿತ್ತು. ನಮ್ಮನ್ನು ಕರೆದರೆ ಹೋಗುತ್ತೇವೆ ಇಲ್ಲವಾದರೆ ಇಲ್ಲೇ ಉಳಿಯುತ್ತೇನೆ. ಪಕ್ಷ ಕರೆದಾಗ ನಾವು ಹೋಗಲೇ ಬೇಕಾಗುತ್ತದೆ ಎಂದಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೊನೆ ಘಳಿಗೆಯಲ್ಲಿ ಸೋಮವಾರ ರಾತ್ರಿ ದಿಲ್ಲಿಗೆ ತೆರಳಿರುವುದು ಕುತೂಹಲ ಮೂಡಿಸಿದೆ. ➡ಪುಟ ೪

ಮೇಕೆದಾಟುಗೆ ಸುಪ್ರೀಂ ಬಲ

ತ.ನಾಡು ಮರುಪರಿಶೀಲನಾ ಅರ್ಜಿ ತಿರಸ್ಕಾರ

- ಮುಕ್ತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವ ಮನವಿಗೂ ನಿರಾಕರಣೆ
- ಬೆಂಗಳೂರು ಕುಡಿಯುವ ನೀರಿನ ಅವಶ್ಯಕತೆಗೆ ಯೋಜನೆ ಮಹತ್ವದ್ದು ಎಂದ ಕರ್ನಾಟಕ



• **ಹೊಸದಿಲ್ಲಿ:** ಕರ್ನಾಟಕದ ಮಹತ್ವಾಕಾಂಕ್ಷಿ ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರ ಸಲ್ಲಿಸಿದ್ದ



ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಈ ಮೂಲಕ ಯೋಜನೆಗೆ ಮತ್ತೊಂದು ಕಾನೂನುಬದ್ಧ ಬಲ ದೊರೆತಂತಾಗಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಲ್ಯ ಬಗ್ಚಿ ಹಾಗೂ ವಿಪುಲ್ ಎಂ. ಪಂಚೋಲಿ ಅವರಿದ್ದ ಪೀಠವು 'ಪುನರ್‌ಪರಿಶೀಲನೆಗೆ ಯಾವುದೇ ಆಧಾರ ಕಾಣುತ್ತಿಲ್ಲ' ಎಂದು ಸ್ಪಷ್ಟಪಡಿಸಿದೆ. ಇದೇ ವೇಳೆ, ಮುಕ್ತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕೆಂಬ ತಮಿಳುನಾಡಿನ ಮನವಿಯನ್ನೂ ನ್ಯಾಯಪೀಠ ತಿರಸ್ಕರಿಸಿದೆ. ➡ಪುಟ ೪







ಪುದುಚೇರಿ ಮಣ್ಣಿನ ಮಗ ಎಂದೇ ಖ್ಯಾತಿ ಪಡೆದಿರುವ ಸಿಲಂಬಮ್ ದಂತಕಥೆ ಕೆ. ಪಳನಿವೇಲ್ ಅವರು ಪದ್ಮಶ್ರೀ ಸ್ವೀಕರಿಸುವ ಮುನ್ನ ಪ್ರಧಾನಿ ಮೋದಿಯವರಿಗೆ ಶಿರಬಾಗಿ ನಮಸ್ಕರಿಸಿದ ಕ್ಷಣ.

ರಾಷ್ಟ್ರಪತಿಭವನದಲ್ಲಿ 66 ಗಣ್ಯರಿಗೆ ಸನ್ಮಾನ
ಸಾಧಕರಿಗೆ ಪದ್ಮ ಪ್ರಶಸ್ತಿ

ಹೊಸದಿಲ್ಲಿ: ಕರ್ನಾಟಕದ ಸಾಧಕರು ಸೇರಿ 66 ಮಂದಿಗೆ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ 2026ನೇ ಸಾಲಿನ ಪದ್ಮ ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರದಾನ ಮಾಡಿದರು.

ಕರ್ನಾಟಕದ ಶತಾವಧಾನಿ ಆರ್. ಗಣೇಶ್ ಅವರಿಗೆ ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳಿಗಾಗಿ ಪದ್ಮಭೂಷಣ ಪ್ರಶಸ್ತಿ ಮತ್ತು ಸಮಾಜ ಸೇವೆ ಕ್ಷೇತ್ರದಲ್ಲಿ ಅಂಕೇ ಗೌಡ ಎಂ. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಡಾ. ಪ್ರಭಾಕರ ಬಸವಪ್ರಭು ಕೋರೆ, ಶಶಿ ಶೇಖರ್ ವೆಂಪತಿ, ಸಮಾಜ ಸೇವೆ ಕ್ಷೇತ್ರದಲ್ಲಿ ಎಸ್.ಜಿ ಸುಶೀಲಮ್ಮ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಶುಭಾ ವೆಂಕಟೇಶ್ ಅಯ್ಯಂಗಾರ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಸುರೇಶ ಹನಗವಾಡಿ, ವ್ಯಾಪಾರ ಮತ್ತು ಕೈಗಾರಿಕೆ ಕ್ಷೇತ್ರದಲ್ಲಿ ಟಿ.ಟಿ ಜಗನ್ನಾಥನ್ (ಮರಣೋತ್ತರ)ಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಅಂತೆಯೇ ನಟ ಧರ್ಮೇಂದ್ರ ಅವರಿಗೆ ಮರಣೋತ್ತರವಾಗಿ ರಾಷ್ಟ್ರಪತಿ ಮುರ್ಮು ಅವರು ಪದ್ಮವಿಭೂಷಣ ಪ್ರದಾನ ಮಾಡಿದ್ದು, ನಟಿ ಹೇಮ ಮಾಲಿನಿ ಈ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಇತರ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ತಾಜ್‌ಮಹಲ್, ಆಮೇರ್ ಕೋಟೆ ವೀಕ್ಷಿಸಿದ ರೂಬಿಯೊ

ಹೊಸದಿಲ್ಲಿ /ಆಗ್ರಾ/ಜೈಪುರ: ಕ್ವಾಡ್ ವಿದೇಶಾಂಗ ಸಚಿವರ ಮಹತ್ವದ ಸಭೆಗೆ ಮುನ್ನ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೊ ಸೋಮವಾರ ಆಗ್ರಾದ ತಾಜ್ ಮಹಲ್ ಹಾಗೂ ಜೈಪುರದ ಆಮೇರ್ ಕೋಟೆಗೆ ಭೇಟಿ ನೀಡಿ ಭಾರತದ ಐತಿಹಾಸಿಕ ವೈಭವವನ್ನು ಕಣ್ತುಂಬಿಕೊಂಡರು. ಅವರೊಂದಿಗೆ ಪತ್ನಿ ಜೀನೇಟ್ ರೂಬಿಯೊ ಹಾಗೂ ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಜಿಯೋ ಗೋರ್ ಕೂಡ ಇದ್ದರು.

> ಕ್ವಾಡ್ ಸಭೆಗೆ ಮುನ್ನ ದಿಲ್ಲಿ ಸುತ್ತ ಸುತ್ತಾಟ

ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿರುವ ರೂಬಿಯೊ ವಿಶೇಷ ವಿಮಾನದ ಮೂಲಕ ಆಗ್ರಾದ ಖೇರಿಯಾ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಅಲ್ಲಿಂದ ತಾಜ್ ಮಹಲ್ ಸಮೀಪದ ಹೋಟೆಲ್‌ಗೆ ತೆರಳಿ ಬಳಿಕ ಗಾಲ್ಫ್ ಕಾರ್ಟ್‌ನಲ್ಲಿ ಸ್ಮಾರಕ ವೀಕ್ಷಣೆಗೆ ತೆರಳಿದರು.

ಬಳಿಕ ಜೈಪುರದ ಆಮೆರ್ ಕೋಟ್‌ಗೆ ಭೇಟಿ ನೀಡಿದ ರೂಬಿಯೊ ದಂಪತಿಗೆ ಸಾಂಪ್ರದಾಯಿಕ ರಾಜಸ್ಥಾನಿ ಶೈಲಿಯಲ್ಲಿ ಸ್ವಾಗತ ಕೋರಲಾಯಿತು. 16ನೇ ಶತಮಾನದ ಕೋಟೆಯಲ್ಲಿ ಕಚ್ಚಿ ಘೋಡಿ ಹಾಗೂ ಘೂಮರ್ ಜನಪದ ನೃತ್ಯಗಳ ಪ್ರದರ್ಶನವೂ ಆಯೋಜಿಸಲಾಗಿತ್ತು.

ಇಂದು ಮಹತ್ವದ ಕ್ವಾಡ್ ಸಭೆ: ಮಂಗಳವಾರ ದಿಲ್ಲಿಯಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಹಾಗೂ ಜಪಾನ್ ವಿದೇಶಾಂಗ ಸಚಿವ ತುಷಿಮಿತ್ಸು ಮೊಟೇಗಿ ಭಾಗವಹಿಸಲಿದ್ದಾರೆ. ಭಾರತ, ಅಮೆರಿಕ, ಆಸ್ಟ್ರೇಲಿಯಾ ಹಾಗೂ ಜಪಾನ್ ಒಳಗೊಂಡಿರುವ ಕ್ವಾಡ್ ಮೈತ್ರಿಕೂಟ ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆ ಕಾಪಾಡುವ ಉದ್ದೇಶದಿಂದ ಮಹತ್ವ ಪಡೆದುಕೊಂಡಿದೆ.



ಭಾರತಕ್ಕೆ ಮರಳಿದ ಆನೈಮಂಗಲಂ ತಾಮ್ರ ಶಾಸನ

ಸುದ್ದಿ ಸಮಗ್ರ

ನೆದರ್‌ಲ್ಯಾಂಡ್ಸ್‌ನ ಲೈಡನ್ ವಿಶ್ವವಿದ್ಯಾಲಯದಲ್ಲಿದ್ದ 11ನೇ ಶತಮಾನದ ಚೋಳರ ಆನೈಮಂಗಲಂ ತಾಮ್ರಶಾಸನವನ್ನು ಭಾರತಕ್ಕೆ ಹಸ್ತಾಂತರಿಸಲಾಗಿದೆ. ಚೋಳರ ಆಡಳಿತ ವೈಭವ, ತೆರಿಗೆ ವ್ಯವಸ್ಥೆ, ಸಮುದ್ರಾಚೆಯ ರಾಜತಾಂತ್ರಿಕತೆ ಹಾಗೂ ತಮಿಳು ಭಾಷೆಯ ಆಡಳಿತ ಸಾಮರ್ಥ್ಯವನ್ನು ದಾಖಲಿಸಿರುವ ಈ ತಾಮ್ರಫಲಕಗಳು ಸಾವಿರ ವರ್ಷದ ಭಾರತದ ನಾಗರಿಕತೆಯ ಮಹತ್ವವನ್ನು ಮರುಸ್ಥಾಪಿಸಿವೆ.

ಸಾವಿರ ವರ್ಷಗಳ ಇತಿಹಾಸ

ಸುಮಾರು ಸಾವಿರ ವರ್ಷಗಳ ಹಿಂದಿನ ಚೋಳ ಸಾಮ್ರಾಜ್ಯದ ಆಡಳಿತ ಶಕ್ತಿ, ಸಮುದ್ರಾಚೆಯ ಸಂಪರ್ಕ ಹಾಗೂ ತಮಿಳು ನಾಗರಿಕತೆಯ ಜಾಗತಿಕ ಪ್ರಭಾವವನ್ನು ಸಾರುವ ಆನೈಮಂಗಲಂ ತಾಮ್ರಶಾಸನ ಭಾರತಕ್ಕೆ ಮರಳಿದೆ. ನೆದರ್ ಲ್ಯಾಂಡ್ಸ್‌ನ ಲೈಡನ್ ವಿಶ್ವವಿದ್ಯಾಲಯದಲ್ಲಿದ್ದ ಈ ಅಮೂಲ್ಯ ಐತಿಹಾಸಿಕ ದಾಖಲೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರ 2026ರ ನೆದರ್ ಲ್ಯಾಂಡ್ಸ್ ಭೇಟಿಯ ವೇಳೆ ಭಾರತ ಸರ್ಕಾರಕ್ಕೆ ಅಧಿಕೃತವಾಗಿ ಹಸ್ತಾಂತರಿಸಲಾಗಿದೆ.

11ನೇ ಶತಮಾನಕ್ಕೆ ಸೇರಿದ ಈ ತಾಮ್ರಫಲಕಗಳು ಚೋಳರ ಕಾಲದ ಅತ್ಯಂತ ಪ್ರಮುಖ ದಾಖಲೆಗಳೆಂದು ಪರಿಗಣಿಸಲಾಗಿದೆ.

ಆನೈಮಂಗಲಂ ಗ್ರಾಮದ ಭೂಮಿಯ ಆದಾಯವನ್ನು ನಾಗಪಟ್ಟಣದಲ್ಲಿದ್ದ ಚೂಡಾಮಣಿ ವಿಹಾರಕ್ಕೆ ನೀಡಿರುವ ಬಗ್ಗೆ ಇದರಲ್ಲಿ ಉಲ್ಲೇಖವಿದೆ. ಶ್ರೀವಿಜಯ ರಾಜನು ನಿರ್ಮಿಸಿದ್ದ ಈ ಬೌದ್ಧ ವಿಹಾರಕ್ಕೆ ರಾಜರಾಜ ಚೋಳನು ಅನುಮತಿ ನೀಡಿದ್ದನು. ಬಳಿಕ ರಾಜೇಂದ್ರ ಚೋಳನ ಕಾಲದಲ್ಲಿ ಈ ಆದೇಶವನ್ನು ತಾಮ್ರಫಲಕಗಳಲ್ಲಿ ಕೆತ್ತಿಸಿ ಶಾಶ್ವತ ದಾಖಲೆ ಮಾಡಲಾಗಿತ್ತು.

ಆನೈಮಂಗಲಂ ತಾಮ್ರಶಾಸನ ಏಕೆ ವಿಶೇಷ?

ಚೋಳ ಸಾಮ್ರಾಜ್ಯದ ಆಡಳಿತ ವೈಭವವನ್ನು ನೇರವಾಗಿ ದಾಖಲಿಸಿರುವ ಅಪರೂಪದ ದಾಖಲೆಗಳಲ್ಲೊಂದು ಎಂಬ ಕಾರಣಕ್ಕೆ ಆನೈಮಂಗಲಂ ತಾಮ್ರಶಾಸನಕ್ಕೆ ವಿಶೇಷ ಮಹತ್ವ ಇದೆ. ಭೂದಾನ, ತೆರಿಗೆ ವಿನಾಯಿತಿ, ಗ್ರಾಮಾಡಳಿತ ಹಾಗೂ ಅಧಿಕೃತ ದಾಖಲೆ ನಿರ್ವಹಣೆಯ ವ್ಯವಸ್ಥೆ ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ಉನ್ನತ ಮಟ್ಟದಲ್ಲಿತ್ತೆಂಬುದನ್ನು ಇದು ಸಾಬೀತುಪಡಿಸುತ್ತದೆ. ಜೊತೆಗೆ ದಕ್ಷಿಣ ಏಷ್ಯಾ ರಾಷ್ಟ್ರಗಳೊಂದಿಗೆ ಚೋಳರ ರಾಜತಾಂತ್ರಿಕ ಸಂಪರ್ಕ ಮತ್ತು ಸಮುದ್ರಾಚೆಯ ಪ್ರಭಾವಕ್ಕೂ ಇದು ಐತಿಹಾಸಿಕ ಸಾಕ್ಷಿಯಾಗಿದೆ.

ಚೋಳರ ಆಡಳಿತ ವ್ಯವಸ್ಥೆಯ ದರ್ಶನ

ಈ ತಾಮ್ರಶಾಸನಗಳು ಕೇವಲ ಧಾರ್ಮಿಕ ದಾಖಲೆಗಳಲ್ಲ. ಭೂಮಿಯ ಹಕ್ಕು, ತೆರಿಗೆ ವಿನಾಯಿತಿ, ಆದಾಯ ಹಂಚಿಕೆ ಹಾಗೂ ಆಡಳಿತಾತ್ಮಕ ಮಾನ್ಯತೆ ಕುರಿತ ವಿವರಗಳನ್ನು ಒಳಗೊಂಡಿವೆ. ಚೋಳರ ಆಡಳಿತ ವ್ಯವಸ್ಥೆ ಎಷ್ಟು ಸಂಘಟಿತವಾಗಿತ್ತೆಂಬುದಕ್ಕೆ ಇದು ಮಹತ್ವದ ಸಾಕ್ಷಿಯಾಗಿದೆ. ರಾಜರಾಜ ಚೋಳ ಮತ್ತು ರಾಜೇಂದ್ರ ಚೋಳರ ವಂಶಾವಳಿ, ಸೇನಾ ವಿಜಯಗಳು ಹಾಗೂ ಅಧಿಕಾರಿಗಳ ಅಧಿಕೃತ ಮುದ್ರೆಗಳೂ ಇದರಲ್ಲಿ ದಾಖಲಾಗಿವೆ. ತಮಿಳು ಮತ್ತು ಸಂಸ್ಕೃತ ಎರಡೂ ಭಾಷೆಗಳ ಬಳಕೆ ಈ ತಾಮ್ರಫಲಕಗಳ ಮತ್ತೊಂದು ವೈಶಿಷ್ಟ್ಯ. ರಾಜವಂಶ ಮತ್ತು ಧಾರ್ಮಿಕ ಉಲ್ಲೇಖಗಳಿಗೆ ಸಂಸ್ಕೃತ ಬಳಸಲಾಗಿದ್ದರೆ, ಭೂಮಿ, ತೆರಿಗೆ ಹಾಗೂ ಆಡಳಿತದ ವಿಷಯಗಳಿಗೆ ತಮಿಳು ಬಳಸಲಾಗಿದೆ. ಇದರಿಂದ ಚೋಳರ ಕಾಲದಲ್ಲೇ ಸಂಸ್ಕೃತ ಮತ್ತು ತಮಿಳಿಗೆ ಮಹತ್ವದ ಸ್ಥಾನವಿತ್ತೆಂಬುದೂ ಸ್ಪಷ್ಟವಾಗುತ್ತದೆ. ದಾಖಲೆಯಲ್ಲಿ ಚೋಳರ ಆಡಳಿತ ಕೇವಲ ಹಿಂದೂ ಧಾರ್ಮಿಕ ಕೇಂದ್ರಗಳಿಗೆ ಸೀಮಿತವಾಗಿರಲಿಲ್ಲ ಎಂಬುದೂ ಉಲ್ಲೇಖವಾಗಿದೆ. ಶೈವ ಪರಂಪರೆಯೊಂದಿಗೆ ಬೌದ್ಧ ಸಂಸ್ಥೆಗಳಿಗೆ ಸಹ ಆಶ್ರಯ ನೀಡಿದ ರಾಜತಾಂತ್ರಿಕ ಹಾಗೂ ಸಾಂಸ್ಕೃತಿಕ ಉದಾರತೆ ಚೋಳರ ಆಡಳಿತದಲ್ಲಿತ್ತು ಎಂದು ಇದರಿಂದ ತಿಳಿದುಬರುತ್ತದೆ.

ಚೋಳರ ವೈಭವಕ್ಕೆ ಮರಳಿದ ಸಾವಿರ ವರ್ಷದ ಸಾಕ್ಷ್ಯ



2014ರ ಬಳಿಕ ಭಾರತಕ್ಕೆ ಮರಳಿದ ಪುರಾತನ ವಸ್ತುಗಳು

2014ರ ಬಳಿಕ ಭಾರತಕ್ಕೆ ವಿದೇಶಗಳಿಂದ ನೂರಾರು ಪುರಾತನ ವಸ್ತುಗಳು ಮರಳಿವೆ. ಸಂಸತ್ತಿನ ದಾಖಲೆಗಳ ಪ್ರಕಾರ 1976ರಿಂದ 2024ರವರೆಗೆ ಭಾರತಕ್ಕೆ ಮರಳಿದ 655 ಪುರಾತನ ವಸ್ತುಗಳಲ್ಲಿ 642 ವಸ್ತುಗಳು 2014ರ ನಂತರವೇ ವಾಪಸ್ಸಾಗಿವೆ. ಅಮೆರಿಕ, ಆಸ್ಟ್ರೇಲಿಯಾ, ಬ್ರಿಟನ್, ಸಿಂಗಾಪುರ ಮತ್ತು ನೆದರ್‌ಲ್ಯಾಂಡ್ಸ್ ಸೇರಿದಂತೆ ಹಲವು ದೇಶಗಳು ಭಾರತೀಯ ಮೂರ್ತಿಗಳು, ತಾಮ್ರಫಲಕಗಳು ಹಾಗೂ ದೇವಾಲಯಗಳ ಪುರಾತತ್ವವಸ್ತುಗಳನ್ನು ಹಿಂತಿರುಗಿಸಿವೆ. ಶ್ರೀಪುರಂತನ ನಟರಾಜ ಮೂರ್ತಿಯಿಂದ ಹಿಡಿದು ಈಗಿನ ಆನೈಮಂಗಲಂ ತಾಮ್ರಶಾಸನದವರೆಗೆ ಇದು ನಿರಂತರ ಸಾಂಸ್ಕೃತಿಕ ಮರುಸ್ವಾಧೀನ ಪ್ರಕ್ರಿಯೆಯಾಗಿದೆ.

ಚೋಳರ ಸಮುದ್ರದಾಚೆಯ ಪ್ರಭಾವಕ್ಕೆ ಸಾಕ್ಷಿ

ಆನೈಮಂಗಲಂ ತಾಮ್ರಶಾಸನವು ದಕ್ಷಿಣ ಏಷ್ಯಾದ ರಾಷ್ಟ್ರಗಳೊಂದಿಗೆ ಚೋಳರ ರಾಜತಾಂತ್ರಿಕ ಸಂಪರ್ಕವನ್ನೂ ಬೆಳಕಿಗೆ ತರುತ್ತದೆ. ಶ್ರೀವಿಜಯ ರಾಜನ ಮನವಿಗೆ ಸ್ಪಂದಿಸಿ ನಾಗಪಟ್ಟಣದ ಬೌದ್ಧ ವಿಹಾರಕ್ಕೆ ಭೂದಾನ ನೀಡಿರುವುದು, ಚೋಳರು ಸಮುದ್ರ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಪರ್ಕಗಳಲ್ಲಿ ಎಷ್ಟು ಪ್ರಭಾವಶಾಲಿಗಳಾಗಿದ್ದರು ಎಂಬುದನ್ನು ತೋರಿಸುತ್ತದೆ. ಚೋಳ ಸಾಮ್ರಾಜ್ಯವು ಕೇವಲ ದಕ್ಷಿಣ ಭಾರತದ ಶಕ್ತಿಯಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಸಮುದ್ರ ಸಾಮ್ರಾಜ್ಯವಾಗಿತ್ತೆಂಬುದಕ್ಕೂ ಇದು ಐತಿಹಾಸಿಕ ದಾಖಲೆ ಆಗಿದೆ.

ಚೋಳರ ಆಡಳಿತ ಎಷ್ಟು ಮುಂದುವರಿದಿತ್ತು?

ಆನೈಮಂಗಲಂ ತಾಮ್ರಶಾಸನವು ಚೋಳರ ಕಾಲದ ಆಡಳಿತ ವ್ಯವಸ್ಥೆ ಎಷ್ಟು ಶಿಸ್ತಿನದ್ದಾಗಿತ್ತೆಂಬುದನ್ನು ತೋರಿಸುತ್ತದೆ. ಭೂಮಿಯ ಹಕ್ಕು, ತೆರಿಗೆ ವಿನಾಯಿತಿ, ಆದಾಯ ಹಂಚಿಕೆ, ಗ್ರಾಮಾಡಳಿತ ಹಾಗೂ ಅಧಿಕಾರಿಗಳ ದೃಢೀಕರಣದ ವಿವರಗಳನ್ನು ತಾಮ್ರಫಲಕಗಳಲ್ಲಿ ಸ್ಪಷ್ಟವಾಗಿ ದಾಖಲಿಸಲಾಗಿದೆ. ರಾಜಾಜ್ಞೆಯನ್ನು ಕೇವಲ ಮಾತಿನಲ್ಲಿ ಬಿಡದೆ ಅಧಿಕೃತ ದಾಖಲೆಯಾಗಿ ಉಳಿಸುವ ಪದ್ಧತಿ ಚೋಳರಲ್ಲಿದ್ದುದನ್ನು ಇದು ಸಾಬೀತುಪಡಿಸುತ್ತದೆ.

ಚೋಳರ ಜಾಗತಿಕ ಪ್ರಭಾವದ ಪ್ರತೀಕ

ಆನೈಮಂಗಲಂ ತಾಮ್ರಶಾಸನದ ವಾಪಸ್ಸು ಕೇವಲ ಒಂದು ಪುರಾತನ ವಸ್ತುವಿನ ಮರುಪಡೆಯುವಿಕೆಯಾಗಿಲ್ಲ, ಅದು ಭಾರತದ ನಾಗರಿಕತೆಯ ಶಕ್ತಿ, ತಮಿಳು ವೈಭವ ಮತ್ತು ಚೋಳರ ಜಾಗತಿಕ ಪ್ರಭಾವಕ್ಕೆ ದೊರೆತ ಹೊಸ ಮಾನ್ಯತೆಯಾಗಿದೆ. ಸಾವಿರ ವರ್ಷಗಳ ಹಿಂದೆಯೇ ಆಡಳಿತ, ದಾಖಲೆ ನಿರ್ವಹಣೆ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಭಾರತ ಎಷ್ಟು ಮುಂದುವರಿದಿತ್ತೆಂಬುದನ್ನು ಈ ತಾಮ್ರಫಲಕಗಳು ಮತ್ತೆ ಜಗತ್ತಿಗೆ ನೆನಪಿಸಿವೆ.



ಕಿರುಸುದ್ದಿ

ಆಪರೇಷನ್ ವಿಜಯ್: 3 ಶಾಸಕರು ಟಿವಿಕೆಗೆ

ಚೆನ್ನೈ: ತಮಿಳುನಾಡಿನಲ್ಲಿ ಆಪರೇಷನ್ ವಿಜಯ್ ಪರ್ವ ಆರಂಭವಾಗಿದ್ದು, ಆಂತರಿಕ ಬಿಕ್ಕಟಿನಿಂದ ಅದರ ಮೂವರು ಶಾಸಕರು ಸೋಮವಾರ ರಾಜೀನಾಮೆ ನೀಡಿದ್ದಾರೆ. ಮುಖ್ಯಮಂತ್ರಿ ವಿಜಯ್ ನೇತೃತ್ವದ ಟಿವಿಕೆಗೆ ಸೇರ್ಪಡೆಯಾಗಿದ್ದಾರೆ. ಶಾಸಕರಾದ ಮರಗತಮ್ ಕುಮಾರವೇಲ್, ಜಯಕುಮಾರ್ ಮತ್ತು ಸತ್ಯಭಾಮ ಅವರು ಸಲ್ಲಿಸಿದ ರಾಜೀನಾಮೆ ಪತ್ರಗಳನ್ನು ತಮಿಳುನಾಡು ವಿಧಾನಸಭಾ ಸ್ಪೀಕರ್ ಜೆಸಿಡಿ ಪ್ರಭಾಕರ್ ಅಂಗೀಕರಿಸಿದ್ದಾರೆ.

ಗೋ-ಎಲ್‌ಎಕ್ಸ್ ಡಿಜಿಟಲ್ ವೇದಿಕೆ

ಹೊಸದಿಲ್ಲಿ: ಗೋವುಗಳ ರಕ್ಷಣೆಗಾಗಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರು ಗೋ-ಎಲ್‌ಎಕ್ಸ್ ಎಂಬ ಹೊಸ ಡಿಜಿಟಲ್ ವೇದಿಕೆಯನ್ನು ಘೋಷಿಸಿದ್ದಾರೆ. ದತ್ತು ಸ್ವೀಕಾರ ಮತ್ತು ಕ್ರೌಡ್‌ಫಂಡಿಂಗ್ ಮೂಲಕ ದೇಶೀಯ ತಳಿಯ ಹಸುಗಳನ್ನು ಕಸಾಯಿಖಾನೆಗೆ ಸೇರದಂತೆ ರಕ್ಷಿಸಲು ಈ ರಾಷ್ಟ್ರವ್ಯಾಪಿ ಜಾಲ ರೂಪಿಸಲಾಗಿದೆ. ಯುವ ಪೀಳಿಗೆಗೆ ಸುಲಭವಾಗಿ ಅರ್ಥವಾಗುವಂತೆ ಮಾಡಲು ಪ್ರಸಿದ್ಧ ಒಎಲ್ ಎಕ್ಸ್ ಮಾದರಿಯಲ್ಲಿ ಈ ವೇದಿಕೆಯನ್ನು ಸಿದ್ಧಪಡಿಸಲಾಗಿದೆ. ಇಲ್ಲಿ ಹಸುಗಳನ್ನು ಕೇವಲ ರಕ್ಷಣೆಗಾಗಿ ಪಡೆದುಕೊಳ್ಳಬಹುದೇ ವಿನಃ ಮಾರಾಟ ಮಾಡಲು ಅವಕಾಶವಿಲ್ಲ

ರಾಜಸ್ಥಾನದಲ್ಲಿ ದಾಳಿಗೆ ಉಗ್ರರ ಸಂಚು: ಎನ್‌ಐಎ

ಹೊಸದಿಲ್ಲಿ: ದಿಲ್ಲಿ ಕೆಂಪುಕೋಟೆ ಬಳಿ ಕಾರು ಸ್ಫೋಟ ಪ್ರಕರಣದ ಆರೋಪಿ ಡಾ. ಮುಝಮಿಲ್ ಉತ್ತರಪ್ರದೇಶದ ಲಖನೌಗೆ ಭೇಟಿ ನೀಡಿದ್ದ ಮತ್ತು ಅಲ್ಲಿನ ಸರಕಾರಿ ಸಂಕೀರ್ಣಗಳ ಸಹಿತ ಪ್ರಮುಖ ಕೇಂದ್ರಗಳಲ್ಲಿ, ಜನಸಂದಣಿ ಪ್ರದೇಶಗಳಲ್ಲಿ ಸಖತ್ ಸಂಖ್ಯೆಯಲ್ಲಿ ಭಯೋತ್ಪಾದಕ ದಾಳಿ ನಡೆಸುವ ಸಂಚು ಹೊಂದಿದ್ದನೆಂಬ ಸ್ಫೋಟಕ ಸಂಗತಿಯನ್ನು ಎನ್‌ಐಎ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಆರೋಪಿಗಳಾದ ಡಾ.ಮುಝಮಿಲ್ ಶಕೀಲ್ ಮತ್ತು ಡಾ. ಶಹೀನ್ ಸಯೀದ್, ದಾಳಿ ಗುರಿಗಳನ್ನು ಗುರುತಿಸಲು 2025ರ ಆ.25ಮತ್ತು 30ರಂದು ಫರೀದಾಬಾದ್‌ನಿಂದ ಲಖನೌಗೆ ಪಯಣಿಸಿದ್ದರು.

ಲಖನೌದಲ್ಲಿ ಉತ್ತರಪ್ರದೇಶ ವಿಧಾನಸಭಾ, ಬಾಪು ಭವನ, ಇಮಾಂಬರ, ಲಾಲ್‌ಬಾಗ್ ಮತ್ತು ಅಮೀನಾಬಾದ್‌ನಂತಹ ಜನದಟ್ಟಣೆ ಸ್ಥಳಗಳ ಸಹಿತ ಪ್ರಮುಖ ಕೇಂದ್ರಗಳ ಸರ್ವೇಕ್ಷಣೆ ನಡೆಸಿದ್ದ ಆರೋಪಿ ಮುಝಮಿಲ್ ಮತ್ತು ಡಾ.ಶಹೀನ್ ,ಇವೆಲ್ಲವು ಸ್ಫೋಟಕ್ಕೆ ಸುಗಮ ಟಾರ್ಗೆಟ್‌ಗಳು ಮತ್ತು ಇಲ್ಲೆಲ್ಲ ಸ್ಫೋಟಕ ತುಂಬಿದ ಕಾರು ಸ್ಫೋಟಿಸುವ ತಂತ್ರ ಬೆಸೆದಿದ್ದರೆಂದು ಮೂಲಗಳು ತಿಳಿಸಿವೆ. ಕಳೆದ ವರ್ಷ ನ.10ರಂದು ದಿಲ್ಲಿ ಕೆಂಪುಕೋಟೆ ಬಳಿ ಕಾರ್‌ಬಾಂಬ್ ಸ್ಫೋಟಕ್ಕೆ ಬಳಸಿದ್ದ ಮಾರಕ ಟ್ರೈ ಅಸಿಟೋನ್ ಟ್ರೈ ಪೆರಾಕ್ಸೈಡ್ ರಾಸಾಯನಿಕ ಲಭ್ಯವಿರುವ ಕೆಮಿಕಲ್ ಅಂಗಡಿ ಗುರುತಿಸಲು ಮುಝಮಿಲ್ ಆನ್‌ಲೈನ್‌ನಲ್ಲಿ ಸರ್ಚ್ ಮಾಡಿದ್ದ. ಲಖನೌನ ಲಾಲ್‌ಬಾಗ್‌ನಲ್ಲಿ ಕೆಮಿಕಲ್‌ಗಳ ದಾಸ್ತಾನಿಗಾಗಿ ಸೂಕ್ತ ಜಾಗದ ಹುಡುಕಾಟದಲ್ಲಿದ್ದರು. ಅಪಾರ ಕೆಮಿಕಲ್ ಖರೀದಿ ಶಂಕೆಗೆ ದಾರಿಯಾಗದಿರಲು ,ಇವುಗಳ ಖರೀದಿಗೆ ಸ್ಥಳೀಯನೋರ್ವನನ್ನು ಕೆಮಿಕಲ್ ಅಂಗಡಿಗಳಿಗೆ ಕಳುಹಿಸಿದ್ದರು ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

ಭಯೋತ್ಪಾದನೆಗೆ ನಿಧಿ ಸಂಗ್ರಹ:ಎನ್‌ಐಎ ದಾಳಿ

ಶ್ರೀನಗರ: ನಿಷೇಧಿತ ಜಮಾತ್-ಎ-ಇಸ್ಲಾಮಿ ಸಂಘಟನೆಗೆ ಸಂಬಂಧಿಸಿದ ಟೆರರ್ ಫಂಡಿಂಗ್ ಪ್ರಕರಣದ ತನಿಖೆಯ ಭಾಗವಾಗಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸೋಮವಾರ ಕಾಶ್ಮೀರ ಕಣಿವೆಯ ಹಲವೆಡೆ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದೆ. ಕೇಂದ್ರೀಯ ಭಯೋತ್ಪಾದನಾ ನಿರೋಧಕ ದಳ, ಶ್ರೀನಗರ ಮತ್ತು ಶೋಪಿಯಾನ್ ಜಿಲ್ಲೆಗಳ ಮೂರು ಪ್ರಮುಖ ಸ್ಥಳಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಿದೆ. ಈ ವೇಳೆ ಜಮಾತ್-ಎ-ಇಸ್ಲಾಮಿ ಸಂಘಟನೆ ಹಾಗೂ ಅದರ ಅಂಗಸಂಸ್ಥೆಗಳಿಗೆ ಕಾನೂನುಬಾಹಿರ ಹಣಕಾಸು ನೆರವು ನೀಡಿರುವುದಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳು ಮತ್ತು ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಕಳೆದ ತಿಂಗಳು ಕಾನೂನುಬಾಹಿರ ಸಂಸ್ಥೆ ಎಂದು ಘೋಷಿಸಲಾಗಿದ್ದ ಶೋಪಿಯಾನ್‌ನ ದಾರುಲ್ ಉಲೂಮ್ ಸಿರಾಜುಲ್ ಉಲೂಮ್ ಶಾಲೆ, ಸಂಘಟನೆಯ ಮಾಜಿ ಮುಖ್ಯಸ್ಥ ಶಾಹಜಾದಾ ಔರಂಗಜೇಬ್ ನಿವಾಸ ಹಾಗೂ ಶ್ರೀನಗರದ ಜಮಿಯತ್ ಉಲ್ ಬನಾತ್ ಬಾಲಕಿಯರ ಮತೀಯ ಶಾಲೆಯ ಮೇಲೆ ಈ ದಾಳಿ ನಡೆದಿದೆ.

ಉಗ್ರರ ನೇಮಕಾತಿ ಹಿನ್ನೆಲೆ: ಆರೋಗ್ಯ ಮತ್ತು ಶಿಕ್ಷಣದಂತಹ ದತ್ತಿ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಹೆಸರಿನಲ್ಲಿ ಈ ಸಂಘಟನೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಣಿಗೆ ಸಂಗ್ರಹಿಸುತ್ತಿತ್ತು. ಈ ಹಣವನ್ನು ಹಿಜ್ಬುಲ್-ಮುಜಾಹಿದ್ದೀನ್ ಸೇರಿದಂತೆ ನಿಷೇಧಿತ ಭಯೋತ್ಪಾದಕ ಸಂಘಟನೆಗಳಿಗೆ ವರ್ಗಾಯಿಸಲಾಗುತ್ತಿತ್ತು ಎಂದು ತನಿಖೆಯಿಂದ ತಿಳಿದುಬಂದಿದೆ. ಸ್ಥಳೀಯ ಯುವಕರನ್ನು ತೀವ್ರಗಾಮಿಗಳನ್ನಾಗಿ ಪರಿವರ್ತಿಸಿ ನೇಮಿಸಿಕೊಳ್ಳಲಾಗುತ್ತಿತ್ತು, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬೋಲಾ ವಿರುದ್ಧ ಹೋರಾಡಲು ಸನ್ನದ್ಧತೆ

ಹೊಸದಿಲ್ಲಿ: ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ) ಘೋಷಿಸಿರುವ ಬೆನ್ನಲ್ಲೇ, ದೇಶಾದ್ಯಂತ ಇಬೋಲಾವನ್ನು ಎದುರಿಸಲು ಅಗತ್ಯ ಸನ್ನದ್ಧತೆಗಳಿಗೆ ಕೇಂದ್ರ ಸರಕಾರ ವೇಗ ನೀಡಿದೆ. ಇಬೋಲಾ ವೈರಸ್ ಪ್ರಸರಣ ಬಗ್ಗೆ ಜಾಗತಿಕವಾಗಿ ಕಳವಳ ವ್ಯಕ್ತವಾಗಿರುವಂತೆಯೇ, ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅಗತ್ಯ ನಿಗಾ ಮತ್ತು ಚಿಕಿತ್ಸಾ ವ್ಯವಸ್ಥೆಗಳ ಸನ್ನದ್ಧತೆಯ ಪರಾಮರ್ಶೆ ನಡೆಸಿದ್ದಾರೆ. ದೇಶದಲ್ಲಿ ಇದುವರೆಗೆ ಇಬೋಲಾ ಪ್ರಕರಣ ವರದಿಯಾಗಿಲ್ಲ. ಆದರೂ ಮುಂಜಾಗ್ರತಾ ಕ್ರಮವಾಗಿ ಸರಕಾರ ನಿಗಾ ಮತ್ತು ಸನ್ನದ್ಧತೆ ಕ್ರಮಗಳನ್ನು ವ್ಯಾಪಕಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಂದು ವೇಳೆ ಇಬೋಲಾ ಬೆದರಿಕೆ ಎದುರಾದಲ್ಲಿ ದೇಶದ ಸನ್ನದ್ಧತೆ ಹೇಗಿದೆ ಎಂಬುದನ್ನು ಪರಾಮರ್ಶಿಸುವನ್ವಯ , ಸಚಿವ ನಡ್ಡಾ ಸೋಮವಾರ ಕೇಂದ್ರ ಆರೋಗ್ಯ ಖಾತೆಯ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ಸಭೆ ನಡೆಸಿದರು. ಸಚಿವರ ನಿರ್ದೇಶ ಮೇರೆಗೆ ,ಆರೋಗ್ಯ ಇಲಾಖೆ ಕಾರ್ಯದರ್ಶಿಗಳೂ ಇಬೋಲಾ ಸೋಂಕನ್ನು ಎದುರಿಸುವುದು ಮತ್ತು ಪ್ರತಿಚಿಕಿತ್ಸೆ ವಿಚಾರದಲ್ಲಿ ಪರಸ್ಪರ ಸಮನ್ವಯತೆ ನಿಟ್ಟಿನಲ್ಲಿ ವಿವಿಧ ಖಾತೆಗಳು , ಸಂಬಂಧಪಟ್ಟ ಸಂಸ್ಥೆಗಳ ಅಧಿಕಾರಿಗಳನ್ನು ಒಳಗೊಂಡ ಜಂಟಿ ಪರಾಮರ್ಶೆ ಸಭೆ ನಡೆಸಿದರು. ವಿಮಾನ ನಿಲ್ದಾಣ, ಬಂದರುಗಳು ಮತ್ತು ಭೂ ಗಡಿಗಳ ಕ್ರಾಸಿಂಗ್ ಸಹಿತ ಎಲ್ಲಾ ಪ್ರವೇಶ ಕೇಂದ್ರಗಳಲ್ಲಿ ಎಬೋಲಾ ಸ್ಕ್ರೀನ್ ವ್ಯವಸ್ಥೆಗಳು ಸಂಪೂರ್ಣ ಸನ್ನದ್ಧವಾಗಿವೆ.

ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸನ್ನು ಎಂದಿಗೂ ನಂಬಬಾರದು

> ಕಾಂಗ್ರೆಸ್ ನಿಮ್ಮ ರಕ್ತ ಹೀರುವ ಜಿಗಣೆಯಂತೆ:ಡಿಎಂಕೆ

ಚೆನ್ನೈ: ಚುನಾವಣಾ ಲಾಭಗಳನ್ನು ಪಡೆದ ಬಳಿಕ ಡಿಎಂಕೆಯ ಬೆನ್ನಿಗಿರಿದ ಕಾಂಗ್ರೆಸನ್ನು ಇನ್ನೆಂದೂ ನಂಬಬೇಡಿ .ಕಾಂಗ್ರೆಸ್ ಎಂದರೆ ನಿಮ್ಮ ರಕ್ತ ಹೀರುವ ಜಿಗಣೆಯಂತೆ . ಅವರು ಮತ್ತೆ ನಿಮ್ಮ ಹತ್ತಿರಬರಲೂ ಬಿಡಬೇಡಿ ಎಂದು ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಪಕ್ಷೀಯರಿಗೆ ಕರೆ ನೀಡಿದ್ದಾರೆ.ಸ್ಟಾಲಿನ್ ಹೇಳಿಕೆ ಈಗ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್ 20 ವರ್ಷಗಳಿಗೂ ಹೆಚ್ಚು ಕಾಲ ನಮ್ಮ ಬೆನ್ನಿನ ಮೇಲೆ ಸವಾರಿ ಮಾಡಿತು. ಇಂದು ಅವರು ನಮ್ಮ ಬೆನ್ನಿಗೆ ಚೂರಿ ಇರಿದಿದ್ದಾರೆ. ಇದನ್ನು ನಾವ್ಯಾರೂ ಎಂದಿಗೂ ಮರೆಯಬಾರದು. ಭವಿಷ್ಯದಲ್ಲಿ ಯಾವುದೇ ಹಂತದಲ್ಲಿ ನಾವು ಕಾಂಗ್ರೆಸ್ ಅನ್ನು ನಂಬಬಾರದು ಅಥವಾ ಅವರು ಮತ್ತೆ ನಮ್ಮ ಹತ್ತಿರ ಬರಲೂ ಬಿಡಬಾರದು ಎಂದು, ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಪುತ್ರನೂ ಆಗಿರುವ ಉದಯ ಸ್ಟಾಲಿನ್ ಪಕ್ಷೀಯರಿಗೆ ಸೂಚಿಸಿದ್ದಾರೆ.



ನಟಿ ಟ್ವಿಶಾ ಶರ್ಮಾ ಸಾವು | ಸುಪ್ರೀಂನಲ್ಲಿ ಮೆಹ್ತಾ ಅಭಿಪ್ರಾಯ
ಸತ್ತ ಮಗಳಿಗಿಂತ ವಿಚ್ಛೇದಿತ ಮಗಳು ಮೇಲು

ಹೊಸದಿಲ್ಲಿ: ಮಧ್ಯಪ್ರದೇಶದ ನಟಿ-ಮಾಡೆಲ್ ಟ್ವಿಶಾ ಶರ್ಮಾ ಸಾವಿನ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್‌ನಲ್ಲಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನೀಡಿದ 'ಸತ್ತ ಮಗಳಿಗಿಂತ ವಿಚ್ಛೇದಿತ ಮಗಳು ಮೇಲು' ಎಂಬ ಹೇಳಿಕೆ ಎಲ್ಲರ ಗಮನ ಸೆಳೆದಿದೆ. ಪೋಷಕರು ಮಗಳ ದೂರುಗಳನ್ನು ಆರಂಭದಲ್ಲೇ ಗಂಭೀರವಾಗಿ ಪರಿಗಣಿಸಬೇಕೆಂಬ ಸಂದೇಶವನ್ನು ಅವರು ಈ ವೇಳೆ ನೀಡಿದ್ದಾರೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುಂದೆ ವಿಚಾರಣೆ ನಡೆದಿದ್ದು, ಟ್ವಿಶಾ ಶರ್ಮಾ ಸಾವಿನ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವ ಬಗ್ಗೆ ಕೇಂದ್ರ ಸರ್ಕಾರ ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳುವುದಾಗಿ ಮೆಹ್ತಾ ಭರವಸೆ ನೀಡಿದರು. ತನಿಖೆ ನ್ಯಾಯಸಮ್ಮತ ಹಾಗೂ ಪಾರದರ್ಶಕವಾಗಿರಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ವಿವಿಧ ರೀತಿಯ ಕಥನಗಳು ಹರಿದಾಡುತ್ತಿರುವುದರ ಬಗ್ಗೆ ಕೋರ್ಟ್ ಆತಂಕ ವ್ಯಕ್ತಪಡಿಸಿತು. ಆರೋಪಿಗಳು, ಸಾಕ್ಷಿಗಳು ಹಾಗೂ ಕುಟುಂಬದವರು ಮಾಧ್ಯಮಗಳಿಗೆ ಹೇಳಿಕೆ ನೀಡುವುದನ್ನು ತಪ್ಪಿಸಿ, ತನಿಖಾ ಸಂಸ್ಥೆಗಳ ಮುಂದೆ ಮಾತ್ರ ತಮ್ಮ ಅಭಿಪ್ರಾಯ ಹೇಳಬೇಕು ಎಂದು ನ್ಯಾಯಪೀಠ ಸೂಚಿಸಿದೆ. ಹಾಗೆಯೇ, ಇಡೀ ಪ್ರಕರಣವನ್ನು ನಿಭಾಯಿಸಿದ ಕುರಿತೂ ಅದು ತೀವ್ರ ಬೇಸರ ವ್ಯಕ್ತಪಡಿಸಿದೆ. ವಿಚಾರಣೆ ವೇಳೆ ಟ್ವಿಶಾ ಅವರ ಅತ್ತೆ ಹಾಗೂ ಮಾಜಿ ಜಿಲ್ಲಾ ನ್ಯಾಯಾಧೀಶೆ ಗಿರಿಬಾಲಾ ಸಿಂಗ್ ಟಿವಿ ವಾಹಿನಿಗಳಿಗೆ ಸಂದರ್ಶನ ನೀಡುತ್ತಿದ್ದು, ಮೃತೆಯ ವಿರುದ್ಧ ಹೇಳಿಕೆಗಳನ್ನು ಮಾಡುತ್ತಿದ್ದಾರೆ ಎಂದು ತುಷಾರ್ ಮೆಹ್ತಾ ಆಕ್ಷೇಪಿಸಿದರು. ಇನ್ನೊಂದೆಡೆ, ಟ್ವಿಶಾ ಕುಟುಂಬ ಪರ ವಕೀಲರು ಎಫ್‌ಐಆರ್ ದಾಖಲಿಸಲು ವಿಳಂಬ, ಸಾಕ್ಷ್ಯ ಸಂರಕ್ಷಣೆಯಲ್ಲಿ ಲೋಪಗಳಾಗಿವೆ ಎಂದು ಕೋರ್ಟ್ ಗಮನಕ್ಕೆ ತಂದರು.

ಪ್ರಕರಣದ ಪ್ರಮುಖ ಅಂಶಗಳು

- ಟ್ವಿಶಾ ಶರ್ಮಾ ಸಾವಿನ ಪ್ರಕರಣದ ತನಿಖೆ ಸಿಬಿಐಗೆ ವರ್ಗಾವಣೆಯ ಸಾಧ್ಯತೆ
- ನ್ಯಾಯಸಮ್ಮತ ತನಿಖೆಗೆ ಸುಪ್ರೀಂ ಕೋರ್ಟ್ ಒತ್ತಾಯ
- 'ವಿಚ್ಛೇದಿತ ಮಗಳು ಮೇಲು' ಎಂದ ತುಷಾರ್ ಮೆಹ್ತಾ ಹೇಳಿಕೆ ಚರ್ಚೆಗೆ ಕಾರಣ
- ಮಾಧ್ಯಮಗಳಲ್ಲಿ ಹೇಳಿಕೆ ನೀಡದಂತೆ ಕುಟುಂಬಗಳಿಗೆ ಕೋರ್ಟ್ ಸೂಚನೆ
- ಸಾಕ್ಷ್ಯ ಸಂರಕ್ಷಣೆಯಲ್ಲಿ ಲೋಪ ಆರೋಪ

ಸಾಂಪ್ರದಾಯಿಕ ಕೇಂದ್ರಗಳಲ್ಲೇ ನಮಾಜ್ ಸಲ್ಲಿಸಬೇಕು: ಯೋಗಿ ಆದಿತ್ಯನಾಥ್
ಸಾರ್ವಜನಿಕ ಸ್ಥಳದಲ್ಲಿ ಪ್ರಾಣಿ ವಧೆಗೆ ಅವಕಾಶವಿಲ್ಲ

ಲಖನೌ: ಮುಂಬರುವ ಬಕ್ರೀದ್ ಹಿನ್ನೆಲೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿವಧೆ ಮಾಡುವಂತಿಲ್ಲ. ಪ್ರಾಣಿಬಲಿಯನ್ನು ಪೂರ್ವ ನಿಯೋಜಿತ ಜಾಗಗಳಲ್ಲಿ ಮಾತ್ರ ಮಾಡಬಹುದು. ಯಾವುದೇ ಹೊಸ ಪದ್ಧತಿಗಳಿಗೆ ಉತ್ತೇಜನ ನೀಡಲ್ಲ ಮತ್ತು ನಿಷೇಧಿತ ಪ್ರಾಣಿಗಳ ಬಲಿದಾನವನ್ನು ನಿಷೇಧಿಸಲಾಗಿದೆ ಎಂದು ಉತ್ತರಪ್ರದೇಶ ಮುಖ್ಯ ಮಂತ್ರಿಯೋಗಿ ಆದಿತ್ಯನಾಥ್ ಆದೇಶ ಹೊರಡಿಸಿದ್ದಾರೆ. ಹಬ್ಬದ ಹಿನ್ನೆಲೆ ಬಿಗು ಭದ್ರತೆ ಆಯೋಜಿಸುವಂತೆ ಅಧಿಕಾರಿಗಳಿಗೆ ನಿರ್ದೇಶವಿತ್ತಿದ್ದಾರೆ.



ಸಾಂಪ್ರದಾಯಿಕ ಕೇಂದ್ರ ಗಳಲ್ಲೇ ನಮಾಜ್ ಸಲ್ಲಿಸಬೇಕು. ಯಾವ ಕಾರಣಕ್ಕೂ ರಸ್ತೆಗಳನ್ನು ಬ್ಲಾಕ್ ಮಾಡಿ ಪ್ರಾರ್ಥನೆ ಮಾಡಲು ಸಮ್ಮತಿ ನೀಡುವುದಿಲ್ಲ ಎಂದು ಸಿಎಂ ಯೋಗಿ ನಿರ್ದೇಶ ಹೊರಡಿಸಿದ್ದಾರೆ. ಭದ್ರತೆ ಹಾಗೂ ಆಡಳಿತಾತ್ಮಕ ವಿಚಾರಗಳ ಪರಾಮರ್ಶೆ ಸಭೆಯಲ್ಲಿ ಮುಖ್ಯಮಂತ್ರಿಗಳು ಪ್ರಸ್ತುತ ನಿರ್ದೇಶಗಳನ್ನು ಹೊರಡಿಸಿದರೆಂದು ಸರಕಾರದ ಹೇಳಿಕೆ ತಿಳಿಸಿದೆ.

ಪ್ರತೀ ಜಿಲ್ಲೆಯಲ್ಲೂ ಪ್ರಾಣಿ ಬಲಿ ಬಳಿಕ ತ್ಯಾಜ್ಯ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಆದೇಶಿಸಿರುವ ಸಿಎಂ ಯೋಗಿ, ಬಹಿರಂಗವಾಗಿ ಮಾಂಸ ಮಾರಾಟವನ್ನು ನಿಷೇಧಿಸಿದ್ದಾರೆ. ಅಕ್ರಮ ಕಸಾಯಿಖಾನೆಗಳು ಕಾರ್ಯಾಚರಿಸುವಂತಿಲ್ಲ. ಅಧಿಕೃತವಾಗಿ ಲೈಸೆನ್ಸ್ ಹೊಂದಿರುವ ಕಸಾಯಿಖಾನೆಗಳೂ ನಿಗದಿತ ಸಾಮರ್ಥ್ಯ ಮೀರಿ ಪ್ರಾಣಿಗಳನ್ನು ಮಾರಾಟ ಕ್ಕಿಡುವಂತಿಲ್ಲ ಎಂದು ಆದೇಶಿಸಿದ್ದಾರೆ.

ಹಬ್ಬದ ಸಂದರ್ಭ ವಿದ್ಯುತ್‌ಪೂರೈಕೆ, ನೈರ್ಮಲ್ಯ ಮತ್ತು ಭದ್ರತಾ ವ್ಯವಸ್ಥೆಗಳಿಗೆ ಸಂಬಂಧಿಸಿ ಉನ್ನತ ಸ್ತರದ ಸನ್ನದ್ಧತೆ ನಿರ್ವಹಿಸಲು ಅಧಿಕಾರಿಗಳಿಗೆ ಸಿಎಂ ಯೋಗಿ ಸೂಚನೆ ನೀಡಿದ್ದಾರೆ. ಹಬ್ಬಗಳಿಗೆ ಮುನ್ನ ಸೂಕ್ಷ್ಮ ಸಂವೇದಿ ಪ್ರದೇಶಗಳಲ್ಲಿ ಧ್ವಜ ಮೆರವಣಿಗೆ ಮತ್ತು ದೇವಾಲಯಗಳ ಸಹಿತ ಧಾರ್ಮಿಕ ಕೇಂದ್ರಗಳಿಗೆ ಸಮೀಪದಲ್ಲಿ ಪೊಲೀಸ್ ಪಡೆಗಳು ನಿರಂತರ ಪಥ ಸಂಚಲನ ನಡೆಸುವಂತೆ ನಿರ್ದೇಶಿಸಿದ್ದಾರೆ.

ವಿಚ್ಛಿದ್ರಕಾರಿ ಶಕ್ತಿಗಳ ಪತ್ತೆ, ಮುಂಜಾಗ್ರತಾ ಕ್ರಮ: ವಿಚ್ಛಿದ್ರಕಾರಿ ಶಕ್ತಿಗಳ ಪತ್ತೆಗೆ ಗತ ದುರ್ಘಟನೆ ಗಳನ್ನು ಪರಾಮರ್ಶಿಸುವಂತೆ ಮತ್ತು ಅಗತ್ಯ ಕಂಡಲ್ಲಿ ಅಂತವರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಲಿಗಢ, ಬಿಜ್ನೂರ್, ಸಹರಣ್‌ಪುರ, ರಾಂಪುರ, ಸಂಭಾಲ್ ಇತ್ಯಾದಿ ಸೂಕ್ಷ್ಮ ಸಂವೇದಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳೊಂದಿಗೆ ಸಂವಾದ ಸಂದರ್ಭ ಮುಖ್ಯಮಂತ್ರಿ ಯೋಗಿ ಸೂಚನೆ ನೀಡಿದ್ದಾರೆ. ಪೊಲೀಸ್ ಠಾಣೆ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಶಾಂತಿ ಸಮಿತಿಗಳ ಜತೆ ನಿಯತ ಮಾತುಕತೆ ನಡೆಸುವಂತೆಯೂ ಸಿಎಂ ಯೋಗಿ ನಿರ್ದೇಶ ಹೊರಡಿಸಿದ್ದಾರೆ.

ಗಂಗಾವತರಣ ಅಥವಾ ಗಂಗಾ ದಸರಾ ಉತ್ಸವ ನಿಟ್ಟಿನಲ್ಲಾಗಿರುವ ಸಿದ್ಧತೆಗಳ ಪರಾಮರ್ಶಿಸಿದ ಸಿಎಂ ಯೋಗಿ, ಘಾಟ್‌ಗಳನ್ನು ಶುಚಿಗೊಳಿಸುವಂತೆ ಮತ್ತು ಪ್ರಯಾಗ್‌ರಾಜ್, ವಾರಾಣಸಿ, ಅಯೋಧ್ಯೆ, ಚಿತ್ರಕೂಟ , ಹಾಪುರ, ಮುಝಫರ್‌ನಗರ ಮತ್ತು ಅಮ್ರೋಹಾ ಜಿಲ್ಲೆಗಳಲ್ಲಿ ಬ್ಯಾರಿಕೇಡ್, ಆ್ಯಂಬುಲೆನ್ಸ್ ನಿಯೋಜನೆ, ನೆರಳಿನ ವ್ಯವಸ್ಥೆ, ಪಾರ್ಕಿಂಗ್ ನಿರ್ವಹಣೆಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಂದ ಪುಟ್ಟ ಹೋದ ಪುಟ್ಟ ವಿಶೇಷ ವರದಿಗೆ ಸರ್ಕಾರದ ತುರ್ತು ಸ್ಪಂದನೆ

ನಾಗರಿಕ ಸ್ನೇಹಿಯಾಯ್ತು 'ಇ ಸ್ವತ್ತು'

ಸುಳ್ಯ: ರಾಜ್ಯ ಸರಕಾರ ಸ್ಥಳೀಯ ಸರಕಾರವೆಂದೇ ಕರೆಯಲ್ಪಡುವ ಗ್ರಾಮ ಪಂಚಾಯತ್‌ಗಳಲ್ಲಿ ಸರ್ವ ಸೇವೆಗಳು ಸಿಗಬೇಕು ಎಂದು ಈ ಸ್ವತ್ತು ಎಂಬ ತಂತ್ರಾಂಶ ಬಳಸಿಕೊಂಡು ಆನ್‌ಲೈನ್ ಮಾಡಿದ ಬಳಿಕ ಇದೀಗ ಒಂದಲ್ಲ ಒಂದು ರೀತಿಯ ಸಮಸ್ಯೆಗಳು ಸೃಷ್ಟಿಯಾಗಿದ್ದು ಇದೀಗ ಬಡವರ ಸೂರಿನ 94 ಸಿ ನಿವೇಶನದಾರರಿಗೆ 9/11 ಖಾತೆ ಸಿಗದೇ ಪರದಾಡುವಂತಾಗಿದೆ ಎಂಬ ವರದಿಗೆ ರಾಜ್ಯ ಸರಕಾರ ತುರ್ತು ಸ್ಪಂದಿಸಿ ತಂತ್ರಾಂಶ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ನೆರವಾಗಿದೆ.

ರಾಜ್ಯಾದ್ಯಂತ ಈ ಸ್ವತ್ತು ಮೂಲಕ ಸರ್ವ ಸೇವೆಗಳನ್ನು ಗ್ರಾ.ಪಂ., ಗ್ರಾಮ ವನ್ ಹಾಗೂ ಕರ್ನಾಟಕ ವನ್‌ಗಳಲ್ಲಿ ಸರ್ವ ಸೇವೆಗಳು ಪಾರದರ್ಶಕತೆಗಾಗಿ ನೀಡಲಾಗಿದೆ. ಇದೀಗ ತಿಂಗಳುಗಳಿಂದ ಸರಕಾರದಿಂದ ಪಡೆದ ತಮ್ಮ ನಿವೇಶನ ಸ್ಥಳವಾದ 94 ಸಿ ಖಾತೆಗೆ ಗ್ರಹಣ ಬಡಿದಿದ್ದು, ಅರ್ಜಿ ಸಲ್ಲಿಕೆಯೇ ಸಂಪೂರ್ಣ ವ್ಯತ್ಯಯವಾಗಿದೆ. ಅರ್ಜಿ ಸಲ್ಲಿಕೆಗೆ ದಾಖಲೆಗಳನ್ನು ಸಿದ್ಧಪಡಿಸಿದ ಬಳಿಕ ಗ್ರಾಮ ವನ್, ಕರ್ನಾಟಕ ವನ್ ಅಥವಾ ಗ್ರಾ.ಪಂ.ಗೆ ತೆರಳಿ ಅರ್ಜಿ ಸಲ್ಲಿಕೆ ಪ್ರಾರಂಭವಾದಾಗ ವಿದ್ಯುತ್ ಮೀಟರ್ ನಂಬರ್ ಸಮಸ್ಯೆ ಉದ್ಭವವಾಗುತ್ತಿದೆ. ಅರ್ಜಿ ಸಲ್ಲಿಕೆಯ ವೇಳೆಯಲ್ಲಿಸರಕಾರಸೂಚಿಸಿದಂತೆಇ-ಕೆವೈಸಿ, ಹಕ್ಕುಪತ್ರ, ಮನೆ ವಿಸ್ತೀರ್ಣ ಮಾಹಿತಿ ಆದರ ಜೊತೆಗೆ 2004ರ ಹಿಂದಿನ ಋಣಭಾರ ಪತ್ರ ಹಾಗೂ ಅರ್ಜಿ ಸಲ್ಲಿಕೆಯ 15 ದಿನಗಳ ಹಿಂದಿನ ಋಣಭಾರ ಪತ್ರ, ಭಾವಚಿತ್ರ, ಪಹಣಿ ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ 6 ಸಂಖ್ಯೆಗಳುಳ್ಳ ಮೀಟರ್ ನಂಬರ್ ಇದ್ದು, ಇದೀಗ ಸಿದ್ದಪಡಿಸಲಾದ ತಂತ್ರಾಂಶದಲ್ಲಿ 10 ನಂಬರ್‌ಗಳು ಕಡ್ಡಾಯವಾಗಿ ನೀಡುತ್ತಿರುವ ಹಿನ್ನೆಲೆಯಲ್ಲಿ ಇದೀಗ ಸರಕಾರದಿಂದ ಪಡೆದ 94 ಸಿ ನಿವೇಶನದಾರರು ಕಂಗೆಡುವಂತೆ ಮಾಡಿದೆ. ಈ ಕುರಿತು 'ಹೊಸ ದಿಗಂತ' ಮೇ 21ರಂದು ವಿಸ್ತೃತವಾದ ವರದಿಯನ್ನು ಪ್ರಕಟಿಸಿದ್ದು, ವರದಿಗೆ ಮುಖ್ಯಮಂತ್ರಿ ಕಚೇರಿ ಶೀಘ್ರವಾಗಿ ಸ್ಪಂದಿಸಿ ಇ-ಸ್ವತ್ತು ತಂತ್ರಾಂಶ ನಾಗರಿಕ ಸ್ನೇಹಿಯಾಗಿ ಮಾರ್ಪಾಟು ಮಾಡಿದೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ನಿಯಮಗಳು 2025' ಅಧಿಸೂಚಿಸಲಾಗಿದ್ದು, ಈ ನಿಯಮಗಳನ್ವಯ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಹಿಂದೆ ಇದ್ದ ಇ-ಸ್ವತ್ತು ತಂತ್ರಾಂಶವನ್ನು ನಾಗರಿಕ ಸ್ನೇಹಿಯಾಗಿ ಮಾರ್ಪಡಿಸಲಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಪ್ರಕಟಪಡಿಸಿದೆ.



ಧನ್ಯವಾದ ಹೇಳಿದ ಜನತೆ

ಈ ಸಮಸ್ಯೆಗಳಿಂದ ನೊಂದಿದ್ದ ಬಡ ಜನತೆಯು ಸಮಸ್ಯೆ ಬಗ್ಗೆ ವಿಸ್ತೃತ ವರದಿ ಪ್ರಕಟಿಸಿದ 'ಹೊಸ ದಿಗಂತ' ಹಾಗೂ ಅಭಿವೃದ್ಧಿಪಡಿಸಿದ ರಾಜ್ಯ ಸರಕಾರಕ್ಕೆ ಧನ್ಯವಾದ ಸಲ್ಲಿಸಿದ್ದಾರೆ.

ಅಂತೋಡು ಗ್ರಾಮದ ಅಡ್ತಲೆ, ಬೆದ್ರುಪಣೆಯಲ್ಲಿ ಹೃದಯವಿದ್ರಾವಕ ಘಟನೆ

ಹೆಣ್ಣು ಮರಿಯಾನೆ ದಾರುಣ ಸಾವು



ಸುಳ್ಯ: ಅಂತೋಡು ಗ್ರಾಮದ ಅಡ್ತಲೆ ಬಳಿಯ ಬೆದ್ರುಪಣೆ ಎಂಬಲ್ಲಿ ಬಾಲಕೃಷ್ಣ ಎಂಬವರ ತೋಟದಲ್ಲಿ ಒಂಟಿ ಸಲಗದ ದಾಳಿಗೆ ಸಿಲುಕಿ ಹಿಂಡಿನಲ್ಲಿದ್ದ ಹೆಣ್ಣು ಮರಿ ಆನೆ ದಾರುಣವಾಗಿ ಸಾವನ್ನಪ್ಪಿದ ಘಟನೆ ಸೋಮವಾರ ನಡೆದಿದೆ.

ಭಾನುವಾರ ರಾತ್ರಿ ಕಾಡಾನೆಗಳು ತೋಟಗಳಿಗೆ ಲಗ್ಗೆಯಿಟ್ಟಿದ್ದು ಆನೆ ಕಾರ್ಯಪಡೆ ತಂಡವು ರಾತ್ರಿ ಆನೆಗಳನ್ನು ಕಾಡಿನತ್ತ ಹಿಮ್ಮೆಟ್ಟಿಸಿ ತೆರಳಿದ್ದರು. ಆ ಬಳಿಕ ಕಾಡಾನೆಗಳ ಹಿಂಡು ಮತ್ತೆ ಬಾಲಕೃಷ್ಣ ಮತ್ತು ಸುತ್ತ ಮುತ್ತಲಿನ ತೋಟಗಳಿಗೆ ಲಗ್ಗೆಯಿಟ್ಟಿದೆ. ಇತ್ತೀಚೆಗೆ ಪೆರಾಜೆ ಕಲ್ಚರ್ಪೆ ಬಳಿ ಬಾವಿಗೆ ಬಿದ್ದಿದ್ದ ಒಂಟಿ ಸಲಗ ರಾತ್ರಿ ಸುಮಾರು 3 ಗಂಟೆಯ ವೇಳೆಗೆ ತೋಟಕ್ಕೆ ಆಗಮಿಸಿ ಅಲ್ಲಿದ್ದ ಹೆಣ್ಣಾನೆ ಬಳಿ ತೆರಳಿ ಪಕ್ಕದಲ್ಲಿದ್ದ ಮರಿಯಾನೆಯ ಮೇಲೆ ದಾಳಿ ನಡೆಸಿದೆ ಎಂದು ಊಹಿಸಲಾಗಿದೆ.

ದಾಳಿ ಪರಿಣಾಮವಾಗಿ ಮರಿ ಆನೆಯ ಕಿವಿ ಕೆಳ ಭಾಗದಲ್ಲಿ, ಹೊಟ್ಟೆ ಸೇರಿದಂತೆ ಇತರೆ ಕಡೆಗಳಲ್ಲಿ ಗಾಯಗಳಾಗಿ ಕೊನೆಯುಸಿರೆಳೆದಿದೆ. ರಾತ್ರಿ ಆನೆಗಳ ಅರಚಾಟದ ಸದ್ದಿಗೆ ನಾಗರೀಕರು ಭಯಭೀತರಾಗಿದ್ದು ಮುಂಜಾನೆ ನೆರೆಯ ಮನೆಯವರು ತೋಟಕ್ಕೆ ಬಂದು ನೋಡಿದಾಗ ಮರಿಯಾನೆ ಸತ್ತು ಬಿದ್ದಿರುವುದು ಕಂಡು ಬಂದಿದೆ. ಕೂಡಲೇ ಅರಣ್ಯ ಅಧಿಕಾರಿಗಳ ಗಮನಕ್ಕೆ ಮಾಹಿತಿ ರವಾನೆಯಾಗಿದ್ದು, ಆ ಬಳಿಕ ತಂಡ ಸ್ಥಳಕ್ಕೆ ಭೇಟಿ ಮರಣೋತ್ತರ ಪರೀಕ್ಷೆಗಳನ್ನು ನಡೆಸಿ ಇದೇ ಸ್ಥಳದ ಕೂಗಳತೆ ದೂರದಲ್ಲಿ ಆನೆಯ ಅಂತ್ಯಸಂಸ್ಕಾರವನ್ನು ನಡೆಸಲಾಯಿತು.

ಈ ಸಂದರ್ಭ ಎಸಿಎಫ್ ಪ್ರಶಾಂತ್ ಪೈ, ವಲಯ ಅರಣ್ಯಾಧಿಕಾರಿ ಮಂಜುನಾಥ್ ಎನ್., ಸಹಾಯಕ ವಲಯ ಅರಣ್ಯ ಅಧಿಕಾರಿಗಳಾದ ವಿನಾಯಕ ಯು.ಡಿ., ದೀಪಕ್ ಮತ್ತು ಆನೆ ಕಾರ್ಯಪಡೆ ತಂಡದ ಸದಸ್ಯರ ಸಮ್ಮುಖದಲ್ಲಿ ಮಂಗಳೂರು ವಿಭಾಗ ವೈಲ್ಡ್ ಲೈಫ್ ತಜ್ಞ ಡಾ. ಯಶಸ್ವಿ ನೇತೃತ್ವದಲ್ಲಿ ಶವ ಪರೀಕ್ಷೆ ನಡೆಸಲಾಯಿತು.

ಬಾಳೆ, ಅಡಿಕೆ ಗಿಡಗಳು ನಾಶ

ಇದೇ ಸ್ಥಳದಲ್ಲಿ ಹಲವಾರು ದಿನಗಳಿಂದ ಕಾಡಾನೆಗಳು ಸಂಚರಿಸುತ್ತಿದ್ದು ಭಾನುವಾರ ರಾತ್ರಿ ಆನೆಗಳು ಬಾಳೆ ಹಿಂಡುಗಳು, ಅಡಿಕೆ ಗಿಡಗಳು, ತೆಂಗಿನಮರ ಸೇರಿದಂತೆ ಕೃಷಿಗಳು ಕಾಡಾನೆಗಳ ಅಟ್ಟಹಾಸಕ್ಕೆ ಧ್ವಂಸಗೊಂಡಿದೆ.

ಕೋಟ್ಯಂತರ ಗ್ರಾಹಕರ

ಜೇಬಿನ ಹೊರೆ ಇಳಿಸಿದ ಗೃಹ ಜ್ಯೋತಿ

ಕರೆಂಟ್ ಬಿಲ್‌ನಿಂದ ಮುಕ್ತಿ, ಬದುಕಿಗೆ ಆರ್ಥಿಕ ಶಕ್ತಿ । ಕತ್ತಲ ಮನೆಗಳಿಗೆ ಬೆಳಕಿನ ಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: ದಿನನಿತ್ಯದ ಬದುಕಿನ ವೆಚ್ಚಗಳು ಗಗನಕ್ಕೇರುತ್ತಿರುವ ಈ ಕಾಲದಲ್ಲಿ, ಸಾಮಾನ್ಯ ಕುಟುಂಬವೊಂದರ ಮಾಸಿಕ ಬಜೆಟ್ ಅನ್ನು ಅತಿ ಹೆಚ್ಚು ಕಾಡುವ ವಿಷಯವೆಂದರೆ ಅದು ಅಗತ್ಯ ಸೇವೆಗಳ ಬಿಲ್ ಪಾವತಿ. ಇಂತಹ ಸವಾಲಿನ ದಿನಗಳಲ್ಲಿ ರಾಜ್ಯದ ಬಡ ಹಾಗೂ ಕೆಳ-ಮಧ್ಯಮ ವರ್ಗದ ಕುಟುಂಬಗಳ ಮನೆ-ಮನಗಳನ್ನು ಬೆಳಗಿದ ಯೋಜನೆ 'ಗೃಹಜ್ಯೋತಿ'.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಾರಿಗೆ ತಂದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಈ ಯೋಜನೆ, ಕಳೆದ ಮೂರು ವರ್ಷಗಳಲ್ಲಿ ಕೇವಲ ಉಚಿತ ವಿದ್ಯುತ್ ನೀಡುವ ಸೌಲಭ್ಯವಾಗಿ ಉಳಿಯದೆ, ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಯಾಗಿ ಹೊರಹೊಮ್ಮಿದೆ. ಸರ್ಕಾರದ ಇಂಧನ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ರಾಜ್ಯದ 1.64 ಕೋಟಿಗೂ ಅಧಿಕ ಗೃಹ ವಿದ್ಯುತ್ ಗ್ರಾಹಕರು ಈ ಯೋಜನೆಯಡಿ ನೋಂದಾಯಿಸಿಕೊಂಡು 'ಶೂನ್ಯ ಬಿಲ್' (Zero Bill) ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ ₹26,115 ಕೋಟಿ ಅನುದಾನವನ್ನು ವೆಚ್ಚ ಮಾಡಿದ್ದು, ವಿದ್ಯುತ್ ಸರಬರಾಜು ಕಂಪನಿಗಳಿಗೆ (ESCOMs) ಸಬ್ಸಿಡಿ ರೂಪದಲ್ಲಿ ಪಾವತಿಸುತ್ತಿದೆ.

2023ರ ಆಗಸ್ಟ್ 5ರಂದು ಕಲಬುರಗಿಯಲ್ಲಿ ಅಧಿಕೃತವಾಗಿ ಚಾಲನೆ ಪಡೆದ ಈ ಯೋಜನೆ, ರಾಜ್ಯದ ಪ್ರತಿಯೊಂದು ಮನೆಗೂ ಗರಿಷ್ಠ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ. ಈ ಯೋಜನೆಯ ಅತ್ಯಂತ ಪ್ರಗತಿಪರ ನಿರ್ಧಾರವೆಂದರೆ, ಇದು ಕೇವಲ ಸ್ವಂತ ಮನೆ ಉಳ್ಳವರಿಗಷ್ಟೇ ಸೀಮಿತವಾಗದೆ, ಲಕ್ಷಾಂತರ ಬಾಡಿಗೆ ಮನೆಗಳ ನಿವಾಸಿಗಳಿಗೂ ವಿಸ್ತರಣೆಯಾಯಿತು. ಇದರಿಂದಾಗಿ ನಗರ ಹಾಗೂ ಗ್ರಾಮೀಣ ಭಾಗದ ಶ್ರಮಿಕ ವರ್ಗಕ್ಕೆ ಅತಿ ದೊಡ್ಡ ಆರ್ಥಿಕ ನೆಮ್ಮದಿ ಸಿಕ್ಕಂತಾಗಿದೆ.



ದುಡಿದು ತಿನ್ನುವ ನಮ್ಮಂಥವರಿಗೆ ಕರೆಂಟ್ ಬಿಲ್ ಕಟ್ಟುವುದೇ ದೊಡ್ಡ ಕಗ್ಗಂಟಾಗಿತ್ತು. ಎರಡು ದಿನದ ಕಷ್ಟದ ದುಡಿಮೆಯನ್ನು ಅದಕ್ಕೇ ಮುಡಿಪಾಗಿಡಬೇಕಿತ್ತು. ಈಗ ಸಿದ್ದರಾಮಯ್ಯನವರ ಕಡೆಯಿಂದ ಕರೆಂಟ್ ಸಂಪೂರ್ಣ ಉಚಿತವಾಗಿದೆ. ಇದ-ರಿಂದ ಉಳಿಯುವ ಹಣ ನಮ್ಮ ಹೊಟ್ಟೆ ತುಂಬಿಸುತ್ತಿದೆ. ಅಷ್ಟೇ ಅಲ್ಲ, ನಮ್ಮ ಮಕ್ಕಳು ಯಾವುದೇ ಭಯವಿಲ್ಲದೆ ರಾತ್ರಿ ಹೊತ್ತು ನೆಮ್ಮದಿಯಿಂದ ಓದಿಕೊಳ್ಳಲು ಈ ಯೋಜನೆ ಬೆಳಕಾಗಿದೆ.

▸▸ ಮಹದೇವಪ್ಪ ವಾಲ್ಮೀಕಿ, ಹಾವೇರಿ



ಕೂಲಿ ಮಾಡಿ ದಿನದ ತುತ್ತು ಹುಡುಕುವ ಜನ ನಾವು. ತಿಂಗಳಿಗೆ ಸಾವಿರ ರೂಪಾಯಿ ಕರೆಂಟ್ ಬಿಲ್ ಬರುತ್ತಿತ್ತು. ಬಿಲ್ ಕಟ್ಟಲು ಎರಡು ದಿನದ ಇಡೀ ಕೂಲಿಯನ್ನು ಎತ್ತಿಡಬೇಕಿತ್ತು. ಆದರೆ ಗೃಹಜ್ಯೋತಿಯಿಂದಾಗಿ 'ಜೀರೋ ಬಿಲ್' ಬರುತ್ತಿದೆ. ಕರೆಂಟ್ ಫ್ರೀ ಆಗಿದ್ದರಿಂದ ಬಡವರ ಬದುಕಿಗೆ ಬಹಳ ಅನುಕೂಲವಾಗಿದೆ.

▸▸ ಲಕ್ಷ್ಮಣಕುಮಾರ್, ರಾಯಚೂರು



ಬಂಡವಾಳದ ಕೊರತೆಯಿಂದಾಗಿ ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ನೀಡಲು ಹೊಸ ಯಂತ್ರ ಖರೀದಿಸಲಾಗದೆ ಹಾಗೂ ವಿದ್ಯುತ್ ವೆಚ್ಚ ಭರಿಸಲು ಚಿಂತಿಸುತ್ತಿದ್ದೆ. ಇಂತಹ ಸಮಯದಲ್ಲಿ ಸರ್ಕಾರದ 'ಗೃಹಜ್ಯೋತಿ' ಯೋಜನೆಯ ಉಚಿತ ಕರೆಂಟ್ ನನಗೆ ದೊಡ್ಡ ಬಲ ತುಂಬಿತು. ವಿದ್ಯುತ್ ಬಿಲ್‌ನ ಚಿಂತೆ ಇಲ್ಲದಾದಾಗ, ಪ್ರತಿ ತಿಂಗಳು ಬರುತ್ತಿದ್ದ 'ಗೃಹಲಕ್ಷ್ಮಿ' ಹಣವನ್ನು ಅತ್ಯಂತ ಜೋಪಾನವಾಗಿ ಕೂಡಿಟ್ಟು ಹೊಸ ಹೊಲಿಗೆ ಯಂತ್ರಗಳನ್ನು ಖರೀದಿಸಿ ಸ್ವಂತ 'ಟೈಲರಿಂಗ್ ಕ್ಲಾಸ್' ಆರಂಭಿಸಿದೆ!

▸▸ ಅಮೀನಾ ಬೇಗಂ, ಶಹಾಪುರ


ದೇಶಕ್ಕೇ ಮಾದರಿಯಾದ ಇಂಧನ ಕ್ರಾಂತಿ

ಕರ್ನಾಟಕದ ಈ 'ಗೃಹಜ್ಯೋತಿ' ಮಾದರಿಯು ದೇಶದ ಇಂಧನ ವಲಯದಲ್ಲೇ ಒಂದು ಕ್ರಾಂತಿ-ಕಾರಿ ಹೆಜ್ಜೆಯಾಗಿದೆ. ಕೇವಲ ಉಚಿತ ಸೌಲಭ್ಯ ನೀಡುವುದಷ್ಟೇ ಅಲ್ಲದೆ, ಗ್ರಾಹಕರು ತಮ್ಮ ಸರಾಸರಿ ಬಳಕೆಯ ಮಿತಿಯೊಳಗೆ ವಿದ್ಯುತ್ ಬಳಸುವಂತೆ ಪ್ರೇರೇಪಿಸುವ ಮೂಲಕ ವಿದ್ಯುತ್ ಉಳಿತಾಯದ (Power Conservation) ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದೆ. ಕರ್ನಾಟಕದ ಈ ಯಶಸ್ವೀ ಮಾದರಿಯನ್ನು ದೇಶದ ಹಲವು ರಾಜ್ಯಗಳು ಇಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತಮ್ಮಲ್ಲೂ ಜಾರಿಗೆ ತರಲು ಆಸಕ್ತಿ ತೋರುತ್ತಿರುವುದು ಇದರ ಸಾಧನೆಯಾಗಿದೆ.

ಶೂನ್ಯ ಬಿಲ್‌ನಿಂದ ಗ್ರಾಮೀಣ ಆರ್ಥಿಕತೆ ಚೇತರಿಕೆ

ಪ್ರತಿ ತಿಂಗಳು ವಿದ್ಯುತ್ ಬಿಲ್ ರೂಪದಲ್ಲಿ ಉಳಿತಾಯವಾಗುತ್ತಿರುವ ₹800 ರಿಂದ ₹1,500 ವರೆಗಿನ ಹಣವು ಬಡ ಮತ್ತು ಮಧ್ಯಮ ವರ್ಗದವರ ಜೇಬಿನಲ್ಲೇ ಉಳಿಯುತ್ತಿದೆ. ಈ ಹಣವನ್ನು ಪೋಷಕರು ತಮ್ಮ ಮಕ್ಕಳ ಶಾಲಾ ಸೌಲಭ್ಯಗಳಿಗೆ, ಉತ್ತಮ ಪೌಷ್ಟಿಕ ಆಹಾರ ಧಾನ್ಯಗಳ ಖರೀದಿಗೆ ಮತ್ತು ಮನೆಯ ಹಿರಿಯರ ಔಷಧಿ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಉದ್ದಿಮೆಗಳನ್ನು ಕೂಡ ಮನೆಯಿಂದಲೇ ಆರಂಭಿಸಿದ್ದಾರೆ. ಆ ಮೂಲಕ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿದ್ದು, ಗ್ರಾಮೀಣ ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ.





ಕಂಪನಿ	ಫಲಾನುಭವಿಗಳು	ಅನುದಾನ
ಬೆವಿಕಂ (BESCOM)	68,27,630	₹12,168 ಕೋಟಿ
ಹುವಿಕಂ (HESCOM)	34,50,833	₹4,523 ಕೋಟಿ
ಗುವಿಕಂ (GESCOM)	23,96,139	₹3,367 ಕೋಟಿ
ಚಾ.ವಿ.ಸ.ನಿ. ಮೈಸೂರು (C.E.S.C, MYSORE)	23,50,753	₹3,032 ಕೋಟಿ
ಮೆಸ್ಕಾಂ (MESCOM)	16,37,123	₹2,889 ಕೋಟಿ



ಬಡವರ ಮನೆ ಬೆಳಗುವುದೇ ನಿಜವಾದ ಸುಶಾಸನ

ಪ್ರತಿ ತಿಂಗಳು ಕೋಟ್ಯಂತರ ಮನೆಗಳಿಗೆ ಗೃಹಜ್ಯೋತಿಯಡಿ ಶೂನ್ಯ ಬಿಲ್ ತಲುಪುತ್ತಿರುವುದನ್ನು ನೋಡಿದಾಗ ಆಗುವ ತೃಪ್ತಿ ಅಪಾರ. ಜನರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಅವರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವುದೇ ನಮ್ಮ ಪ್ರಗತಿಪರ ಕರ್ನಾಟಕದ ಮೂಲ ಆಶಯ.

▸▸ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



ಇಂಧನ ವಲಯದಲ್ಲಿ ಕರ್ನಾಟಕದ ಹೊಸ ಇತಿಹಾಸ

ಗೃಹಜ್ಯೋತಿ ಯೋಜನೆಯು ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಹೊಸ ಶಕ್ತಿ ತುಂಬಿದೆ. ಗೃಹಬಳಕೆಯ ವಿದ್ಯುತ್ ಬಿಲ್‌ನಿಂದ ಮುಕ್ತಿ ನೀಡುವುದರ ಜೊತೆಗೆ, ಜನರಲ್ಲಿ ಜವಾಬ್ದಾರಿಯುತ ವಿದ್ಯುತ್ ಬಳಕೆಯ ಶಿಸ್ತನ್ನು ತಂದಿರುವುದು ಈ ಯೋಜನೆಯ ದೊಡ್ಡ ಯಶಸ್ಸು.

▸▸ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



ಪಾರದರ್ಶಕ ಮತ್ತು ನಿರಂತರ ಇಂಧನ ಸೇವೆ

ಅತ್ಯಂತ ಸಂಕೀರ್ಣವಾದ ವಿದ್ಯುತ್ ವಿತರಣಾ ವ್ಯವಸ್ಥೆಯ ನಡುವೆಯೂ, ನಮ್ಮ ಇಲಾಖೆಯು 1.64 ಕೋಟಿಗೂ ಅಧಿಕ ಗ್ರಾಹಕರಿಗೆ ಯಾವುದೇ ಗೊಂದಲವಿಲ್ಲದೆ ಗೃಹಜ್ಯೋತಿಯ ಸೌಲಭ್ಯವನ್ನು ಯಶಸ್ವಿಯಾಗಿ ತಲುಪಿಸಿದೆ.

▸▸ ಕೆ.ಜೆ. ಜಾರ್ಜ್, ಇಂಧನ ಸಚಿವರು

ಕರ್ನಾಟಕ ವಾರ್ತೆ

ಕೇರಳ ಕ್ಷೇತ್ರ ಸಂರಕ್ಷಣಾ ಸಮಿತಿ ರಕ್ಷಾಧಿಕಾರಿ ಎ.ಕೆ.ಬಿ. ನಾಯರ್ ಆರೋಪ

ಭೂ ಸೊತ್ತು ಕೈ ಬಿಟ್ಟು ಹೋಗಲು ಸರ್ಕಾರಿ ನೀತಿ ಕಾರಣ

ಕಾಸರಗೋಡು: ಕೇರಳದಲ್ಲಿ ದೇವಾಲಯಗಳ ಭೂ ಸೊತ್ತುಗಳು ಕೈಬಿಟ್ಟು ಹೋಗಲು ವಿವಿಧ ಸರಕಾರಗಳ ನೀತಿಗಳೇ ಕಾರಣ ಎಂದು ಕೇರಳ ಕ್ಷೇತ್ರ ಸಂರಕ್ಷಣಾ ಸಮಿತಿ ರಕ್ಷಾಧಿಕಾರಿ ಎ.ಕೆ.ಬಿ. ನಾಯರ್ ಆರೋಪಿಸಿದ್ದಾರೆ.



ಸಮಿತಿಯ 60ನೇ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ನಡೆದ ರಾಜ್ಯ ಸಮಿತಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಹಿಂದೆ ದೇವಾಲಯಗಳಿಗೆ ಧಾರಾಳ ಭೂ ಸೊತ್ತುಗಳಿತ್ತು. ಅದರಿಂದ ಲಭಿಸುತ್ತಿದ್ದ ಆದಾಯದಲ್ಲಿ ದೇವಾಲಯಗಳ ಚಟುವಟಿಕೆ ಉತ್ತಮವಾಗಿ ನಡೆಯುತ್ತಿತ್ತು. ನಂತರ ವಿವಿಧ ಸರಕಾರಗಳು ಕೈಗೊಂಡ ನಿರ್ಧಾರಗಳಿಂದಾಗಿ ಭೂ ಸೊತ್ತುಗಳು ಕೈ ಬಿಟ್ಟು ಹೋದವು. ದೇವಾಲಯಗಳ ನವೀಕರಣ, ಅಭಿವೃದ್ಧಿ ಕಾರ್ಯಗಳು ನಡೆಯುವುದು ಸರಕಾರದ ಹಣದಿಂದಲ್ಲ. ಭಕ್ತರ ಕೊಡುಗೆ ಹಾಗೂ ದುಡಿಮೆಯಿಂದ ಕ್ಷೇತ್ರಗಳು ಅಭಿವೃದ್ಧಿಗೆ ಸಹಾಯಕವಾಗಿದೆ. ಭವಿಷ್ಯದಲ್ಲಿ ದೇವಾಲಯಗಳ ಸಂರಕ್ಷಣೆ ಹಾಗೂ ಆಚಾರ ಅನುಷ್ಠಾನಗಳು ಉಳಿಯಬೇಕಾದರೆ ಯುವಜನರ ಸಹಕಾರ ಅನಿವಾರ್ಯವಾಗಿದೆ ಎಂದೂ ಎ.ಬಿ.ಕೆ.ನಾಯರ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಕ್ಷೇತ್ರ ಸಂರಕ್ಷಣಾ ಸಮಿತಿ ರಾಜ್ಯ ಅಧ್ಯಕ್ಷ ಮುಲ್ಲಪ್ಪಳ್ಳಿ ಕೃಷ್ಣನ್ ನಂಬೂದಿರಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ನಾರಾಯಣನ್, ಪ್ರೊ.ಎ.ರಮಾ ಮೊದಲಾದವರು ಮಾತನಾಡಿದರು.

> **ನಾಮಜಪ ಚಳುವಳಿ ಮೂಲಕ ಶಾಂತ ರೀತಿಯಲ್ಲಿ ಪ್ರತಿಭಟನೆ ನಡೆಸಿದ ಭಕ್ತರ ವಿರುದ್ಧ ದಾಖಲಿಸಿಕೊಂಡ ಕೇಸುಗಳು ಹಲವು ವರ್ಷಗಳಾದರೂ ಹಾಗೆಯೇ ಮುಂದುವರಿಯುತ್ತಿರುವುದು ಅನ್ಯಾಯವಾಗಿದೆ. ಸರಕಾರ ಈ ವಿಷಯದಲ್ಲಿ ಇದುವರೆಗೆ ಸೂಕ್ತ ಕ್ರಮಕೈಗೊಂಡಿಲ್ಲ. ಚಳುವಳಿಗೆ ಸಂಬಂಧಿಸಿ ಎಲ್ಲಾ ಕೇಸುಗಳನ್ನೂ ಹಿಂತೆಗೆಯಲು ಅಗತ್ಯದ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ತೀವ್ರ ಸತ್ಯಾಗ್ರಹ, ಸಮಗ್ರ ಹೋರಾಟ ನಡೆಸಬೇಕಾಗಿ ಬರಲಿದೆ**
>
> ■ ಎ.ಬಿ.ಕೆ.ನಾಯರ್

ಪ್ರಧಾನಿ ಮೋದಿ ಅವರ 'ಮಿತವ್ಯಯದ ಕರೆಗೆ ಮಾಜಿ ಸಚಿವರಿಂದ ಸ್ಪಂದನ


ಸರಕಾರಿ ಬಸ್‌ನಲ್ಲಿ ಅಪ್ಪಚ್ಚುರಂಜನ್ ದಂಪತಿ ಪಯಣ

ಮಡಿಕೇರಿ: ಇಂಧನ ಬಳಕೆಯನ್ನು ಮಿತಿಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಕರೆಗೆ ಸ್ಪಂದಿಸಿರುವ ಮಾಜಿ ಸಚಿವ ಎಂ.ಪಿ.ಅಪ್ಪಚ್ಚುರಂಜನ್ ದಂಪತಿ ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವ ಮೂಲಕ ಗಮನಸೆಳೆದಿದ್ದಾರೆ.

ಇರಾನ್ ಹಾಗೂ ಇಸ್ರೇಲ್ ನಡುವಿನ ಯುದ್ಧದ ಪರಿಣಾಮ ಉಂಟಾಗಿರುವ ತೈಲ ಬಿಕ್ಕಟಿನಿಂದ ದೇಶವನ್ನು ಪಾರು ಮಾಡಲು ಇಂಧನ ಮಿತವ್ಯಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದು, ಇದಕ್ಕೆ ದೇಶದಲ್ಲಿ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಈ ನಡುವೆ ಪ್ರಧಾನಿಯವರ ಕರೆಗೆ ಸ್ಪಂದಿಸಿರುವ ಮಡಿಕೇರಿ ಕ್ಷೇತ್ರದ ಮಾಜಿ ಶಾಸಕ ಹಾಗೂ ಮಾಜಿ ಸಚಿವ ಎಂ.ಪಿ.ಅಪ್ಪಚ್ಚುರಂಜನ್ ಅವರು ಸೋಮವಾರ ತಮ್ಮ ಸ್ವಂತ ಕಾರನ್ನು ಮನೆಯಲ್ಲೇ ಬಿಟ್ಟು ಮಡಿಕೇರಿಯಿಂದ ಬೆಂಗಳೂರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಫ್ಲೈ ಬಸ್‌ನಲ್ಲಿ ಪ್ರಯಾಣಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಅವರ ಈ ನಿರ್ಧಾರಕ್ಕೆ ಪತ್ನಿ ಶೈಲಾ ಅವರೂ ಸಾಥ್ ನೀಡಿದ್ದಾರೆ.

ಪ್ರಧಾನಿ ಮೋದಿಯವರು ಇಂಧನ ಮಿತವ್ಯಯಕ್ಕೆ ಕರೆ ನೀಡಿದ್ದಾರೆ. ಹೀಗಾಗಿ ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಬಳಸಲು ನಿರ್ಧರಿಸಿದ್ದೇನೆ ಎಂದು ಅವರು ಮಡಿಕೇರಿ ಬಸ್ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು..



ಭಾರತವು ಇಂಧನಕ್ಕಾಗಿ ಪರ ರಾಷ್ಟ್ರಗಳ ಮೇಲೆ ಅವಲಂಬಿತವಾಗಿದೆ. ಹೀಗಾಗಿ ಇಂಧನ ದರ ಹೆಚ್ಚಳ ಅನಿವಾರ್ಯ. ವಿದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಇಂಧನ ದರ ಕಡಿಮೆ ಇದೆ ಎಂದು ಅವರು ಇದೇ ಸಂದರ್ಭ ನುಡಿದರು.

ದೇಶದ ಹಿತದೃಷ್ಟಿಯಿಂದ ಸಾರ್ವಜನಿಕರು ಕೂಡಾ ಇಂಧನ ಮಿತ ಬಳಕೆಗೆ ಮುಂದಾಗಬೇಕು ಎಂದು ಅಪ್ಪಚ್ಚು ರಂಜನ್ ಕರೆ ನೀಡಿದರು.

ಜೂನ್ 1ರಂದು ಶಾಲಾ ಆರಂಭದ ಹಬ್ಬ

◆ **ಬೆಂಗಳೂರು:** 2026-27ನೇ ಶೈಕ್ಷಣಿಕ ಸಾಲಿನ ಆರಂಭಕ್ಕೆ ರಾಜ್ಯ ಶಾಲಾ ಶಿಕ್ಷಣ ಇಲಾಖೆ ಸಮಗ್ರ ಸಿದ್ಧತೆಯನ್ನು ಆರಂಭಿಸಿದ್ದು, ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಜೂ.1ರಂದು ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನವನ್ನು ಹಬ್ಬದ ವಾತಾವರಣದಲ್ಲಿ ನಡೆಸಲು ಸೂಚಿಸಿದೆ.

ಶಾಲೆ ಆರಂಭವನ್ನು ಕೇವಲ ಔಪಚಾರಿಕ ಕಾರ್ಯಕ್ರಮವನ್ನಾಗಿ ಪರಿಗಣಿಸದೆ, ಮಕ್ಕಳಲ್ಲಿ ಶಾಲೆಯತ್ತ ಆಕರ್ಷಣೆ ಮತ್ತು ಉತ್ಸಾಹ ಮೂಡಿಸುವ ರೀತಿಯಲ್ಲಿ ಆಚರಿಸಬೇಕು ಎಂದು ಇಲಾಖೆ ಆಯುಕ್ತರು ಹೊರಡಿಸಿರುವ ಮಾರ್ಗಸೂಚಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಮೊದಲ ದಿನವೇ ಮಕ್ಕಳಿಗೆ ಅಕ್ಷರ ದಾಸೋಹ ಯೋಜನೆಯ ಅಡಿಯಲ್ಲಿ ಸಿಹಿಯೂಟ ನೀಡುವುದು, ಉಚಿತ ಪಠ್ಯಪುಸ್ತಕ, ಸಮವಸ್ತ್ರ ಮತ್ತು ಬಿಸಿಯೂಟ ವಿತರಣೆ ಮಾಡುವಂತೆ ಸೂಚಿಸಲಾಗಿದೆ.

ಮಳೆಯ ಹಿನ್ನೆಲೆ ಸುರಕ್ಷತೆ ವಿಚಾರಕ್ಕೆ ವಿಶೇಷ ಆದ್ಯತೆ ನೀಡಿರುವ ಇಲಾಖೆ, ಮೇ 28ರ ಒಳಗೆ ಶಾಲೆಗಳ ಸಂಪೂರ್ಣ ಆವರಣವನ್ನು ಸ್ವಚ್ಛಗೊಳಿಸಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳು ಸುಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿ ಕೊಳ್ಳುವಂತೆ ಸೂಚಿಸಿದೆ. ರಾಜ್ಯದ ಅನೇಕ ಭಾಗಗಳಲ್ಲಿ ಭಾರೀ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಶಾಲಾ ಕಟ್ಟಡಗಳು, ಶೌಚಾಲಯಗಳು ಅಥವಾ ಅಡುಗೆ ಕೋಣೆಗಳು ಶಿಥಿಲಗೊಂಡಿದ್ದರೆ ತಕ್ಷಣವೇ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ದುರಸ್ತಿ ಮಾಡಬೇಕು ಅಥವಾ ಅಗತ್ಯವಿದ್ದರೆ ತೆರವುಗೊಳಿಸಬೇಕು ಎಂದು ಎಚ್ಚರಿಕೆ ನೀಡಲಾಗಿದೆ.ಅಪಾಯಕಾರಿ ಮರಗಳು, ಸಡಿಲಗೊಂಡ ವಿದ್ಯುತ್ ತಂತಿಗಳು ಅಥವಾ ಇತರೆ ಅಪಾಯಕಾರಕ ಪರಿಸ್ಥಿತಿಗಳ ಕುರಿತು ಮುನ್ನೆಚ್ಚರಿಕೆ ವಹಿಸಲು ಸೂಚಿಸಲಾಗಿದ್ದು, ಮಕ್ಕಳ ಸುರಕ್ಷತೆಗೆ ಯಾವುದೇ ರೀತಿಯ ನಿರ್ಲಕ್ಷ್ಯ ತೋರಬಾರದು ಎಂದು ಇಲಾಖೆ ಕಟ್ಟುನಿಟ್ಟಾಗಿ ಸೂಚಿಸಿದೆ.

ವಿದ್ಯಾರ್ಥಿ-ಶಿಕ್ಷಕರಿಗೆ ಡಿಜಿಟಲ್ ಹಾಜರಿ ಕಡ್ಡಾಯ: ಈ ಸಾಲಿನಿಂದ ಡಿಜಿಟಲ್ ಹಾಜರಾತಿ ವ್ಯವಸ್ಥೆಯನ್ನು ಮತ್ತಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳ ಹಾಜರಾತಿಯನ್ನು ನಿರಂತರ ಯೋಜನೆ ಅಡಿ ಮುಖ ಗುರುತಿಸುವ ತಂತ್ರಜ್ಞಾನದ ಮೊಬೈಲ್ ಅಪ್ಲಿಕೇಶನ್ ಮೂಲಕ ದಾಖಲಿಸಬೇಕಾಗುತ್ತದೆ. ಇದೇ ವೇಳೆ ಕಾಯಂ ಶಿಕ್ಷಕರು ಹಾಗೂ ಅಧಿಕಾರಿಗಳು ಕಾಮ್ಸ್ ಆ್ಯಪ್ ಮೂಲಕ ಕಡ್ಡಾಯವಾಗಿ ಹಾಜರಾತಿ ನಿರ್ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಮನೆ-ಮನೆಗೆ ಭೇಟಿ ನೀಡಿ ದಾಖಲಾತಿ ಅಭಿಯಾನ: 6 ರಿಂದ 14 ವರ್ಷದ ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಶಿಕ್ಷಕರು ಮನೆ-ಮನೆಗೆ ಭೇಟಿ ನೀಡಿ ಪೋಷಕರಲ್ಲಿ ಅರಿವು ಮೂಡಿಸಬೇಕು ಎಂದು ಇಲಾಖೆ ಸೂಚಿಸಿದೆ. ಜೊತೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರ ನೇತೃತ್ವದಲ್ಲಿ ಮಿಂಚಿನ ಸಂಚಾರ ಹಾಗೂ ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮಗಳನ್ನು ನಡೆಸಲು ಇಲಾಖೆ ನಿರ್ದೇಶಿಸಿದೆ. ಶಾಲಾ ಪ್ರಾರಂಭದ ಮೊದಲ ದಿನದಿಂದಲೇ ಇಲಾಖೆಯ ಮಾರ್ಗಸೂಚಿಯಂತೆ 1ರಿಂದ 3ನೇ ತರಗತಿಗಳಿಗೆ 30 ದಿನಗಳು ಹಾಗೂ 4 ರಿಂದ 10ನೇ ತರಗತಿಗಳಿಗೆ ಕೇವಲ 15 ದಿನಗಳ ಕಾಲ ಮಾತ್ರ ಸೇತುಬಂಧ ಶಿಕ್ಷಣ ಇರಲಿದೆ. ಮಕ್ಕಳ ಕಲಿಕಾ ಹಿನ್ನಡೆಯನ್ನು ವ್ಯವಸ್ಥಿತವಾಗಿ ಗುರುತಿಸಲು ಪೂರ್ವ ಪರೀಕ್ಷೆ ಹಾಗೂ ಸಾಫಲ್ಯ ಪರೀಕ್ಷೆಗಳನ್ನು ನಡೆಸಿ, ಅವುಗಳ ಫಲಿತಾಂಶವನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು ಎಂದು ಸೂಚಿಸಲಾಗಿದೆ.

ಮುಖ್ಯ ದಿನಾಂಕಗಳು

- ಮೇ 28-ಶಾಲೆಗಳ ಸಂಪೂರ್ಣ ಸ್ವಚ್ಛತೆ, ಕುಡಿಯುವ ನೀರು ಮತ್ತು ಸುರಕ್ಷತಾ ತಪಾಸಣೆಗಳನ್ನು ಪೂರ್ಣಗೊಳಿಸಲು ಕೊನೆಯ ದಿನಾಂಕ.
- ಮೇ 29-ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ಕಡ್ಡಾಯವಾಗಿ ಶಾಲೆಗೆ ಹಾಜರಾಗಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು.
- ಜೂನ್ 1-ಶಾಲಾ ಪ್ರಾರಂಭೋತ್ಸವ ಹಾಗೂ ಮಕ್ಕಳ ದಾಖಲಾತಿ ಪ್ರಕ್ರಿಯೆ ಅಧಿಕೃತವಾಗಿ ಆರಂಭ.
- ಜೂನ್ 30 - ದಾಖಲಾತಿ ಆಂದೋಲನ ಮುಕ್ತಾಯಗೊಳ್ಳುವ ದಿನಾಂಕ.

ಡಿಜಿಟಲ್ ಅರೆಸ್ಟ್: ತನಿಖೆ ಚುರುಕು

◆ **ಬೆಂಗಳೂರು:** ದೇಶಾದ್ಯಂತ ಸಂಚಲನ ಮೂಡಿಸಿದ್ದ ಬೆಂಗಳೂರಿನ ಹಿರಿಯ ನಾಗರಿಕ ಮಹಿಳೆಯೊಬ್ಬರ 24 ಕೋಟಿ ರೂ. ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಬಂಧಿತ ಆರೋಪಿಗಳು ಬೆಳಗಾವಿಯ ಮತ್ತೊಂದು ಬೃಹತ್ ವಂಚನೆ ಪ್ರಕರಣದಲ್ಲೂ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಬೆಂಗಳೂರು ನಿವಾಸಿ ಲಕ್ಷ್ಮೀ ರಾಮಮೂರ್ತಿ(74) ಎಂಬವರನ್ನು ಸಿಬಿಐ ಮತ್ತು ಇ.ಡಿ. ಅಧಿಕಾರಿಗಳ ಸೋಗಿನಲ್ಲಿ ಹೆದರಿಸಿ, ಡಿಜಿಟಲ್ ಅರೆಸ್ಟ್ ಮಾಡುವ ಮೂಲಕ ಬರೋಬ್ಬರಿ 24 ಕೋಟಿ ರೂ. ವಂಚಿಸಲಾಗಿತ್ತು. ಫೆ.10ರಿಂದ ಏ.24ರ ಅವಧಿಯಲ್ಲಿ ಒಟ್ಟು 26 ವಹಿವಾಟುಗಳ ಮೂಲಕ ದೇಶದ್ಯಾಂತ ಇರುವ 23 ಮ್ಯೂಲ್ ಬ್ಯಾಂಕ್ ಖಾತೆಗಳಿಗೆ ಈ ಹಣವನ್ನು ವರ್ಗಾಯಿಸಿಕೊಳ್ಳಲಾಗಿತ್ತು. ಈ ಸಂಬಂಧ ರಾಜ್ಯ ಸೈಬರ್ ಕಮಾಂಡ್ ಪೊಲೀಸರು ಈಗಾಗಲೇ ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಳಗಾವಿ ಪ್ರಕರಣದಲ್ಲೂ ಭಾಗಿ -ಬಾಡಿ ವಾರಂಟ್ ಮೇಲೆ ವಶಕ್ಕೆ: ಬಂಧಿತ ಆರೋಪಿಗಳ ಪೈಕಿ ಗುಜರಾತ್‌ನ ಅಹಮದಾಬಾದ್ ಮೂಲದ ಪಾಲಕ್ ಭಾಯಿ ಪಟೇಲ್ ಮತ್ತು ಅಮಿತ್ ನರೇಂದ್ರ ಪಟೇಲ್ ಎಂಬವರು ಬೆಳಗಾವಿ ನಗರದ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮತ್ತೊಂದು 15 ಕೋಟಿ ರೂ. ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣದಲ್ಲೂ ಭಾಗಿಯಾಗಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಅವರು ನ್ಯಾಯಾಲಯದಿಂದ ಬಾಡಿ ವಾರಂಟ್ ಪಡೆದು ಈ ಇಬ್ಬರು ಆರೋಪಿಗಳನ್ನು ಸದ್ಯ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

1.40 ಕೋಟಿ ರೂ. ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿ: ಈ ವಂಚನೆ ಜಾಲದಿಂದ ಪೊಲೀಸರು ಈಗಾಗಲೇ 1.46 ಕೋಟಿ ರೂ. ನಗದನ್ನು ಜಪ್ತಿ ಮಾಡಿದ್ದಾರೆ. ಇದರ ಜೊತೆಗೆ ಮತ್ತೊಂದು ಹಂತದಲ್ಲಿ 1.40 ಕೋಟಿ ರೂ. ಹಣವನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಸೈಬರ್ ಕಮಾಂಡ್ ಪೊಲೀಸ್ ಮಹಾನಿರ್ದೇಶಕ ಡಾ.ಪ್ರಣಬ್ ಮೊಹಂತಿ ತಿಳಿಸಿದ್ದಾರೆ.

ಸಚಿವ ವೆಂಕಟೇಶ್‌ಗೆ ಹೆಚ್ಚುವರಿ ಯೋಜನೆ, ಸಾಂಖ್ಯಿಕ ಖಾತೆ

◆ **ಬೆಂಗಳೂರು:** ಇತ್ತೀಚೆಗೆ ನಿಧನರಾದ ಸಚಿವ ಡಿ. ಸುಧಾಕರ್ ಅವರು ನಿರ್ವಹಿಸುತ್ತಿದ್ದ ಯೋಜನೆ ಮತ್ತು ಸಾಂಖ್ಯಿಕ ಖಾತೆಯನ್ನು ಸಚಿವ ಕೆ. ವೆಂಕಟೇಶ್ ಅವರಿಗೆ ವಹಿಸಲಾಗಿದ್ದು, ಲೋಕಭವನದಿಂದ ಅಧಿಕೃತ ಅಧಿಸೂಚನೆ ಹೊರಡಿಸಲಾಗಿದೆ. ಪಶು ಸಂಗೋಪನೆ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವ ಸಚಿವ ಕೆ. ವೆಂಕಟೇಶ್ ಅವರಿಗೆ ಯೋಜನೆ ಮತ್ತು ಸಾಂಖ್ಯಿಕ ಖಾತೆ ಹೆಚ್ಚುವರಿಯಾಗಿ ಸಿಕ್ಕಿದೆ.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎಂಬುದು ಬಿಜೆಪಿಯ ಸಿದ್ಧಾಂತವಾಗಿದೆ

– ನಳಿನ್ ಕುಮಾರ್ ಕಟೀಲ್

-ದೇಶಕ್ಕಿಂತ ವಿದೇಶ ಮುಖ್ಯ ಎಂಬ ಸಿದ್ಧಾಂತವನ್ನು ಕೆಲವು ಪಕ್ಷಗಳು ಹೊಂದಿರುವಂತೆ ತೋರುತ್ತಿದೆ!

ದಿನ ಭವಿಷ್ಯ

ಮೇಷ
ನಿಮ್ಮನ್ನು ಅರ್ಥ ಮಾಡಿಕೊಳ್ಳಲು ಕೆಲವರು ವಿಫಲರಾಗುವರು. ಅವರಿಗೆ ಮನದಟ್ಟು ಮಾಡುವ ಪ್ರಯತ್ನ ಬಿಡಿ. ತಾಳ್ಮೆಯೇ ನಿಮ್ಮ ನೆರವಿಗೆ ಬರಲಿದೆ.

ವೃಷಭ
ನಿಮ್ಮ ಕೆಲಸದ ಪರಾಮರ್ಶೆ ನಡೆಸಿ. ಇನ್ನೂ ಉತ್ತಮ ಕಾರ್ಯ ನಡೆಸಲು ನಿಮಗೆ ಸಾಧ್ಯ. ಅಲ್ಪತೃಪ್ತಿ ಬಿಡಿ. ದೊಡ್ಡ ಗುರಿ ಇರಿಸಿಕೊಳ್ಳಿ.

ಮಿಥುನ
ನಿಮ್ಮ ಶ್ರೇಷ್ಠ ನಿರ್ವಹಣೆ ಇತರರ ಗಮನಕ್ಕೆ ಬಾರದೆ ಹೋಗಬಹುದು. ನಿರಾಶೆ ಬೇಡ. ನಿಮ್ಮ ಕಾರ್ಯ ಮುಂದುವರಿಸಿರಿ.

ಕಟಕ
ಪಾಸಿಟಿವ್ ಚಿಂತನೆ ಇರಿಸಿಕೊಳ್ಳಿ. ಸಾಧಿಸುವಿರಿ. ಇಲ್ಲವಾದರೆ ವಿಫಲತೆ ಕಾಣುವಿರಿ. ಬಂಧುಗಳ ಆಕ್ರೋಶ ಎದುರಿಸುವಿರಿ. ಆರ್ಥಿಕ ಒತ್ತಡ.

ಸಿಂಹ
ಅದೃಷ್ಟದ ದಿನ. ಕಾರ್ಯದಲ್ಲಿ ಸಫಲತೆ. ನಿಮ್ಮ ಹೃದಯಕ್ಕೆ ಆಪ್ತರಾದವರು ನಿಮ್ಮೆಡೆಗೆ ಒಲವು ತೋರುವರು. ಆರ್ಥಿಕ ಉನ್ನತಿ.

ಕನ್ಯಾ
ಸಂತೋಷ, ತೃಪ್ತಿ, ಸಾಧನೆ ಇವು ನಿಮ್ಮ ಪಾಲಿಗೆ ಇಂದು ಒದಗಲಿವೆ. ನಿರ್ಧಾರ ಉತ್ತಮ ಫಲ ನೀಡಲಿದೆ. ಬಂಧುಗಳ ಆತಿಥ್ಯ ಸಿಗಲಿದೆ.

ತುಲಾ
ಹಳೆ ಹೂಡಿಕೆಯ ಲಾಭ ಇಂದು ಸಿಗಲಿದೆ. ಪ್ರಯಾಣದಲ್ಲಿ ಸಮಸ್ಯೆ. ಕೆಲವರಿಗೆ ಅಜೀರ್ಣ, ಗ್ಯಾಸ್ಟ್ರಿಕ್ ಸಮಸ್ಯೆ ಕಾಡಬಹುದು.

ವೃಶ್ಚಿಕ
ಬಿಡುವಿರದ ದಿನ. ಇದರಿಂದಾಗಿ ವೈಯಕ್ತಿಕ ವಿಷಯ ಕೂಡ ಗೌಣ ಆಗಲಿದೆ. ಆರೋಗ್ಯದ ಕುರಿತಂತೆ ನಿರ್ಲಕ್ಷ್ಯ ತಾಳಬೇಡಿ.

ಧನು
ವೃತ್ತಿಕ್ಷೇತ್ರದಲ್ಲಿ ನಿಗೂಢ ಶತ್ರುಗಳು ಕಾಟ ಕೊಡುವರು. ಎಚ್ಚರದಿಂದ ನಡಕೊಳ್ಳಿ. ಹಿರಿಯರಿಗೆ ಸಂಧಿನೋವು ಸಂಭವ. ಆರ್ಥಿಕ ಹಿನ್ನಡೆ.

ಮಕರ
ಆಂತರಾತ್ಮದ ಮಾತು ಕೇಳಿ. ವಿರೋಧಿಗಳ ಬಗ್ಗೆ ಎಚ್ಚರದಿಂದಿರಿ. ಕೋಪಕ್ಕೆ ವಿವೇಕ ಬಲಿ ಕೊಡಬೇಡಿ. ಕೌಟುಂಬಿಕ ಸಹಕಾರ ಪಡೆದುಕೊಳ್ಳಿ.

ಕುಂಭ
ಪೂರ್ವನಿಗದಿತ ಕೆಲಸ ಸಾಧ್ಯವಾಗದು. ಯೋಜನೆ ಬದಲಿಸುವ ಅಗತ್ಯ ಬೀಳಲಿದೆ. ತಾಳ್ಮೆಯಿಂದ ವ್ಯವಹರಿಸಿ. ಕೌಟುಂಬಿಕ ಅಸಹಕಾರ.

ಮೀನ
ಯೋಜಿತ ಕೆಲಸಕ್ಕೆ ಹಿಂಜರಿಕೆ ಬಿಡಿ. ದಿಟ್ಟವಾಗಿ ಮುಂದೆ ಹೆಜ್ಜೆ ಇಡಿ. ನಿಮಗೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ. ಸೂಕ್ತ ನೆರವೂ ಸಿಗಲಿದೆ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,7,3,1

ಮುಖ್ಯಮಂತ್ರಿ ಜತೆಗೆ ಸಭಾಪತಿಗಳ ವಿಸ್ತೃತ ಸಮಾಲೋಚನೆ

ಮಳೆಗಾಲ ಅಧಿವೇಶನಕ್ಕೆ ಸಜ್ಜು

◆ **ಬೆಳಗಾವಿ:** ಇದೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣವಿಧಾನಸೌಧದಲ್ಲಿ ಈ ಬಾರಿಯ ಮಳೆಗಾಲದ ಅಧಿವೇಶನ ನಡೆಸುವ ಕುರಿತು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿರುವುದು ಉತ್ತರ ಕರ್ನಾಟಕ ಭಾಗದ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಧಾರವಾಗಿದೆ.

ಸಾಮಾನ್ಯ ವಾಗಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಪ್ರತಿ ವರ್ಷ ಚಳಿಗಾಲದ ಅಧಿವೇಶನವನ್ನು (ನವೆಂಬರ್/ಡಿಸೆಂಬರ್) ಮಾತ್ರ ನಡೆಸಲಾಗುತ್ತಿತ್ತು. ಆದರೆ, ಇತಿಹಾಸದಲ್ಲೇ ಮೊದಲ ಬಾರಿಗೆ ಇಲ್ಲಿ ಮಳೆಗಾಲದ ಅಧಿವೇಶನ ನಡೆಸಲು ಸರ್ಕಾರ ಸಜ್ಜಾಗುತ್ತಿದೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಈ ಕುರಿತು ವಿಸ್ತೃತ ಸಮಾಲೋಚನೆ ನಡೆಸಿದ್ದಾರೆ.

ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲು ಅಧಿವೇಶನ: ಅಧಿವೇಶನವನ್ನು ಬೆಂಗಳೂರಿನ ಬದಲು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗುವ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಗಿದೆ. ಮಳೆಗಾಲದ ಸದನವನ್ನು ಯಾವಾಗ ಆರಂಭಿಸಬೇಕು ಮತ್ತು ಎಷ್ಟು ದಿನಗಳ ಕಾಲ ನಡೆಸಬೇಕು ಎಂಬ ನಿಖರವಾದ ದಿನಾಂಕಗಳನ್ನು ಮುಂಬರುವ ಮುಂದಿನ ಸಚಿವ ಸಪುಟ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸುವ ಸಾಧ್ಯತೆಯಿದೆ. ಸಾಮಾನ್ಯವಾಗಿ ಕರ್ನಾಟಕದ ಮಳೆಗಾಲದ ಅಧಿವೇಶನವು ಜುಲೈ ತಿಂಗಳ ಅವಧಿಯಲ್ಲಿ ನಡೆಯಲಿದ್ದು, ಈ ಬಾರಿಯೂ ಜುಲೈ ಮಧ್ಯಭಾಗದಲ್ಲಿ ಕಲಾಪ ಆರಂಭವಾಗುವ ನಿರೀಕ್ಷೆಯಿದೆ.

ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದರಿಂದ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳು, ನೀರಾವರಿ ಯೋಜನೆಗಳು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಯ ಕುರಿತು ಹೆಚ್ಚು ಸಮಯ ವಿನಿಯೋಗಿಸಿ ಚರ್ಚಿಸಲು ಅನುಕೂಲ ವಾಗುತ್ತದೆ ಎಂಬುದು ಸರ್ಕಾರದ ಆಶಯ.

ಪ್ರತಿಭಟನೆಗಳ ಆತಂಕ ಇರುವುದಿಲ್ಲ: ಜುಲೈ ತಿಂಗಳು ತೀವ್ರ ಮಳೆಯ ಅವಧಿಯಾಗಿರುವುದರಿಂದ ಮತ್ತು ರೈತರು ಸೇರಿದಂತೆ ವಿವಿಧ ಸಂಘಟನೆಗಳು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿರುವುದರಿಂದ, ಸುವರ್ಣಸೌಧದ ಸುತ್ತಮುತ್ತ ಎಂದಿನಂತೆ ದೊಡ್ಡ ಮಟ್ಟದ ಪ್ರತಿಭಟನೆಗಳು ಅಥವಾ ಧರಣಿಗಳು ನಡೆಯುವ ಸಾಧ್ಯತೆ ಕಡಿಮೆ ಇರುತ್ತದೆ. ಇದು ಕಲಾಪ ಸುಗಮವಾಗಿ ನಡೆಯಲು ಸಹಕಾರಿ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಬೆಳಗಾವಿಯ ಸುವರ್ಣವಿಧಾನಸೌಧವು ವರ್ಷದಲ್ಲಿ ಕೇವಲ 10-15 ದಿನಗಳ ಚಳಿಗಾಲದ ಅಧಿವೇಶನಕ್ಕೆ ಮಾತ್ರ ಸೀಮಿತವಾಗುತ್ತಿದೆ ಎಂಬ ಟೀಕೆಗಳಿದ್ದವು. ಮಳೆಗಾಲದ ಅಧಿವೇಶನವನ್ನೂ ಇಲ್ಲಿ ನಡೆಸುವ ಮೂಲಕ ಈ ಬೃಹತ್ ಕಟ್ಟಡವನ್ನು ಮತ್ತಷ್ಟು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಆಡಳಿತ ವ್ಯವಸ್ಥೆ ಸ್ಥಳಾಂತರ: ಅಧಿವೇಶನದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಸರ್ಕಾರದ ಆಡಳಿತ ಯಂತ್ರ, ಸಚಿವರು, ಮುಖ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳ ದಂಡು ಕೆಲವು ವಾರಗಳ ಕಾಲ ಬೆಳಗಾವಿಯಲ್ಲೇ ಬೀಡುಬಿಡಬೇಕಾಗುತ್ತದೆ.

ಮಳೆಯ ಸವಾಲು ಹಾಗೂ ಸಿದ್ಧತೆ: ಬೆಳಗಾವಿ ಭಾಗದಲ್ಲಿ ಜುಲೈನಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ, ಅಧಿವೇಶನಕ್ಕೆ ಬರುವ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಮಾಧ್ಯಮದವರಿಗೆ ಯಾವುದೇ ತೊಂದರೆಯಾಗದಂತೆ ಸುವರ್ಣಸೌಧದ ಆವರಣ ಹಾಗೂ ನಗರದಲ್ಲಿ ವಿಶೇಷ ಮೂಲಸೌಕರ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.



ವಿರೋಧ ಪಕ್ಷದ ನಿಲುವು

ಸರ್ಕಾರದ ಈ ದಿಢೀರ್ ಚಿಂತನೆಗೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದು ಕುತೂಹಲ ಮೂಡಿಸಿದೆ. ಉತ್ತರ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚಿಸಲು ಅವರೂ ಕೂಡ ಇದಕ್ಕೆ ಸಮ್ಮತಿ ನೀಡುವ ಸಾಧ್ಯತೆ ಹೆಚ್ಚಿದೆ.

ಶಾಸಕರು, ಅಧಿಕಾರಿಗಳಿಗೆ ವಸತಿ ವ್ಯವಸ್ಥೆ

ಮಳೆಗಾಲದಲ್ಲಿ ಶಾಸಕರು ಮತ್ತು ಅಧಿಕಾರಿಗಳಿಗೆ ಸೂಕ್ತ ವಸತಿ ಹಾಗೂ ಸಾರಿಗೆ ವ್ಯವಸ್ಥೆ ಕಲ್ಪಿಸುವುದು ಜಿಲ್ಲಾಡಳಿತಕ್ಕೆ ದೊಡ್ಡ ಜವಾಬ್ದಾರಿಯಾಗಲಿದ್ದು, ಸ್ಪೀಕರ್ ಯು.ಟಿ.ಖಾದರ್ ಈಗಾಗಲೇ ಪ್ರಾಥಮಿಕ ಪರಿಶೀಲನೆಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಬೆಳಗಾವಿ ಸುವರ್ಣ ಸೌಧದಲ್ಲಿ ಮಳೆಗಾಲದ ಅಧಿವೇಶನ ನಡೆಸುವ ನಿರ್ಧಾರದ ಮೂಲಕ ಉತ್ತರ ಕರ್ನಾಟಕ ಭಾಗದ ಜನರ ಮನ ಗೆಲ್ಲಲು ಮತ್ತು ಪ್ರಾದೇಶಿಕ ಆಡಳಿತ ವಿಕೇಂದ್ರೀಕರಣಕ್ಕೆ ಒತ್ತು ನೀಡಲು ಮುಂದಡಿಯಿಟ್ಟಿದ್ದಾರೆ. ಮುಂದಿನ ಕ್ಯಾಬಿನೆಟ್ ಸಭೆಯ ಬಳಿಕ ಈ ಕುರಿತ ಅಧಿಕೃತ ಪ್ರಕಟಣೆ ಹೊರ ಬೀಳಲಿದ್ದು, ಇಡೀ ರಾಜ್ಯದ ಗಮನ ಈಗ ಬೆಳಗಾವಿಯತ್ತ ನೆಟ್ಟಿದೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ

ಜೂ.1ರಂದು ಕೆಪಿಎಸ್ ಕಟ್ಟಡಗಳಿಗೆ ಶಂಕು

◆ **ಬೆಂಗಳೂರು:** ರಾಜ್ಯದ ಸರ್ಕಾರಿ ಶಾಲೆಗಳ ಸಬಲೀಕರಣ ಮತ್ತು ಗುಣಮಟ್ಟದ ಶಿಕ್ಷಣದ ಗುರಿಯೊಂದಿಗೆ ಜೂ. 1ರಂದು ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೂತನ ಕರ್ನಾಟಕ ಪಬ್ಲಿಕ್ ಶಾಲೆಗಳ ಕಟ್ಟಡಗಳಿಗೆ ಶಂಕುಸ್ಥಾಪನೆ ನೆರ ವೇರಿಸಲಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಘೋಷಿಸಿದ್ದಾರೆ.



ಸಮಗ್ರ ಶಿಕ್ಷಣ ಕರ್ನಾಟಕದ ಕಚೇರಿಯಿಂದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಪ್ರಾಂಶುಪಾಲರು, ಬಿಇಒ ಹಾಗೂ ಎಸ್ .ಡಿ.ಎಂ.ಸಿ ಸದಸ್ಯರೊಂದಿಗೆ ಸೋಮವಾರ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ಇಲಾಖೆಯ ಸಾಧನೆಗಳು ಮತ್ತು ಮುಂಬರುವ ಯೋಜನೆಗಳ ಕುರಿತು ಮಾಹಿತಿ ಹಂಚಿಕೊಂಡರು. ಮೇ 29, 30 ಮತ್ತು 31 ರಂದು ಶಾಲಾ ಆವರಣವನ್ನು ಸ್ವಚ್ಛಗೊಳಿಸಿ, ಜೂ.1ರಂದು ಶಾಲೆಗೆ ಬರುವ ಮಕ್ಕಳನ್ನು ತಳಿರು ತೋರಣ ಕಟ್ಟಿ, ಹಬ್ಬದ ವಾತಾವರಣದಲ್ಲಿ (ಮಕ್ಕಳ ಹಬ್ಬ) ಸ್ವಾಗತಿಸಬೇಕು. ಸಮುದಾಯದವರು, ಎಸ್ .ಡಿ.ಎಂ.ಸಿ ಹಾಗೂ ಹಳೆಯ ವಿದ್ಯಾರ್ಥಿಗಳು ಕೈಜೋಡಿಸಿ ಮಕ್ಕಳಿಗಾಗಿ ವಿಶೇಷ ಊಟದ ವ್ಯವಸ್ಥೆ ಮಾಡುವ ಮೂಲಕ ಅವರಲ್ಲಿ ಶಾಲೆಗೆ ಬರುವ ಉತ್ಸಾಹವನ್ನು ಹೆಚ್ಚಿಸಬೇಕು ಎಂದು ಹೇಳಿದರು. ಖಾಸಗಿ ಶಾಲೆಗಳಿಗಿಂತ ಅತ್ಯುತ್ತಮ ಹಾಗೂ ನುರಿತ ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿದ್ದಾರೆ ಎಂಬುದನ್ನು ಪೋಷಕರಿಗೆ ಮನವರಿಕೆ ಮಾಡಿ, ದಾಖಲಾತಿ ಹೆಚ್ಚಿಸಬೇಕು. ಅಜೀಂ ಪ್ರೇಮ್‌ಜೀ ಫೌಂಡೇಶನ್ ನೆರವಿನೊಂದಿಗೆ ಪ್ರತಿದಿನ ಮೊಟ್ಟೆ ಅಥವಾ ಬಾಳೆಹಣ್ಣು ವಿತರಿಸಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಬೇಕು. ಶಾಲೆಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಲು ಅನುಕೂಲವಾಗುವಂತೆ ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ದಾನಿಗಳಿಗೆ ಮುಕ್ತ ಆಹ್ವಾನ

ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕೇವಲ ಸರ್ಕಾರದ ಅನುದಾನವನ್ನೇ ಕಾಯದೇ ಸಾರ್ವಜನಿಕರು ಕೈಜೋಡಿಸಬೇಕೆಂದು ಸಚಿವರು ಮನವಿ ಮಾಡಿದರು. ರಾಜ್ಯದಲ್ಲಿ 46 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿವೆ. ಹಳೆಯ ವಿದ್ಯಾರ್ಥಿಗಳು, ಉದ್ಯಮಿಗಳು ಹಾಗೂ ದಾನಿಗಳು ನಮ್ಮ ಶಾಲೆ ನಮ್ಮ ಜವಾಬ್ದಾರಿ ಯೋಜನೆಯ ಅಡಿ ಆರ್ಥಿಕ ನೆರವು ನೀಡಬಹುದು. ದಾನಿಗಳು 500 ರೂ.ನಿಂದ ಹಿಡಿದು ಕೋಟ್ಯಂತರ ರೂ. ವರೆಗೂ ದೇಣಿಗೆ ನೀಡುತ್ತಿದ್ದಾರೆ. ಈ ಅನುದಾನವನ್ನು ಶಾಲೆಗಳಿಗೆ ಸ್ಮಾರ್ಟ್ ಟಿವಿ, ಆರ್.ಒ. ಪ್ಲಾಂಟ್, ಶೌಚಾಲಯ ನಿರ್ಮಾಣ, ಫ್ಯಾನ್ ಮತ್ತು ಲ್ಯಾಬ್ ಉಪಕರಣಗಳನ್ನು ಒದಗಿಸಲು ಬಳಸಿಕೊಳ್ಳಲಾಗುತ್ತಿದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಭಟ್ಕಳದಲ್ಲಿ ನಾಳೆವರೆಗೂ ನಿಷೇಧಾಜ್ಞೆ

ಪುಟ ೧➡ **ಘಟನೆ ವಿವರ:** ಭಟ್ಕಳ ತಾಲೂಕಿನ ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿರುವ ಮೂರಿನಕಟ್ಟೆ ಹಿಂದು ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಗುರುತಿಸಿಕೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಯ ನಿಮಿತ್ತ ಕಟ್ಟೆಯನ್ನು ಸ್ಥಳಾಂತರಗೊಳಿಸಿ ಸಮೀಪದಲ್ಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಜಾಗದಲ್ಲಿ ಮರುನಿರ್ಮಾಣ ಮಾಡಲಾಗಿತ್ತು.

ಇದಕ್ಕೆ ಮುಸ್ಲಿಂ ಸಂಘಟನೆ ಭಾರೀ ವಿರೋಧ ವ್ಯಕ್ತಪಡಿಸಿ ಕಟ್ಟೆಯನ್ನು ತೆರವು ಮಾಡಲು ಆಗ್ರಹಿಸಿದ್ದರು. ಭಾನುವಾರ ಏಕಾಏಕಿ ಜಮಾಯಿಸಿದ ಮುಸ್ಲಿಂ ಮುಖಂಡರು, ಮೂರಿನಕಟ್ಟೆಯನ್ನು ಒಡೆಯಲು ಮುಂದಾಗಿದ್ದಾರೆ. ಅಷ್ಟೆ ಅಲ್ಲ, ಕರ್ತವ್ಯದಲ್ಲಿದ್ದ ಪೊಲೀಸರ ಮೇಲೂ ಹಲ್ಲೆ ನಡೆಸಿದ್ದಾರೆ. ಇನ್ನು, ಪೊಲೀಸರ ಮೇಲೆ ಹಲ್ಲೆ ಮಾಡಿದ ಮುಸ್ಲಿಂ ಸಂಘಟನೆಯ ಪ್ರಮುಖರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ.

ಈ ಘಟನೆಯಿಂದ ಭಟ್ಕಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದ್ದು ಭಾನುವಾರ ರಾತ್ರಿಯೇ ಹಿಂದುಗಳು ಧರಣಿ ನಡೆಸಿ ತಪ್ಪಿತಸ್ಥರನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ. ಸ್ಥಳಕ್ಕೆ ಭೇಟಿ ನೀಡಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದಾರೆ.

ಮೂಲ ಕಟ್ಟೆಗೆ ಹಾನಿಯಾಗಿಲ್ಲ

ಪುಟ ೧➡ **ಮೂಲಕಟ್ಟೆ ಸಂಪೂರ್ಣ ಸುರಕ್ಷಿತ:** ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಸಹ ಪ್ರಕಟಣೆ ಹೊರಡಿಸಿ ಮೂಲಕಟ್ಟೆ ಸಂಪೂರ್ಣ ಸುರಕ್ಷಿತವಾಗಿದೆ ಎಂದು ತಿಳಿಸಲಾಗಿದೆ. ಕೆಂಪು ಕಲ್ಲಿನಿಂದ ಕಟ್ಟಲಾಗಿರುವ ಹೊಸ ಕಟ್ಟೆಯನ್ನು ಕಿಡಿಗೇಡಿಗಳು ಏಪ್ರಿಲ್ 24ರ ರಾತ್ರಿ ನಾಶಪಡಿಸಿರುವುದು ಕಂಡುಬಂದಿದ್ದು, ಘಟನೆಗೆ ಸಂಬಂಧಿಸಿದಂತೆ 6 ಜನರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ದೀಪನ್ ಎಂ.ಎನ್. ತಿಳಿಸಿದ್ದಾರೆ.

ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಿ

◆ **ಉಡುಪಿ:** ರಾಜ್ಯ ಸರ್ಕಾರ ಅರಣ್ಯ ಭೂಮಿ ಒತ್ತುವರಿಯ ವಿಚಾರದಲ್ಲಿ ಶೂನ್ಯ ಸಹಿಷ್ಣತೆ ತಳೆದಿದ್ದು, ಹೊಸ ಒತ್ತುವರಿಗೆ ಅವಕಾಶ ನೀಡಬಾರದು ಮತ್ತು 2015ರ ನಂತರದ ಎಲ್ಲ ಒತ್ತುವರಿ ತೆರವು ಮಾಡಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.

ಉಡುಪಿಯಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಸೂಚನೆ ನೀಡಿದ ಸಚಿವರು, 2015ಕ್ಕೆ ಮೊದಲು ರಾಜ್ಯದಲ್ಲಿ ಒಟ್ಟು 2 ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿ ಆಗಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಲಾಗಿದೆ. ಇದರಲ್ಲಿ ಜೀವನೋಪಾಯಕ್ಕಾಗಿ ಒತ್ತುವರಿ ಮಾಡಿರುವ ಅಂದರೆ ಪಟ್ಟಾ ಭೂಮಿ ಸೇರಿ 3 ಎಕರೆಗಿಂತ ಕಡಿಮೆ ಒತ್ತುವರಿ ಮಾಡಿರುವ ಕುಟುಂಬಗಳಿಗೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡುವ ತನಕ ತೆರವು ಮಾಡದಂತೆ ನಿರ್ಣಯಿಸಿದೆ. 3 ಎಕರೆಗಿಂತ ಹೆಚ್ಚಿನ ಒತ್ತುವರಿಯನ್ನು ತೆರವು ಮಾಡಲು ಕ್ರಮ ಕೈಗೊಳ್ಳಿ ಎಂದು ತಿಳಿಸಿದರು. ಪ್ರಕೃತಿ ಪರಿಸರ ಉಳಿದರೆ ಮಾತ್ರ ಜಗತ್ತು ಉಳಿಯಲು ಸಾಧ್ಯವಿದೆ. ಪಶ್ಚಿಮಘಟ್ಟಗಳು ಮಳೆಯ ಮಾರುತಗಳನ್ನು ತಡೆದು ವ್ಯಾಪಕ ಮಳೆ ಸುರಿಸುತ್ತವೆ. ಇದು ಜೀವವೈವಿಧ್ಯದ 8ನೇ ನೆಚ್ಚಿನ ತಾಣವಾಗಿದ್ದು, ಹಲವು ಪ್ರಭೇದದ ಸಸ್ಯಸಂಕುಲ, ಕೀಟಸಂಕುಲ, ಜೀವಸಂಕುಲದ ತವರಾಗಿದೆ. ಇದನ್ನು ಸರ್ಕಾರ, ಅರಣ್ಯ ಇಲಾಖೆ ಮಾತ್ರ ರಕ್ಷಿಸಲು ಸಾಧ್ಯವಿಲ್ಲ. ಹೀಗಾಗಿ ಪ್ರತಿಯೊಬ್ಬರೂ ಪಶ್ಚಿಮ ಘಟ್ಟದ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಚಿವ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.ತಾವು ಸಚಿವರಾದ ತರುವಾಯ ಬೆಂಗಳೂರಿನಲ್ಲಿ 10 ಸಾವಿರ ಕೋಟಿ ರೂ. ಬೆಲೆಬಾಳುವ 250 ಎಕರೆ ಸೇರಿದಂತೆ ಒಟ್ಟು 12500 ಎಕರೆ ಅರಣ್ಯ ಒತ್ತುವರಿ ತೆರವು ಮಾಡಿಸಿರುವುದಾಗಿ ಹೇಳಿದ ಅವರು, 50 ಸಾವಿರ ಕೋಟಿ ಬೆಲೆ ಬಾಳುವ ಅರಣ್ಯ ಭೂಮಿಯ ಮರು ವಶಕ್ಕೆ ಕಾನೂನು ಹೋರಾಟ ಮಾಡುತ್ತಿರುವುದಾಗಿ ಹೇಳಿದರು.

15 ದಿನಗಳಲ್ಲಿ ಇಂಧನ ದರ 4ನೇ ಬಾರಿ ಹೆಚ್ಚಳ

ಪುಟ ೧➡ ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಗ್ರಾಹಕರನ್ನು ಹಣದುಬ್ಬರದಿಂದ ರಕ್ಷಿಸಲು ಕಳೆದ ಎರಡು ವರ್ಷಗಳಿಂದ ಇಂಧನ ದರವನ್ನು ಸ್ಥಿರವಾಗಿಟ್ಟಿದ್ದವು. ಆದರೆ ಮಧ್ಯಪ್ರಾಚ್ಯದ ಬಿಕ್ಕಟ್ಟಿನಿಂದ ಬೆಲೆ ಏರಿಸಲೇಬೇಕಾದ ಅನಿವಾರ್ಯತೆ ಎದುರಾಗಿದೆ.

ದಿಲ್ಲಿಗೆ ತೆರಳಿದ ಸಿಎಂ, ಡಿಸಿಎಂ

ಪುಟ ೧➡ ವರಿಷ್ಠರು ಸಿದ್ದರಾಮಯ್ಯ ಅವರ ಜತೆ ಮಾತ್ರ ಮಾತುಕತೆ ನಡೆಸಲಿದ್ದು, ಡಿ.ಕೆ. ಶಿವಕುಮಾರ್ ಅವರೊಂದಿಗೆ ಪ್ರತ್ಯೇಕ ಮಾತುಕತೆ ನಡೆಸುವ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ರಾಜ್ಯದಿಂದ ಖಾಲಿಯಾಗಲಿರುವ ರಾಜ್ಯಸಭೆ ಸ್ಥಾನಗಳ ಭರ್ತಿ ಮತ್ತು ವಿಧಾನ ಪರಿಷತ್ ಸ್ಥಾನಗಳಿಗೆ ನೇಮಕ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಲಿದೆ ಎಂದು ಹೇಳಲಾಗುತ್ತಿದೆ.

❝ ಮಂಗಳವಾರ 11 ಗಂಟೆಗೆ ಹೈಕಮಾಂಡ್ ಪ್ರಶ್ನೆಪತ್ರಿಕೆ ಕೊಡುತ್ತದೆ. ಆ ಬಳಿಕ ಪ್ರಶ್ನೆಗೆ ಉತ್ತರ ಟಿಕ್ ಮಾಡುತ್ತಾರೆ. ಮೊದಲೇ ಪ್ರಶ್ನೆಪತ್ರಿಕೆ ಲೀಕ್ ಮಾಡಲ್ಲ.

■ **ಸತೀಶ್ ಜಾರಕಿಹೊಳಿ, ಸಚಿವ**

ತುರ್ತು ಆರೋಗ್ಯ ಸೇವೆ ಇನ್ನಷ್ಟು ಕ್ಷಿಪ್ರ

ಪುಟ ೧➡ ಒಂದು ಕರೆ ನಮಗೆ, ತುರ್ತು ಸೇವೆ ನಿಮಗೆ ಎಂಬ ಘೋಷವಾಕ್ಯದ ಅಡಿಯಲ್ಲಿ ದೇಶದಲ್ಲೇ ಪ್ರಥಮವಾಗಿ ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆ ಈ ಕಾರ್ಯ ಕೈಗೊಂಡಿದ್ದು, 24 ಗಂಟೆಯೂ ಮೂರು ಪಾಳಿಗಳಲ್ಲಿ 50 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. 108 ಆರೋಗ್ಯ ಕವಚ, 104 ಆರೋಗ್ಯ ಸಹಾಯವಾಣಿ, 112 ಸಹಾಯವಾಣಿ, ಟೆಲಿ ಮನಸ್, ಇ-ಸಂಜೀವಿನಿ, ಮಹಿಳಾ ಸಹಾಯವಾಣಿ 181 ಹಾಗೂ ಮಕ್ಕಳ ಸಹಾಯವಾಣಿ 1098 ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಸಂಯೋಜಿಸಲಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಸಿಸಿಸಿ ಕೇಂದ್ರಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲು ಸಿಂಗಪುರದ ಆಂಬುಲೆನ್ಸ್ ವ್ಯವಸ್ಥೆ ಸೇರಿದಂತೆ ಹಲವು ಮಾದರಿಗಳನ್ನು ಅಧ್ಯಯನ ಮಾಡಲಾಗಿದೆ. ಚಾಮರಾಜನಗರದಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಿದ ಈ ವ್ಯವಸ್ಥೆ ಯಶಸ್ವಿಯಾದ್ದರಿಂದ ರಾಜ್ಯವ್ಯಾಪಿ ವಿಸ್ತರಣೆ ಮಾಡಲಾಗಿದೆ ಎಂದರು. ಈಗಿನ ಸುಧಾರಿತ ವ್ಯವಸ್ಥೆಯಲ್ಲಿ ಆಂಬುಲೆನ್ಸ್ ಟ್ರಾಕಿಂಗ್ ವ್ಯವಸ್ಥೆ ಇದೆ. ಆಂಬುಲೆನ್ಸ್‌ನಿಂದಲೇ ಎಂಡಿಟಿ ಸಾಧನದ ಮೂಲಕ ತುರ್ತು ಸಂದರ್ಭದಲ್ಲಿ ವೈದ್ಯರನ್ನು ಸಂಪರ್ಕಿಸಬಹುದು. ಆಸ್ಪತ್ರೆಗೂ ಸಂದೇಶ ನೀಡಿ ಸಕಲ ಸಿದ್ಧತೆ ಮಾಡಲು ಸಾಧ್ಯ. ಅಲ್ಲದೆ, ರಾಜ್ಯದ 715 ಆಂಬುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಿರುವುದರಿಂದ ಅವುಗಳ ಚಲನವಲನಗಳನ್ನು ನಿಗಾ ವಹಿಸಬಹುದಾಗಿದೆ. ಕರೆ ಮಾಡಿದ ವ್ಯಕ್ತಿಗೆ ಆಂಬುಲೆನ್ಸ್ ಮಾಹಿತಿ, ತಲುಪುವ ಸಮಯ ಹಾಗೂ ಆಸ್ಪತ್ರೆಗೆ ಸಂಬಂಧಿಸಿದ ವಿವರಗಳನ್ನು ಮೊಬೈಲ್ ಸಂದೇಶದ ಮೂಲಕ ರವಾನಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಶಾಸಕ ಸುರೇಶ್ ಕುಮಾರ್ ಅವರು ಸಿಸಿಸಿ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ಪ್ರಿಯಾ ಕೃಷ್ಣ, ಆರೋಗ್ಯ ಇಲಾಖೆ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಡಿಜಿಟಲ್ ಹೆಲ್ತ್ ಸೊಸೈಟಿ ನಿರ್ದೇಶಕ ವಿಪಿನ್ ಸಿಂಗ್ ಇತರರಿದ್ದರು.

ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆಯಿಂದ ಬದುಕುವ ಸಾಧ್ಯತೆ ಹೆಚ್ಚು

ಪುಟ ೧➡ ಆಂಬುಲೆನ್ಸ್ ವ್ಯವಸ್ಥೆ ಖಾಸಗಿಯವರ ಕೈಯಲ್ಲಿದ್ದಾಗ, ಅವರ ಹೊಣೆಗಾರಿಕೆಯನ್ನು ಪ್ರಶ್ನಿಸುವಂತಿರಲಿಲ್ಲ. ಆದರೆ, ಪ್ರಸ್ತುತ ಈ ವ್ಯವಸ್ಥೆ ಸರ್ಕಾರದ ಅಧೀನದಲ್ಲಿರುವುದರಿಂದ ಈ ಸೇವೆಯ ಹೊಣೆಗಾರಿಕೆ ಹೆಚ್ಚಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅಸ್ಸಾಂನಲ್ಲಿ ಏನಾಸಂ ಮಸೂದೆ ಮಂಡನೆ

◆ **ದಿಸ್ಪುರ್:** ಅಸ್ಸಾಂ ಸರ್ಕಾರ ರಾಜ್ಯ ವಿಧಾನಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಮಸೂದೆ ಮಂಡಿಸಿದ್ದು, ಇದರಲ್ಲಿ ಬಹುಪತ್ನಿತ್ವ ನಿಷೇಧ ಹಾಗೂ ಲಿವ್-ಇನ್ ಸಂಬಂಧಗಳ ಕಡ್ಡಾಯ ನೋಂದಣಿಗೆ ಪ್ರಸ್ತಾಪಿಸಲಾಗಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಅತುಲ್ ಬೋರಾ, 'ದಿ ಯುನಿಫಾರ್ಮ್ ಸಿವಿಲ್ ಕೋಡ್, ಅಸ್ಸಾಂ, 2026' ಮಸೂದೆ ಮಂಡಿಸಿದರು. ಈ ಕಾನೂನು ಪ್ರಮುಖವಾಗಿ ನಾಲ್ಕು ವಿಷಯಗಳನ್ನು ಒಳಗೊಂಡಿದೆ. ವಿವಾಹಕ್ಕೆ ಕನಿಷ್ಠ ವಯಸ್ಸು ನಿಗದಿಪಡಿಸುವುದು, ಬಹುಪತ್ನಿತ್ವ ನಿಷೇಧಿಸುವುದು, ಪೋಷಕರ ಆಸ್ತಿಯಲ್ಲಿ ಪುತ್ರಿಯರಿಗೆ ಸಮಾನ ಹಕ್ಕು ನೀಡುವುದು ಮತ್ತು ಲಿವ್-ಇನ್ ಸಂಬಂಧಗಳನ್ನು ನಿಯಂತ್ರಿಸುವುದು. ಮಸೂದೆ ಪುರುಷರಿಗೆ 21 ವರ್ಷ ಮತ್ತು ಮಹಿಳೆಯರಿಗೆ 18 ವರ್ಷಗಳನ್ನು ಕನಿಷ್ಠ ವಿವಾಹದ ವಯಸ್ಸೆಂದು ನಿಗದಿಪಡಿಸಿದೆ. ಇದು ವಿವಾಹ, ವಿಚ್ಛೇದನ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಸರಳಗೊಳಿಸಲಿದೆ.

ರಾಜಕೀಯ ವಿರೋಧ: ಈ ಪ್ರಸ್ತಾವಿತ ಕಾನೂನಿನ ವ್ಯಾಪ್ತಿಯಿಂದ ಪರಿಶಿಷ್ಟ ಪಂಗಡಗಳನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ಸಾಂಪ್ರದಾಯಿಕ ಧಾರ್ಮಿಕ ಪದ್ಧತಿಗಳು, ಆಚರಣೆಗಳು ಮತ್ತು ವಿಧಿವಿಧಾನಗಳಿಗೂ ಈ ಕಾಯ್ದೆಯಿಂದ ವಿನಾಯಿತಿ ನೀಡಲಾಗಿದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ರೈಜರ್ ದಳ ಮತ್ತು ತೃಣಮೂಲ ಕಾಂಗ್ರೆಸ್ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳು ಈ ಮಸೂದೆ ಮಂಡನೆಯನ್ನು ವಿರೋಧಿಸಿದ್ದು, ಈ ಬಗ್ಗೆ ವ್ಯಾಪಕ ಚರ್ಚೆ ನಡೆಸಬೇಕೆಂದು ಒತ್ತಾಯಿಸಿವೆ. ಮಂಗಳವಾರ ಈ ಮಸೂದೆಯ ಮೇಲಿನ ಚರ್ಚೆ ಮತ್ತು ಮತದಾನ ನಡೆಯಲಿದೆ.

ಪಿತೂರಿಗೆ ಭಾರತ ಜಗ್ಗಲ್ಲ

ಪುಟ ೧➡ ಈ ಹಿನ್ನೆಲೆಯಲ್ಲೇ ತಾಳ್ಮೆ ವಹಿಸುವಂತೆ ಪ್ರಧಾನಿ ಮೋದಿ ಅವರು ದೇಶವಾಸಿಗಳನ್ನು ಕೋರಿದ್ದರು. ಆದರೆ ಕೆಲವು ಜೊಳ್ಳು ಟೀಕಾಕಾರರು ಎಲ್ಲವೂ ಕುಸಿಯತೊಡಗಿದೆ ಎಂದು ಸುಳ್ಳು ಪ್ರಚಾರದಲ್ಲಿ ನಿರತರಾಗಿರುವುದು ತೀರಾ ಸರಿಯಲ್ಲ ಎಂದು ಸಚಿವೆ ನಿರ್ಮಲಾ ಹೇಳಿದರು. ಭೀತಿ ಹುಟ್ಟಿಸುವುದು ಭಾರತದ ಜಾಯಮಾನವಲ್ಲ. ನಮ್ಮ ಮಾತು ಮತ್ತು ಕೃತಿ ಮುಖೇನ ಜನರಲ್ಲಿ ವಿಶ್ವಾಸ ಮೂಡಿಸಬೇಕು. ಎಂಎಸ್ ಎಂಇಗಳಿಗೆ 8.1ಲಕ್ಷ ಕೋಟಿ ಪಾವತಿ ವಿಳಂಬದಿಂದಾಗಿ ಅವುಗಳ ದುಡಿಯುವ ಬಂಡವಾಳ ಮತ್ತು ಬೆಳವಣಿಗೆಗೆ ತೊಡಕಾಗಿದೆ. ಎಂಎಸ್‌ಎಂಇಗಳಿಗೆ 45ದಿನಗಳೊಳಗೆ ಪಾವತಿಗಳ ವಿಲೇವಾರಿ ಮಾಡುವಂತೆ ಸಾರ್ವಜನಿಕ ರಂಗದ ಸಂಸ್ಥೆಗಳನ್ನು ಸಚಿವರು ಒತ್ತಾಯಿಸಿದರು.

ಮೇಕೆದಾಟುಗೆ ಸುಪ್ರೀಂ ಬಲ

ಪುಟ ೧➡ ಈ ಹಿಂದೆ 2025ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಲ್ಲಿ, ಕೇಂದ್ರ ಜಲ ಆಯೋಗ ಡಿಪಿಆರ್ ಸಿದ್ಧಪಡಿಸಲು ಅನುಮತಿ ನೀಡಿರುವ ಹಂತದಲ್ಲೇ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಮುಂಗಡ ಆಕ್ಷೇಪ ಎಂದು ಹೇಳಿ ಪರಿಗಣಿಸಲು ನಿರಾಕರಿಸಿತ್ತು. ಇದೀಗ ಆ ತೀರ್ಪಿನ ವಿರುದ್ಧದ ಮರು ಪರಿಶೀಲನಾ ಅರ್ಜಿಯೂ ತಿರಸ್ಕೃತವಾಗಿದೆ. ಮೇಕೆದಾಟು ಯೋಜನೆ ಬೆಂಗಳೂರು ಮಹಾನಗರ ಪ್ರದೇಶದ ಕುಡಿಯುವ ನೀರಿನ ಭವಿಷ್ಯದ ಅಗತ್ಯ ಪೂರೈಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ ಎಂದು ಕರ್ನಾಟಕ ಸರ್ಕಾರ ವಾದಿಸಿದೆ. ಜತೆಗೆ ಸಾಮಾನ್ಯ ವರ್ಷಗಳಲ್ಲಿ ಬಿಳಿಗುಂಡ್ಲುವಿನಲ್ಲಿ ತಮಿಳುನಾಡಿಗೆ ನಿಗದಿತ ಪ್ರಮಾಣದ ನೀರು ಬಿಡುಗಡೆ ನಿಯಂತ್ರಣಕ್ಕೂ ಇದು ಸಹಕಾರಿ ಎಂದು ತಿಳಿಸಿದೆ.

ವಿಜಯ್ ಸರ್ಕಾರದಿಂದಲೂ ಕ್ಯಾತೆ

ಮೇಕೆದಾಟು ಯೋಜನೆ ಸ್ಥಗಿತಗೊಳಿಸಲು ಸಾಧ್ಯವಿರುವ ಎಲ್ಲ ಕಾನೂನಾತ್ಮಕ ದಾರಿಗಳನ್ನು ಕಂಡುಕೊಳ್ಳುವಂತೆ ಅಧಿಕಾರಿಗಳಿಗೆ ತ.ನಾಡು ಸಿಎಂ ವಿಜಯ್ ಸೂಚಿಸಿದ್ದಾರೆ. ಈ ಮೂಲಕ ಡಿಎಂಕೆ ಮತ್ತು ಎಐಎಡಿಎಂಕೆಯ ಕಾವೇರಿ ಕ್ಯಾತೆ ವಿಚಾರವನ್ನು ಇವರೂ ಮುಂದುವರಿಸಿದ್ದಾರೆ. ರಾಜ್ಯದಲ್ಲಿ ಮೇಕೆದಾಟು ಯೋಜನೆ ಆರಂಭಕ್ಕೆ ಭೂಮಿಪೂಜೆ ಮಾಡಲು ತಯಾರಿ ನಡೆಸಲಾಗುತ್ತಿದೆ ಎಂಬ ಸುದ್ದಿಗಳ ನಡುವೆ ವಿಜಯ್ ಈ ಸೂಚನೆ ನೀಡಿದ್ದಾರೆ.

ಕನ್ನಡ ಶಾಲೆ ಮುಚ್ಚಬೇಡಿ: ಬಸವರಾಜ ಹೊರಟ್ಟಿ

ಹಾವೇರಿ: ಪ್ರತಿ ಹಳ್ಳಿಗಳಲ್ಲಿ ಕನಿಷ್ಠ 5ನೇ ತರಗತಿಯವರೆಗಾದರೂ ಸರ್ಕಾರಿ ಕನ್ನಡ ಶಾಲೆಗಳು ಇರುವಂತೆ ಸರ್ಕಾರ ನೋಡಿಕೊಳ್ಳಬೇಕು. ಸರ್ಕಾರಿ ಶಾಲೆ ಮುಚ್ಚಿದರೆ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವದಂತಹ ರಾಷ್ಟ್ರೀಯ ದಿನಾಚರಣೆಗಳನ್ನು ಮಾಡೋರ್ಯಾರು? ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಶ್ನಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲೆಡೆ ಈಗ ಕೆಪಿಎಸ್ ಶಾಲೆ ಮಾಡಲು ಸರ್ಕಾರ ಮುಂದಾಗಿದೆ. ಹೀಗಾದರೆ ಹಳ್ಳಿಗಳಲ್ಲಿರುವ ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿಗೆ ಬರುತ್ತೆ. ಹಿಂದೆ ಶಾಸಕರ ಮಾದರಿ ಶಾಲೆ ಮಾಡಿದ್ದರು ಈಗ ಅವುಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ಅವಲೋಕನ ಮಾಡಬೇಕು ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸರಿಯಾಗಿ ಪರಿಶೀಲನೆ ಮಾಡಿದರೆ ಶೇ.55ರಷ್ಟೂ ಫಲಿತಾಂಶ ಬರೋದಿಲ್ಲ, ಶೇ.35ರಷ್ಟು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಏನು ನಿರೀಕ್ಷೆ ಮಾಡಲು ಸಾಧ್ಯವಿದೆ ಅಸಮಾಧಾನ ವ್ಯಕ್ತಪಡಿಸಿದರು.

ತ್ರಿಭಾಷಾ ಸೂತ್ರ ಅನುಷ್ಠಾನವಾಗಲಿ: ಯಾವುದೇ ಕಾರಣಕ್ಕೂ ಕನ್ನಡ ಶಾಲೆಗಳನ್ನು ಮುಚ್ಚಬಾರದು. ಜೊತೆಗೆ ಮಕ್ಕಳು ಹೆಚ್ಚು ಭಾಷೆ ಕಲಿಯಬೇಕು. ತ್ರಿಭಾಷಾ ಸೂತ್ರವನ್ನೇ ಸರಿಯಾಗಿ ಅನುಷ್ಠಾನ ಮಾಡಬೇಕು.

ಹಿಂದಿ ಭಾಷೆ ಕಲಿಯದಿದ್ದರೆ ಬೇರೆ ರಾಜ್ಯಕ್ಕೆ ಹೋದಾಗ ಸಮಸ್ಯೆ ಆಗಲಿದೆ. ಪ್ರತಿ ತರಗತಿಗೆ ಒಬ್ಬರು ಶಿಕ್ಷಕರು ಇರುವಂತೆ ನೋಡಿಕೊಳ್ಳಬೇಕು ಎಂದು ಸರ್ಕಾರವನ್ನು ಬಸವರಾಜ ಹೊರಟ್ಟಿ ಒತ್ತಾಯಿಸಿದರು.

ಪದ್ಮಶ್ರೀ ಪ್ರಶಸ್ತಿ...





ಹೊಸದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಾ.ಎಸ್.ಜಿ.ಸುಶೀಲಮ್ಮ ಮತ್ತು ಅಂಕೇಗೌಡ ಎಂ. ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನಾನು ಕೂಡ ರಾಜ್ಯಸಭೆ ಆಕಾಂಕ್ಷಿ: ಸದಾನಂದಗೌಡ

ಮೈಸೂರು: ರಾಜ್ಯಸಭೆಗೆ ಹೋಗಲು ನಾನು ಕೂಡ ಆಕಾಂಕ್ಷಿಯಾಗಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದರು.

ಸೋಮವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಮತ್ತು ಜೆಡಿಎಸ್ ಒಂದೇ ಮೈತ್ರಿಕೂಟದಲ್ಲಿ ಇದ್ದೇವೆ. ನಮಗೆ 63 ಮತ್ತು ಜೆಡಿಎಸ್‌ಗೆ 17 ಸ್ಥಾನವಿದ್ದರೂ, ನನ್ನನ್ನು ರಾಜ್ಯಸಭೆಗೆ ಕಳುಹಿಸುವ ವಿಚಾರವನ್ನು ರಾಷ್ಟ್ರೀಯ ನಾಯಕರು ನೋಡಿಕೊಳ್ಳುತ್ತಾರೆ. ನಾನು, ರಾಜ್ಯಸಭೆಗೆ ಆಯ್ಕೆಯಾಗಲು ಆಕಾಂಕ್ಷಿಯಾಗಿದ್ದೇನೆ. ಚುನಾವಣಾ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಲೋಕಸಭಾ ಚುನಾವಣೆಯ ವೇಳೆಯೇ ಹೇಳಿದ್ದೇನೆ. ಪಕ್ಷ ಕೊಡುವ ಯಾವುದೇ ಜವಾಬ್ದಾರಿಯನ್ನು ನಿಭಾಯಿಸಲು ಸಿದ್ಧನಿದ್ದೇನೆ ಎಂದರು. ನಮ್ಮಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಪ್ರಸ್ತಾವ ಇಲ್ಲ. ಹಾಲಿ ಅಧ್ಯಕ್ಷರು ಎರಡು ವರ್ಷ ಅಧಿಕಾರ ಮುಗಿಸಿದ್ದು, ಇನ್ನೊಂದು ವರ್ಷದಲ್ಲಿ ಅವರ ಅವಧಿಯೇ ಮುಗಿಯುತ್ತದೆ ಎಂದರು.



ಎಲ್ಲಾ ಕಡೆ ಬಿಜೆಪಿ ಜಯಭೇರಿ ಭಾರಿಸುತ್ತಿದ್ದು, ರಾಜ್ಯದಲ್ಲಿ ಹಿಂದೆ ಜನಸೇವೆ ಮಾಡಿದ ಬಿಜೆಪಿಯನ್ನು ಹೇಗೆ ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವ ಮೂಲ ವಿಚಾರ ತಿಳಿಸುವ ಕೆಲಸವಾಗುತ್ತಿದೆ ಎಂದರು. ಕಾಂಗ್ರೆಸ್ ಎಸ್‌ಐಆರ್‌ಗೆ ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್ ರಾಜ್ಯದ ಜನ ತನಗೆ ಕೊಟ್ಟ ಜವಾಬ್ದಾರಿ ನಿರ್ವಹಿಸಲಾಗದ ಕಾರಣ ಜನ ಮುಗಿ ಬಿದ್ದಾಗ ಅವರ ದಿಕ್ಕು ತಪ್ಪಿಸಲು ಎಸ್‌ಐಆರ್ ಬಗ್ಗೆ ಸುಳ್ಳು ಹರಡುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರದ ಹಿಂದು ವಿರೋಧಿ ಧೋರಣೆಯಿಂದ ಜನ ರೋಸಿ ಹೋಗಿದ್ದಾರೆ ಎಂದರು.

ಕಿರುಸುದ್ದಿ

ನಾವೀನ್ಯತೆ, ಕೌಶಲಾಭಿವೃದ್ಧಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು



ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ, ಭಾರತವು ಸೆಮಿಕಂಡಕ್ಟರ್ ಕ್ಷೇತ್ರ, ಸ್ಟಾರ್ಟ್‌ಅಪ್‌ಗಳು, ಡಿಜಿಟಲ್ ನಾವೀನ್ಯತೆ ಮತ್ತು ಕೌಶಲಾಭಿವೃದ್ಧಿ ಕ್ಷೇತ್ರಗಳಲ್ಲಿ ಹೊಸ ಮೈಲಿಗಲ್ಲುಗಳನ್ನು ತಲುಪುತ್ತಿದೆ. ಈ ಮೂಲಕ ನಮ್ಮ ಯುವಜನತೆಗೆ ಹಿಂದೆಂದೂ ಕಾಣದಂತಹ ಅವಕಾಶಗಳು ಸೃಷ್ಟಿಯಾಗಿವೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ತಿಳಿಸಿದ್ದಾರೆ. ಸೋಮವಾರ ಯೂತ್ ಫಾರ್ ನೇಷನ್ ಆಯೋಜಿಸಿದ್ದ ಯುವ ಮನಸ್ಸುಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು. ವಿಕಸಿತ ಭಾರತದ ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ ಯುವಜನತೆಯ ಪಾತ್ರ ಮತ್ತು ಯುವ ನಾಯಕತ್ವದ ಪ್ರಾಮುಖ್ಯತೆಯ ಕುರಿತು ಅವರೊಂದಿಗೆ ಅರ್ಥಪೂರ್ಣ ಚರ್ಚೆಗಳನ್ನು ನಡೆಸಿದರು. ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಯುವಜನರ ಆಕಾಂಕ್ಷೆಗಳಿಗೆ ದ್ರೋಹ ಬಗೆದಿದೆ. ಕಾಂಗ್ರೆಸ್ ಆಡಳಿತದಲ್ಲಿ ಮಿತಿಮೀರಿದ ಭ್ರಷ್ಟಾಚಾರ ಮತ್ತು ದುರಾಡಳಿತವು, ಭಾರತದ ಯುವಜನತೆಯ ಭವಿಷ್ಯ ಮತ್ತು ಸಾಮರ್ಥ್ಯದ ಬಗ್ಗೆ ಕಾಂಗ್ರೆಸ್ ಪಕ್ಷಕ್ಕಿರುವ ಸಂಪೂರ್ಣ ದೂರದೃಷ್ಟಿಯ ಕೊರತೆಯನ್ನು ಬಟಾಬಯಲು ಮಾಡಿದೆ ಎಂದು ಅವರು ಹೇಳಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಪ್ರಮುಖರು ಭಾಗವಹಿಸಿದ್ದರು.

ಸಿಇಟಿ ಸೀಟು ಹಂಚಿಕೆ ಮಂಥನಗೆ ಉತ್ತಮ ಪ್ರತಿಕ್ರಿಯೆ

ಬೆಂಗಳೂರು: ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತು ಮಾಹಿತಿ ನೀಡುವ ಸಲುವಾಗಿ ರಾಜ್ಯದ 64 ಕಾಲೇಜುಗಳಲ್ಲಿ ಸೋಮವಾರದಿಂದ ಆರಂಭವಾದ ಸಿಇಟಿ ಸೀಟು ಹಂಚಿಕೆ ಮಂಥನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಮೊದಲ ದಿನವೇ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ಪೋಷಕರೊಂದಿಗೆ ಹೋಗಿ ಮಂಥನದಲ್ಲಿ ಭಾಗವಹಿಸಿ ತಮ್ಮ ಅನುಮಾನಗಳನ್ನು ದೂರ ಮಾಡಿಕೊಂಡರು ಎಂದು ವಿವರಿಸಿದ್ದಾರೆ. ಕೆಇಎ ವೆಬ್‌ಸೈಟ್‌ನಲ್ಲಿ ಸ್ಲಾಟ್‌ಬುಕ್ ಮಾಡಿಕೊಂಡು, ನಂತರ ತಮಗೆ ಸನಿಹ ಇರುವ ಕಾಲೇಜುಗಳಿಗೆ ಹೋಗಲು ಸೂಚಿಸಲಾಗಿತ್ತು. ಸುಮಾರು 13 ಸಾವಿರ ಮಂದಿ ಮೊದಲ ದಿನದ ಮಂಥನದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿದ್ದರು ಎಂದು ಪ್ರಸನ್ನ ವಿವರಿಸಿದ್ದಾರೆ. ಮೇ 28ರಂದು ಹೊರತುಪಡಿಸಿ, ಮೇ 30ರವರೆಗೆ ಎಲ್ಲ ದಿನ ಎರಡು ಸೆಷನ್ಸ್ ಮಂಥನ ಕಾರ್ಯಾಗಾರ ನಡೆಯಲಿದೆ. ಅಭ್ಯರ್ಥಿಗಳು ತಮ್ಮ ಪೋಷಕರ ಜೊತೆ ಹೋಗಿ ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತು ಮಾಹಿತಿ ಪಡೆಯಬಹುದು ಎಂದು ತಿಳಿಸಿದ್ದಾರೆ.

ರಾಜ್ಯದ ಸರ್ಕಾರಿ ಇಂಜಿನಿಯರಿಂಗ್, ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಶಿವಮೊಗ್ಗದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಸೇರಿದಂತೆ ಇತರೆ 64 ಕಾಲೇಜುಗಳಲ್ಲಿ ಮಂಥನ ಕಾರ್ಯಾಗಾರ ನಡೆಯಿತು. ಬೆಳಗ್ಗೆ 10 ರಿಂದ 12 ಗಂಟೆವರೆಗೆ ಒಂದು ಹಾಗೂ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ಮತ್ತೊಂದು ಸೆಷನ್ಸ್ ನಡೆಯಿತು.

ಗ್ರಾಹಕರು, ರೈತರಿಗೆ ತೈಲ ದರ ಏರಿಕೆ ಬಿಸಿ: ಸಿಎಂ ವಾಗ್ದಾಳಿ

ಜನಸಾಮಾನ್ಯರ ಲೂಟಿ

ಬೆಂಗಳೂರು: ಪ್ರಸ್ತುತ ಕಚ್ಚಾ ತೈಲದ ಬೆಲೆ 100 ಡಾಲರ್ ಮಿತಿಯೊಳಗಿದ್ದರೂ ಕೇಂದ್ರ ಸರ್ಕಾರ ಪೆಟ್ರೋಲ್-ಡೀಸೆಲ್ ಬೆಲೆಯನ್ನು ಸತತ ನಾಲ್ಕು ಬಾರಿ ಏರಿಕೆ ಮಾಡಿದೆ. ಇದರಿಂದಾಗಿ ಗ್ರಾಹಕರಿಗೆ, ರೈತರಿಗೆ, ಜನಸಾಮಾನ್ಯರಿಗೆ ಈ ಬೆಲೆ ಏರಿಕೆಯ ಬಿಸಿ ತಟ್ಟಲಿದೆ. ಕೇಂದ್ರ ಸರ್ಕಾರ ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮತ್ತೆ ಪೆಟ್ರೋಲ್-ಡೀಸೆಲ್ ದರ ಏರಿಕೆಯಾಗಿರುವುದನ್ನು ಖಂಡಿಸಿ ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ದರ ಏರಿಸಿದ್ದು, ದೇಶದ ಇತಿಹಾಸದಲ್ಲಿ ಹೀಗೆ ಏರಿಕೆಯಾಗಿದ್ದಲ್ಲಿ ಜನಸಾಮಾನ್ಯರು, ಮಧ್ಯಮ ವರ್ಗದ ಜನರ ಜೀವನ ದುಸ್ತರವಾಗಲಿದೆ. ಬೆಲೆಯೇರಿಕೆಯಿಂದ ಜನ ತತ್ತರಿಸಿದ್ದಾರೆ ಎಂದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರ್ಕಾರ ಬರುತ್ತದೆ, ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ. ಕಳೆದ 11 ದಿನಗಳಿಂದ 4 ಬಾರಿ ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ದರ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 110.93 ರೂ. ಮತ್ತು ಡೀಸೆಲ್ ದರ 98.89 ರೂ.ಗಳಾಗಿವೆ. 7.52 ರೂ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದೆ ಎಂದು ತಿಳಿಸಿದರು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 2014ರ ಮೇ ತಿಂಗಳಲ್ಲಿ 71.41 ರೂ. ಪೆಟ್ರೋಲ್, ಡೀಸೆಲ್ 56.71 ರೂ. ಇತ್ತು. ಅಂದು 412 ರೂ. ಆಗಿದ್ದ ಗ್ಯಾಸ್ ಸಿಲಿಂಡರ್ ಬೆಲೆ ಇಂದು 915 ರೂ. ಆಗಿದೆ. ಇದು ದುಪ್ಪಟ್ಟಿಗಿಂತ ಹೆಚ್ಚಾಗಿದೆ. ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಹೋಲಿಸಿದರೆ ಪ್ರಸ್ತುತ ಬೆಲೆ ಇಳಿದಿದ್ದರೂ ಪೆಟ್ರೋಲ್-ಡೀಸೆಲ್ ಬೆಲೆ ಹೆಚ್ಚುತ್ತಿದೆ. 65 ರಿಂದ 75 ಡಾಲರ್ ಬೆಲೆ ಇದ್ದಾಗ, ಈ ಕಡಿಮೆ ಬೆಲೆಯ ಲಾಭ, ಗ್ರಾಹಕರಿಗೆ ದೊರೆಯಲಿಲ್ಲ ಎಂದರು.



ಏರಿಕೆ ಎಲ್ಲರ ಬದುಕಿಗೆ ಶಾಪ: ಡಿ.ಕೆ. ಶಿವಕುಮಾರ್

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮೇಲಿನ ತೆರಿಗೆ ಮೂಲಕ ಕೇಂದ್ರ ಸರ್ಕಾರ ನಿತ್ಯ 1 ಸಾವಿರ ಕೋಟಿ ಸಂಗ್ರಹಿಸುತ್ತಿದೆ. ಈ ತೆರಿಗೆ ಬಿಟ್ಟು ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬಹುದಾಗಿತ್ತು. ಬೇರೆ ಯಾವುದೇ ದೇಶದಲ್ಲಿ ಈ ರೀತಿ ಬೆಲೆ ಏರಿಕೆಯಾಗಿಲ್ಲ. ಈ ಬೆಲೆ ಏರಿಕೆ ಎಲ್ಲರ ಬದುಕಿಗೆ ಶಾಪವಾಗಿದೆ ಎಂದು ಉಪಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ಮೇ 30ಕ್ಕೆ ಪ್ರತಿಭಟನೆ

ಬೆಲೆ ಏರಿಕೆ ಖಂಡಿಸಿ ಇದೇ ತಿಂಗಳು 30 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು. ಮುಂದಿನ ಹೋರಾಟದ ರೂಪುರೇಷೆ ಪ್ರಕಟಿಸುತ್ತೇವೆ. ನಂತರ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೋರಾಟ ಮಾಡುವಂತೆ ಸೂಚಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಅಗತ್ಯ ವಸ್ತುಗಳ ಬೆಲೆಗಳ ಮೇಲೆ ತೀವ್ರ ಪರಿಣಾಮ: ಸುರ್ಜೆವಾಲ

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ತೆರಿಗೆ ವಿಧಿಸುವ ಮೂಲಕ 43 ಲಕ್ಷ ಕೋಟಿ ರೂ. ಸಂಗ್ರಹಿಸಿದೆ. ಈ ಜನರ ಲೂಟಿ ಕೇವಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಿಲಿಂಡರ್ ಮತ್ತು ಸಿಎನ್‌ಜಿ ಬೆಲೆಗಳ ಬಾರಿ ಏರಿಕೆಯಾಗಿವೆ. ಇದು ದೈನಂದಿನ ಬಳಕೆಯ ಅಗತ್ಯ ವಸ್ತುಗಳ ಬೆಲೆಗಳ ಮೇಲೂ ಪರಿಣಾಮ ಬೀರಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ತಿಳಿಸಿದ್ದಾರೆ.

ದರ ಏರಿಕೆಯಿಂದ ಸರ್ಕಾರಕ್ಕೆ ಆದಾಯ: ಅಶೋಕ

ವ್ಯಾಟ್ ಕಡಿಮೆ ಮಾಡಿ

ಬೆಂಗಳೂರು: ಪೆಟ್ರೋಲ್ ದರ ಏರಿಕೆಯಿಂದ ವಾರ್ಷಿಕ 6,000 ಕೋಟಿ ರೂ. ಹೆಚ್ಚುವರಿ ಆದಾಯ ಗಳಿಸುತ್ತಿರುವ ಕಾಂಗ್ರೆಸ್ ಸರ್ಕಾರವು ವ್ಯಾಟ್ ಕಡಿಮೆ ಮಾಡದೆ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ವಿಧಾನಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಪೆಟ್ರೋಲ್ ದರ ಏರಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕಾರಣ ಮಾಡುತ್ತಿದ್ದಾರೆ. ಯುದ್ಧದಿಂದಾಗಿ ಪೆಟ್ರೋಲ್ ಬಳಕೆ ಕಡಿಮೆ ಮಾಡಲು ಬೇರೆ ದೇಶಗಳು ನಿರ್ಬಂಧ ಹಾಕಿದ್ದರೂ ಪ್ರಧಾನಿ ನರೇಂದ್ರ ಮೋದಿ ಅಂತಹ ನಿರ್ಬಂಧ ಹಾಕಿಲ್ಲ. ಕರ್ನಾಟಕದಲ್ಲಿ ಪೆಟ್ರೋಲ್ ದರ ಲೀಟರ್‌ಗೆ 107.70 ರೂ. ಇದ್ದರೆ, ದಿಲ್ಲಿಯಲ್ಲಿ 99.50 ರೂ., ಗುಜರಾತ್‌ನಲ್ಲಿ 99.10 ರೂ., ಉತ್ತರ ಪ್ರದೇಶದಲ್ಲಿ 99.50 ರೂ., ಹರ್ಯಾಣದಲ್ಲಿ 99.70 ರೂ. ದರವಿದೆ. ಅಂದರೆ ರಾಜ್ಯದಲ್ಲಿ ಮಾತ್ರ ದರ ಹೆಚ್ಚಿದೆ ಎಂದರು.

ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಮೇಲಿನ ವ್ಯಾಟ್ ಹೆಚ್ಚಳ ಮಾಡಿದ್ದು, ಅದನ್ನು ಕಡಿಮೆ ಮಾಡದೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ದರ ಏರಿಕೆಯಿಂದ ಕೇಂದ್ರ ಸರ್ಕಾರಕ್ಕೆ ಆದಾಯ ಬರುವುದಿಲ್ಲ. ರಾಜ್ಯ ಸರ್ಕಾರಕ್ಕೆ ಹೆಚ್ಚುವರಿಯಾಗಿ ವಾರ್ಷಿಕ 6,000 ಕೋಟಿ ರೂ. ಆದಾಯ ಬರಲಿದೆ. ಇದನ್ನು ಗ್ಯಾರಂಟಿಗೆ ಬಳಸುತ್ತಾರೆ ಎಂದು ದೂರಿದರು.

ಗೂಂಡಾ ಕಾಯ್ದೆಯಲ್ಲಿ ಮತಾಂಧರರ ಬಂಧಿಸಿ: ಆಳಂದದ ಕೋಮುಗಲಭೆ ಪ್ರಕರಣದಲ್ಲಿ ಮುಸ್ಲಿಮರ ವಿರುದ್ಧ ಕೇಸು ವಾಪಸ್ ಪಡೆಯಲಾಗಿದೆ. ನಂತರ ಭಟ್ಕಳದಲ್ಲಿ ಹಿಂದುಗಳು ಕಟ್ಟಿದ್ದ ಮೂರಿನಕಟ್ಟೆಯನ್ನು ಮುಸ್ಲಿಂ ಮತಾಂಧರು ಒಡೆದುಹಾಕಿದ್ದಾರೆ. ಆದರೂ ಪೊಲೀಸರು ಕ್ರಮ ವಹಿಸಿಲ್ಲ. ಸಿದ್ದರಾಮಯ್ಯ ಇರುವವರೆಗೂ ಕೇಸು ವಾಪಸ್ ಪಡೆಯುತ್ತಾರೆ ಎಂಬ ನಂಬಿಕೆ ಮುಸ್ಲಿಂ ಮತಾಂಧರಲ್ಲಿದೆ. ಪೊಲೀಸರ ಮೇಲೆ ಕೈ ಮಾಡಿದ ಮತಾಂಧರನ್ನು ಗೂಂಡಾ ಕಾಯ್ದೆಯಡಿ ಬಂಧಿಸಬೇಕು. ಇದರ ನೈತಿಕ ಹೊಣೆ ಹೊತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಅಭಿಯಾನ ಅಗತ್ಯವಿಲ್ಲ

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಿಂದ ಬಾಂಗ್ಲಾ ಅಕ್ರಮ ನಿವಾಸಿಗಳ ಪತ್ತೆಯಾಗಲಿದೆ. ನಿಜವಾದ ಮತದಾರರು ಮಾತ್ರ ಮತದಾರರ ಪಟ್ಟಿಯಲ್ಲಿ ಉಳಿದುಕೊಳ್ಳುತ್ತಾರೆ. ಪಡಿತರ ಚೀಟಿಯ ಪರಿಷ್ಕರಣೆಗೆ ಅಭಿಯಾನ ಮಾಡುವ ಅಗತ್ಯವಿಲ್ಲ. ಮರಣ ಪ್ರಮಾಣ ಪತ್ರ ಮಂಜೂರಾದ ಕೂಡಲೇ ಸ್ವಯಂಚಾಲಿತವಾಗಿ ಪಡಿತರ ಚೀಟಿ ರದ್ದಾಗಬೇಕು. ಆದರೆ, ಗ್ಯಾರಂಟಿಗಳಲ್ಲಿ ಹಣ ಉಳಿಸಲು ಪಡಿತರ ಚೀಟಿ ರದ್ದು ಮಾಡಲಾಗುತ್ತಿದೆ. ಕೇಂದ್ರದಿಂದ ಅಕ್ಕಿ ಸಿಗುತ್ತಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ, ಕೇಂದ್ರ ಸರ್ಕಾರದಿಂದ ಜೂನ್ ವರೆಗೆ ಅಕ್ಕಿ ಲಭ್ಯವಿದೆ. 4 ಲಕ್ಷ ಟನ್ ಅಕ್ಕಿ ಸಿದ್ಧವಾಗಿದ್ದರೂ ಆರ್ಥಿಕ ಇಲಾಖೆಯಿಂದ ಕೆಜಿಗೆ 23 ರೂ.ನಂತೆ ಹಣ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ಹಣ ನೀಡಿದ ಕೂಡಲೇ ಕೇಂದ್ರ ಅಕ್ಕಿ ನೀಡುತ್ತದೆ ಎಂದು ಆರ್.ಅಶೋಕ ತಿಳಿಸಿದರು.

ವಿತ್ತ ಸಚಿವೆಗೆ ಸಂತೋಷ್ ಲಾಡ್ ಪತ್ರ | ವಿಶಿಷ್ಟಚೇತನರಿಗೆ ನೆರವಾಗಿ

ಸಲಕರಣೆಗೆ ತೆರಿಗೆ ವಿನಾಯ್ತಿ ನೀಡಿ

ಬೆಂಗಳೂರು: ವಿಶಿಷ್ಟಚೇತನರು ಸ್ವತಂತ್ರ ಜೀವನ ನಡೆಸಲು ಸಹಾಯವಾಗುವ ಎಲ್ಲಾ ಸಾಧನ, ಸಲಕರಣೆಗಳ ಮೇಲಿನ ಜಿಎಸ್‌ಟಿಗೆ ವಿನಾಯಿತಿ ನೀಡುವಂತೆ ಇಲ್ಲವೇ ಜಿಎಸ್‌ಟಿಯನ್ನು ಸಂಪೂರ್ಣ ಮನ್ನಾ ಮಾಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪತ್ರ ಬರೆದಿದ್ದಾರೆ.



ವಿಶಿಷ್ಟಚೇತನರಿಗೆ ಅಗತ್ಯವಾದ ಸಹಾಯಕ ಸಾಧನಗಳು, ಪುನರ್ವಸತಿ ಸಾಧನಗಳು, ಸಲಕರಣೆಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತದೆ. ಈ ಸಾಧನಗಳು ಐಷಾರಾಮಿ ವಸ್ತುಗಳಲ್ಲ, ಬದಲಾಗಿ ಅನಿವಾರ್ಯ ಅವಶ್ಯಕತೆಗಳಾಗಿವೆ. ಜಿಎಸ್‌ಟಿ ವಿನಾಯಿತಿ ಅಥವಾ ಸಂಪೂರ್ಣ ಜಿಎಸ್‌ಟಿ ತೆಗೆದುಹಾಕಿದರೆ ಅನುಕೂಲವಾಗುತ್ತದೆ.

ವಿಶಿಷ್ಟಚೇತನರಿಗೆ ಸರ್ಕಾರ ಈ ನಿಟ್ಟಿನಲ್ಲಿ ಸಹಾಯ ಮಾಡಿದರೆ ದೇಶದಾದ್ಯಂತ ಲಕ್ಷಾಂತರ ವಿಭಿನ್ನ ಸಾಮರ್ಥ್ಯ ಹೊಂದಿರುವ ನಾಗರಿಕರಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ತಿಳಿಸಿದ್ದಾರೆ.

ವಿಶಿಷ್ಟಚೇತನರ ಬೆಂಬಲ ಸಾಧನಗಳನ್ನು ಶೂನ್ಯ ತೆರಿಗೆ ಅಥವಾ ವಿನಾಯಿತಿ ಪಡೆದ ವರ್ಗದ ಅಡಿಯಲ್ಲಿ ಸೇರಿಸಬೇಕು, ಈ ಪ್ರಯೋಜನಗಳನ್ನು ಪಡೆಯಲು ಪ್ರಮಾಣೀಕರಣ ಮತ್ತು ಖರೀದಿ ವಿಧಾನಗಳನ್ನು ಸರಳಗೊಳಿಸಬೇಕು, ಸಾಧನಗಳು ಕೈಗೆಟುಕುವ ರೀತಿ ತಯಾರಾಗಬೇಕು ಎಂದು ಪತ್ರದಲ್ಲಿ ಕೋರಿದ್ದಾರೆ.

ಜಿಎಸ್‌ಟಿಯಿಂದ ಆರ್ಥಿಕ ಹೊರೆ

ವಿಶಿಷ್ಟಚೇತನರು ಬಳಸುವ ಸಾಧನಗಳ ಮೇಲೆ ತೆರಿಗೆ ವಿನಾಯಿತಿ ನೀಡಿದರೆ ಅವರ ಶಿಕ್ಷಣ, ಉದ್ಯೋಗ, ಆರೋಗ್ಯ ರಕ್ಷಣೆ ಮತ್ತು ದೈನಂದಿನ ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ಹೆಚ್ಚಿನ ಅನುವು ಮಾಡಿಕೊಡುತ್ತದೆ. ಅವರ ಸಲಕರಣೆಗಳ ಮೇಲೆ ಜಿಎಸ್‌ಟಿ ವಿಧಿಸಿದರೆ ವಿಶಿಷ್ಟಚೇತನರು ಮತ್ತು ಅವರ ಕುಟುಂಬಗಳ ಮೇಲೆ ಅಧಿಕ ಆರ್ಥಿಕ ಹೊರೆ ಬೀಳುತ್ತದೆ. ಅವರಲ್ಲಿ ಅನೇಕರು ಈಗಾಗಲೇ ಹೆಚ್ಚಿನ ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮನವಿಯನ್ನು ಪರಿಗಣಿಸಬೇಕು ಎಂದು ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ.

ಟೊಯೋಟಾ ಹಬ್ ಒಪ್ಪಂದಕ್ಕೆ ಸಹಿ

ಬೆಂಗಳೂರು: ಡಾಬಸಪೇಟೆ-ದೊಡ್ಡಬಳ್ಳಾಪುರ ನಡುವೆ ರಾಜ್ಯ ಸರ್ಕಾರವು ಅಭಿವೃದ್ಧಿಪಡಿಸುತ್ತಿರುವ ಮಹತ್ವಾಕಾಂಕ್ಷಿ ಕ್ವಿನ್ ಸಿಟಿಯಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಕಂಪನಿಯು 1,200 ಕೋಟಿ ರೂ. ಹೂಡಿಕೆಯೊಂದಿಗೆ ಜಾಗತಿಕ ಮಟ್ಟದ ತನ್ನ ಬಿಝ್‌ಇಂಟೆಲ್ ಹಬ್ ಸ್ಥಾಪಿಸಲಿದೆ.



ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಸಮ್ಮುಖದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮತ್ತು ಟೊಯೋಟಾ ಕಂಪನಿಯು ಪರವಾಗಿ ಅದರ ಸಿಓಓ ಮತ್ತು ವಿಶೇಷ ಯೋಜನೆಯ ನಿರ್ದೇಶಕ ಸುದೀಪ್ ದಳವಿ ಅವರು ಈ ಕುರಿತ ಒಪ್ಪಂದಕ್ಕೆ ಅಂಕಿತ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹೂಡಿಕೆಗೆ ಪೂರ್ಣ ಸಹಕಾರ ನೀಡುವುದಾಗಿ ಹೇಳಿದರು. ಈ ರೀತಿಯ ಘಟಕ ಸ್ಥಾಪನೆ ಆಗುತ್ತಿರುವುದು ವಿಶ್ವದಲ್ಲೇ ಮೊದಲು ಎನ್ನುವ ವಿಷಯ ಕೇಳಿ ಸಂತಸವಾಯಿತು ಎಂದರು.

ಸಚಿವ ಪಾಟೀಲ ಮಾತನಾಡಿ, ಇದು ಕ್ವಿನ್ ಸಿಟಿಯಲ್ಲಿ ನಡೆಯುತ್ತಿರುವ ಪ್ರಪ್ರಥಮ ಹೂಡಿಕೆಯಾಗಿದೆ. ಕಂಪನಿಯು ಐದು ವರ್ಷಗಳಲ್ಲಿ 1,200 ಕೋಟಿ ರೂ.ಗಳನ್ನು ಆರಂಭಿಕ ಬಂಡವಾಳವಾಗಿ ಹೂಡಲಿದ್ದು, ಇದರಿಂದ 200 ಉದ್ಯೋಗ ಸೃಷ್ಟಿಯಾಗಲಿವೆ. ಇದಕ್ಕಾಗಿ ಅಲ್ಲಿ ಟೊಯೋಟಾ ಕಂಪನಿಗೆ 300 ಎಕರೆ ಭೂಮಿ ಒದಗಿಸಲಾಗುವುದು. ಇಲ್ಲಿ ವಾಹನಗಳ ತಯಾರಿಕೆ, ಪರೀಕ್ಷೆಗಳು, ಆಧುನಿಕ ವಾಹನ ತಯಾರಿಕಾ ಸ್ಥಾವರ ಆರಂಭ ಎಲ್ಲವೂ ನಡೆಯಲಿವೆ. ಇದು ರಾಜ್ಯದ ಯುವಜನರಿಗೆ ವರದಾನವಾಗಲಿದೆ ಎಂದು ತಿಳಿಸಿದರು. ಕ್ವಿನ್ ಸಿಟಿಯಲ್ಲಿ ನಾವೀನ್ಯತೆ, ಆರೋಗ್ಯ ಸೇವೆಗಳು ಮತ್ತು ಐಟಿ ತಂತ್ರಜ್ಞಾನಕ್ಕೆ ಅಗ್ರ ಆದ್ಯತೆ ಕೊಡಲಾಗುವುದು. ಇಲ್ಲಿ ಹೂಡಿಕೆ ಮಾಡಲು ಜಾಗತಿಕ ಮಟ್ಟದ ಏಳೆಂಟು ವಿಶ್ವವಿದ್ಯಾಲಯಗಳು, ಆರೋಗ್ಯ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಅವುಗಳೊಂದಿಗೂ ಆದಷ್ಟು ತ್ವರಿತವಾಗಿ ಒಡಂಬಡಿಕೆಗೆ ಅಂತಿಮರೂಪ ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದರು. ಈ ಅತ್ಯಾಧುನಿಕ ನಗರವು ಒಟ್ಟು 5,800 ಎಕರೆಯಲ್ಲಿ ಹಂತಹಂತವಾಗಿ ಅಸ್ತಿತ್ವಕ್ಕೆ ಬರಲಿದೆ. ಈಗಾಗಲೇ ಮೊದಲ ಹಂತದ ಅಭಿವೃದ್ಧಿ ಪ್ರಗತಿಯಲ್ಲಿದೆ. ಈ ಯೋಜನೆಗೆ ಒಟ್ಟು 48 ಸಾವಿರ ಕೋಟಿ ರೂ. ಹೂಡಿಕೆ ಆಗಲಿದ್ದು, ಒಟ್ಟಾರೆಯಾಗಿ 1 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಪಾಟೀಲ ಹೇಳಿದರು.

ಸತತ ಹುಡುಕಾಟದ ಬಳಿಕ ಮಾದೇವ ಬೈರಪ್ಪ ನಾಯ್ಕ ಶವವೂ ಪತ್ತೆ

ಭಟ್ಕಳ ದುರಂತ: ಮೃತರ ಸಂಖ್ಯೆ 11ಕ್ಕೆ ಏರಿಕೆ

ಭಟ್ಕಳ: ತಾಲೂಕಿನ ಶಿರಾಲಿಯ ತಟ್ಟಿಹಕ್ಲು ಸಮೀಪದ ವೆಂಕಟಾಪುರ ಹೊಳೆಯಲ್ಲಿ ಮಳವಿ (ಕಪ್ಪೆಚಿಪ್ಪು) ಸಂಗ್ರಹಿಸಲು ಹೋಗಿದ್ದ 14 ಜನರಲ್ಲಿ 11 ಮಂದಿ ನೀರಿನಲ್ಲಿ ಕೊಚ್ಚಿಹೋಗಿ ಮೃತಪಟ್ಟಿರುವ ದುರಂತ ಜಿಲ್ಲೆಯಲ್ಲಿ ತೀವ್ರ ಆಘಾತ ಸೃಷ್ಟಿಸಿದ್ದು ಹೊಳೆಯಲ್ಲಿ ನಾಪತ್ತೆಯಾಗಿದ್ದ ಕೊನೆಯ ವ್ಯಕ್ತಿಯ ಶವ ಸೋಮವಾರ ಪತ್ತೆಯಾಗಿದೆ.

ಇದರಿಂದಾಗಿ ಮೃತಪಟ್ಟಿರುವ ಹನ್ನೊಂದೂ ಜನರ ಶವ ಸಿಕ್ಕಂತಾಗಿದೆ. ಸಮುದ್ರದ ಸೆಳೆತಕ್ಕೆ ಸಿಲುಕಿ ನೀರು ಪಾಲಾಗಿದ್ದ 11 ಮಂದಿಯ ಪೈಕಿ ಹತ್ತು ಜನರ ಶವಗಳು ಭಾನುವಾರವೇ ಸಿಕ್ಕಿದ್ದವು. ಆದರೆ, ಒಬ್ಬರ ಶವ ಪತ್ತೆಯಾಗಿರಲಿಲ್ಲ. ಸೋಮವಾರ ಬೆಳಗ್ಗೆ ಪಡುಶಿರಾಲಿಯ ಮಾದೇವ ಬೈರಪ್ಪ ನಾಯ್ಕ (52) ಅವರ ಶವ ಪತ್ತೆಯಾಗಿದೆ. ಮೃತಪಟ್ಟವರೆಲ್ಲರೂ ಭಟ್ಕಳ ತಾಲೂಕಿನ ಸಾರದಹೊಳೆಯ ಪಡುಶಿರಾಲಿ ಹಾಗೂ ಹಿರೆಹಿತ್ಲು ಗ್ರಾಮದವರಾಗಿದ್ದಾರೆ.

ಮೂವರು ಚೇತರಿಕೆ: ನೀರಿನಲ್ಲಿ ಮುಳುಗಿ ತೀವ್ರವಾಗಿ ಅಸ್ವಸ್ಥರಾಗಿದ್ದ ನಾಗರತ್ನ ಈಶ್ವರ ನಾಯ್ಕ, ಮಾದೇವಿ ನಾಯ್ಕ ಹಾಗೂ ಲಲಿತಾ ಜಗದೀಶ ನಾಯ್ಕರನ್ನು ರಕ್ಷಿಸಿ ಉಡುಪಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸದ್ಯ ಈ ಮೂವರೂ ಚೇತರಿಸಿಕೊಳ್ಳುತ್ತಿದ್ದಾರೆ. ಭಾನುವಾರ ಘಟನೆ ನಡೆದ ತಕ್ಷಣವೇ ಪೊಲೀಸ್ ಇಲಾಖೆ, ಎನ್‌ಡಿಆರ್‌ಎಫ್, ಕರಾವಳಿ ಭದ್ರತಾ ಪಡೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ನಿರಂತರ ಶೋಧ ಕಾರ್ಯ ಕೈಗೊಂಡಿದ್ದರು.



ಭಾನುವಾರ ರಾತ್ರಿಯೇ ಮುಳುಗು ತಜ್ಞ ಈಶ್ವರ ಮಲ್ಪೆ ಅವರ ತಂಡವೂ ಸಹ ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸಿತ್ತು. ಸತತ ಹುಡುಕಾಟದ ಫಲವಾಗಿ ಸೋಮವಾರ ಬೆಳಗ್ಗೆ ಕೊನೆಯ ಶವವನ್ನು ಮೇಲಕ್ಕೆತ್ತುವಲ್ಲಿ ತಂಡ ಯಶಸ್ವಿಯಾಗಿದೆ.


ಸಾಮೂಹಿಕ ಅಂತ್ಯಸಂಸ್ಕಾರ

ಭಟ್ಕಳ ತಾಲೂಕಿನ ಅಳಿವೆಕೋಡಿ ಸಮುದ್ರ ತೀರದಲ್ಲಿ ಚಿಪ್ಪಿಕಲ್ಲು ತೆಗೆಯಲು ತೆರಳಿದ್ದ ವೇಳೆ ಸಂಭವಿಸಿದ ದುರಂತದಲ್ಲಿ ಮೃತಪಟ್ಟವರ ಶವಗಳ ಸಾಮೂಹಿಕ ಅಂತ್ಯಸಂಸ್ಕಾರ ಸೋಮವಾರ ಭಾವುಕ ವಾತಾವರಣದಲ್ಲಿ ನೆರವೇರಿತು. ಗ್ರಾಮದಲ್ಲಿ ಎಲ್ಲೆಡೆ ಶೋಕದ ಛಾಯೆ ಆವರಿಸಿತ್ತು. ನದಿಯ ನೀರಿನಲ್ಲಿ ಸಿಲುಕಿ ಮೃತಪಟ್ಟವರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಅಂತ್ಯ ಸಂಸ್ಕಾರದ ವೇಳೆ ಮನಕಲಕುವ ದೃಶ್ಯಗಳು ಕಂಡು ಬಂದವು. ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ನಂತರ ಅಳಿವೆಕೋಡಿಯಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಒಂದೇ ಕುಟುಂಬದ ಎಂಟು ಮಂದಿಯ ಅಂತ್ಯಸಂಸ್ಕಾರ ಒಂದೇ ಸ್ಥಳದಲ್ಲಿ ನಡೆದಿದ್ದು, ಅತ್ಯಂತ ಹೃದಯವಿದ್ರಾವಕ ದೃಶ್ಯಕ್ಕೆ ಸಾಕ್ಷಿಯಾಯಿತು.

ಕಾಂಗ್ರೆಸ್ಸಿಗರ ದಾರಿತಪ್ಪಿಸುವ ಆಣೆ, ಪ್ರಮಾಣ ಪ್ರಯೋಜನಕ್ಕೆ ಬಾರದು

ಆಶಾವಾದಿಯಾಗಿ ಹೋರಾಟ: ಜೀವರಾಜ್

ಚಿಕ್ಕಮಗಳೂರು: ಅಂಚೆ ಮತಗಳ ಮರು ಎಣಿಕೆ ವಿಚಾರದಲ್ಲಿ ಶಾಸಕ ಟಿ.ಡಿ.ರಾಜೇಗೌಡ ಮತ್ತು ಕಾಂಗ್ರೆಸಿಗರ ದಾರಿ ತಪ್ಪಿಸುವ ಆಣೆ, ಪ್ರಮಾಣ ಪ್ರಯೋಜನವಿಲ್ಲದ್ದು, ಈ ವಿಚಾರದಲ್ಲಿ ನಮ್ಮ ಕಾರ್ಯಕರ್ತರು ಗೊಂದಲಕ್ಕೆ ಬೀಳಬಾರದು. ನಾವು ಸುಪ್ರೀಂ ಕೋರ್ಟ್‌ನಲ್ಲಿ ಆಶಾವಾದಿಯಾಗಿ ಹೋರಾಡುತ್ತೇವೆ ಎಂದು ಮಾಜಿ ಸಚಿವ ಡಿ.ಎನ್.ಜೀವರಾಜ್ ಹೇಳಿದರು.



ಸೋಮವಾರ ಕೊಪ್ಪ ಪಟ್ಟಣದ ಟೌನ್ ಹಾಲ್ ಸಭಾಂಗಣದಲ್ಲಿ ನಡೆದ ಶೃಂಗೇರಿ ಕ್ಷೇತ್ರ ಮಟ್ಟದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್ ಈಗ ಮಧ್ಯಂತರ ತೀರ್ಪನ್ನಷ್ಟೇ ನೀಡಿದೆ. ಅದನ್ನು ನಾವು ಗೌರವಿಸುತ್ತೇವೆ. ಅದು ಅಂತಿಮವಲ್ಲ. ಇದೇ ವೇಳೆ ಯಾವುದೇ ಸಂದರ್ಭದಲ್ಲಿ ಕಾರ್ಯಕರ್ತರ ಬೆನ್ನಿಗೆ ನಿಲ್ಲುತ್ತೇವೆ ಎಂದರು.

ನಾನೊಬ್ಬ ಹೋರಾಟಗಾರ, ಸಮಸ್ಯೆಗೆ ಬೆನ್ನುಹಾಕಿ ಓಡಿಹೋಗುವವನಲ್ಲ. ಹೆದರಿಸಿದರೆ ಪಲಾಯನ ಮಾಡುವ ಜಾಯಮಾನ ನನ್ನದಲ್ಲ. ಹಣ ಇಲ್ಲದೆ ಇರಬಹುದು, ಹೋರಾಟದ ಛಲಕ್ಕೆ ಕೊರತೆ ಇಲ್ಲ. ಈತನಕ ಗೌರವದ ರಾಜಕಾರಣ ಮಾಡಿದ್ದೇನೆ. ಜೀವರಾಜ್ ಎಂದಿಗೂ ಅಳುವುದಿಲ್ಲ. ಆದರೆ ಬಾಳೆಹೊನ್ನೂರಿನಲ್ಲಿ ಶಾಸಕರು ಏಕೆ ಅತ್ತರು? ಎನ್ನುವುದಕ್ಕೆ ಉತ್ತರ ಈಗ ಸಿಕ್ಕಿದೆ ಎಂದು ಮಾರ್ಮಿಕವಾಗಿ ನುಡಿದರು. ಟಿ.ಡಿ.ರಾಜೇಗೌಡ ಅವರು ಬಂದ ನಂತರವೇ ಕ್ಷೇತ್ರದಲ್ಲಿ ದ್ವೇಷದ ರಾಜಕಾರಣ ಆರಂಭವಾಯಿತು. ಅವರು ಅಭಿವೃದ್ಧಿಯನ್ನು ತರಲಿಲ್ಲ. ದ್ವೇಷವನ್ನು ತಂದಿದ್ದಾರೆ. ಫಾರಂ 53, 57 ಮತ್ತು 97 ಸಿ ಅಡಿ ಸಾಗುವಳಿ ಚೀಟಿ ವಿತರಣೆ ವಿಚಾರದಲ್ಲಿ ನನ್ನ ವಿರುದ್ಧ ಲೋಕಾಯುಕ್ತದಲ್ಲಿ ವಜಾ ಆಗಿದ್ದ ಕೇಸಿಗೆ ಮತ್ತೆ ಚಾರ್ಜ್ ಶೀಟ್ ಹಾಕಿಸಿದರು, ಇಲ್ಲ ಎಂದು ಅವರು ಆಣೆ ಮಾಡಲಿ ಎಂದು ಸವಾಲು ಹಾಕಿದರು. ಇಷ್ಟಾದ ಮೇಲೂ 2700 ಮಂದಿಗೆ ಸಾಗುವಳಿ ಚೀಟಿ ಕೊಟ್ಟಿದ್ದು ನನ್ನ ತಾಕತ್ತು. ಹಣ ಹಾಕಿ ಹಣ ತೆಗೆಯುವ ಕಲೆ ಶಾಸಕರಿಗೆ ಇರಬಹುದು. ನಾನು ಕೆಲಸ ಮಾಡಿ ಮತ ಕೇಳಿದ್ದೇನೆ. ಅವರ ದುಡ್ಡಿನ ನಡುವೆ ನಾನು ಗೆದ್ದಿದ್ದೆ. ಆದರೆ ಸೋಲಿಸಿದ್ದು ಅವರ ಕುತಂತ್ರ ಎಂದರು. ಒಂದು ಕಡೆ ಅಧಿಕಾರಕ್ಕಾಗಿ ಸುಪ್ರಿಂ ಕೋರ್ಟ್‌ನಲ್ಲಿ ಕೇಸು ದಾಖಲಿಸಿ ಮತ್ತೊಂದೆಡೆ ಜನರ ದಾರಿತಪ್ಪಿಸಲು ಆಣೆ, ಪ್ರಮಾಣ ಮಾಡುತ್ತಿದ್ದಾರೆ. ಹಾಗಾದರೆ ಸ್ಟಾಂಪ್ ಪೇಪರ್ ತಿದ್ದುಪಡಿ ಹಗರಣ ಸುಳ್ಳು ಎಂದು ಪ್ರಮಾಣ ಮಾಡಲಿ, 124 ಕೋಟಿ ಮೌಲ್ಯದ ಆಸ್ತಿಯನ್ನು 6 ಕೋಟಿಗೆ ಖರೀದಿಸಿ ದಿವಂಗತ ಸಿದ್ಧಾರ್ಥ ಅವರಿಗೆ ಮೋಸ ಮಾಡಿದ್ದು ಸುಳ್ಳು ಎಂದು ಪ್ರಮಾಣ ಮಾಡಲಿ ಎಂದರು.ಶೃಂಗೇರಿ ಗಾಂಧಿ ಮೈದಾನದ ಅಂಗಡಿಗಳನ್ನು ಕೀಳಿಸಿದ್ದು, ದಿನೇಶ್ ಅವರಿಗೆ ಸೇರಿದ 15 ಎಕರೆ ತೋಟ ಕಿತ್ತು ಹಾಕಿಸಿದ್ದು ಸುಳ್ಳು ಎಂದು ಪ್ರಮಾಣ ಮಾಡಲಿ, ನಾನು ಕೂಡ ದೇವರನ್ನು ದಿನವೂ ಪೂಜೆ ಮಾಡುವವನೇ. ಕಾರ್ಯಕರ್ತರನ್ನೂ ದೇವರೆಂದೇ ನಂಬಿ ಮುಂದೆ ಬಂದು ನಿಂತಿದ್ದೇನೆ ಎಂದರು.

ಸಂಪಾದಕೀಯ

ಯುವಕರು ಎಚ್ಚರದ ನಡೆಯಿಡಲಿ

ಡಿಜಿಟಲ್ ವೇದಿಕೆಯಲ್ಲಿ ಹುಟ್ಟಿಕೊಂಡ ರಾಜಕೀಯ ಪಕ್ಷವೊಂದು ದೇಶದಲ್ಲಿ ದೊಡ್ಡ ಸುದ್ದಿ ಮಾಡುತ್ತಿರುವಂತೆಯೇ, ಅದು ಹುಟ್ಟಿಕೊಂಡ ಹಿನ್ನೆಲೆ, ಪಕ್ಷ ರಚನೆಯ ಹಿಂದಿನ ನಿಗೂಢತೆ, ಪಕ್ಷದ ಹಿನ್ನೆಲೆಯಲ್ಲಿರುವ ವ್ಯಕ್ತಿಗಳ ಕುರಿತಾದ ಸಂಶಯಗಳು, ಅದರ ಉದ್ದೇಶದ ಕುರಿತಂತೆ ಮೂಡಿರುವ ಅನುಮಾನ ಮೊದಲಾದವೆಲ್ಲ ವಿವಾದವನ್ನೂ ಸೃಷ್ಟಿಸಿದೆ. ನ್ಯಾಯಾಧೀಶರೊಬ್ಬರು ಮೊಕದ್ದಮೆಯೊಂದರ ವಿಚಾರಣೆಯ ವೇಳೆ ನಿರುದ್ಯೋಗಿ ಯುವಕರಲ್ಲಿ ಕೆಲವರು ಜಿರಳೆಗಳಂತೆ ವರ್ತಿಸುತ್ತಿದ್ದಾರೆ ಎಂದು ಹೇಳಿದ್ದನ್ನೆ ನೆಪವಾಗಿಟ್ಟುಕೊಂಡು 'ಕಾಕ್ರೋಚ್ ಜನತಾ ಪಾರ್ಟಿ' ಎಂಬ



ತಥಾಕಥಿತ ರಾಜಕೀಯ ವೇದಿಕೆಯನ್ನು ಸೃಷ್ಟಿಸಲಾಯಿತು. ಅದರ ಬಳಿಕ ಅದು ಡಿಜಿಟಲ್ ಪ್ರಚಾರಾಂದೋಲನವಾಗಿ ಮಾರ್ಪಟ್ಟುದುದನ್ನು ಗಮನಿಸುವಾಗ ಹಾಗೂ ದೇಶದ ನಿರುದ್ಯೋಗಿ ಯುವಕರನ್ನು ಪ್ರಭಾವಿಸಲು ನಡೆಸುತ್ತಿರುವ ಪ್ರಯತ್ನಗಳನ್ನು ನೋಡುತ್ತಿರುವಾಗ ಅದರ ಕುರಿತಂತೆ ಸಂಶಯಗಳು ಹುಟ್ಟುತ್ತಿರುವುದು ಸಹಜವೇ ಆಗಿದೆ. ಅತ್ಯಲ್ಪ ಸಮಯದಲ್ಲೇ ಈ ಜಿರಳೆ ಪಕ್ಷದ ಇನ್‌ಸ್ಟಾಗ್ರಾಂ ಖಾತೆಗೆ ಕೋಟ್ಯಂತರ ಬೆಂಬಲಿಗರು ಹುಟ್ಟಿಕೊಂಡುದು, ಕೆಲವು ಮಾಧ್ಯಮಗಳು ಅದಕ್ಕೆ ಭಾರೀ ಪ್ರಚಾರ ನೀಡತೊಡಗಿರುವುದು, ದೇಶದ ವಿರೋಧ ಪಕ್ಷಗಳು 'ಇದು ಭಾರತ ಸರಕಾರದ ವಿರುದ್ಧ ಯುವಕರ ಆಕ್ರೋಶದ ಪ್ರತಿಬಿಂಬ' ಎಂಬಂತಹ ನರೇಟಿವ್ ಬಿಂಬಿಸಲಾರಂಭಿಸಿದ್ದು ಮುಂತಾದವೆಲ್ಲವೂ ಈ ತಥಾಕಥಿತ ರಾಜಕೀಯ ಪಕ್ಷದ ರಚನೆಯ ಹಿಂದೆ 'ಹಿಡನ್ ಅಜೆಂಡಾ' ಇರಬಹುದೆ ಎಂಬ ಅನುಮಾನ ಹುಟ್ಟಿಸಿದೆ. ಇತ್ತೀಚಿನ ವರ್ಷಗಳಲ್ಲಿ ಕೆಲವಾರು ದೇಶಗಳಲ್ಲಿ ಝೆನ್-ಜಿ ಪ್ರತಿಭಟನೆಯ ಮೂಲಕ ಸರಕಾರ ಉರುಳಿರುವ ನಿದರ್ಶನಗಳಿರುವುದರಿಂದ ಭಾರತದಲ್ಲಿ ಕೂಡಾ ಯುವಕರನ್ನು ಪ್ರತಿಭಟನೆಗೆ ಪ್ರಚೋದಿಸುವ ವೇದಿಕೆಯಾಗಿ ಇದು ರೂಪುಗೊಂಡಿರಬಹುದೆ ಎಂಬ ಆತಂಕಗಳೂ ಮೂಡಿವೆ. ಈ ಹಿಂದೆ ಕೇಂದ್ರ ಸರಕಾರದ ವಿರುದ್ಧ ಯುವ ದಂಗೆಗೆ ಪ್ರೇರೇಪಿಸುವ ಪ್ರಯತ್ನಗಳು ನಡೆದಿದ್ದವಾದರೂ ಅದು ಫಲ ಕಂಡಿರಲಿಲ್ಲ. ಇದೀಗ ಅಂತಹುದೇ ಮತ್ತೊಂದು ಪ್ರಯತ್ನ ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ.

ಪ್ರಜಾತಾಂತ್ರಿಕ ಸುಧಾರಣೆಗೆ ಯಾವುದೇ ಪ್ರಾಮಾಣಿಕ ಆಂದೋಲನ ನಡೆಯುವುದಿದ್ದರೆ ಅದು ನೆಲಮಟ್ಟದಲ್ಲಿ ನಡೆಯಬೇಕೇ ಹೊರತು ಡಿಜಿಟಲ್ ರಂಗದಲ್ಲಲ್ಲ. ದೇಶದ ಯುವಕರು ಇಂತಹ ಆಂದೋಲನವನ್ನು ಕುರುಡಾಗಿ ಅನುಸರಿಸುವ ಮುನ್ನ ಅದರ ಹಿಂದಿನ ಹಕೀಕತ್ತೇನು, ಅದರಿಂದ ಲಾಭ ಪಡೆಯುವವರಾರು, ಅದರ ಹಿಂದಿರುವ ವ್ಯಕ್ತಿಗಳ ಹಿನ್ನೆಲೆಯೇನು ಎಂಬ ಕುರಿತಂತೆ ಕೂಲಂಕಷ ಅರಿವು ಹೊಂದಿರಬೇಕಾದುದು ಅಗತ್ಯ. ಭಾರತದ ವಿರುದ್ಧದ 'ಟೂಲ್‌ಕಿಟ್'ನ ಒಂದು ಭಾಗವಾಗಿ ತಾವೂ ಬಳಸಲ್ಪಡದಂತೆ ಎಚ್ಚರ ವಹಿಸಬೇಕು. ಒಟ್ಟಿನಲ್ಲಿ ಯುವಕರು ಎಚ್ಚರದ ನಡೆಯಿಡಬೇಕು.

ಮೋದಿಯ ಪತ್ರಿಕಾಗೋಷ್ಠಿ ಎಂಬ ಚಿನ್ನದ ಜಿಂಕೆ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಬಹುಷಃ ಜಗತ್ತಿನ ಅತ್ಯಂತ ಜನಸಂಖ್ಯಾಭರಿತ ದೇಶವಾದ ಭಾರತ, ಸದಾ ಒಂದಲ್ಲೊಂದು ಕಾರಣಗಳಿಗಾಗಿ ಗಿಜಿಗುಡುತ್ತಿರುತ್ತದೆ. ಇವುಗಳಲ್ಲಿ ರಾಜಕೀಯ ಕಾರಣವೇ ಹೆಚ್ಚಿನ ಬಾರಿ ಮುಂಚೂಣಿಯಲ್ಲಿರುವುದು ವರವೋ, ಶಾಪವೋ ಗೊತ್ತಿಲ್ಲ.

ಕಳೆದ ವಾರದ ಗಿಜಿಗುಡುವಿಕೆಗೆ ಎರಡು ಕಾರಣಗಳಿದ್ದವು. ಒಂದು, ಮೋದಿಯವರ ವಿದೇಶಿ ಪ್ರವಾಸ ಹಾಗೂ ಅದರಲ್ಲಿ ನಡೆದ ಎರಡು ಘಟನೆಗಳು. ಇನ್ನೊಂದು, ಕಾಕ್ರೋಚ್ ಜನತಾ ಪಾರ್ಟಿ ಎಂಬ ಒಂದು ಹೊಸಾ ಟ್ರೆಂಡ್. ಇವೆರಡನೂ ಪಕ್ಕಪಕ್ಕದಲ್ಲಿಟ್ಟು ನೋಡಿದಾಗ, ಇವೆರಡರ ಮೂಲಕಾರಣಗಳು ಸ್ಥೂಲವಾಗಿ ಒಂದೇ ಎಂಬುದು ಕೂಡ ಕಂಡುಬರುತ್ತದೆ. ನಾರ್ವೆಯ ಭೇಟಿಯಲ್ಲಿ, ಪ್ರಶ್ನೋತ್ತರಕ್ಕೆ ಅವಕಾಶವೇ ಇಲ್ಲದಿದ್ದರೂ, ಮೋದಿಯವರನ್ನು ವಿನಾಕಾರಣವಾಗಿ 'ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ' ಎಂದು ಕೂಗಾಡಲಾಯ್ತು. ಅದನ್ನೇ ನೆಪವಾಗಿಟ್ಟುಕೊಂಡು ಭಾರತದಲ್ಲಿ ಯಥಾಪ್ರಕಾರ 'ಮೋದಿಯವರು ಪ್ರೆಸ್ ಕಾನ್ಫರೆನ್ಸ್ ಮಾಡಿಲ್ಲ'ಎಂಬ ರೋಧನೆಯನ್ನು ಮತ್ತೆ ಮುನ್ನೆಲೆಗೆ ತರಲಾಯ್ತು. ಇದಾದ ಎರಡೇ ದಿನಕ್ಕೆ ಮೋದಿಯವರು, ಇಟಲಿಯ ಪ್ರಧಾನಿಗೆ ಮೆಲೋಡಿ ಚಾಕಲೇಟ್ ಕೊಟ್ಟರು ಎಂಬ ಕಾರಣಕ್ಕಾಗಿ ಮತ್ತೊಮ್ಮೆ ಇಡೀ ಭಾರತ ಗಿಜಿಗುಟ್ಟಿತು. ಇಡೀ ಪ್ರವಾಸದಲ್ಲಿ ಮೋದಿಯವರು ಮಾಡಿಕೊಂಡುಬಂದ ಒಂದೇ ಒಂದು ಒಪ್ಪಂದವನ್ನು ಚರ್ಚಿಸದೆ, ಮೆಲೋಡಿ ಚಾಕಲೇಟ್ ವಿಚಾರವನ್ನು ಹಿಡಿದುಕೊಂಡು ಮೋದಿಯವರನ್ನು ಹಳಿಯಲಾಯ್ತು.

ಇಷ್ಟರ ನಡುವೆ, ಮಾಜಿ ಆಮ್ ಆದ್ಮಿ ಪಕ್ಷದ ಸಾಮಾಜಿಕ ತಾಣಗಳ ರೂವಾರಿ ಹಾಗೂ ಹಾಲಿ ನಿರುದ್ಯೋಗಿಯೊಬ್ಬ ಪ್ರಾರಂಭಿಸಿದ 'ಕಾಕ್ರೋಚ್ ಜನತಾ ಪಾರ್ಟಿ' ಎಂಬ ಆಪ್ ಹಾಗೂ ಕ್ಯಾಂಪೇನ್ ಒಂದು, ಭಾರತದ ಯುವಜನತೆ ಇಂದಿನ ಕೇಂದ್ರ ಸರ್ಕಾರದಿಂದ ಎಷ್ಟೆಲ್ಲಾ ಕಷ್ಟಗಳನ್ನು ಅನುಭವಿಸುತ್ತಿದೆ ಎಂದು ತೋರಿಸಿಕೊಡುತ್ತಾ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿದೆ ಎನ್ನುವುದು ಬಹಳ ಚರ್ಚೆಯ ವಿಷಯವಾಯ್ತು. ಎಐ ಅನ್ನು ಸಮರ್ಥವಾಗಿ ಬಳಸಿಕೊಂಡು, ಇಂದಿನ ಸರ್ಕಾರ ಹೇಗೆ ಜನರ ಅಗತ್ಯಗಳನ್ನು ಕಡೆಗಣಿಸುತ್ತಿದೆ ಎಂಬುದನ್ನು ತೋರಿಸುವ ಪ್ರಯತ್ನವೊಂದು ನಡೆಯಿತು, ನಡೆಯುತ್ತಿದೆ ಕೂಡಾ. ದೇಶದ ಮುಖ್ಯ ನ್ಯಾಯಮೂರ್ತಿಗಳು ಯುವಕರನ್ನು ಜಿರಳೆಗಳು ಎಂದು ಕರೆದರು ಎಂಬ ವಿಷಯವನ್ನು ಹಿಡಿದುಕೊಂಡು, ಆ ಹೇಳಿಕೆಯ ಹಿಂದೆ ಮುಂದೆಯೆಲ್ಲವನ್ನೂ ಕಡೆಗಣಿಸಿ, ಅವರು ಹೇಳಿದ್ದೇ ಮಹಾಪರಾಧ ಎನ್ನುವಂತೆ ಜನರ ತಲೆತುಂಬುವ ಕೆಲಸ ಅವ್ಯಾಹತವಾಗಿ ಸಾಗಿದೆ. ಕಿಂದರಜೋಗಿಯ ಹಿಂದೆ ಸಾಗಿದ ಮಕ್ಕಳಂತೆ ಇದನ್ನು ಜನಪ್ರಿಯಗೊಳಿಸುತ್ತಿರುವಾಗ, ಇದನ್ನು ಪ್ರಾರಂಭಿಸಿದ ಸೂತ್ರದಾರ,ದೇಶದಿಂದ ಸಾವಿರಾರು ಕಿಲೋಮೀಟರ್ ದೂರ ಅಮೇರಿಕಾದಲ್ಲಿ ಕೂತು ನಗುತ್ತಿದ್ದಾನೆ.

ಹಾಗಾದರೆ, ಪ್ರಧಾನಿಯನ್ನು ಪ್ರಶ್ನಿಸಲೇಬಾರದಾ? ಪ್ರಧಾನಿಗಳು ಪ್ರೆಸ್ ಕಾನ್ಫರೆನ್ಸ್ ಮಾಡದೇ ಇರುವುದು ಸರಿಯಾದ ನಡೆಯೇ? ಸರ್ಕಾರದ ತಪ್ಪುಗಳನ್ನು ವ್ಯಂಗ್ಯವಾಗಿ ಹೀಗೆ ಎಐ ಕ್ಯಾಂಪೇನ್ ಮೂಲಕ ಬಯಲಿಗೆಳೆಯಬಾರದಾ? ಎಂಬ ಪ್ರಶ್ನೆಗಳು ಬಂದೇ ಬರುತ್ತವೆ. ಇದ್ಯಾವುದೂ ತಪ್ಪಲ್ಲ. ಆದರೆ, ಪ್ರಶ್ನೆಗಳ ಹಾಗೂ ಚಳುವಳಿಗಳ ಉದ್ದೇಶ ಮತ್ತು ಸ್ವರೂಪ, ಅವು ತೂರಿಬರುವಸಮಯ, ಹಾಗೂ ಅವುಗಳ ಹಿಂದಿರುವ ವ್ಯಕ್ತಿಗಳು ಮತ್ತವರ ಹಿನ್ನೆಲೆಗಳು ಮುಖ್ಯವಾಗುತ್ತವೆ. ಪ್ರಧಾನಿಗಳು ಮಾಧ್ಯಮಗಳನ್ನು ಕರೆದು ಪ್ರಶ್ನೋತ್ತರ ಮಾಡಬೇಕೆನ್ನುವ ಈ ನಮ್ಮ ಮಾಧ್ಯಮಗಳು ಮೋದಿಯವರು ಬೇರೆ ಬೇರೆ ಹುದ್ದೆಗಳಲ್ಲಿದ್ದಾಗ, ಬೇರೆ ಬೇರೆ ಸಮಯಗಳಲ್ಲಿ ಯಾವಾಗ ರಚನಾತ್ಮಕ ಪ್ರಶ್ನೆಗಳನ್ನು ಕೇಳಿವೆ? 2001-2014ರ ತನಕ ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದರು. ಆತ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೆಲವೇ ತಿಂಗಳುಗಳಲ್ಲಿ ಭಾರತದ ಅತ್ಯಂತ ದುರಂತಮಯ ಭೂಕಂಪ ಸಂಭವಿಸಿತ್ತು. ಇಡೀ ಕಛ್ ಪ್ರದೇಶವನ್ನು ಮೋದಿ ಯಶಸ್ವಿಯಾಗಿ, ಯಾವುದೇ ಭ್ರಷ್ಟಾಚಾರ ನಡೆಯದಂತೆ ನೋಡಿಕೊಂಡು ಸುಭದ್ರವಾಗಿ ಮರುನಿರ್ಮಾಣ ಮಾಡಿದರು. ಯಾವ ಮಾಧ್ಯಮವೂ ಇದನ್ನೊಂದು ಸಾಕ್ಷ್ಯಚಿತ್ರವಾಗಿಸಲಿಲ್ಲ. ಒಂದೇ ಒಂದು ರಾಷ್ಟ್ರೀಯ ಮಾಧ್ಯಮಸಂಸ್ಥೆ ಇಂತಹುದೊಂದು ಸಾಧನೆ ಹೇಗೆ ಮಾಡಿದಿರಿ ಎಂಬ ಪ್ರಶ್ನೆ ಕೇಳಲಿಲ್ಲ. ಆ ವ್ಯಕ್ತಿ ಅಲ್ಲಿ ಮುಖ್ಯಮಂತ್ರಿಯಾಗಿದ್ದಷ್ಟೂ ವರ್ಷಗಳಲ್ಲಿ ಗುಜರಾತ್ ವಾರ್ಷಿಕವಾಗಿ ಸರಾಸರಿ 10% ಆರ್ಥಿಕ ಬೆಳವಣಿಗೆ ದಾಖಲಿಸಿತು. ಬಹುಷಃ ಹದಿನೈದು ವರ್ಷಗಳ ಕಾಲ ಸತತವಾಗಿ ಆ ಸರಾಸರಿಯಲ್ಲಿ ಬೆಳೆದ ಏಕೈಕ ರಾಜ್ಯ ಗುಜರಾತ್. ಒಬ್ಬನೇ ಒಬ್ಬ ಪತ್ರಕರ್ತ ಇಂತಹುದೊಂದು ಸಾಧನೆಯ ಹಿಂದಿನ ಆಲೋಚನೆಗಳನ್ನು ಪ್ರಶ್ನಿಸಲಿಲ್ಲ. ಹೊಗಳಿಕೆ ಯಾರಿಗೆ ಬೇಕಿತ್ತು ಬಿಡಿ, ಆದರೆ ಕಡೇಪಕ್ಷ ಪ್ರಶ್ನಿಸಬಹುದಿತ್ತಲ್ಲ?

ಆದರೆ ಇವರು ಪ್ರಶ್ನಿಸಿದ್ದು ಏನನ್ನ? ಈ ಹದಿನೈದು ವರ್ಷಗಳಲ್ಲಿ ಮೋದಿ ಕನಿಷ್ಟ ನೂರಕ್ಕೂ ಹೆಚ್ಚು ಪ್ರೆಸ್ ಕಾನ್ಫರೆನ್ಸುಗಳನ್ನು, ಸಂದರ್ಶನಗಳನ್ನೂ, ಸಭೆ ಸಮಾವೇಶಗಳಲ್ಲಿ ಭಾಗವಹಿಸಿದ್ದರು. ಪ್ರಶ್ನೆಗಳಿಗೆ ಉತ್ತರಿಸಿದ್ದರು. ಅಷ್ಟೂ ಬಾರಿ ಮೋದಿ ಮೈಕಿನ ಮುಂದಿದ್ದಾಗ ಈ ಮಾಧ್ಯಮಗಳು ಕೇಳಿದ್ದು ಅಥವಾ ವೈಭವೀಕರಿಸಿದ್ದು 2002ರ ಗಲಭೆ, ಇಶ್ರತ್ ಜಹಾನ್ ಎನ್ಕೌಂಟರ್, ಯುವತಿಯೊಬ್ಬಳನ್ನು ಗುಜರಾತ್ ಪೋಲೀಸರು ಹಿಂಬಾಲಿಸಿದ್ದು ಇವಿಷ್ಟು ವಿಚಾರಗಳ ಬಗ್ಗೆ ಮಾತ್ರ. ಮತ್ತಿದು ಕೇವಲ ರಾಷ್ಟ್ರೀಯ ಮಾಧ್ಯಮಗಳ 'ಸಾಧನೆ' ಮಾತ್ರವಲ್ಲ, ಸ್ಥಳೀಯ ಮಾಧ್ಯಮಗಳಿಂದ ಹಿಡಿದು ಅಂತರರಾಷ್ಟ್ರೀಯ ಮಾಧ್ಯಮಗಳ ಸಹಿತವಾಗಿ ಎಲ್ಲರೂ ಮಾಡಿದ್ದು ಇದನ್ನೇ. ಈ ಮಾಧ್ಯಮಗಳಿಗೆ ಬೇಕಿರುವುದು ಮೋದಿಯ ಪ್ರಶ್ನೋತ್ತರವಲ್ಲ. ಬದಲಿಗೆ ಆ ಪ್ರೆಸ್ ಕಾನ್ಫರೆನ್ಸಿನ ನೆಪದಲ್ಲಿ ಪ್ರಧಾನಿ ಕಛೇರಿಗೆ ಎಡತಾಕಲಿಕ್ಕೊಂದು ನೆಪವಷ್ಟೇ. ಎಡತಾಕಿದಷ್ಟೂ ಅಲ್ಲೊಂದು ಸಂಬಂಧ ಬೆಳೆಸಿಕೊಳ್ಳುವ, ಅದರ ಮೂಲಕ ತಮ್ಮ ಲಾಬಿಯ ಮೂಲಕ ಲಾಭಗಳಿಸಿಕೊಳ್ಳುವ ಉದ್ದೇಶವಷ್ಟೇ. ದೇಶದ ಮಾಧ್ಯಮ ಸ್ವಾತಂತ್ರ್ಯದ ಬಗ್ಗೆಯಾಗಲೀ, ಮೋದಿಗೆ ಪ್ರಶ್ನೆ ಕೇಳುವ ಬಗ್ಗೆಯಾಗಲೀ ಯಾರಿಗೂ ತಲೆಬಿಸಿಯಿಲ್ಲ. ಈ ಪ್ರಶ್ನೋತ್ತರಗಳಿಗಾಗಿ ಹಾತೊರೆಯುವವರು, ಬೇರೆಲ್ಲಾ ಮಂತ್ರಾಲಯಗಳು ನಡೆಸುವ ಎಷ್ಟು ಪ್ರೆಸ್ ಕಾನ್ಫರೆನ್ಸುಗಳಲ್ಲಿ ಸಮರ್ಥವಾಗಿ ಭಾಗವಹಿಸಿ, ಇಕ್ಕಟ್ಟಿನ ಪ್ರಶ್ನೆ ಕೇಳಿವೆ? ಭಾರತ ಕಳೆದ 4 ವರ್ಷದಲ್ಲಿ ರಾಜತಾಂತ್ರಿಕವಾಗಿ, ಆರ್ಥಿಕವಾಗಿ ಎಂತೆಂತಾ ಇಕ್ಕಟ್ಟಿನ ಪರಿಸ್ಥಿತಿಗಳನ್ನು ನಿಭಾಯಿಸಿತು. ಯಾವ ಮಾಧ್ಯಮ ನಮ್ಮ ಇಂಧನ ಸಚಿವರನ್ನ, ವಿದೇಶಾಂಗ ಖಾತೆಯ ಸಚಿವರನ್ನ ಕಷ್ಟದ ಪ್ರಶ್ನೆಗಳಿಗೆ ಈಡು ಮಾಡಿವೆ? ಎಷ್ಟು ಬಾರಿ ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನು ಸಂದರ್ಶನಕ್ಕೆ ಆಹ್ವಾನಿಸಿವೆ? ಆದರೆ ಇಲ್ಲಿ ಮೋದಿಯ ಪತ್ರಿಕಾಗೋಷ್ಠಿಯ ಎಂಬ ಚಿನ್ನದ ಜಿಂಕೆಯನ್ನು ತೋರಿಸಿ, ಬೇರೇನೋ ಮಾಡಲು ಹೊರಟಿರುವುದು ಢಾಳಾಗಿ ಕಾಣಿಸುತ್ತಿದೆ.

ಇನ್ನು ಜಿರಳೆಗಳ ವಿಷಯಕ್ಕೆ ಬಂದರೆ, ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದದ್ದು ನಿಜಕ್ಕೂ ದೊಡ್ಡ ದುರಂತ ಹೌದು. ಅದನ್ನು ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿ, ತಲೆದಂಡ ಪಡೆಯಬೇಕಾಗಿತ್ತು. ಆದರೆ ನಮ್ಮ ಮಾಧ್ಯಮಗಳಿಗೆ ದೇಶದ ಶಿಕ್ಷಣ ಮಂತ್ರಿ ಯಾರು, ಮಾನವ ಸಂಪನ್ಮೂಲ ಸಚಿವಾಲಯದ ಫೋನ್ ನಂಬರ್ ಏನು ಅಂತಲೂ ಗೊತ್ತಿದೆಯೋ ಇಲ್ಲವೋ. ಆದರೆ ಮೋದಿ ಪ್ರೆಸ್ ಕಾನ್ಫರೆನ್ಸ್ ಮಾಡಬೇಕು ಅಂತಾ ಕೂರುತ್ತಾರೆ. ಇದನ್ನೇ ಮುಖ್ಯ ವಿಷಯವನ್ನಾಗಿಸಿಕೊಂಡು ಅದನ್ನೂ ಮೋದಿಯ ತಲೆಗೆ ಕಟ್ಟಿ, ಜೆನ್-ಝಿಯ ಮನಸ್ಸಿನಲ್ಲಿ ಸರ್ಕಾರದ ಬಗ್ಗೆ ಸುಳ್ಳು ಹಾಗೂ ಅಸಂಬದ್ಧ ಮಾಹಿತಿಯ ಪೆಟ್ರೋಲ್ ಸುರಿದು, ಬೆಂಕಿ ಹಚ್ಚಿದ್ದಾರೆ. ನೆರೆಯ ದೇಶಗಳಲ್ಲಿ ನಡೆದಂತಾ ಜೆನ್-ಝಿ ದಂಗೆಯನ್ನು ಭಾರತಕ್ಕೂ ತರಲಿಕ್ಕಾಗಿ ಭಾರತವಿರೋಧಿ ಶಕ್ತಿಗಳು ಬಹಳ ಸಮಯದಿಂದ ಪ್ರಯತ್ನಿಸುತ್ತಿವೆ. ಮೋದಿ ದೇಶದಿಂದ ಹೊರಗಿರುವ ಸಮಯವನ್ನೇ ನೋಡಿಕೊಂಡು ದೇಶದ ಒಳಗೆ ಕಾಕ್ರೋಚ್ ಜನತಾ ಪಾರ್ಟಿ ಎಂಬ ನಾಟಕ ನಡೆಯುತ್ತದೆ. ಅದೇ ಸಮಯಕ್ಕೆ ನಾರ್ವೆಯಲ್ಲಿ ಪ್ರಶ್ನೋತ್ತರದ ನಾಟಕ ನಡೆಯುತ್ತದೆ. ಒಟ್ಟಿನಲ್ಲಿ ದೇಶದೊಳಗೂ ಗಲಭೆ, ದೇಶದ ಹೊರಗೂ ಮೋದಿಗೆ ಹಿನ್ನಡೆಯಾಗಬೇಕು ಎಂಬ ದೊಡ್ಡ ಸೂತ್ರದ ಅನ್ವಯ ಈ ಪ್ರಹಸನಗಳು ನಡೆಯುತ್ತಿವೆ. ಈ ಜಿರಳೆ ಪಾರ್ಟಿಗಳು ಯುವಜನರಿಗೆ ಕೆಲಸ ಸಿಗುತ್ತಿಲ್ಲ ಎಂಬ ಪ್ರಶ್ನೆ ಹಿಡಿದುಕೊಂಡು ಮೋದಿಯ ಹಿಂದೆ ಬಿದ್ದಿವೆ. ಕೆಲಸಗಳ ಸೃಷ್ಟಿ ಕೇವಲ ಕೇಂದ್ರ ಸರ್ಕಾರದ ಕೆಲಸವೇ? ಈ ಪ್ರಶ್ನೆಗಳನ್ನು ಎಷ್ಟು ಜನ ಯುವಕರು ಯಾವ್ಯಾವ ರಾಜ್ಯ ಸರ್ಕಾರಗಳನ್ನು ಯಾವತ್ತು ಕೇಳಿದ್ದಾರೆ? ಜಿಎಸ್ಟಿಯಲ್ಲಿ ರಾಜ್ಯಸರ್ಕಾರಗಳು ಸಮಪಾಲು ಪಡೆಯುತ್ತಿರುವಾಗ, ಲೀಟರಿಗೆ ನೂರು ರೂಪಾಯಿಯಾಗಿರುವ ಪೆಟ್ರೋಲ್ ತುಂಬಿಸುವಾಗ ಅದರ ತೆರಿಗೆಯಲ್ಲಿ ಕೇಂದ್ರದಷ್ಟೇ ತೆರಿಗೆ ಪಡೆಯುತ್ತಿರುವ ರಾಜ್ಯ ಸರ್ಕಾರಗಳನ್ನು ಯಾರು ಯಾಕೆ ಬೆಲೆಯ ಬಗ್ಗೆ ಪ್ರಶ್ನಿಸುತ್ತಿಲ್ಲ!?

ಪ್ರಧಾನಿಯನ್ನು ಮಾತ್ರವಲ್ಲ, ಸಚಿವರನ್ನೂ ಪ್ರಶ್ನಿಸಬೇಕು, ಅಧಿಕಾರಿಗಳನ್ನೂ ಪ್ರಶ್ನಿಸಬೇಕು, ಬೆನ್ನೆಲುಬಿಲ್ಲದೇ ನಿಂತಿರುವ ಪ್ರತಿಪಕ್ಷಗಳನ್ನೂ ಹಳಿಯಬೇಕು. ಉಚಿತ ಗ್ಯಾರಂಟಿಗಳನ್ನು ಕೊಡುತ್ತಿರುವ, ಯಾರದೋ ಹೆಸರಿನ ಕ್ಯಾಂಟೀನ್ ಶುರು ಮಾಡಿದ, ಜಾತ್ಯತೀತತೆಯ ಮಾತು ಆಡುತ್ತಲೇ ಒಂದು ಜನಾಂಗದ ದೇವರಿಗೆ ಮಾತ್ರ ತೆರಿಗೆ ಹಾಕುವ ಸ್ಥಳೀಯ ಸರ್ಕಾರಗಳನ್ನೂ ಪ್ರಶ್ನಿಸಬೇಕು. ವಿಐಪಿ ಟ್ರಾಫಿಕ್ ರೂಲ್ ನಿಮಗ್ಯಾಕೆ ಅಂತಲೂ ಕೇಳಬೇಕು. ಕಾಕ್ರೋಚ್ ಜನತಾ ಪಾರ್ಟಿ ಮಾತ್ರವಲ್ಲ, ಇಂಡಿಯನ್ ನ್ಯಾಷನಲ್ ಕಾಕ್ರೋಚ್ ಕಾಂಗ್ರೆಸ್ ಕೂಡ ಹುಟ್ಟಬೇಕು, ಆಮ್ ಕಾಕ್ರೋಚ್ ಪಾರ್ಟಿಯೂ ಹುಟ್ಟಬೇಕು. ಅದಿಲ್ಲದಿದ್ದರೆ, ನಿಮ್ಮ ಪ್ರಶ್ನಿಸುವಿಕೆಯನ್ನು ಸೆಲೆಕ್ಟಿವ್ ಆಕ್ಟಿವಿಸಂ ಎಂದು ಕರೆಯದೇ ದಾರಿಯಿಲ್ಲ.

ಐಶ್ವರ್ಯವು ಯಾರಿಗೆ ಸ್ಥಿರ?

ಅಚಲಾ ಕಮಲಾ ಕಸ್ಯ ಕಸ್ಯ ಮಿತ್ರಂ ಮಹಿಪತಿಃ ।
ಶರೀರಂ ಚ ಸ್ಥಿರಂ ಕಸ್ಯ ಕಸ್ಯ ವಶ್ಯಾ ವರಂಗನಾ॥ – ಸುಭಾಷಿತ ರತ್ನ ಭಾಂಡಾಗಾರ

ಐಶ್ವರ್ಯವು ಯಾರಿಗೆ ತಾನೇ ಸ್ಥಿರ? ದೊರೆಯು ಯಾರಿಗೆ ಸ್ನೇಹಿತ? ಶರೀರವು ಯಾರಿಗೆ ಶಾಶ್ವತ? ವೇಶ್ಯೆಯು ಯಾರಿಗೆ ವಶಳು? – ಎಂಬುದು ಶ್ಲೋಕಾರ್ಥ.

ಸಂಪತ್ತೆಂದೂ ಸ್ಥಿರವಲ್ಲ. ಲಕ್ಷ್ಮಿ ಚಂಚಲೆ. ನಿಂತಲ್ಲಿ ನಿಲ್ಲುವುದಿಲ್ಲ. ಯಾರಲ್ಲಿಯೂ ಐಶ್ವರ್ಯ ಸ್ಥಿರವಾಗಿ ನೆಲೆಸಿಲ್ಲ. ಇಂದು ಶ್ರೀಮಂತನೆಂದು ಕರೆಸಿಕೊಳ್ಳುವವನು ನಾಳೆ ಭಿಕಾರಿಯಾಗಬಹುದು. ಭಿಕಾರಿ ಯೊಬ್ಬ ಅಪಾರ ಸಂಪತ್ತನ್ನು ಗಳಿಸಿ ಧನಿಕನಾಗಬಹುದು. ಇಂತಹ ಘಟನೆಗಳು ನಮ್ಮ ಗಮನಕ್ಕೂ ಬಂದಿರಬಹುದು. ಆದ್ದರಿಂದಲೇ 'ಅಚಲಾ ಕಮಲಾ ಕಸ್ಯ' ಎಂದು ಕವಿಯು ಪ್ರಶ್ನಿಸಿದ್ದಾನೆ.

ಅರಸನಾದವನು ಯಾರಿಗೂ ಸ್ನೇಹಿತನಾಗಲಾರ. ಏನಿದ್ದರೂ ಅವನ ಸ್ನೇಹ ಕ್ಷಣಿಕ. ಇದಕ್ಕಿಂತಲೂ ಹೆಚ್ಚಾಗಿ ಸ್ವಾರ್ಥಮಯ. ತನ್ನ ಲಾಭಕ್ಕಾಗಿ ಸ್ನೇಹವೇ ವಿನಾ ಅದೊಂದು ನಿಜವಾದ ಸ್ನೇಹವಲ್ಲ. ಸ್ನೇಹದಲ್ಲಿ ನಿಸ್ವಾರ್ಥವಿರಬೇಕು. ಪರಸ್ಪರ ಪೂರಕವಾಗಿರಬೇಕೇ ವಿನಾ ಸ್ನೇಹದಿಂದ ತನಗೆಷ್ಟು ಲಾಭ?ಎಂಬ ಯೋಚನೆ ಇರುವುದಿಲ್ಲ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್



ಆದರೆ ರಾಜನು ಮೈತ್ರಿಯನ್ನಾಗಲಿ, ಸಂಬಂಧವನ್ನಾಗಲಿ ಬಯಸುವ ಹಿನ್ನೆಲೆಯಲ್ಲಿ ಸ್ವಾರ್ಥವೇ ಇರುತ್ತದೆ. ತನ್ನ ಶತ್ರುವಿನ ಶತ್ರುವಿನೊಂದಿಗೆ ಮಿತ್ರತ್ವ ಸಂಪಾದಿಸುತ್ತಾನೆ ಅಥವಾ ಸಂಬಂಧ ಬೆಳೆಸುತ್ತಾನೆ. ಇಲ್ಲಿ ಗುಣ, ಔದಾರ್ಯ, ಚಾರಿತ್ರ್ಯ ಇವು ಮುಖ್ಯವಲ್ಲ. ಶತ್ರುವು ತನ್ನ ಮೇಲೆ ಆಕ್ರಮಿಸಲು ಮುಂದಾದರೆ ಸಹಾಯ ದೊರೆಯುತ್ತದೆ ಎಂಬ ಪರಮ ಸ್ವಾರ್ಥ. ಪ್ರಯೋಜನ ದೊರೆತ ಮೇಲೆ ಅಥವಾ ಮೈತ್ರಿಯಿಂದ ಲಾಭವಿಲ್ಲ ಎಂದು ಗೊತ್ತಾದರೆ ಮೈತ್ರಿ ದೂರಾಗುತ್ತದೆ. ಆದ್ದರಿಂದ ರಾಜ ಯಾರಿಗೂ ನಿಜವಾದ ಸ್ನೇಹಿತನಾಗಲಾರ.

ನಾವೇನೋ ಶರೀರವನ್ನು ಪಡೆದು ಬಂದಿದ್ದೇವೆ. ಈ ಶರೀರ ಎಂದಿಗೂ ಶಾಶ್ವತವಲ್ಲ. ಒಳಗಿರುವ ಆತ್ಮ ಭದ್ರವಾಗಿ ಇರುವವರೆಗೆ ಶರೀರದ ಆಟ ನಡೆಯುತ್ತದೆ. ಆತ್ಮ ಹೊರಟು ಹೋದರೆ ಈ ಶರೀರ ಕೇವಲ ಹೆಣ. ಯಾರಿಗೂ ಬೇಡವಾಗುತ್ತದೆ. ಶರೀರವೆಂದೂ ಶಾಶ್ವತವಲ್ಲ. ದೀರ್ಘಕಾಲ ಶರೀರವನ್ನು ಹೊಂದಿದ್ದರೂ ಇದು ಬಾಲ್ಯ, ಯೌವನ, ವೃದ್ಧಾಪ್ಯವನ್ನು ಹೊಂದಿ ಒಂದು ದಿನ ಮಣ್ಣಿನಲ್ಲಿ ಮಣ್ಣಾಗಿ ಹೋಗುತ್ತದೆ. ಆದ್ದರಿಂದ ಶರೀರದ ಬಗ್ಗೆ ವಿಶೇಷ ವ್ಯಾಮೋಹ ಸಲ್ಲದು. ಇದೆಂದೂ ಸ್ಥಿರವೆಂದು ಭಾವಿಸಬಾರದು. ಆತ್ಮನ ಸಾಧನೆಗಾಗಿ ಇರುವ ಒಂದು ಮಾಧ್ಯಮ ಮಾತ್ರ.

ವರಾಂಗನೆ ಎಂದರೆ ವೇಶ್ಯೆ. ವೇಶ್ಯೆ ಯಾರ ಅಧೀನವೂ ಅಲ್ಲ. ವೇಶ್ಯಾವೃತ್ತಿ ಅವಳ ವ್ಯವಹಾರ. ಜನರನ್ನು ತನ್ನತ್ತ ಆಕರ್ಷಿಸುವುದು, ಅವರಿಂದ ಸಂಪತ್ತನ್ನು ದೋಚಿಕೊಳ್ಳುವುದು ಅವಳ ಕಸುಬು. ಅವಳು ಬಯಸಿದಷ್ಟು ಹಣ ಸಿಗುವವರೆಗೆ ಕೊಡುವ ಮೊತ್ತಕ್ಕೆ ಅನುಗುಣವಾದ ಪ್ರೀತಿ ತೋರಿಸುತ್ತಾಳೆ. ಪ್ರೀತಿಯೆಂಬುದು ವ್ಯಕ್ತಿಯ ಮೇಲಲ್ಲ. ಅವನಲ್ಲಿರುವ ಸಂಪತ್ತಿನ ಮೇಲೆ. ಆದ್ದರಿಂದ ಅವಳು ಯಾರ ವಶವರ್ತಿಯೂ ಅಲ್ಲ. ಸಂಪತ್ತನ್ನು ಕಿತ್ತುಕೊಳ್ಳುವ ಪ್ರವೃತ್ತಿ. ಅದಕ್ಕಾಗಿ ಪ್ರೀತಿಯ ನಾಟಕ.

ಆದ್ದರಿಂದ ಸ್ಥಿರವಲ್ಲದ ಸಂಪತ್ತಿನ ಹಿಂದೆ ಬಿದ್ದು ಕರ್ತವ್ಯವನ್ನು ಮರೆಯಬಾರದು. ದೊಡ್ಡವರ, ಅರಸರ ಸ್ನೇಹಕ್ಕೆ ಆಶಿಸಿ ಕೊನೆಗೆ ನಿರಾಶೆಗೆ ಒಳಗಾಗಬಾರದು. ಶಾಶ್ವತವಲ್ಲದ ಶರೀರದ ಮೇಲೆ ವ್ಯಾಮೋಹವನ್ನು ಹೊಂದಬಾರದು. ವೇಶ್ಯೆಯನ್ನು ವಶಪಡಿಸಿಕೊಳ್ಳುತ್ತೇನೆ ಎಂಬ ದುಸ್ಸಾಹಸಕ್ಕೆ ಮುಂದಾಗಬಾರದು. ಇವು ನಮಗೆಂದೂ ನೆಮ್ಮದಿಯನ್ನು ತಂದುಕೊಡಲಾರವು.

ಗೋಹತ್ಯೆ ಬಕ್ರೀದ್‌ನ ಭಾಗವಲ್ಲ: ಕೋಲ್ಕತ್ತಾ ಹೈಕೋರ್ಟ್

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಇಡೀ ದೇಶದಲ್ಲೇ ಕೇರಳ, ಪಶ್ಚಿಮ ಬಂಗಾಳ ಹಾಗೂ ಕೆಲ ಈಶಾನ್ಯ ರಾಜ್ಯಗಳಲ್ಲಿ ಗೋವುಗಳ ಹತ್ಯೆಯನ್ನು ತಡೆಯುವ ಸಲುವಾಗಿ ಯಾವುದೇ ಪ್ರಾದೇಶಿಕ ಕಾನೂನು ಇಲ್ಲಿಯವರೆಗೂ ರೂಪಿತಗೊಂಡಿಲ್ಲ. ಅಷ್ಟೇ ಅಲ್ಲದೆ ಪ್ರಾಣಿ ಹಿಂಸೆಯನ್ನು ತಡೆಯುವ ನಿಟ್ಟಿನಲ್ಲಿ ಕೇಂದ್ರದ ಎಲ್ಲಾ ಕಾಯ್ದೆ ಕಾನೂನುಗಳನ್ನು ಇಲ್ಲಿ ಸಂಪೂರ್ಣವಾಗಿ ಉಲ್ಲಂಘಿಸಲಾಗುತ್ತಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಗೋವುಗಳನ್ನು ಉಳಿಸುವ ಸಲುವಾಗಿ ಯಾವುದೇ ಸ್ಥಳೀಯ ಕಾನೂನನ್ನು ರಚಿಸಲಾಗಿರಲಿಲ್ಲ. ಇದರೊಂದಿಗೆ ಇಲ್ಲಿಯ ಪೊಲೀಸ್ ಸಹ ಈ ಕುರಿತಂತೆ ಇಲ್ಲಿಯವರೆಗೂ ಯಾವುದೇ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡಿರಲಿಲ್ಲ. ಕೆಲವೊಮ್ಮೆ ಗೋರಕ್ಷಕರು ಅಕ್ರಮ ಸಾಗಾಟದ ಸಂದರ್ಭದಲ್ಲಿ ಪ್ರಕರಣ ದಾಖಲಿಸುವಂತೆ ಕೋರಿದಾಗ ಅವರೊಂದಿಗೆ ಕಟುವಾಗಿ ವರ್ತಿಸುವುದಷ್ಟೇ ಅಲ್ಲದೆ ಅವರ ವಿರುದ್ಧವೇ ಪೊಲೀಸರು ಪ್ರಕರಣ ದಾಖಲಿಸಿದ್ದು ಇದೆ. ಇನ್ನು ಕೆಲವೊಮ್ಮೆ ದನಗಳನ್ನು ಹಿಡಿದ ಗೋರಕ್ಷಕರನ್ನೇ ಥಳಿಸಿ ಅವರ ವಿರುದ್ಧವೇ ಗಂಭೀರ ರೀತಿಯ ಪ್ರಕರಣಗಳನ್ನು ದಾಖಲಿಸಿದ್ದು ಸಹ ಕಂಡು ಬರುತ್ತದೆ. ಆದರೆ ಪಶ್ಚಿಮ ಬಂಗಾಳ ಇತ್ತೀಚೆಗೆ ಈ ಕಳಂಕದಿಂದ ಹೊರಬಂದಿದೆ. ಹೊಸದಾಗಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಇಲ್ಲಿ ಗೋಹತ್ಯೆಯನ್ನು ಬೇಷರತ್ತಾಗಿ ನಿಷೇಧಿಸುವ ಬದಲು ನಿರ್ಬಂಧಿಸಿದೆ. ಮೇ 9, 2026ರಿಂದ ಪಶ್ಚಿಮ ಬಂಗಾಳದ 9ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುತ್ತಿರುವ ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಮಮತಾ ಬ್ಯಾನರ್ಜಿ 15 ವರ್ಷಗಳ ಆಡಳಿತವನ್ನು ಕೊನೆಗೊಳಿಸಿದ ನಂತರ ಸರಣಿ ಕ್ರಮಗಳನ್ನು ಕೈಗೊಂಡಿದ್ದು, ಅದರಂತೆ ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆ, 1950ರ ಅಡಿಯಲ್ಲಿ ಕಠಿಣ ನಿಯಮಗಳನ್ನು ಜಾರಿಗೊಳಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಗೃಹ ಇಲಾಖೆ, ಕಲ್ಕತ್ತಾ ಹೈಕೋರ್ಟ್‌ನ ಆಗಸ್ಟ್ 16, 2018ರ ಆದೇಶಕ್ಕೆ ಅನುಸಾರವಾಗಿ ಮತ್ತು ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆ 1950ರ ನಿಯಮಗಳನ್ನು ಉಲ್ಲೇಖಿಸುತ್ತಾ ಗೋವುಗಳ ಹತ್ಯೆಗೆ ಕಡ್ಡಾಯ ಫಿಟ್ನೆಸ್ ಪ್ರಮಾಣಪತ್ರವನ್ನು ಜಾರಿಗೊಳಿಸುವ ಅಧಿಸೂಚನೆಯನ್ನು ಹೊರಡಿಸಿದೆ. ಈ ಪ್ರಮಾಣಪತ್ರಗಳನ್ನು ನೀಡಲು ಯಾರು ಅಧಿಕಾರ ಹೊಂದಿದ್ದಾರೆ ಎಂಬುದನ್ನು ಸಹ ಸ್ಪಷ್ಟಪಡಿಸಿದೆ. ಈ ಕೆಳಗಿನ ನಿಬಂಧನೆಗಳು ಅಥವಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂಬುದಾಗಿ ಸಂಬಂಧಪಟ್ಟವರಿಗೆ ನೀಡಿದ ನೋಟಿಸ್‌ನಲ್ಲಿ ಸೂಚಿಸಿದ್ದು, ಯಾವುದೇ ಪ್ರಾಣಿಯನ್ನು ವಧೆಗೆ ಯೋಗ್ಯವೆಂದು ಪ್ರಮಾಣೀಕರಿಸದೆ ವಧಿಸುವಂತಿಲ್ಲ ಎಂಬುದಾಗಿ ಸೂಚಿಸಿದೆ.

- ಸ್ಥಳೀಯ ಪಂಚಾಯತ್ ಅಧಿಕಾರಿಗಳು ಮತ್ತು ಸರ್ಕಾರಿ ಪಶುವೈದ್ಯಾಧಿಕಾರಿಗಳು ಜಂಟಿಯಾಗಿ ನೀಡುವ ನಿರ್ದಿಷ್ಟ ಫಿಟ್ನೆಸ್ ಪ್ರಮಾಣಪತ್ರವಿಲ್ಲದೆ ಯಾವುದೇ ವ್ಯಕ್ತಿಯು ಎತ್ತುಗಳು, ಹಸುಗಳು, ಕರುಗಳು, ಗಂಡು ಮತ್ತು ಹೆಣ್ಣು ಎಮ್ಮೆಗಳು, ಎಮ್ಮೆ ಕರುಗಳು ಮತ್ತು ವೃಷಣ ನಾಶವಾದ ಎಮ್ಮೆಗಳು ಸೇರಿದಂತೆ ಯಾವುದೇ ಪ್ರಾಣಿಯನ್ನು ವಧಿಸುವಂತಿಲ್ಲ.
- ಯಾವುದೇ ಪುರಸಭೆಯ ಅಧ್ಯಕ್ಷರು ಅಥವಾ ಯಾವುದೇ ಪಂಚಾಯತ್ ಸಮಿತಿಯ ಅಧ್ಯಕ್ಷರು ಮತ್ತು ಸರ್ಕಾರಿ ಪಶುವೈದ್ಯಾಧಿಕಾರಿಗಳು, ಪ್ರಾಣಿ 14 ವರ್ಷಕ್ಕಿಂತ ಮೇಲ್ಪಟ್ಟಿದ್ದು ಮತ್ತು ಕೆಲಸ ಅಥವಾ ಸಂತಾನೋತ್ಪತ್ತಿ ಉದ್ದೇಶಗಳಿಗೆ ಅನರ್ಹವಾಗಿದೆ ಅಥವಾ ವಯಸ್ಸು, ಗಾಯ, ವಿರೂಪತೆ ಅಥವಾ ಯಾವುದೇ ಗುಣಪಡಿಸಲಾಗದ ಕಾಯಿಲೆಯಿಂದಾಗಿ ಶಾಶ್ವತವಾಗಿ ಅಂಗವಿಕಲವಾಗಿದೆ ಎಂದು ಇಬ್ಬರೂ ಲಿಖಿತವಾಗಿ ಒಪ್ಪಿಕೊಂಡ ನಂತರ ಮಾತ್ರ ಫಿಟ್ನೆಸ್ ಪ್ರಮಾಣಪತ್ರವನ್ನು ನೀಡಬೇಕಿದೆ. ಆನಂತರವಷ್ಟೇ ಜಾನುವಾರನ್ನು ಸೂಚಿಸಿದ ನಿರ್ದಿಷ್ಟ ಸ್ಥಳದಲ್ಲಿ ನಿಬಂಧನೆಗಳೊಂದಿಗೆ ಹತ್ಯೆ ಮಾಡಲು ಅವಕಾಶವನ್ನು ನೀಡಲಾಗಿದೆ.
- ತೆರೆದ ಸಾರ್ವಜನಿಕ ಸ್ಥಳಗಳಲ್ಲಿ ಗೋವಧೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದ್ದು, ಪುರಸಭೆಯ ಕಸಾಯಿಖಾನೆಗಳು ಅಥವಾ ಸ್ಥಳೀಯ ಆಡಳಿತವು ಗೊತ್ತು ಪಡಿಸಿದ ಜಾಗಗಳಲ್ಲಿ ಮಾತ್ರ ಪ್ರಾಣಿಗಳನ್ನು ಅನುಮತಿಯೊಂದಿಗೆ ವಧಿಸಬೇಕಿದೆ. ಪುರಸಭೆಯ ಅಧ್ಯಕ್ಷರು ಅಥವಾ ಪಂಚಾಯತ್ ಸಮಿತಿಯ ಸಭಾಪತಿ ಅಥವಾ ಕಾಯ್ದೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರಿ ಪಶುವೈದ್ಯರು ಅಧಿಕಾರ ನೀಡುವ ಯಾವುದೇ ಆವರಣವನ್ನು ಪರಿಶೀಲಿಸುವುದನ್ನು ಯಾರೂ ವಿರೋಧಿಸಬಾರದು ಎಂಬುದಾಗಿಯೂ ಸೂಚನೆಯಲ್ಲಿ ನಿರ್ದಿಷ್ಟ ಪಡಿಸಲಾಗಿದೆ.
- ಈ ನಿಯಮಗಳನ್ನು ಉಲ್ಲಂಘಿಸುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಆರು ತಿಂಗಳವರೆಗೆ ಜೈಲು ಶಿಕ್ಷೆ ಹಾಗೂ ಒಂದು ಸಾವಿರದವರೆಗೂ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ. ಕಾಯ್ದೆಯಡಿಯಲ್ಲಿರುವ ಎಲ್ಲಾ ಅಪರಾಧಗಳನ್ನು ಗುರುತಿಸಬಹುದಾದವು ಎಂದು ವರ್ಗೀಕರಿಸಲಾಗಿದೆ.

ಒಂದೊಮ್ಮೆ ಫಿಟ್ನೆಸ್ ಪ್ರಮಾಣಪತ್ರವನ್ನು ನೀಡಲು ನಿರಾಕರಿಸಿದ ಸಂದರ್ಭದಲ್ಲಿ, ಬಾಧಿತ ವ್ಯಕ್ತಿಯು ಅಂತಹ ನಿರಾಕರಣೆಯನ್ನು ತಿಳಿಸಿದ 15 ದಿನಗಳ ಒಳಗೆ ರಾಜ್ಯ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅಧಿಸೂಚನೆಯಲ್ಲಿ ಧಾರ್ಮಿಕ, ಔಷಧೀಯ ಅಥವಾ ಸಂಶೋಧನಾ ಉದ್ದೇಶಗಳಿಗಾಗಿ ಮಾತ್ರ ಹತ್ಯೆಗೆ ವಿನಾಯತಿಯನ್ನು ಉಲ್ಲೇಖಿಸಲಾಗಿಲ್ಲ ಎಂಬುದು ಗಮನಾರ್ಹ. ಗೋವುಗಳ ಅಕ್ರಮ ಹತ್ಯೆಯ ವಿರುದ್ಧ ಮತ್ತು ಜಾನುವಾರು ವ್ಯಾಪಾರ ಕಾರ್ಯಾಚರಣೆಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸುವುದು ಈ ಕ್ರಮದ ಉದ್ದೇಶವಾಗಿದೆ ಎಂಬುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಹೀಗೆ ಪಶ್ಚಿಮ ಬಂಗಾಳ ಕಟ್ಟುನಿಟ್ಟಾಗಿ ಜಾರಿಗೊಳಿಸಿದ ಗೋಹತ್ಯಾ ನಿಷೇಧ ಕಾನೂನಿನಿಂದ ಯಾರಿಗೆ ತೊಂದರೆಯಾಗುತ್ತಿದೆಯೋ ಇಲ್ಲವೋ ತಿಳಿದಿಲ್ಲ. ಆದರೆ ಒಂದಷ್ಟು ಎಡಪಂಥಿಯರಿಗೆ, ತೃಣಮೂಲ ಕಾಂಗ್ರೆಸ್‌ನವರಿಗೆ ಹಾಗೂ ಕಾಂಗ್ರೆಸ್ ಸೇರಿದಂತೆ ಭಾಗಶಃ ಭಾಜಪೇತರ ಪಕ್ಷಗಳಿಗಂತೂ ಸಹಿಸಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ ಜಾರಿಗೆ ಬಂದಿರುವ ಈ ಕಾನೂನಿನಿಂದ ಹಾಲುತ್ಪಾದಕರಿಗೆ ಮತ್ತು ರೈತರಿಗೆ ಭಾರಿ ಹಿನ್ನಡೆಯಾಗುತ್ತಿದೆ, ರೈತರು ಭಾರಿ ನಷ್ಟವನ್ನು ಅನುಭವಿಸುತ್ತಿದ್ದಾರೆ, ಎಂದೆಲ್ಲಾ ಹೇಳುತ್ತಾ ದೇಶದ ಜನರನ್ನು ದಾರಿ ತಪ್ಪಿಸುವ ಕಾರ್ಯವನ್ನು ಇವರೆಲ್ಲರೂ ಮಾಡತೊಡಗಿದ್ದಾರೆ. "ಹೊಸ ಸರ್ಕಾರದ ಈ ನೀತಿ ದೊಡ್ಡ ಆರ್ಥಿಕ ಹೊಡೆತವನ್ನು ನೀಡಲಿದೆ. ಅಧಿಕಾರಕ್ಕೆ ಬಂದ ಸರ್ಕಾರವು ತಾನು ಇತರರಿಗಿಂತ ಹೆಚ್ಚು ಹಿಂದೂ ಪರ ಎಂದು ಸಾಬೀತುಪಡಿಸಲು ಕೆಲವು ಹೊಸ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದಿದೆ. ಆದರೆ ಇವರಿಗೆ ತಿಳಿದಿರಲಿ, ಗೋವುಗಳನ್ನು ಸಾಕುವವರು ಮತ್ತು ಕಸಾಯಿಗಳಿಗೆ ಮಾರುವವರು ಸೇರಿದಂತೆ ಬಹುತೇಕ ದಲ್ಲಾಳಿಗಳು ಹಿಂದೂಗಳೇ ಆಗಿದ್ದಾರೆ. ಹೀಗಾಗಿ ಈ ಕಾನೂನಿನಿಂದ ಹಿಂದೂಗಳಿಗೆ ಹೆಚ್ಚು ನಷ್ಟವಾಗುತ್ತಿದೆ" ಎಂಬುದಾಗೆಲ್ಲ ಹೇಳುತ್ತಾ ಇತರೆ ಹಿಂದೂಗಳನ್ನು ದಾರಿ ತಪ್ಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಕೆಲ ಹಿಂದೂಗಳನ್ನು ಮುಂದೆ ಬಿಟ್ಟು ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆಯನ್ನು ಸಹ ಮಾಡಿಸುತ್ತಿದ್ದಾರೆ.

ಈ ಹೊಸ ಕಾಯ್ದೆಗೆ ಪೂರಕವೆಂಬಂತೆ ಇತ್ತೀಚೆಗೆ ಕೋಲ್ಕತ್ತಾ ಹೈಕೋರ್ಟ್ ಸಹ ಗೋಹತ್ಯಾ ನಿಷೇಧದ ಪರವಾಗಿ ತೀರ್ಪನ್ನು ನೀಡಿದೆ. ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆ, 1950ರ ಅಡಿಯಲ್ಲಿ ಧಾರ್ಮಿಕ ಆಧಾರದ ಮೇಲೆ ಮೇ 27 ಅಥವಾ 28ರಂದು ಬಕ್ರೀದ್ ಹಬ್ಬಕ್ಕೆ ಮುನ್ನ ಎತ್ತುಗಳು, ಹೋರಿಗಳು, ಹಸುಗಳು, ಕರುಗಳು ಮತ್ತು ಎಮ್ಮೆಗಳ ಹತ್ಯೆಗೆ ವಿನಾಯಿತಿ ನೀಡುವಂತೆ ಕೋರಿ ಮೊವ್ವಾ ಮೊಹಿತ್ರಾರವರು ಕೋಲ್ಕತ್ತಾ ಹೈಕೋರ್ಟ್‌ನಲ್ಲಿ ಕೆಲ ದಿನಗಳ ಹಿಂದೆ ಮೊಕದ್ದಮೆಯನ್ನು ದಾಖಲಿಸಿದ್ದರು. ಮೊಕದ್ದಮೆಯನ್ನು ಆಲಿಸಿದ ಪೀಠ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಯಾವುದೇ ತಕ್ಷಣದ ಪರಿಹಾರ ಅಥವಾ ವಿಶೇಷ ವಿನಾಯಿತಿ ನೀಡಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿ ಈ ಅರ್ಜಿಯೊಂದಿಗೆ ಸಲ್ಲಿಕೆಯಾಗಿದ್ದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ. ನ್ಯಾಯಾಲಯವು ರಾಜ್ಯಕ್ಕೆ ಇನ್ನೆರಡು ಷರತ್ತುಗಳನ್ನು ಸೇರಿಸುವಂತೆಯೂ ನಿರ್ದೇಶನ ನೀಡಿದೆ. ತೆರೆದ ಸಾರ್ವಜನಿಕ ಸ್ಥಳಗಳಲ್ಲಿ ವಧೆ ಮಾಡಬಾರದು ಮತ್ತು ಸುಪ್ರೀಂ ಕೋರ್ಟ್ ಹೇಳಿದಂತೆ ಇಸ್ಲಾಂ ಅಡಿಯಲ್ಲಿ ಹಸುವನ್ನು ಬಲಿ ನೀಡುವುದು ಧಾರ್ಮಿಕ ಅವಶ್ಯಕತೆಯಲ್ಲ ಎಂಬುದಾಗಿ ಸ್ಪಷ್ಟಪಡಿಸಿದೆ. ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆಯ ಸೆಕ್ಷನ್ 12ರ ಅಡಿಯಲ್ಲಿ ಧಾರ್ಮಿಕ ವಧೆಗೆ ತಾತ್ಕಾಲಿಕ ವಿನಾಯಿತಿ ಅಗತ್ಯವಿದೆಯೇ ಎಂದು ಪರಿಶೀಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿ, 24 ಗಂಟೆಗಳ ಒಳಗೆ ಈ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

ಹೊಸ ಕಾಯ್ದೆಯ ನಿಯಮಗಳ ಪ್ರಕಾರ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋವುಗಳ ಕುರ್ಬಾನಿ ಅಥವಾ ಬಲಿ ಕೊಡುವುದನ್ನು ಸಂಪೂರ್ಣವಾಗಿ ನಿಷೇಧಿಸುವುದರೊಂದಿಗೆ ಕುರ್ಬಾನಿಯ ಹೆಸರಲ್ಲಿ ಇತರೆ ಪ್ರಾಣಿಗಳನ್ನು ಸಾರ್ವಜನಿಕವಾಗಿ ಮತ್ತು ತೆರೆದ ಜಾಗದಲ್ಲಿ ಬಲಿ ಕೊಡುವುದನ್ನು ಕೂಡ ನಿಷೇಧಿಸಲಾಗಿದೆ. ಇದು ಹಿಂದುತ್ವವನ್ನು ಮತ್ತು ಬಿಜೆಪಿಯನ್ನು ವಿರೋಧಿಸುವವರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರ ಬಕ್ರೀದ್‌ಗಿಂತ ಮುಂಚೆ ಈ ಕಾನೂನನ್ನು ಜಾರಿಗೊಳಿಸಿದ್ದರಿಂದ ಈ ದಂಧೆಯಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಆರ್ಥಿಕ ನಷ್ಟವುಂಟಾಗುತ್ತಿರುವುದಂತೂ ಸತ್ಯ. ಇದಕ್ಕೆ ಪರ್ಯಾಯ ಮಾರ್ಗಗಳು ಸಾಕಷ್ಟಿರುವುದು ಗೋಚರಿಸಬೇಕಷ್ಟೇ.

ಮೋದಿಯನ್ನು ವಿರೋಧಿಸುವ ನೆವದಲ್ಲಿ ದೇಶಕ್ಕೆ ಅವಮಾನ ಸಲ್ಲದು

▸ ರಾಂ ಎಲ್ಲಂಗಳ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಂತಾರಾಷ್ಟ್ರೀಯ ಪ್ರಶಸ್ತಿ ಸಿಗುವುದು ಹೊಸದೇನೂ ಅಲ್ಲ. ಮೊನ್ನೆ ಸ್ವೀಡನಿಗೆ ಹೋಗಿದ್ದಲ್ಲಿ ಸ್ವೀಡನ್ ಸರಕಾರದ ಪ್ರತಿಷ್ಠೆಯ ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್ ಪ್ರಶಸ್ತಿ ಲಭಿಸಿತು. ಬಳಿಕ ನಾರ್ವೆಗೆ ಹೋದಲ್ಲಿ ನಾರ್ವೆಯ ಪರಮೋಚ್ಚ ನಾಗರಿಕ ಪ್ರಶಸ್ತಿ ಗ್ರಾಂಡ್ ಕ್ರಾಸ್ ಆಫ್ ದಿ ರಾಯಲ್ ನೋರ್ವೇಜಿಯನ್ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿ ಅವರ ಮುಡಿಗೇರಿತು. ಅದು ಅವರಿಗೊಲಿದು ಬಂದ 32ನೇ ಅಂತಾರಾಷ್ಟ್ರೀಯ ಪ್ರಶಸ್ತಿ. ಹೆಮ್ಮೆ ಪಡಬೇಕಾದ ಸಂಗತಿ. ಆದರೆ ಸುದ್ದಿ ಆದದ್ದು ಸದ್ದು ಮಾಡಿದ್ದು ಅದಲ್ಲ. ನಾರ್ವೆ ಪತ್ರಕರ್ತೆ ಒಬ್ಬಾಕೆಯ ಪ್ರಶ್ನೆಗೆ ಪ್ರಧಾನಿ ಮೋದಿ ಉತ್ತರಿಸದೆ ಇದ್ದದ್ದು!

ಪ್ರಧಾನಿ ಮೋದಿ ನಾರ್ವೆ ಪ್ರಧಾನಿ ಜಂಟಿ ಮಾಧ್ಯಮಗೋಷ್ಠಿಯಲ್ಲಿ ನಾರ್ವೆ ಪತ್ರಕರ್ತೆಯೊಬ್ಬಳು "ನೀವು ಮಾಧ್ಯಮಗಳ ಪ್ರಶ್ನೆಗಳಿಗೆ ಏಕೆ ಉತ್ತರಿಸುವುದಿಲ್ಲ" ಎಂದು ಕೇಳಿದಳಂತೆ, ಅದಕ್ಕೆ ಮೋದಿ ಉತ್ತರಿಸದೆ ಹೊರನಡೆದರಂತೆ. ಅದನ್ನ ಆಕೆ ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿಕೊಂಡಳಂತೆ. ನಮ್ಮ ಪ್ರತಿಪಕ್ಷದವರು ಆ ಬಗ್ಗೆನೇ ಹೇಳಿಕೆ ಕೊಡುವ ಮೂಲಕ ಸದ್ದು ಮಾಡಿದರು. ಮೋದಿ ವಿರುದ್ಧ ಹರಿಹಾಯ್ದರು. ಇಂತಹ ನಡವಳಿಕೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶದ ಪ್ರತಿಷ್ಠೆಗೆ ಮಸಿ ಬಳಿಯುತ್ತವೆ ಎಂದರು. ನಾರ್ವೆಯಲ್ಲಿ ಇದ್ದುದು ಮಾಧ್ಯಮಗಳಿಗೆ ಮಾಹಿತಿ ನೀಡುವ ಗೋಷ್ಠಿಯೇ ಹೊರತು, ಮಾಧ್ಯಮದವರೊಂದಿಗೆ ಸಂವಾದವಲ್ಲ. ಅಲ್ಲಿ ಮಾಧ್ಯಮದವರಿಗೆ ಪ್ರಶ್ನೆ ಕೇಳುವ ಅವಕಾಶವೂ ಇರಲಿಲ್ಲ. ನಾರ್ವೆಯ ಪ್ರಧಾನಿಯೇ ಪತ್ರಕರ್ತೆಯ ನಡವಳಿಕೆ ಖಂಡಿಸಿದರು. ಆದರೆ ನಮ್ಮಲ್ಲಿನ ಪ್ರತಿಪಕ್ಷಗಳು ಮಾತ್ರ ವಿದೇಶಿ ಪತ್ರಕರ್ತೆಯ ಬೆಂಬಲಕ್ಕೆ ನಿಂತು ಪ್ರಧಾನಿ ಮೋದಿಯನ್ನೆ ಟೀಕಿಸಿದವು.

ಪ್ರತಿಪಕ್ಷಗಳು ಮೋದಿಯನ್ನು ಟಾರ್ಗೆಟ್ ಮಾಡುವುದು ಇದೇನೂ ಹೊಸದಲ್ಲ. ಮೋದಿ ಅಧಿಕಾರಕ್ಕೆ ಬಂದಂಧಿನಿಂದ ಕಾಂಗ್ರೆಸ್ ಅಂತೂ ಅದನ್ನೇ ಕಾಯಕವನ್ನಾಗಿಸಿಕೊಂಡಂತಿದೆ. ಸಣ್ಣ ಸಂಗತಿ ಆದರೂ ಸರಿ, ಅದನ್ನೇ ದೊಡ್ಡ ಅಸ್ತ್ರವನ್ನಾಗಿ ಕೈಗೆತ್ತಿಕೊಳ್ಳುವ ಪ್ರತಿಪಕ್ಷಕ್ಕೆ ಈ ಬಾರಿ ಕೆಲವಾರು ಸಂಗತಿಗಳು ಸಿಕ್ಕ ಖುಷಿ. ಕೊಲ್ಲಿಯುದ್ಧದಿಂದಾಗಿ ತಲೆದೋರಿರುವ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯವರು ಇನ್ನೊಂದು ವರ್ಷ ಚಿನ್ನ ಖರೀದಿಸಬೇಡಿ, ಪೆಟ್ರೋಲ್ ಡೀಸೆಲ್ ಮಿತವಾಗಿ ಬಳಸಿ, ವಿದೇಶ ಪ್ರವಾಸ ಕಡಿಮೆ ಮಾಡಿ ಎಂದು ಜನರಿಗೆ ಕರೆ ನೀಡಿದರು. ವಿಪಕ್ಷಗಳಿಗೆ ಅಷ್ಟೇ ಸಾಕಾಯಿತು. ಇದು ಮೋದಿ ಸರ್ಕಾರದ ವೈಫಲ್ಯವೆಂದವು. ರಾಹುಲ್ ಗಾಂಧಿ ಮೋದಿ ದೇಶವನ್ನು ಮುನ್ನಡೆಸುವ ಸಾಮರ್ಥ್ಯ ಕಳೆದುಕೊಂಡಿದ್ದಾರೆ ಎಂದರು. ಇನ್ನಿತರ ರಾಜಕೀಯ ಮುಖಂಡರೂ ಅಂತಹುದೇ ಟೀಕೆ ಹರಿಬಿಟ್ಟರು. ಅವರ್‍ಯಾರೂ ಮೋದಿಯವರ ಹೇಳಿಕೆ ಹಿಂದಿನ ಕಾಳಜಿಯನ್ನು ಅರ್ಥ ಮಾಡಿಕೊಳ್ಳುವ ಗೊಡವೆಗೆ ಹೋದಂತಿಲ್ಲ. ಇಂಥದ್ದೇ ಕಠಿಣ ಸಂದರ್ಭದಲ್ಲಿ ಹಿಂದಿನ ಕಾಂಗ್ರೆಸ್ ಪ್ರಧಾನಿಗಳು ವಾರಕ್ಕೆ ಒಂದು ದಿನ ಊಟ ಬಿಡುವಂತೆ ಕರೆ ನೀಡಿದ್ದೂ ಇದೆ.



ಭಾರತ -ಇಟಲಿ ನಡುವಣ ವ್ಯಾಪಾರ ಒಪ್ಪಂದ ಸಲುವಾಗಿ ಇಟಲಿಗೆ ಭೇಟಿ ನೀಡಿದ ಮೋದಿಯವರು ಅಲ್ಲಿಯ ಪ್ರಧಾನಿ ಮೆಲೋನಿಯವರಿಗೆ ಮೆಲೋಡಿ ಚಾಕಲೇಟ್ ನೀಡಿದ್ದು ಕೂಡ ವಿಪಕ್ಷ ಮುಖಂಡರಿಗೆ ಟೀಕೆಗೆ ವಸ್ತುವಾಯಿತು. ಅದನ್ನೇ ಲೇವಡಿ ಮಾಡಿದರು. ಲೇವಡಿಯು ವೈಯಕ್ತಿಕ ನೆಲೆಯಲ್ಲಿ ಮೋದಿಯವರನ್ನು ಹೀಯಾಳಿಸುವುದರ ಮಟ್ಟಕ್ಕೂ ಇಳಿಯಿತು. ಮೋದಿ ಚಾಕ್ಲೆಟ್ ಕೊಟ್ಟದ್ದೇನೋ ನಿಜ. ಆದರೆ ಹಿಂದೆ ಪ್ರಧಾನಿಯಾಗಿದ್ದ ಜವಾಹರ್ ಲಾಲ್ ನೆಹರು ವಿದೇಶಿ ಮಹಿಳೆಯೊಬ್ಬರಿಗೆ ಸಿಗರೇಟು ಸೇದಿಸಿದ್ದರು. ಆ ಚಿತ್ರ ಈಗ ಮಾಧ್ಯಮಗಳಲ್ಲಿ ಹರಿದಾಡುವಂತಾಯಿತು. ವಾಸ್ತವದಲ್ಲಿ ಮೋದಿ ಅವರು ಪಾರ್ಲೆಯವರ ಚಾಕೊಲೇಟ್ ಕೊಟ್ಟದ್ದು ಮೇಕ್ ಇನ್ ಇಂಡಿಯಾದ ಪರೋಕ್ಷ ಪ್ರಚಾರ ತಂತ್ರವಾಗಿತ್ತು. ಜಾಲತಾಣಗಳಲ್ಲಿ ಪಡೆದ ಪ್ರಚಾರದ ಪರಿಣಾಮವಾಗಿ ಪಾರ್ಲೆ ಶೇರ್ 5% ಹೆಚ್ಚಳ ಕಾಣುವಂತಾಯಿತು.

ಈ ಬಾರಿ ನೀಟ್ ಯು ಜಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿತ್ತಷ್ಟೇ. ಪ್ರತಿಪಕ್ಷ ಆ ಘಟನೆಯನ್ನೂ ಮೋದಿ ಸರ್ಕಾರ ವಿರುದ್ಧ ಅಸ್ತ್ರವನ್ನಾಗಿ ಬಳಸಲು ಮರೆಯಲಿಲ್ಲ. ನೊಂದ ವಿದ್ಯಾರ್ಥಿಗಳಿಗೆ ಬೆಂಬಲವಾಗಿ ನಿಲ್ಲುವ ನೆವದಲ್ಲಿ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಶಿಕ್ಷಣ ಸಚಿವರ ವಿರುದ್ಧ ಹಿಗ್ಗಾಮುಗ್ಗ ಕೂಗಾಡಿತು. ಪ್ರತಿಪಕ್ಷಗಳಲ್ಲೊಂದಾದ ಆಮ್ ಆದ್ಮಿ ಪಾರ್ಟಿಯ ಅರವಿಂದ ಕೇಜ್ರಿವಾಲ್ ನೇಪಾಲ್ ಬಾಂಗ್ಲಾದೇಶದ ರೀತಿ ಜೆನ್-ಝೀ ವಿದ್ಯಾರ್ಥಿಗಳು ದೇಶದಲ್ಲಿ ದಂಗೆಯೇಳುವಂತೆ ಕರೆ ನೀಡಿದರು. ಆದಾದ ಕೆಲವೇ ದಿನಗಳಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಎಂಬ ವಿಡಂಬನಾತ್ಮಕ ಆನ್ಲೈನ್ ಸಂಘಟನೆಯೊಂದು ಹುಟ್ಟಿಕೊಂಡಿತು. ಅಚ್ಚರಿ ಎಂದರೆ ಬಿಜೆಪಿಯನ್ನು ಹಿಂದಿಕ್ಕಿ ಅದು ಐದೇ ದಿನದಲ್ಲಿ 80 ಲಕ್ಷ ಫಾಲೋವರ್ಸ್ ಹೊಂದಿತು. ಮಾಧ್ಯಮಗಳು ಇದನ್ನೇ ಅದ್ಭುತ ಸಾಧನೆ ಎಂಬುದಾಗಿ ವೈಭವೀಕರಿಸಿದವು.

ಆದರೆ ಈ ಜಿರಳೆ ಪಕ್ಷದ ಉದಯದ ಹಿಂದಿನ ಉದ್ದೇಶವು ನಿಗೂಢವಾಗಿರುವುದೂ ಅಷ್ಟೇ ನಿಜ. ರಾತ್ರಿ ಬೆಳಗಾಗುವುದರೊಳಗಾಗಿ ಸಾಕಷ್ಟು ಪ್ರಚಾರ ಪಡೆದ ಕಾಕ್ರೋಚ್ ಜನತಾ ಪಕ್ಷವನ್ನು ಹುಟ್ಟು ಹಾಕಿದ ಅಭಿಜಿತ್ ದೀಪ್ಕೆ ಅಮೆರಿಕದಲ್ಲಿ ನೆಲೆಸಿದ್ದಾನೆ. ಪಕ್ಷದ ಬಹುತೇಕ ಫಾಲೋವರ್ಸ್ ಪಾಕಿಸ್ತಾನದವರು. 2021ರಲ್ಲಿದ್ದ ಆಮ್ ಆದ್ಮಿ ಪಾರ್ಟಿ ಗುಜರಾತಿ ಈಗ ಜಿರಳೆ ಪಕ್ಷ ಅವತಾರದಲ್ಲಿ ಕಾಣಿಸಿಕೊಂಡಿದೆಯೆನ್ನುವ ಮಾತೂ ಇದೆ. ಯುವಜನರು ಬೀದಿಗಿಳಿಯುವಂತೆ ಮಾಡಿ ದೇಶದಲ್ಲಿ ಅಸ್ಥಿರತೆ ಹುಟ್ಟು ಹಾಕುವುದು ಇದರ ಉದ್ದೇಶವಾಗಿರುವಂತೆ ಕಂಡುಬರುತ್ತಿದೆ. ಇದನ್ನು ಮನಗಂಡೇ ಕೇಂದ್ರ ಸರ್ಕಾರ 'ಜಿರಳೆ'ಯ ಎಕ್ಸ್ ಖಾತೆಯನ್ನು ಬ್ಯಾನ್ ಮಾಡಿದೆ.

ಚುನಾವಣೆಯಿಂದ ಚುನಾವಣೆಗೆ ರಾಜಕೀಯ ಸ್ಥಿತಿಗಳು ಬದಲಾಗುತ್ತಲೇ ಬಂದಿವೆ. ಎಲ್ಲೋ ಒಂದು ಕಡೆ ನಮ್ಮ ಪ್ರತಿಪಕ್ಷಗಳಿಗೆ ಅಭದ್ರತೆ ಕಾಡತೊಡಗಿದೆ ಅನಿಸುತ್ತಿದೆ. ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು 21 ರಾಜ್ಯಗಳಲ್ಲಿ ಸರಕಾರ ಹೊಂದಿದ್ದರೆ ಕಾಂಗ್ರೆಸ್ ಮತ್ತು ಮಿತ್ರಪಕ್ಷ ಕೇವಲ 5 ರಾಜ್ಯಗಳಲ್ಲಷ್ಟೇ ಅಧಿಕಾರದಲ್ಲಿವೆ. ಕೇರಳದಲ್ಲಿ ಅಧಿಕಾರ ವಹಿಸಿಕೊಂಡ ಯುಡಿಎಫ್‌ನ ವಿ. ಡಿ. ಸತೀಶನ್ ಕೋಮು ಶಕ್ತಿಗಳನ್ನು ಹತ್ತಿಕ್ಕುವುದಾಗಿ ಹೇಳಿದ್ದಾರೆ. ಅಧಿಕಾರದಿಂದ ನಿರ್ಗಮಿಸಿದ ಪಿಣರಾಯಿ ವಿಜಯನ್ ಕೇರಳದಲ್ಲಿ ಬಿಜೆಪಿ ಮೂರು ಸೀಟು ಗೆದ್ದಿದ್ದು ಆತಂಕಕಾರಿ ಎಂದಿದ್ದಾರೆ. ಇಬ್ಬರೂ ಟಾರ್ಗೆಟ್ ಮಾಡಿದ್ದು ಬಿಜೆಪಿಯನ್ನು! ಅಧಿಕಾರ ಕಳಕೊಂಡ ಎಲ್ಲ ಪಕ್ಷಗಳು ಬಿಜೆಪಿಯನ್ನು ಮತ್ತು ಮೋದಿಯವರನ್ನು ಟಾರ್ಗೆಟ್ ಮಾಡುತ್ತಿರುವುದೊಂದು ವಿಶೇಷ. ಪ್ರತಿಪಕ್ಷಗಳ ನಡೆ ನುಡಿಗಳಲ್ಲೆಲ್ಲ ಮೋದಿ ಬಗೆಗಿನ ಅಸಹನೆ ಎದ್ದುಕಾಣುತ್ತದೆ.

ಇದರ ನಡುವೆ, ಮೋದಿಯವರ ಟೀಕಾಕಾರರಾಗಿದ್ದ ಚಿತ್ರನಟಿ ಗುಲ್ ಪನಾಗ್, 'ಮೋದಿಯವರನ್ನು ವಿರೋಧಿಸುವ ನೆವದಲ್ಲಿ ದೇಶಕ್ಕೆ ಅವಮಾನ ಮಾಡಬೇಡಿ' ಎಂಬುದಾಗಿ ಎಚ್ಚರಿಸಿದ್ದಾಳೆ. ಈ ಎಚ್ಚರಿಕೆಯು ಮೋದಿ ಮಾಡಿದ್ದೆಲ್ಲವನ್ನು ವಿರೋಧಕ್ಕಾಗಿ ವಿರೋಧ ಎಂಬಂತೆ ವಿರೋಧಿಸುವ ಎಲ್ಲ ವಿರೋಧ ಪಕ್ಷಗಳಿಗೂ, ವಿರೋಧ ಶಕ್ತಿಗಳಿಗೂ ಅನ್ವಯ.

ಕಿರು ಸುದ್ದಿ

ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಉಪ್ಪಿನಂಗಡಿ: 2015ರ ಜುಲಾಯಿ ತಿಂಗಳಲ್ಲಿ ಉಪ್ಪಿನಂಗಡಿಯ ಬ್ಯಾಂಕ್ ರಸ್ತೆಯಲ್ಲಿನ ಮೊಬೈಲ್ ಅಂಗಡಿಯೊಂದಕ್ಕೆ ನುಗ್ಗಿ ಕಳವು ಕೃತ್ಯವೆಸಗಿ ಪ್ರಕರಣದಲ್ಲಿ ಪ್ರಧಾನ ಆರೋಪಿಯಾಗಿ, ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ಸುಮಾರು 7 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಮಂಗಳೂರು ಕಸಬಾ ಬೇಂಗ್ರೆ ನಿವಾಸಿ ಅಕ್ರಂ ಅಲಿಯಾಸ್ ಬೋಜ ಅಕ್ರಂಎಂಬಾತನನ್ನು ಉಪ್ಪಿನಂಗಡಿ ಪೊಲೀಸರು ಬಂಧಿಸಿದ್ದಾರೆ.



ಆರೋಪಿಯು ರಾಜೇಶ್ ಪ್ರಭು ಎಂಬವರ ಮಾಲಕತ್ವದ ಮೊಬೈಲ್ ಅಂಗಡಿಗೆ ರಾತ್ರಿ ವೇಳೆ ನುಗ್ಗಿ ಮೊಬೈಲ್ ಹಾಗೂ ಕರೆನ್ಸಿಗಳನ್ನು ಕಳವು ಮಾಡಿದ್ದ 5 ಮಂದಿ ಆರೋಪಿಗಳ ಪೈಕಿ ಪ್ರಧಾನ ಆರೋಪಿಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆ ಮರೆಸಿಕೊಂಡಿದ್ದ. ಈ ಬಗ್ಗೆ ಆರೋಪಿಯ ಸುಳಿವನ್ನು ಪಡೆದುಕೊಂಡ, ಉಪ್ಪಿನಂಗಡಿ ಪೊಲೀಸ್ ಠಾಣಾ ಪೊಲೀಸ್ ಉಪನಿರೀಕ್ಷಕರಾದ ಕೌಶೀಕ್ ಬಿ.ಸಿ., ಸಿಬ್ಬಂದಿಯವರಾದ ಹೆಚ್‌ಸಿ ಶಿವರಾಮ್ ರೈ, ಪಿಸಿ ಮಹದೇವ ಪಣಂಬೂರಿನಲ್ಲಿ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ. ಈತನ ವಿರುದ್ಧ ಪಣಂಬೂರು ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ಮತ್ತು ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ.

ಕೋಳಿ ಅಂಕ: 5 ಮಂದಿ ಸೆರೆ, 3 ಕೋಳಿಗಳು, ನಗದು ವಶ

ಮಂಜೇಶ್ವರ: ಕಂಬಾರು ಮಜಿಬೈಲು ಕುಂಬೇತ್ತಲ ಶ್ರೀ ಕೊರಗಜ್ಜ ದೈವಸ್ಥಾನ ಸಮೀಪದ ನಿರ್ಜನ ಹಿತ್ತಿನಲಿನಲ್ಲಿ ನಡೆಯುತ್ತಿದ್ದ ಕೋಳಿ ಅಂಕಕ್ಕೆ ಮಂಜೇಶ್ವರ ಪೊಲೀಸರು ದಾಳಿ ನಡೆಸಿ ಐದು ಮಂದಿಯನ್ನು ಬಂಧಿಸಿದ್ದಾರೆ. ಬಂಧಿತರಿಂದ 43,030 ರೂಪಾಯಿಗಳನ್ನು ವಶಪಡಿಸಲಾಗಿದೆ. ಬೇಕಲ ಚಿತ್ತಾರಿ ಚಾಮುಂಡಿಕುನ್ನು ಮುಕ್ಕೂಡ್‌ನ ಶ್ರೀಹರಿ (26), ದ.ಕ.ಜಿಲ್ಲೆಯ ಪುತ್ತೂರು ಬಜತ್ತೂರಿನ ಲಿಂಗಪ್ಪ ಗೌಡ (70), ಮಜಿಬೈಲ್‌ನ ಸುರೇಶ್ ಶೆಟ್ಟಿ (32), ಕದ್ರಿ ಬಜೆ ಕಾಪಿಕ್ಕಾಡ್‌ನ ಜಯರಾಜ್ (38), ಪುತ್ತೂರು ನೆಕ್ಕಿಲಾಡಿಯ ಜೋಸಿ ಮನೋಜ್ ಲೋಬೋ (50) ಎಂಬವರನ್ನು ಮಂಜೇಶ್ವರ ಎಸ್‌ಐ ಶಬರೀಶನ್ ನೇತೃತ್ವದ ತಂಡ ಬಂಧಿಸಿದೆ.

ಮೇ 29: ಎಸ್.ಸಿ / ಎಸ್.ಟಿ ಕುಂದು ಕೊರತೆ ಸಭೆ

ಮಂಗಳೂರು: ಮಂಗಳೂರು ಮತ್ತು ಉಳ್ಳಾಲ ತಾಲೂಕಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸಮುದಾಯದವರ ಕುಂದು ಕೊರತೆ ಬಗ್ಗೆ ಚರ್ಚಿಸಲು ಸಂಘ ಸಂಸ್ಥೆಯ ಪದಾಧಿಕಾರಿಗಳ ಸಭೆಯನ್ನು ಮೇ 29 ಬೆಳಿಗ್ಗೆ 11 ಗಂಟೆಗೆ ಮಂಗಳೂರು ಮತ್ತು ಉಳ್ಳಾಲ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಮಂಗಳೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, (ಗ್ರೇಡ್-1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ವತ್ಸಲಾ ಕೆ.ಪಿ.

ಉಪ್ಪಳ: ಮಣಿಯಂಪಾರೆ ನಿವಾಸಿ ದಿ.ಬಾಲಕೃಷ್ಣ ಆಚಾರ್ಯರ ಪತ್ನಿ ವತ್ಸಲಾ ಕೆ.ಪಿ. (72) ಶನಿವಾರ ನಿಧನರಾದರು. ಅವರು ಉಸಿರಾಟದ ತೊಂದರೆ ಅನುಭವಿಸುತ್ತಿದ್ದರು. ಮೃತರು ಮಕ್ಕಳಾದ ಅಜಿತ್, ಅನಿಲ್‌ಕುಮಾರ್ ಕೆ.ಪಿ., ಅರುಣ್, ಅನೂಪ್, ಅಜಿತಾ, ಅಂಬಿಕಾ, ಅರ್ಚನ ಅವರನ್ನು ಅಗಲಿದ್ದಾರೆ.



ಗಣೇಶ್

ಕೊಣಾಜೆ: ಕುರ್ನಾಡು ಗ್ರಾಮ ಪಂಚಾಯತ್‌ನಲ್ಲಿ ಆಟೆಂಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಸಜಿಪ ತಲೆಮೊಗರಿನ ಗಣೇಶ್ (57) ಅವರು ಅಲ್ಪ ಕಾಲದ ಅಸೌಖ್ಯದಿಂದ ಮಂಗಳವಾರ ನಿಧನರಾದರು. ಇವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ.



ಇಂದು ಯಕ್ಷಗಾನ
ಶ್ರೀ ಕಟೀಲು ಯಕ್ಷಗಾನ ಮೇಳ
ಶ್ರೀ ಕ್ಷೇತ್ರ ಕಟೀಲಿನಲ್ಲಿ ಏಳೂ ಮೇಳಗಳ ಪತ್ತನಾಜೆ ಸೇವೆಯಾಟ
ಶ್ರೀ ಧರ್ಮಸ್ಥಳ ಮೇಳ
ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಸೇವೆಯಾಟ



ಕುವೆಟ್ಟು ಗ್ರಾಮದ ಮದ್ದಡ್ಕದಲ್ಲಿ ಕಾರಿನ ಬೀಗ ಲಾಕ್ ಆಗಿ ಮಗು ಕಾರಿನೊಳಗೆ ಸಿಲುಕಿ ಆತಂಕ ಸೃಷ್ಟಿಸಿದ ಘಟನೆ ಮೇ 25ರಂದು ನಡೆದಿದೆ. ಕಾರಿನ ಚಾಲಕ ಕಾರು ನಿಲ್ಲಿಸಿ ಅಂಗಡಿಗೆ ತೆರಳಿದ ಸಂದರ್ಭದಲ್ಲಿ ಕಾರಿನ ಬಾಗಿಲು ಸ್ವಯಂಚಾಲಿತವಾಗಿ ಲಾಕ್ ಆಗಿ ಮಗು ಕಾರಿನೊಳಗೆ ಸಿಲುಕಿಕೊಂಡಿತ್ತು. ಕಾರಿನ ಬಾಗಿಲು ತೆರೆಯಲು ಸಾರ್ವಜನಿಕರು ವಿವಿಧ ರೀತಿಯಲ್ಲಿ ಪ್ರಯತ್ನ ಪಟ್ಟರೂ ಬಾಗಿಲು ತೆರೆಯಲಾಗದೆ ಕೊನೆಗೂ ಕಾರಿನ ಗಾಜನ್ನು ಒಡೆದು ಮಗುವನ್ನು

ಪ್ರೊ. ಬಿ. ಎ. ವಿವೇಕ ರೈ ಸಮಗ್ರ ಸಾಹಿತ್ಯ ಅವಲೋಕನ-ಸಂವಾದ

ಮೇ 27: ವಿವಿಯಲ್ಲಿ 'ಆನು ಒಲಿದಂತೆ ಹಾಡುವೆ'

ಕೊಣಾಜೆ: ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರಿನ ಅಭಿನವ ಹಾಗೂ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ವೇದಿಕೆ 'ಗಿಳಿವಿಂಡು' ಇವುಗಳ ಸಂಯುಕ್ತ ಆಶ್ರಯದಲ್ಲಿ 'ಆನು ಒಲಿದಂತೆ ಹಾಡುವೆ' ಸರಣಿಯ ಐದನೇ ಕಾರ್ಯಕ್ರಮವು ಮೇ 27ರಂದು ಬೆಳಿಗ್ಗೆ 10 ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರೊ. ಬಿ. ಎ. ವಿವೇಕ ರೈ ವೇದಿಕೆಯಲ್ಲಿ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸರಾದ ಪ್ರೊ. ಬಿ. ಎ. ವಿವೇಕ ರೈ ಅವರ ಸಮಗ್ರ ಸಾಹಿತ್ಯ ಅವಲೋಕನ ಹಾಗೂ ಸಂವಾದ ಕಾರ್ಯಕ್ರಮ ನಡೆಯಲಿದೆ.

ಬೆಳಿಗ್ಗೆ 10 ಗಂಟೆಗೆ ಹಂಪಿ ಕನ್ನಡ ವಿವಿಯ ಕುಲಪತಿ ಪ್ರೊ. ಡಿ. ವಿ. ಪರಮಶಿವಮೂರ್ತಿ , ಮಂಗಳೂರು ವಿವಿ ಕುಲಪತಿ ಪ್ರೊ. ಪಿ. ಎಲ್. ಧರ್ಮ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ, ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ನಾಗಪ್ಪಗೌಡ, ಹಂಪಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ವೆಂಕಟಗಿರಿ ದಳವಾಯಿ, ಬೆಂಗಳೂರಿನ ಅಭಿನವದ ರವಿಕುಮಾರ್ ಹಾಗೂ ಗಿಳಿವಿಂಡು ವೇದಿಕೆ ಅಧ್ಯಕ್ಷ ಪ್ರೊ.ಬಿ ಶಿವರಾಮ ಶೆಟ್ಟಿ ಮೊದಲಾದವರು ಭಾಗವಹಿಸಲಿದ್ದಾರೆ.

ಬಳಿಕ ನಡೆಯುವ 'ಪ್ರೊ. ಬಿ. ಎ. ವಿವೇಕ ರೈ ಅವರ ಸಮಗ್ರ ಸಾಹಿತ್ಯ ಅವಲೋಕನ' ಕಾರ್ಯಕ್ರಮದಲ್ಲಿ ಹಂಪಿಯ ಪ್ರೊ. ವಿಜಯ ಪೂಣಚ್ಚ, ಕುಂದಾಪುರದ ಡಾ. ರೇಖಾ ಬನ್ನಾಡಿ ಹಾಗೂ ಮೈಸೂರಿನ ಡಾ. ಆರ್. ಸತೀಶ್ ಅವರು ವಿಚಾರ ಮಂಡನೆ ನಡೆಸಲಿದ್ದಾರೆ. ಅಪರಾಹ್ನ ನಡೆಯುವ 'ಪ್ರೊ. ಬಿ. ಎ. ವಿವೇಕ ರೈ ಅವರೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ಪ್ರೊ. ಕೆ. ಚಿನ್ನಪ್ಪಗೌಡ ಸಮನ್ವಯಕಾರರಾಗಿದ್ದು, ಡಾ. ತಾಳ್ತಜೆ ವಸಂತಕುಮಾರ್, ಡಾ. ಅಭಯ ಕುಮಾರ್, ಡಾ. ನರಸಿಂಹಮೂರ್ತಿ, ಡಾ. ಇಂದಿರಾ ಹೆಗಡೆ, ರಾಜಶೇಖರ ಹಳೆಮನೆ, ಡಾ.ಚೇತನ್ ಸೋಮೇಶ್ವರ, ಶಶಿರಾಜ್ ಕಾವೂರು ಹಾಗೂ ಚಂದ್ರಕಲಾ ನಂದಾವರ ಮೊದಲಾದವರು ಭಾಗವಹಿಸಲಿದ್ದಾರೆ ಎಂದು ಪ್ರೊ.ನಾಗಪ್ಪಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆಯಲ್ಲಿ ದಲಿತ ಮುಖಂಡರ ಆರೋಪ

ವೆನ್ಲಾಕ್ ಆಸ್ಪತ್ರೆಯಲ್ಲಿ ವಿಳಂಬ ಧೋರಣೆ

ಮಂಗಳೂರು: ವೆನ್ಲಾಕ್ ಆಸ್ಪತ್ರೆಯಲ್ಲಿ ರೋಗಿಗಳನ್ನು ದಾಖಲಾತಿ ಮಾಡಿಸಿಕೊಳ್ಳುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದ್ದು, ಇದರಿಂದ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಬರುವ ಬಡ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ. ಮಲ್ಟಿ ಸ್ಪೆಷಾಲಿಟಿ ಸೌಲಭ್ಯಗಳು ಇದ್ದರೂ ಬಡವರು ಸೂಕ್ತ ಚಿಕಿತ್ಸೆಯಿಂದ ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದಲಿತ ಸಂಘಟನೆ ಮುಖಂಡರು ಆಗ್ರಹಿಸಿದ್ದಾರೆ.



ಮಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶನಿವಾರ ನಡೆದ ಮೇ ತಿಂಗಳ ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆಯಲ್ಲಿ ಈ ಒತ್ತಾಯ ಕೇಳಿಬಂತು.

ಈ ಬಗ್ಗೆ ಉತ್ತರಿಸಿದ ಡಿಸಿಪಿ ಮಿಥುನ್ ಎಚ್. ಎನ್., ಇದೊಂದು ಗಂಭೀರ ಸಮಸ್ಯೆಯಾಗಿದ್ದು, ಇಲಾಖೆಗೂ ದೂರುಗಳು ಬರುತ್ತಿವೆ. ಸಮಸ್ಯೆ ಬಗ್ಗೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಠಾಣೆಗೆ ಮನವಿ ಅರ್ಜಿ ಕೊಡಿ. ಜಿಲ್ಲಾಧಿಕಾರಿಗೂ ಪತ್ರ ಬರೆದು ಮನವಿ ಕೊಡಿ. ಸಭೆಯಲ್ಲಿ ನಡೆದ ಚರ್ಚೆಯ ವಿಚಾರವನ್ನು ಜಿಲ್ಲಾಧಿಕಾರಿಗೆ ತಿಳಿಸಲಾಗುವುದು ಎಂದರು.

ವಿಷಯ ಪ್ರಸ್ತಾಪಿಸಿದ ಮುಖಂಡ ಎಸ್ .ಪಿ. ಆನಂದ್, ಮೂಡುಬಿದಿರೆಯ ಕ್ಯಾನ್ಸರ್ ರೋಗಿಯೊಬ್ಬರನ್ನು ದಾಖಲಿಸುವಲ್ಲಿ ವಿಳಂಬ ಮಾಡಿದ್ದಾರೆ. ಬೆಡ್ ಇಲ್ಲ ಎನ್ನುವ ಕಾರಣ ನೀಡಿ ಖಾಸಗಿ ಆಸ್ಪತ್ರೆಗೆ ಹೋಗುವಂತೆ ಸೂಚಿಸಿದ್ದಾರೆ. ಪಡಿತರ ಚೀಟಿ ಇಲ್ಲದ ಕಾರಣ, ಬಿಪಿಎಲ್ ಕಾರ್ಡ್ ಮಾಡಿಸಿ ಬರುವಂತೆ ಸೂಚಿಸಿದ್ದಾರೆ. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರು ಸೂಚಿಸಿದರೂ ಪ್ರಯೋಜನವಾಗಿಲ್ಲ. ಗಂಭೀರ ರೋಗಗಳಿದ್ದರೆ ಬಿಪಿಎಲ್ ಕಾರ್ಡ್ ಇಲ್ಲದಿದ್ದರೂ, ಅಡ್ಮಿಟ್ ಮಾಡಬಹುದು ಎಂದು ಸರಕಾರದ ಉಲ್ಲೇಖವಿದ್ದರೂ ಆಸ್ಪತ್ರೆ ಸಿಬಂದಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇನ್ನೊಂದು ಪ್ರಕರಣದಲ್ಲಿ ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದ ಮಗುವೊಂದು ಮಕ್ಕಳ ವಿಭಾಗದಲ್ಲಿ ಐಸಿಯು ಇಲ್ಲದ ಕಾರಣ ಸಾವನ್ನಪ್ಪಿದೆ. ಹೃದಯ ಕಾಯಿಲೆ ಇದ್ದ ವ್ಯಕ್ತಿಯೊಬ್ಬರಿಗೂ ಸಮಸ್ಯೆಯಾಗಿದೆ ಎಂದು ಆರೋಪಿಸಿದರು.

ಶಾಲೆ- ಪಪೂ ಕಾಲೇಜುಗಳು ಇನ್ನೇನು ಆರಂಭವಾಗಲಿದ್ದು, ದೂರದ ಪ್ರದೇಶಗಳಿಂದ ಬಂದು ಶಿಕ್ಷಣ ಪಡೆಯುವವರು ಸಮಾಜ ಕಲ್ಯಾಣ ಇಲಾಖೆ, ಬಿಸಿಎಂ ಹಾಸ್ಟೆಲ್ ಗಳನ್ನು ಅವಲಂಬಿಸುತ್ತಾರೆ. ಆದರೆ ನಮ್ಮಲ್ಲಿ ಹಾಸ್ಟೆಲ್‌ಗಳಿಗೆ ಭಾರಿ ಬೇಡಿಕೆ ಇದೆ. ವಿದ್ಯಾರ್ಥಿಗಳು ಹಾಸ್ಟೆಲ್ ದೊರೆಯದೆ ಶಿಕ್ಷಣವನ್ನೇ ಮೊಟಕುಗೊಳಿಸುವ ಸಾಧ್ಯತೆಯೂ ಇದೆ. ಹಾಗಾಗಿ ಹಾಸ್ಟೆಲ್‌ಗಳ ಸಂಖ್ಯೆ ಹೆಚ್ಚಿಸಬೇಕು. ಹಾಸ್ಟೆಲ್ ಸಮಿತಿಗಳಿಗೆ ಶಾಸಕರು ಅಧ್ಯಕ್ಷರಾಗಿದ್ದು, ಅವರಿಗೆ ಬೇಕಾದವರಿಗೆ ಮಾತ್ರ ಕೊಡಿಸುತ್ತಾರೆ ಎಂದು ಮುಖಂಡರು ಆರೋಪಿಸಿದರು.

ಜಗದೀಶ್ ಪಾಂಡೇಶ್ವರ ಅವರು ಮಾತನಾಡಿ, ಇತ್ತೀಚೆಗೆ ಹೊಯ್ಗೆ ಬಜಾರ್‌ನಲ್ಲಿ ಸ್ಥಳೀಯ ವ್ಯಕ್ತಿಯೊಬ್ಬರು ನಡೆದುಕೊಂಡು ಹೋಗುತ್ತಿದ್ದಾಗ, ಆಟೋ ಚಾಲಕನೊಬ್ಬ ಬಂದು ಮೊಬೈಲ್ ಕಿತ್ತುಕೊಳ್ಳಲು ಯತ್ನಿಸಿದ್ದು, ರಾಡ್‌ನಿಂದ ಹಲ್ಲೆಗೂ ಯತ್ನಿಸಿದ್ದಾನೆ. ಈ ಬಗ್ಗೆ ಪ್ರಕರಣ ದಾಖಲಾಗಿ ಆರೋಪಿಯನ್ನು ಬಂಧಿಸಲಾಗಿದೆ. ಈ ಭಾಗದಲ್ಲಿ ಇಂತಹ ಘಟನೆಗಳು ಆಗಾಗ್ಗೆ ನಡೆಯುತ್ತಿದ್ದು, ಈ ಬಗ್ಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಡಿಸಿಪಿ ಮಿಥುನ್ ಉತ್ತರಿಸಿ, ರಾತ್ರಿ 8-11 ಗಂಟೆ ವರೆಗಿನ ಬೀಟ್ ಹೆಚ್ಚಿಸಬೇಕು. ಟಾಪ್‌ಲೈಟ್, ಸೈರನ್ ಹಾಕಿ ಸ್ಥಳದಲ್ಲಿ ರೌಂಡ್ಸ್ ಮಾಡುವುದರಿಂದ ಭಯ ಉಂಟಾಗುತ್ತದೆ. ಡಾರ್ಕ್ ಸ್ಪಾಟ್‌ಗಳಿದ್ದಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ಸಂಬಂಧಪಟ್ಟವರಿಗೆ ಸೂಚಿಸಬೇಕು ಎಂದು ಪಾಂಡೇಶ್ವರ ಠಾಣಾಧಿಕಾರಿಗೆ ಸೂಚಿಸಿದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕಲ್ಲಿನ ಕ್ವಾರೆ ಲೈಸೆನ್ಸ್ ಮೇಲ್ವರ್ಗದವರಿಗೆ ಮಾತ್ರ ದೊರೆಯುತ್ತಿದ್ದು, ದಲಿತ ಸಮುದಾಯದವರಿಗೆ ಇನ್ನೂ ಕೊಟ್ಟಿಲ್ಲ. ಇಲಾಖೆಯಲ್ಲಿ ಹಣ ಕೊಟ್ಟರೆ ಮಾತ್ರ ಸಾರ್ವಜನಿಕರ ಕೆಲಸ ನಡೆಯುತ್ತದೆ ಎಂದು ಜಗದೀಶ್ ಪಾಂಡೇಶ್ವರ ಆರೋಪಿಸಿದರು. ಡಿಸಿಪಿ ಉತ್ತರಿಸಿ, ಈ ಬಗ್ಗೆ ಡಿಸಿಆರ್‌ಇಗೆ ಮನವಿ ಪತ್ರ ಕೊಡಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಡಿಸಿಆರ್‌ಇ ಪೊಲೀಸ್ ಅಧೀಕ್ಷಕ ಸೈಮನ್, ಎಸಿಪಿ ವಿಜಯ ಕ್ರಾಂತಿ, ವಿವಿಧ ಠಾಣೆಗಳ ಠಾಣಾಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧ ಅಹವಾಲು

ಗ್ರಾಮ ಮಟ್ಟದಲ್ಲಿ ಎಸ್‌ಸಿ ಎಸ್‌ಟಿ ಸಭೆಗಳನ್ನು ಆಯೋಜಿಸಬೇಕು ಎಂದು ಸದಾಶಿವ ಕುಂದರ್ ಆಗ್ರಹಿಸಿದರು. ಆದಿ ದ್ರಾವಿಡ ಸಮುದಾಯದಲ್ಲಿ ಉಪಜಾತಿ ಗೊಂದಲವಿದೆ. ಇದನ್ನು ಪರಿಸಹರಿಸಬೇಕು ಎಂದು ಎಸ್. ಪಿ. ಆನಂದ ಆಗ್ರಹಿಸಿದರು. ಉರ್ವಸ್ಟೋರ್ ಅಂಬೇಡ್ಕರ್ ಭವನದ ಮುಂಭಾಗದಲ್ಲಿ ವಸತಿ ಗೃಹಗಳಿದ್ದು, ಇದರಿಂದ ಭವನಕ್ಕೆ ಅಡ್ಡಿಯಾಗಿದೆ. ತೆರವುಗೊಳಿಸಬೇಕು ಎಂದು ಚಂದ್ರ ಕುಮಾರ್ ಆಗ್ರಹಿಸಿದರು. ಒಪ್ಪಂದ ಇಲ್ಲದೆ ಬಾಡಿಗೆ ಮನೆ ನೀಡುವ ಬಗ್ಗೆ ಪೊಲೀಸ್ ಇಲಾಖೆ ನಿಗ ವಹಿಸಬೇಕು ಎಂದು ವಿಷು ಕುಮಾರ್ ಆಗ್ರಹಿಸಿದರು. ಕುದ್ರೋಳಿ ಗುಡ್ಡೆಯಲ್ಲಿ ಅನಧಿಕೃತ ಫ್ಲೆಕ್ಸ್ ತೆರವು ಮಾಡುತ್ತಿಲ್ಲ ಎಂದು ಅನಿಲ್ ಕುಮಾರ್ ಆರೋಪಿಸಿದರು.

ಶನಿವಾರಸಂತೆ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರಿಂದ ಚಾಲನೆ

ಮಡಿಕೇರಿ: ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರು ಶನಿವಾರಸಂತೆ ಮತ್ತು ದುಂಡಳ್ಳಿ ಗ್ರಾ.ಪಂ. ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಕಾಂಕ್ರಿಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.



ಶನಿವಾರಸಂತೆ ಬೈಪಾಸ್ ರಸ್ತೆಯಲ್ಲಿರುವ ವ್ಯವಸಹಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ಸೇರಿದ ಜಾಗದಲ್ಲಿ ಮುಖ್ಯಮಂತ್ರಿ ನಿಧಿಯಿಂದ ಬಿಡುಗಡೆಯಾದ 10 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿರುವ ತಡೆಗೋಡೆ ನಿರ್ಮಾಣ ಮತ್ತು ಕಾಂಕ್ರಿಟ್ ರಸ್ತೆ ಕಾಮಗಾರಿ, ಬೈಪಾಸ್ ರಸ್ತೆಯಿಂದ ದುಂಡಳ್ಳಿ ಗ್ರಾ.ಪಂ.ವ್ಯಾಪ್ತಿಯ ಹೆಮ್ಮನೆ ಗ್ರಾಮಕ್ಕೆ ಹೋಗುವ 400 ಮೀಟರ್ ಕಾಂಕ್ರಿಟ್ ರಸ್ತೆ ನಿರ್ಮಾಣಕ್ಕೆ 2025-26ನೇ ಸಾಲಿನ ಪರಿಶಿಷ್ಟ ಜನಾಂಗದವರ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಉದ್ದೇಶದಿಂದ ಪ್ರಗತಿ ಕಾಲೋನಿ ಯೋಜನೆ ಅಡಿಯಲ್ಲಿ 1 ಕೋಟಿ ರೂ. ಮಂಜೂರಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿ, ಚಿಕ್ಕಕೊಳತ್ತೂರು ಗ್ರಾಮದ ಡಾಮರು ರಸ್ತೆ ಅಭಿವೃದ್ಧಿಗೆ ಶಾಸಕರ ನಿಧಿಯಿಂದ 10 ಲಕ್ಷ ರೂ ಮಂಜೂರಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿ, ಸೇಕ್ರೆಡ್ ಹಾರ್ಟ್ ವಿದ್ಯಾಸಂಸ್ಥೆ ಮೂಲಕವಾಗಿ ಹೋಗುವ ಚಿಕ್ಕಕೊಳತ್ತೂರು ಗ್ರಾಮದ ಕಾಂಕ್ರಿಟ್ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ವಿಶೇಷ ಯೋಜನೆ ಅಡಿಯಲ್ಲಿ 20 ಲಕ್ಷ ರೂ. ಮಂಜೂರಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ.ಮಂಥರ್ ಗೌಡ ಭೂಮಿಪೂಜೆ ನೆರವೇರಿಸಿದರು

ಈ ಸಂದರ್ಭ ಮಾತನಾಡಿದ ಅವರು, ತಾನು ಶಾಸಕನಾದ ಪ್ರಾರಂಭದಲ್ಲೇ ಗ್ರಾಮೀಣ ರಸ್ತೆ ಅಭಿವೃ ದ್ಧಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ಭರವಸೆ ನೀಡಿದ್ದೆ. ಅದರಂತೆ ಸ್ವಲ್ಪ ವಿಳಂಬವಾದರೂ ಸಹ ಈ ಭಾಗದಲ್ಲಿ ಗ್ರಾಮೀಣ ರಸ್ತೆ ಅಭಿವೃದ್ಧಿ, ಕಾಂಕ್ರಿಟ್ ರಸ್ತೆ ಅಭಿವೃದ್ಧಿಗೆ ಅನುದಾನ ನೀಡಿ ನಾನು ಹೇಳಿದಂತೆಯೆ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದೆ ಉಳಿದಂತೆ ಹಂತಹಂತವಾಗಿ ಪ್ರಗತಿಯಲ್ಲಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು.

ರಸ್ತೆ ಅಭಿವೃದ್ಧಿ ಕಾಮಗಾರಿ ಸಂದರ್ಭದಲ್ಲಿ ಸ್ಥಳೀಯರು ಮತ್ತು ಗ್ರಾಮಸ್ಥರು ಗುಣಮಟ್ಟದ ಕಾಮಗಾರಿ ನಡೆಯುವಂತೆ ಗಮನಹರಿಸಬೇಕು ಸಾರ್ವಜನಿಕರು ಮತ್ತು ಗ್ರಾಮಸ್ಥರು ಅಭಿವೃದ್ಧಿ ವಿಚಾರದಲ್ಲಿ ಪಕ್ಷಾತೀತವಾಗಿ ಎಲ್ಲರೂ ಒಂದಾಗಿ ಕೈಜೋಡಿಸಬೇಕೆಂದು ಅವರು ಮನವಿ ಮಾಡಿದರು.

ಈ ಸಂದರ್ಭ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಂತರಾಜ್, ತಾ.ಪಂ.ಮಾಜಿ ಅಧ್ಯಕ್ಷ ಲೋಕೇಶ್, ತಾಲೂಕು ಅಕ್ರಮ ಸಕ್ರಮ ಸಮಿತಿ ಸದಸ್ಯ ಜನಾರ್ದನ, ಪ್ರಮುಖರಾದ ಶರತ್ ಶೇಖರ್, ಗಿರೀಶ್, ಆದಿತ್ಯ ಗೌಡ, ಅಶೋಕ್, ಬಿ.ಕೆ.ದಿನೇಶ್, ಕಿರಣ್, ನಾಗರಾಜ್, ಎಪಿಸಿಎಂಎಸ್ ಅಧ್ಯಕ್ಷ ಧರ್ಮಪ್ಪ, ಉಪಾಧ್ಯಕ್ಷ ಕುಮಾರ್ ನಾಯಕ್, ಸರೋಜಾ ಶೇಖರ್, ಅಬ್ಬಾಸ್, ಮಹಮದ್ ಖನ್ನಾ, ಮಂಜುನಾಥ್ ಮುಂತಾದವರಿದ್ದರು.

ಸಂಸದ ಬ್ರಿಜೇಶ್ ಚೌಟ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ

ಎಂಆರ್‌ಪಿಎಲ್ ಹಸಿರು ವಲಯಕ್ಕೆ ಭೂಸ್ವಾಧೀನ

ಮಂಗಳೂರು: ಎಂಆರ್‌ಪಿಎಲ್ 3ನೇ ಹಂತದ ಯೋಜನೆಗೆ ಹಸಿರು ವಲಯಕ್ಕಾಗಿ ಜೋಕಟ್ಟೆಯಲ್ಲಿ ಜನವಸತಿ ಪ್ರದೇಶದ 27 ಎಕರೆ ಭೂಸ್ವಾಧೀನ ಮಾಡಬೇಕಿದೆ. ಈ ಕುರಿತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರ ನೇತೃತ್ವದಲ್ಲಿ ಸೋಮವಾರ ಸಭೆ ನಡೆಯಿತು. ಶಾಸಕ ಉಮಾನಾಥ ಕೋಟ್ಯಾನ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಉಪಸ್ಥಿತರಿದ್ದರು.



ಜೋಕಟ್ಟೆ, ಕಳವಾರು, ಕೆಂಜಾರು ಪ್ರದೇಶದ 408 ಮನೆಗಳು ಮತ್ತು ಮನೆಮಂದಿಯ ಜಮೀನುಗಳು 27 ಎಕರೆಯಲ್ಲಿ ಹರಡಿಕೊಂಡಿದೆ. ಇದರ ಪಕ್ಕದಲ್ಲೇ ಎಂಆರ್‌ಪಿಎಲ್ ಕೋಕ್ ಸಲ್ಫರ್ ಘಟಕವಿದೆ. ಇದರಿಂದ ಇಲ್ಲಿ ಶಬ್ದಮಾಲಿನ್ಯ, ಪರಿಸರ ಮಾಲಿನ್ಯ ಉಂಟಾಗಿದೆ. ಪರಿಹಾರ ಕೊಡಿ ನಾವೇ ಸ್ಥಳಾಂತರಗೊಳ್ಳುತ್ತೇವೆ ಎಂದು ಜೋಕಟ್ಟೆ ಜನರೇ ಹೇಳುತ್ತಿದ್ದರು. ಇದಕ್ಕೆ ತಕ್ಕಂತೆ ಅಲ್ಲಿ ಹಸಿರು ವಲಯ ನಿರ್ಮಾಣಕ್ಕೆ 27 ಎಕರೆಯನ್ನು ಎಂಆರ್‌ಪಿಎಲ್ ಗುರುತಿಸಿತ್ತು. ಪರಿಹಾರ ಧನ ನಿಗದಿಪಡಿಸಿ ಎಲ್ಲ ಪ್ರಕ್ರಿಯೆಯನ್ನೂ ನಡೆಸಲಾಗಿತ್ತು.

8 ತಿಂಗಳೊಳಗೆ ಎಲ್ಲ ಪ್ರಕ್ರಿಯೆ ಪೂರ್ಣ

ಜಿಲ್ಲಾಡಳಿತವೇ ಮಧ್ಯಸ್ಥಿಕೆ ವಹಿಸಿ ಏಕಗಂಟಿನ ಪರಿಹಾರ ವಿತರಿಸ ಬೇಕು. ಇತರ ಸಮಸ್ಯೆಗಳನ್ನು ಪರಿಹರಿಸಿ ಕೊಡಬೇಕು ಎಂದು ಸಭೆಯಲ್ಲಿ ಹೋರಾಟಗಾರ ಮುನೀರ್ ಕಾಟಿಪಳ್ಳ ಅವರು ಆಗ್ರಹಿಸಿದರು. ಸ್ಥಳೀಯರಿಗೆ ಮತ್ತು ಹೋರಾಟಗಾರರಿಗೆ ತಪ್ಪು ಮಾಹಿತಿ ಹೋಗಿರುವುದು. ಹಾಗೆಯೇ ಕೆಐಎಡಿಬಿ ಭೂಸ್ವಾಧೀನದಿಂದ ಜನರಿಗಾಗುವ ಲಾಭವೇನು ಎನ್ನುವ ಸಂಪೂರ್ಣ ಮಾಹಿತಿಯನ್ನು ಜಿಲ್ಲಾಧಿಕಾರಿಗಳು ವಿವರಿಸಿದರು. ಸಂತ್ರಸ್ತರು ಎಲ್ಲ ದಾಖಲೆಗಳನ್ನು ಶೀಘ್ರವಾಗಿ ಸಲ್ಲಿಸಬೇಕು. 8 ತಿಂಗಳೊಳಗೆ ಕೆಐಎಡಿಬಿಯ ಎಲ್ಲ ಪ್ರಕ್ರಿಯೆಗಳೂ ಮುಗಿಯುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ರಾಜು ಕೆ., ಎಂಆರ್‌ಪಿಎಲ್ ಎಂಡಿ ಎಂ.ಎಸ್. ಕಾಮತ್, ಅಧಿಕಾರಿಗಳಾದ ಗೋಕುಲ್ ದಾಸ್ ನಾಯಕ್, ಮೇಘನಾ ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕಳೆದೊಂದು ವಾರದಿಂದ ಪ್ರತಿಭಟನೆ

ಈ ನಡುವೆ ಸ್ಥಳಾಂತರಕ್ಕೆ ನಿಗದಿಪಡಿಸಿದ ಪರಿಹಾರ ನೀಡಲು ಜಿಲ್ಲಾಡಳಿತ ವಿಳಂಬ ಮಾಡುತ್ತಿದೆ. ಮಾತ್ರವಲ್ಲದೆ ಕೆಐಎಡಿಬಿ ಮೂಲಕ ಮತ್ತೆ ಭೂಸ್ವಾಧೀನ ನಡೆಸಿ ಮತ್ತಷ್ಟು ವಿಳಂಬ ಮಾಡಲು ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿ ಕಳೆದೊಂದು ವಾರದಿಂದ ಜೋಕಟ್ಟೆಯಲ್ಲಿ ನಾಗರಿಕ ಹೋರಾಟ ಸಮಿತಿ ನೇತೃತ್ವದಲ್ಲಿ ಸ್ಥಳೀಯರಿಂದ ನಿರಂತರ ಪ್ರತಿಭಟನೆ ನಡೆಯುತ್ತಿತ್ತು. ಈ ಹಿನ್ನೆಲೆಯಲ್ಲಿ ಸೋಮವಾರ ಪ್ರಜಾಸೌಧದಲ್ಲಿ ಸಭೆ ನಡೆಯಿತು.

ಪೊಸಡಿಗುಂಪೆ ಪ್ರವಾಸೋದ್ಯಮ ಅಭಿವೃದ್ಧಿಗೆ ಸಮಗ್ರ ಯೋಜನೆ

ಡಿಟಿಪಿಸಿ ಸೌಕರ್ಯ ಕೇಂದ್ರ ಸೆಪ್ಟೆಂಬರ್‌ನಲ್ಲಿ ಕಾರ್ಯಾರಂಭ

ಕಾಸರಗೋಡು: ಜಿಲ್ಲೆಯ ಪ್ರಮುಖ ಗಿರಿಧಾಮ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಪೊಸಡಿಗುಂಪೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆಗಳಿಗೆ ಹೊಸ ಹೆಜ್ಜೆ ಇಡಲಾಗಿದೆ. ಜಿಲ್ಲೆಯ ನೈಸರ್ಗಿಕ ಸೌಂದರ್ಯ ಮತ್ತು ಚಾರಣ ಅವಕಾಶಗಳನ್ನು ಸಂಯೋಜಿಸುವ ಪೊಸಡಿಗುಂಪೆ ಗಿರಿಧಾಮಕ್ಕೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಶನಿವಾರ ಭೇಟಿ ನೀಡಿ ಅಭಿವೃದ್ಧಿ ಸಾಮರ್ಥ್ಯ ಮತ್ತು ಚಟುವಟಿಕೆಗಳನ್ನು ನಿರ್ಣಯಿಸಿದರು.



ಪೈವಳಿಕೆ ಗ್ರಾಮ ಪಂಚಾಯತ್ ಆಡಳಿತ ಸಮಿತಿಯು ಪೊಸಡಿಗುಂಪೆಯ ಪ್ರಸ್ತುತ ಪ್ರವಾಸೋದ್ಯಮ ಸಾಮರ್ಥ್ಯ, ಮೂಲಭೂತ ಸೌಕರ್ಯಗಳ ಅಗತ್ಯತೆ ಮತ್ತು ಭವಿಷ್ಯದ ಅಭಿವೃದ್ಧಿ ದೃಷ್ಟಿಕೋನಗಳನ್ನು ಜಿಲ್ಲಾಧಿಕಾರಿಗೆ ಪ್ರಸ್ತುತಪಡಿಸಿತು. ಪ್ರದೇಶದ ನೈಸರ್ಗಿಕ ಸೌಂದರ್ಯ ಮತ್ತು ಪರಿಸರ ವೈಶಿಷ್ಟ್ಯಗಳನ್ನು ಸಂರಕ್ಷಿಸುವ ಮೂಲಕ ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿ ಮಾದರಿಯನ್ನು ಜಾರಿಗೆ ತರುವ ಅಗತ್ಯತೆಯ ಬಗ್ಗೆಯೂ ಇದೇ ವೇಳೆ ಚರ್ಚಿಸಲಾಯಿತು.

ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸಮತೋಲಿತ ಮತ್ತು ಪರಿಸರ ಸ್ನೇಹಿ ರೀತಿಯಲ್ಲಿ ಗ್ರಾಮ ಪಂಚಾಯತ್‌ನ ಸಹಯೋಗದೊಂದಿಗೆ ಸಮಗ್ರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಘೋಷಿಸಿದರು. ಈ ನಿಟ್ಟಿನಲ್ಲಿ ಮೊದಲ ಹಂತದ ಚಟುವಟಿಕೆಗಳನ್ನು ಅಂತಿಮಗೊಳಿಸಲು ಡಿಟಿಪಿಸಿ ಕಾರ್ಯದರ್ಶಿ ನೇತೃತ್ವದಲ್ಲಿ ವಿಶೇಷ ಸಭೆಗಳನ್ನು ಆಯೋಜಿಸಲಾಗುವುದು. ಡಿಟಿಪಿಸಿ ನೇತೃತ್ವದಲ್ಲಿ ಸೌಕರ್ಯ ಕೇಂದ್ರವನ್ನು ನಿರ್ಮಿಸುವ ಯೋಜನೆಯನ್ನು ಕೂಡಾ ಕಾರ್ಯಗತಗೊಳಿಸಲಾಗುತ್ತಿದೆ.

ಪ್ರವಾಸಿಗರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಲು ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗುತ್ತಿದೆ. ಪ್ರವಾಸೋದ್ಯಮ ಯೋಜನೆಯಡಿ ಕ್ಲಾಕ್ ರೂಮ್, ರೆಸ್ಟೋರೆಂಟ್ ಮತ್ತು ಆಧುನಿಕ ಶೌಚಾಲಯ ಸಂಕೀರ್ಣದಂತಹ ಸೌಲಭ್ಯಗಳನ್ನು ಒಳಗೊಂಡಂತೆ ನಿರ್ಮಾಣ ಕಾರ್ಯಗಳನ್ನು ಒಳಗೊಂಡಿದೆ. ಸೆಪ್ಟೆಂಬರ್‌ನಲ್ಲಿ ಸೌಕರ್ಯ ಕೇಂದ್ರವನ್ನು ಪೂರ್ಣಗೊಳಿಸಲು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶನ ನೀಡಿದ್ದಾರೆ.

ಪೊಸಡಿಗುಂಪೆಯನ್ನು ಜಿಲ್ಲೆಯ ಪ್ರಮುಖ ಪರಿಸರ ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಸಾಧ್ಯತೆಗಳ ಬಗ್ಗೆಯೂ ಮೌಲ್ಯಮಾಪನ ನಡೆಸಲಾಯಿತು. ಗಿರಿಧಾಮದ ನೈಸರ್ಗಿಕ ಸೌಂದರ್ಯ ಮತ್ತು ಚಾರಣ ಸಾಮರ್ಥ್ಯವನ್ನು ಮತ್ತಷ್ಟು ಅಧ್ಯಯನ ನಡೆಸಲು ತಜ್ಞ ವಾಸ್ತುಶಿಲ್ಪಿಗಳ ತಂಡವು ಯೋಜನಾ ಸ್ಥಳಕ್ಕೆ ಭೇಟಿ ನೀಡಲಿದೆ ಎಂಬುದನ್ನು ತಿಳಿಸಲಾಯಿತು. ಪ್ರದೇಶದ ಸ್ಥಳಾಕೃತಿ, ಸಂದರ್ಶಕರ ಸೌಲಭ್ಯಗಳು ಮತ್ತು ಭದ್ರತಾ ವ್ಯವಸ್ಥೆಗಳನ್ನು ನಿರ್ಣಯಿಸಿದ ನಂತರ ಅಭಿವೃದ್ಧಿಯ ಮುಂದಿನ ಹಂತಗಳನ್ನು ಯೋಜಿಸಲು ತೀರ್ಮಾನಿಸಲಾಯಿತು.

ಪೈವಳಿಕೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಬದ್ರುನ್ನಿಸಾ ಸಲೀಂ, ಉಪಾಧ್ಯಕ್ಷ ಟಿ.ರಾಘವೇಂದ್ರ ಭಟ್, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಶ್ರೀನಿವಾಸ ಮಾಸ್ಟರ್, ಚೇವಾರು ವಾರ್ಡ್ ಸದಸ್ಯ ಅಜೀಜ್ ಚೇವಾರು, ಶಾಸಕರ ಪ್ರತಿನಿಧಿಗಳಾದ ಅಜೀಜ್ ಕೈಕೆ, ವಸಂತ ಮಾಸ್, ಸಲೀಂ ಕೈಕೆ, ಡಿಟಿಪಿಸಿ ಪ್ರತಿನಿಧಿ ಅಂಜನಾ ಮುಂತಾದವರು ಭಾಗವಹಿಸಿದ್ದರು.

ಪರಿಶಿಷ್ಟ ಜಾತಿ-ಪಂಗಡಗಳ ಅಧಿಕಾರಿಗಳ, ನೌಕರರ ಸಂಘದ ಕುಂದು ಕೊರತೆ ಸಭೆ



ಮಂಗಳೂರು: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಮತ್ತು ನೌಕರರ ಸಂಘ ಬೆಂಗಳೂರು ಹಾಗೂ ಜಿಲ್ಲಾ ಶಾಖೆ ಮಂಗಳೂರು ಇದರ ಜಿಲ್ಲಾ ಮಟ್ಟದ ಸಭೆ ಹಾಗೂ ಕುಂದು ಕೊರತೆಗಳ ಸಭೆಯು ಮಂಗಳೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಸಂಘಟನೆಯ ರಾಜ್ಯ ಅಧ್ಯಕ್ಷ ಸುರೇಶ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಸಭೆಯಲ್ಲಿ ನೌಕರರ ಸಮಸ್ಯೆಗಳನ್ನು ಆಲಿಸಿ, ಚರ್ಚಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದರು.

ಸಂಘಟನೆಯ ಗೌರವಾಧ್ಯಕ್ಷರಾದ ಜಿಲ್ಲಾ ಯೋಜನಾ ನಿರ್ದೇಶಕ ಕೆ. ಇ ಜಯರಾಮ್, ಉಳ್ಳಾಲ ತಾಲೂಕು ಕಾರ್ಯ ನಿರ್ವಾಹಕ ಅಧಿಕಾರಿ ರಾಜಣ್ಣ ಗುರುದತ್ತ್ ಹಾಗೂ ಜಿಲ್ಲೆಯ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯ ನಿರ್ವಹಿಸುವ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಲೆಕ್ಕ ಸಹಾಯಕರು, ಪಂಚಾಯತ್ ಸಿಬ್ಬಂದಿ ಹಾಜರಿದ್ದರು. ಸಂಘಟನೆಯ ಜಿಲ್ಲಾಧ್ಯಕ್ಷರಾದ ಬಾಳೆಪುಣಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಿ. ವೆಂಕಟೇಶ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಂವಿಧಾನ ಪೀಠಿಕೆಯನ್ನು ಧರೆಗುಡ್ಡೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ರಾಜು ಬೋಧಿಸಿದರು. ಕೋಣಾಡು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹರೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ತಲಪಾಡಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಸಂಧ್ಯಾ ಸ್ವಾಗತಿಸಿದರು. ಕರಿಯಂಗಳ ಗ್ರಾಪಂ ಕಾರ್ಯದರ್ಶಿ ವಸಂತಿ ವಂದಿಸಿದರು. ತಲಪಾಡಿ ಗ್ರಾಪಂ ಲೆಕ್ಕ ಸಹಾಯಕ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.



ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇಗುಲಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೋಮವಾರ ಭೇಟಿ ನೀಡಿ ಶ್ರೀ ದೇವರ ದರ್ಶನ ಪಡೆದು, ಕೃಷ್ಣರಾಜ ತಂತ್ರಿ ಅವರಿಂದ ಪ್ರಸಾದ ಸ್ವೀಕರಿಸಿದರು. ಅರ್ಚಕ ಅನಂತ ಪದ್ಮನಾಭ ಅಸ್ರಣ್ಣ, ಶ್ರೀಹರಿ ನಾರಾಯಣದಾಸ ಅಸ್ರಣ್ಣ ದೇಗುಲದ ಮಾಹಿತಿ ನೀಡಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೆನ್ ಪಿ. ಅಧಿಕಾರಿ ಶ್ರೀಧರ, ಗೇರು ಅಭಿವೃದ್ಧಿ ನಿಗಮದ ಮಮತಾ ಗಟ್ಟಿ ಮತ್ತಿತರರಿದ್ದರು.

ಬ್ರಹ್ಮಾವರ ತಾಲೂಕು ಸೌಧಕ್ಕೆ ಲೋಕಾಯುಕ್ತ ದಾಳಿ



ಉಡುಪಿ : ಸಾರ್ವಜನಿಕರಿಂದ ಬಂದ ದೂರುಗಳ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಬ್ರಹ್ಮಾವರ ತಾಲೂಕು ಸೌಧದಲ್ಲಿರುವ ತಹಶೀಲ್ದಾರ್ ಕಚೇರಿಗೆ ಭಾನುವಾರ ದಾಳಿ ನಡೆಸಿ ವಿವಿಧ ಶಾಖೆಗಳ ಕಡತಗಳನ್ನು ಪರಿಶೀಲಿಸಿದರು. ಬೆಂಗಳೂರು ಲೋಕಾಯುಕ್ತ ಕಚೇರಿಯಿಂದ ಶೋಧನಾ ವಾರಂಟ್ ಪಡೆದು ನಡೆಸಿದ ಈ ಕಾರ್ಯಾಚರಣೆ ಮಂಗಳೂರು ಲೋಕಾಯುಕ್ತ ಎಸ್‌ಪಿ ದಿನೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ನಡೆಯಿತು.

ಉಡುಪಿ ಲೋಕಾಯುಕ್ತ ಡಿವೈಎಸ್ಪಿ ಹಾಲಮೂರ್ತಿ ರಾವ್, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಮಂಜುನಾಥ್ ಹಾಗೂ ರಾಜೇಂದ್ರ ನಾಯ್ಕ್, ಮಂಗಳೂರು ಲೋಕಾಯುಕ್ತ ಇನ್ಸ್‌ಪೆಕ್ಟರ್ ಭಾರತಿ ಸೇರಿದಂತೆ ಉಡುಪಿ ಮತ್ತು ಮಂಗಳೂರು ಲೋಕಾಯುಕ್ತ ಕಚೇರಿಯ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ತಹಶೀಲ್ದಾರ್ ಕಚೇರಿಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಅಧಿಕಾರಿಗಳು, ವಿಲೇವಾರಿಗೆ ಬಾಕಿ ಉಳಿದಿದ್ದ ಕಡತಗಳು ಹಾಗೂ ನಿಯಮಬಾಹಿರವಾಗಿ ವಿಲೇವಾರಿ ಮಾಡಲಾಗಿದೆ ಎನ್ನಲಾದ ದಾಖಲೆಗಳನ್ನು ಪರಿಶೀಲಿಸಿ ಕೆಲ ಪ್ರಮುಖ ಕಡತಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದ್ದು, ಈ ಬಗ್ಗೆ ಲೋಕಾಯುಕ್ತರಿಗೆ ವರದಿ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂ:ಕಾ.ಇಂ/ಲೋ.ಇ.ವಿ/ಹಾಸನ/ಕಿ.ಇಂ–2/2026–27/
ದಿನಾಂಕ:25.05.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:11/2026–27: ದಿನಾಂಕ:25.05.2026.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–4ರ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗದಡಿ 01 ಸಂಖ್ಯೆ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಟೆಂಡರ್‌ಗೆ ಇಡಲಾದ ಮೊತ್ತ ರೂ.199.20ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ:04.06.2026ರ ಸಂಜೆ 4.00ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172 – 268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/168/ಕೆಎಸ್‌ಎಂಸಿಎ/2026–27

Mysore Silk
ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು–560001.
ದೂ:080– 25586550/25586402, ಇ–ಮೇಲ್: info@ksicsilk.com
ಸಂಖ್ಯೆ: ಕೆಎಸ್‌ಐಸಿ/ಐಟಮ್ಸ್&ಡಬ್ಲ್ಯು/2026–27 ದಿನಾಂಕ: 25.05.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಳಗಿನ ವಿವರವಾದ ವಸ್ತುಗಳು ಮತ್ತು ಕೆಲಸಗಳಿಗಾಗಿ ತಯಾರಕರು/ಡೀಲರ್‌ಗಳು/ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ
1	KSIC, SWF ಮೈಸೂರು ಮತ್ತು SWU ಚನ್ನಪಟ್ಟಣಕ್ಕೆ ಆರು ತಿಂಗಳ ಅವಧಿಗೆ 222 ಟಿನ್‌ಗಳು (ತಲಾ 15 ಕೆಜಿ) KCOGF ಅಥವಾ ಸಮಾನ ಬ್ರಾಂಡ್ ತೆಂಗಿನ ಎಣ್ಣೆಯ ಖರೀದಿಗಾಗಿ **ಮರು–ಟೆಂಡರ್.**	28,500	03.06.2026 @03.00 PM	04.06.2026 @03.30 PM
2	ಕೆಎಸ್‌ಐಸಿ ಲೋಗೋ ಮತ್ತು ಕಾಲರ್ ಮೇಲೆ ಸೈಜ್ ಇರುವ ಹಾಗೂ ಎಡಭಾಗದಲ್ಲಿ ಪಾಕೆಟ್ ಹೊಂದಿರುವ 1,000 ರೇಷ್ಮೆ ಶರ್ಟ್‌ಗಳ ಹೊಲಿಗೆ ಕೆಲಸಕ್ಕಾಗಿ **ಟೆಂಡರ್,** (ಸೈಜ್, ಬಣ್ಣ ಮತ್ತು ಬೆಲೆಯನ್ನು ಉಲ್ಲೇಖಿಸುವ ಲೇಬಲ್ ಹೊಂದಿರುವ ಕೆಎಸ್‌ಐಸಿ ಡಿಸೈನ್ ಬಾಕ್ಸ್ ಸೇರಿದಂತೆ).	6,000	24.06.2026 @03.00 PM	25.06.2026 @03.30 PM
3	1,000 ಬಿಳಿ ಜರಿ ಸೀರೆಗಳಿಗೆ ಬಾಡಿ ಮತ್ತು ಪಲ್ಲು ಕಾಂಟ್ರಾಸ್ಟ್ ಡೈಯಿಂಗ್ ಕೆಲಸದ **ಟೆಂಡರ್**	20,000	09.06.2026 @03.00 PM	10.06.2026 @03.30 PM

ಟೆಂಡರ್ ದಾಖಲೆಗಳು, ಅಧಿಸೂಚನೆಯ ವಿವರಗಳು, ವೇಳಾಪಟ್ಟಿ ನಿಯಮಗಳು ಮತ್ತು ಷರತ್ತುಗಳನ್ನು **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು. ಹೆಚ್ಚಿನ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಚೇರಿಯಿಂದ ಕೆಲಸದ ಸಮಯದಲ್ಲಿ ಅಥವಾ ಕೆಪಿಪಿ ಪೋರ್ಟಲ್ – ಸಹಾಯವಾಣಿ: 080–46010000 ಮತ್ತು 080–68948777 ನಿಂದ ಪಡೆಯಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು(ಸಂ)
ವಾಸಾಸಂಇ/ವಾಪ್ರ/ಜಿಎ/750/2026–27

BEFORE THE MOTOR ACCIDENT CLAIMS TRIBUNAL, KASARAGOD
O.P (M.V.) NO. 572/2025

Between:
Yousuf P.M. ...Petitioner
And
Vijaya Kumar M. and others ...Respondents

NOTICE

R1: Vijaya Kumar M.
Aged 22 Years
S/o Manjappa Bandi Vaddar
R/at Karim Sonnenahalli village
Anjanmurthy Nagara
Doddaballapur Taluk,
Bangalore.
R2 Manjappa Bandi Vaddar
S/o Venkappa
R/at Karim Sonnenahalli village
Anjanmurthy Nagara
Doddaballapur Taluk,
Bangalore.

Please take notice that the Petitioner above named filed a petition for granting compensation for injury sustained to him due to a motor accident dated 20-01-2025 and the same is posted for your appearance on 30-05-2026 at 11.00 A.M.

You are therefore required to be present on that date in person or through a pleader duly instructed and authorized to appear or else the matter will be decided in your absence treating you exparte.

// By Order//
Sd/- Shafi M.
Advocate, Kasaragod
Kasaragod
25-05-2026

ಫಾರ್ಮ್ ಬಿ
ಸಾರ್ವಜನಿಕ ಘೋಷಣೆ
[ಭಾರತದ ದಿವಾಳಿತನ ಮತ್ತು ಪಾಪರಿಕೆ ಮಂಡಳಿ (ದಿವಾಳಿತನ ಪ್ರಕ್ರಿಯೆ) ನಿಬಂಧನೆಗಳು–2016ರ ನಿಬಂಧನೆ 12 ಅನ್ವಯ]
ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್‌ನ ಹಕ್ಕುದಾರರ ಗಮನಕ್ಕೆ

ಕ್ರ. ಸಂ.	ಸೂಕ್ತ ವಿವರಗಳು	ವಿವರಗಳು
1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	**ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್**
2.	ಕಾರ್ಪೊರೇಟ್ ವ್ಯಕ್ತಿಯ ಸಂಸ್ಥಾಪನೆ ದಿನಾಂಕ	10ನೇ ಮೇ 1995
3	ಯಾವ ಪ್ರಾಧಿಕಾರದಡಿ ಕಾರ್ಪೊರೇಟ್ ವ್ಯಕ್ತಿ ಸಂಸ್ಥಾಪನೆ/ ನೋಂದಣಿಯಾಗಿದ್ದಾರೆ	ರಿಜಿಸ್ಟ್ರಾರ್ ಆಫ್ ಕಂಪನೀಸ್ (ಆರ್‌ಓಸಿ), ಹೈದರಾಬಾದ್
4	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಐಡೆಂಟಿಟಿ ನಂಬರ್	ಯು24110ಟಿಜಿ1995ಪಿಎಲ್‌ಸಿ029318
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿ (ಇದ್ದಲ್ಲಿ) ವಿಳಾಸ	ಫ್ಲಾಟ್ ನಂ. 501, ಎ & ಬಿ, ಸುಲ್ತಾನ್ ಸಿರಿಸಂಪದ, ನಂ. 6–3–1090/ಎ/1 (ಪ್ಲಾಟ್ ನಂ. 12), ರಾಜಭವನ ರಸ್ತೆ, ಸೋಮಾಜಿಗುಡ, ಹೈದರಾಬಾದ್–500082
6	ಕಾರ್ಪೊರೇಟ್ ವ್ಯಕ್ತಿಯ ಸಮಾಪನಾ ನಿರ್ಣಯ ಪ್ರಕ್ರಿಯೆ ಮುಕ್ತಾಯ ದಿನಾಂಕ	22.05.2026
7	ಕಾರ್ಪೊರೇಟ್ ವ್ಯಕ್ತಿಯ ಸಮಾಪನಾ ಪ್ರಕ್ರಿಯೆ ಆರಂಭದ ದಿನಾಂಕ	22.05.2026
8	ಸಮಾಪನಾದಾರರಾಗಿ ಕಾರ್ಯನಿರ್ವಹಿಸುವ ಸಮಾಪನಾ ವೃತ್ತಿಪರರ ಹೆಸರು ಮತ್ತು ನೋಂದಣಿ ಸಂಖ್ಯೆ	ದಂತು ಇಂದು ಶೇಖರ್ ಐಬಿಬಿಐ/ಐಪಿಎ–003/ಐಪಿಎ–ಐಸಿಎಐ–ಎನ್–00233/2019–2020/ 12773
9	ಮಂಡಳಿಯಲ್ಲಿ ನೋಂದಾಯಿಸಿದಂತೆ ಸಮಾಪನಾದಾರರ ವಿಳಾಸ ಮತ್ತು ಇ–ಮೇಲ್	29–1401/6/1, ಪ್ಲಾಟ್ ನಂ. 253, ರಸ್ತೆ ಸಂಖ್ಯೆ 2 (ಪಶ್ಚಿಮ), ದೀನದಯಾಳ್ ನಗರ, ರಾಮಕೃಷ್ಣಾಪುರಂ, ನೆರೆಡ್‌ಮೆಟ್, ಹೈದರಾಬಾದ್, ತೆಲಂಗಾಣ– 500056 ಇ–ಮೇಲ್: indu.sekhar3@gmail.com
10	ಸಮಾಪನಾದಾರರ ಜತೆ ಸಂಪರ್ಕಕ್ಕೆ ಬಳಸುವ ವಿಳಾಸ ಮತ್ತು ಇ–ಮೇಲ್	ಫ್ಲಾಟ್ ನಂ. 104, ಕಪೂರಿ ಸುಪ್ರೀಂ ಎನ್‌ಕ್ಲೇವ್, ಕಪೂರಿ ಹಿಲ್ಸ್, ಹೈದರಾಬಾದ್–500033, ತೆಲಂಗಾಣ ಇ–ಮೇಲ್: cirpvibha@gmail.com
11	ಕ್ಲೇಮ್‌ಗಳ ಸಲ್ಲಿಕೆಗೆ ಕೊನೆಯ ದಿನಾಂಕ	**21.06.2026** (ಸಮಾಪನೆ ಆರಂಭದ ದಿನಾಂಕದಿಂದ 30 ದಿನಗಳು)

ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಹೈದರಾಬಾದ್ ಪೀಠ–I ವತಿಯಿಂದ ಐಬಿಸಿ–2016 ಸೆಕ್ಷನ್ 33ರ ಅನ್ವಯ **ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್**‌ನ ಸಮಾಪನಾ ಪ್ರಕ್ರಿಯೆ ಆರಂಭಿಸಲು ದಿನಾಂಕ: 22.05.2026ರಂದು ಆದೇಶ ನೀಡಲಾಗಿದೆ.

ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್ ಹಕ್ಕುದಾರರಿಗೆ ಈ ಮೂಲಕ ತಮ್ಮ ಕ್ಲೇಮ್‌ಗಳ ಪುರಾವೆಯನ್ನು **21.06.2026ರ ಒಳಗಾಗಿ** ಐಟಂ–10ರ ಎದುರು ನೀಡಿರುವ ಸಮಾಪನಾದಾರರ ವಿಳಾಸಕ್ಕೆ ಸಲ್ಲಿಸುವಂತೆ ಗಮನ ಸೆಳೆಯಲಾಗುತ್ತಿದೆ.

ಹಣಕಾಸು ಸಾಲದಾರರು ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕವಷ್ಟೇ ಸಲ್ಲಿಸಬೇಕು. ಎಲ್ಲ ಇತರ ಹಕ್ಕುದಾರರು ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ವಿಧಾನದಲ್ಲಿ ಸಲ್ಲಿಸಬಹುದಾಗಿದೆ.

ಸುಳ್ಳು ಅಥವಾ ತಪ್ಪುದಾರಿಗೆಳೆಯುವಂಥ ಪುರಾವೆಗಳನ್ನು ಸಲ್ಲಿಸುವುದು ದಂಡವನ್ನು ಆಹ್ವಾನಿಸುತ್ತದೆ.

ಒಂದು ವೇಳೆ ಹಕ್ಕುದಾರರು ಸಮಾಪನಾ ಪ್ರಕ್ರಿಯೆ ವೇಳೆ ತಮ್ಮ ಕ್ಲೇಮ್‌ಗಳನ್ನು ಸಲ್ಲಿಸದೇ ಇದ್ದಲ್ಲಿ, ಹಕ್ಕುದಾರರು ಭಾರತದ ಪಾಪರಿಕೆ ಮತ್ತು ದಿವಾಳಿತನ ಮಂಡಳಿ (ಕಾರ್ಪೊರೇಟ್ ವ್ಯಕ್ತಿಗಳ ಸಮಾಪನಾ ನಿರ್ಣಯ ಪ್ರಕ್ರಿಯೆ) ನಿಬಂಧನೆ–2016ರ ಅಡಿಯಲ್ಲಿ ಕಾರ್ಪೊರೇಟ್ ಸಮಾಪನಾ ನಿರ್ಣಯ ಪ್ರಕ್ರಿಯೆಯ ವೇಳೆ ಸಲ್ಲಿಸಿದ ಕ್ಲೇಮ್‌ಗಳನ್ನು, ಸೆಕ್ಷನ್ 38ರ ಅಡಿಯಲ್ಲಿ ಸಲ್ಲಿಸಿದ ಕ್ಲೇಮ್‌ಗಳೆಂದು ಪರಿಗಣಿಸಲಾಗುತ್ತದೆ.

ಸಮಾಪನಾ ಪ್ರಕ್ರಿಯೆ ಅರ್ಜಿ ನಮೂನೆಯ ಡೌನ್‌ಲೋಡ್ ಸೆಕ್ಷನ್ ಅಡಿಯಲ್ಲಿ https://ibbi.gov.in/home/downloads ನಿಂದ ಕ್ಲೇಮ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ದಂತು ಇಂದು ಶೇಖರ್
ಸಮಾಪನಾದಾರರು
ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್
ದಿನಾಂಕ: 26.05.2026
ಸ್ಥಳ: ಹೈದರಾಬಾದ್
ರಿಜಿಸ್ಟರ್ಡ್ ನಂ: ಐಬಿಬಿಐ/ಐಪಿಎ–003/ಐಪಿಎ–ಐಸಿಎಐ–ಎನ್–00233/2019–2020/12773,
ಎಎಫ್‌ಎ 31.12.2026ರವರೆಗೆ ಮಾನ್ಯತೆ ಹೊಂದಿದೆ

PUBLIC CAUTION NOTICE

I, Dr. M. Bhanu Kumar, S/o. Late Muthaiah, No.12213, 2nd Phase, 4th Stage, Vijayanagar, Mysore–570021, Plaintiff No.2 in O.S.No.23/2026 pending before Vacation Court, Mangalore, hereby inform general public, banks and financial institutions that transactions concerning below referred property and matters relating thereto form subject matter of aforesaid proceedings and Original Hakku Patra dated 26-05-1997 issued in Ref.No.Taluk/LND/518/97-98 pertaining to said property stands deposited with me.

Any person proposing to purchase, lend, create charge, encumbrance or otherwise deal with said property is requested to conduct independent verification at own responsibility keeping in view aforesaid proceedings.

IMMOVABLE HOUSE SITE PROPERTY situated at Kavoor Village, Mangalore Taluk, Sy.No.57, measuring 5 Cents.

Boundaries: North: Portion of same Sy.No. i.e., common compound wall
South and East: Portion of same Sy.No. i.e., road
West: Portion of same Sy.No.

Standing in name of Mrs. Sujatha, W/o. Gopal, 2-T-121/2(3), Pachanadi, Achukod, Mangalore 575008.

Date: 23-05-2026

Sd/-
Dr. M. Bhanu Kumar

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com
ಸಂ. ರಿಮ್ಸ್ /ಸರಬರಾಜು/ಟೆಂಡರ್/2026–27 ದಿನಾಂಕ:22.05.2026

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಔಷಧಗಳು ಮತ್ತು ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳು ಐಟಂಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಔಷಧಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಔಷಧ/162/2026–27 (DME/2026-27/IND2338)	96.12
2	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಕೆಮ್/163/2026–27 (DME/2026-27/IND2347)	90.39
3	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಇಂಜಕ್ಷನ್ಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಇಂಜಕ್ಷನ್/164/2026–27 (DME/2026-27/IND2348)	44.93

1) ಟೆಂಡರ್‌ಗಳನ್ನು ದಿನಾಂಕ: 25.05.2026 ರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, **2) ಪ್ರಶ್ನೆಗಳಿಗೆ ಕೊನೆಯ ದಿನಾಂಕ:** 01.06.2026 ರ ಸಾಯಂಕಾಲ 5.00 ಗಂಟೆಯವರೆಗೆ, **3)ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 08.06.2026 ರ ಸಾಯಂಕಾಲ 5.00ಗಂಟೆವರೆಗೆ, **4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ :** 10.06.2026 ಬೆಳಿಗ್ಗೆ 11.30ಗಂಟೆಗೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು
DIP/RCR/89/KSMC&A/91/2025-26

ಮಣಿಪಾಲ ಹೌಸಿಂಗ್ ಫೈನಾನ್ಸ್ ಸಿಂಡಿಕೇಟ್ ಲಿಮಿಟೆಡ್
ನೋಂದಾಯಿತ ಕಛೇರಿ, 'ಮಣಿಪಾಲ ಹೌಸ್' ಮಣಿಪಾಲ–576 104. ಉಡುಪಿ ಜಿಲ್ಲೆ. ಸಿಐಎನ್: ಯು65921ಕೆಎ1986ಪಿಎಲ್‌ಸಿ007396

ಆಡಳಿತಾತ್ಮಕ ಕಾರಣದಿಂದ ನಾವು ನಮ್ಮ ನಿಧಿ ಗೋಲ್ಡ್ ಅನ್ನು ಕೆಳಗೆ ತಿಳಿಸಿದ ವಿಳಾಸಕ್ಕೆ ಸ್ಥಳಾಂತರಿಸುತ್ತಿದ್ದೇವೆ.

ಪ್ರಸ್ತುತ ಇರುವ ವಿಳಾಸ	ಸ್ಥಳಾಂತರವಾಗುವ ವಿಳಾಸ
ಬಜಪೆ ಶಾಖೆ ಮೊದಲನೇ ಮಹಡಿ, ಬ್ರಿಟ್ಟೋ'ಸ್ ಫರ್ಸ್ಟ್, ಮುಖ್ಯರಸ್ತೆ, ಬಸ್ ನಿಲ್ದಾಣದ ಎದುರು, ಬಜಪೆ–574 142, ದಕ್ಷಿಣ ಕನ್ನಡ ಜಿಲ್ಲೆ	**ಬಜಪೆ ಶಾಖೆ** ಶಾಪ್ ನಂ. 2, 1ನೇ ಮಹಡಿ, ರೆಬೆಲ್ಲೋ ಕಾಂಪ್ಲೆಕ್ಸ್, ಮುಖ್ಯರಸ್ತೆ, ಚರ್ಚ್ ಹತ್ತಿರ, ಬಜಪೆ–574 142. ದಕ್ಷಿಣ ಕನ್ನಡ ಜಿಲ್ಲೆ. ಸಂಪರ್ಕಿಸಿ: 77950 43957

ಸ್ಥಳಾಂತರ ದಿನಾಂಕ: 01.09.2026
ನಮ್ಮ ಹಿಂದಿನ ವಿಳಾಸದಲ್ಲಿ ಲಭ್ಯವಿರುವ ಎಲ್ಲಾ ಸೇವೆಗಳು ಹೊಸ ವಿಳಾಸದಲ್ಲಿಯೂ ಲಭ್ಯವಿರುತ್ತವೆ.
ದಿನಾಂಕ: 26.05.2026 ಅಧಿಕೃತ ಅಧಿಕಾರಿ, ಮಣಿಪಾಲ ಹೌಸಿಂಗ್ ಫೈನಾನ್ಸ್ ಸಿಂಡಿಕೇಟ್ ಲಿಮಿಟೆಡ್

ಮಂಗಳೂರು ಮಹಾನಗರ ಪಾಲಿಕೆ
ಲಾಲ್‌ಬಾಗ್, ಎಂ.ಜಿ ರಸ್ತೆ, ಮಂಗಳೂರು–575 003, ದಕ್ಷಿಣ ಕನ್ನಡ, ಕರ್ನಾಟಕ, ಭಾರತ.
ಫೋನ್: 0824–2220313–18, ಫ್ಯಾಕ್ಸ್: 0824–2220310
ವೆಬ್‌ಸೈಟ್: www.mangalurucity.mrc.gov.in
ಮನಪಾ/ಆರೋವಿ/ಸಿಆರ್ 05/2025–26/G12 ದಿನಾಂಕ: 25.05.2026

ಸಾರ್ವಜನಿಕ ಪ್ರಕಟಣೆ

ವಿಷಯ: ಬೀದಿ ನಾಯಿಗಳಿಗೆ ಗುರುತಿಸಲಾದ ಆಹಾರ ಪೂರೈಕೆ ತಾಣಗಳ ಪಟ್ಟಿಯಲ್ಲಿ ಸಾರ್ವಜನಿಕರ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸುವ ಕುರಿತು

Animal Birth Control Dog Rules 2023, ಹಾಗೂ Prevention of Cruelty to Animal Act 1980 ನಿಯಾಮಳಿಯನುಸಾರ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳಿಗೆ ಆಹಾರ ಪೂರೈಕೆ ತಾಣಗಳನ್ನು ನಿರ್ಮಿಸುವ ನಿಟ್ಟಿನಲ್ಲಿ, ಪಾಲಿಕೆಯ ವ್ಯಾಪ್ತಿಯ ಸ್ವಯಂ ಸೇವಕರು / Dog Feeders ಹಾಗೂ ಆರೋಗ್ಯ ನಿರೀಕ್ಷಕರ ಸಹಾಯದಿಂದ ಬೀದಿ ನಾಯಿಗಳಿಗೆ 163 ಸಂಖ್ಯೆಯ ಆಹಾರ ಪೂರೈಕೆ ತಾಣಗಳನ್ನು ಗುರುತಿಸಲಾಗಿರುತ್ತದೆ. ಸದರಿ ಗುರುತಿಸಲಾದ ಆಹಾರ ಪೂರೈಕೆ ತಾಣಗಳ ಪಟ್ಟಿಯನ್ನು ಪಾಲಿಕೆಯ http://www.mangalurucity.mrc.gov.in/ ಜಾಲತಾಣದಲ್ಲಿ ಹಾಗೂ ಕಛೇರಿ ನೋಟೀಸು ಬೋರ್ಡ್‌ಗಳಲ್ಲಿ ಲಗತ್ತೀಸಲಾಗಿರುತ್ತದೆ. ಸದರಿ ತಾಣಗಳನ್ನು ಪರಿಶೀಲಿಸಿ, ಈ ಸಂಬಂಧ ಸಾರ್ವಜನಿಕರ ಆಕ್ಷೇಪಣೆಗಳಿದ್ದಲ್ಲಿ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ ಪಾಲಿಕೆಯ ಆಯುಕ್ತರ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ಕೋರಿದೆ.

ಸಹಿ/– ಆಯುಕ್ತರು
ಮಂಗಳೂರು ಮಹಾನಗರಪಾಲಿಕೆ
DIPR/DK/KSMCA/271/26-27 dt.25.05.2026

BRILLIANT
CORRESPONDENCE COLLEGE
(For X std & II PUC Only)
ADMISSION OPEN 2026-27
DIRECT - II PUC SCIENCE - 1 YEAR PCMB/ PCMC/ PCMH/ PCBH
DIRECT - II PUC COMMERCE - 1 YEAR HEBA/ BSBA/ EBAS/ EBAC/ EBAH
• X passed or 1st PUC failed can write II PUC Exam
• 8th, 9th failed can write X Exam
• Experienced Lecturers
• Hostel Facility Available
• Individual Coaching (Personalised) available
Near PVS Circle, Kodialbail, Mangalore
Call: 99452 38106

ಪುತ್ತೂರು ಮಾರುಕಟ್ಟೆ ಧಾರಣೆ

25-05-2026
ಆಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	415 - 450
ಚೋಲ್ ಅಡಿಕೆ	:	510 - 535
ಡಬಲ್ ಚೋಲ್	:	510 - 535
ಹೊಸ ಪಟೋರ	:	340 - 390
ಹಳೆ ಪಟೋರ	:	360 - 390
ಹೊಸ ಉಳ್ಳಿ	:	140 - 290
ಹಳೆ ಉಳ್ಳಿ	:	130 - 290
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	255 - 285
ಹಳೆ ಕರಿಗೋಟು	:	255 - 285
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 670

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	245.00
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	142.00
ಸ್ಕ್ರಾಪ್ 2	-	140.00

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ : KOL-S243-2012-13
ದಿನಾಂಕ : 15–03–2013
ದೂರವಾಣಿ : 08539 225522 / 23,
ಇ–ಮೇಲ್ : directorkimskoppal@gmail.com,
ವೆಬ್‌ಸೈಟ್ : www.kimskoppal.com
ಸಂಖ್ಯೆ : ಕಿಮ್ಸ್/ಕೊಪ್ಪಳ/ಟೆಂಡರ್/ಪತ್ಯಾಹಾರ/2026–27
ದಿನಾಂಕ : 26–05–2026

ಟೆಂಡರ್ ಅಧಿಸೂಚನೆ

ಕಿಮ್ಸ್ ಕೊಪ್ಪಳ ಸಂಸ್ಥೆಯ ಜಿಲ್ಲಾಬೋಧಕ ಆಸ್ಪತ್ರೆಗೆ ಸಿದ್ಧಪಡಿಸಿದ ಪತ್ಯಾಹಾರವನ್ನು ಪೂರೈಸಲು 01 ವರ್ಷದ ಅವಧಿಗೆ ಕೆ.ಟಿ.ಪಿ.ಪಿ. ಕಾಯ್ದೆ 1999 – 2000 ರ ಅನ್ವಯ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಅಂದಾಜು ಮೊತ್ತ : ರೂ. 159.00 ಲಕ್ಷಗಳು, 2) ಇ.ಎಂ.ಡಿ. : ರೂ. 2,38,500/–, 3) ಟೆಂಡರ್‌ನ್ನು ದಿನಾಂಕ : 26–05–2026 ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, 4) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–06–2026 ರ ಸಂಜೆ 5.30 ಗಂಟೆವರೆಗೆ.

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ **ವೆಬ್‌ಸೈಟ್ : https://kppp.karnataka.gov.in** ನಲ್ಲಿ ಹಾಗೂ ಈ ಸಂಸ್ಥೆಯ **ವೆಬ್‌ಸೈಟ್ : http//www.kimskoppal.kar.nic.in** ನಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು.

ಸಹಿ/– ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಕೊಪ್ಪಳ.
ಡಿಐಪಿಆರ್/ಕೊಪ್ಪಳ/107/ಮಣಿಪಾಲ್/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ, ಕಲಬುರಗಿ
(ಉಗ್ರಾಣ ಇಲಾಖೆ) ದೂರವಾಣಿ: 77606 86172 (COSP), 77609 92029 (S.O)
ಸಂ.ಕಕರಸಾ/ಕೇಕ/ಉ&ಮಖನಿ/02/2026–27 ದಿನಾಂಕ:25.05.2026

ಟೆಂಡರ್ ಪ್ರಕಟಣೆ. (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No	Tender No.	Tender Nomenclature	Estimate Value(Rs.)	Last date for submission of tender
1.	KKRTC/2025-26/ IND0189/CALL-2	Supply of Plywood Sheets	0.58 Core	10.06.2026 at 15.00 hrs
2.	KKRTC/2024-25/ IND0125/CALL-7	Procurement of Oil Seals.	0.90 Crore	10.06.2026 at 15.00 hrs
3.	KKRTC/2025-26/ IND0192/CALL-2	Procurement of Thin walled Bearings.	0.70 Crore	10.06.2026 at 15.00 hrs
4.	KKRTC/2026-27/ IND0208	Procurement of Fasteners	0.94 Crore	10.06.2026 at 15.00 hrs
5.	KKRTC/2026-27/ IND0209	Supply of Curing Envelops and Curing Bags	0.58 Crore	10.06.2026 at 15.00 hrs
6.	KKRTC/2024-25/ IND0119/CALL-7	Procurement of Fuel Injection pipes & Leak off pipes	0.41 Crore	10.06.2026 at 15.00 hrs
7.	KKRTC/2026-27/ IND0207	Procurement of Head Lamp Assemblies and Accessories	4.02 Crore	22.06.2026 at 15.00 hrs
8.	KKRTC/2026-27/ IND0206	Supply of Desktop Computers, Laptops, Printers & Tabs	3.14 Crore	22.06.2026 at 15.00 hrs
9.	KKRTC/2026-27/ IND0212	Supply of First Aid Box with Medicine	0.35 Crore	22.06.2026 at 15.00 hrs
10.	KKRTC/2026-27/ IND0211	Supply of Fire detection & Suppression System(FDSS)	0.40 Crore	22.06.2026 at 15.00 hrs
11.	KKRTC/2026-27/ IND0203	Supply of Automotive Grease	3.49 Crore.	27.06.2026 at 15.00 hrs
12.	KKRTC/2026-27/ IND0205	Supply of PCTR & Allied Materials	11.02 Crore	27.06.2026 at 15.00 hrs
13.	KKRTC/2026-27/ SE8553	Engaging an agency for providing technical assistants to the divisions of KKRTC	9.52 Crore	27.06.2026 at 15.00 hrs
14.	KKRTC/2026-27/ SE8258-CALL-2	Identifying agency for providing IT Staff (Software & System Engineer on contract basis to KKRTC.	0.39 Crore	27.06.2026 at 15.00 hrs
15.	KKRTC/2025-26/ IND0176/CALL-3	Supply of Fan Belts	0.38 Crore	10.06.2026 at 15.00 hrs
16.	KKRTC/2024-25/ IND0101/CALL-5	Supply of Piston Assembly and Ring Sets	0.89 Crore	10.06.2026 at 15.00 hrs
17.	KKRTC/2026-27/ IND0213	Supply of King pin Components & Stub Axles	2.13 Crore	27.06.2026 at 15.00 hrs

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು **https://kppp.karnataka.gov.in/#/portal/portal-home** ನಲ್ಲಿ ಲಭ್ಯವಿರುತ್ತವೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ **cospnekrtc@gmail.com** ಅಥವಾ **support@eprochelpdesk.com** ಗೆ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ.ಕಲಬುರಗಿ/158/ದೇಶಪಾಂಡೆ ಪಬ್ಲಿಸಿಟಿ/2026–27/

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-55) ಡ್ರಾ ಮೇ 25ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BJ 659839 (KAYAMKULAM)

Consolation Prize Rs.5,000/-
BA 659839 BB 659839 BC 659839 BD 659839
BE 659839 BF 659839 BG 659839 BH 659839
BK 659839 BL 659839 BM 659839

2nd Prize Rs.30,00,000/- [30 Lakhs]
BG 334040 (GURUVAYOOR)

3rd Prize Rs.5,00,000/- [5 Lakhs]
BE 248939 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0344 0494 0617 1358 1845 1896 2929 3239 3641 3851 4803 5836 6156 6904 7523 7599 8836 9159 9789

5th Prize Rs.2,000/-
2377 2943 4120 5229 6238 7924

6th Prize Rs.1,000/-
0142 0312 0399 0602 0706 2402 2683 3015 3133 3359 4131 4200 4461 4776 4966 6095 6234 6688 6928 8117 8291 8312 9001 9275 9442

7th Prize Rs.500/-
0176 0819 0870 1342 1359 1514 1575 1619 1727 1797 1854 1908 2101 2436 2528 2529 2644 2707 2726 2937 2976 3232 3233 3305 3376 3855 4141 4453 4516 4654 5001 5051 5102 5135 5363 5458 5470 5493 5635 5691 5824 5849 5942 5971 6021 6214 6277 6437 6454 6726 6734 6735 6854 6871 6895 6949 7095 7284 7504 7509 7630 7689 7712 7860 7916 8255 8260 8504 8571 9165 9187 9231 9276 9677 9811 9975

8th Prize Rs.200/-
0023 0052 0206 0238 0254 0368 0538 0552 0600 0735 0788 0813 0857 1148 1347 1362 1381 1606 1776 1784 1885 1994 2048 2191 2223 2991 3179 3235 3302 3330 3351 3618 3830 3929 3951 4321 4377 4391 4589 4722 4733 4932 5033 5176 5232 5251 5393 5479 5744 5863 5871 5928 5955 6259 6265 6338 6378 6899 7020 7028 7045 7211 7239 7386 7650 7685 8054 8062 8087 8322 8335 8404 8515 8550 8583 8598 8812 8849 8852 8919 8951 9121 9236 9237 9329 9369 9377 9399 9527 9552 9721 9795 9837 9951

9th Prize Rs.100/-
0014 0019 0083 0122 0129 0131 0132 0171 0175 0178 0201 0218 0410 0436 0519 0575 0630 0655 0905 0980 1046 1055 1132 1245 1299 1345 1372 1414 1466 1615 1630 1671 2110 2249 2260 2301 2424 2451 2612 2650 2859 2860 2880 2945 3117 3132 3245 3274 3341 3345 3639 3698 3721 4029 4105 4138 4199 4201 4317 4325 4408 4645 4725 4810 4820 4838 5007 5008 5202 5221 5240 5244 5339 5461 5514 5545 5562 5574 5656 5660 5678 5741 5747 5761 5825 5835 5861 6298 6369 6504 6556 6565 6608 6663 6681 6787 6829 6846 6852 6892 6918 6924 6963 7013 7061 7089 7094 7110 7247 7252 7351 7355 7374 7456 7546 7644 7652 7656 7710 7986 8036 8106 8194 8202 8251 8358 8402 8441 8514 8542 8552 8557 8658 8720 8871 8909 8914 8915 9073 9088 9311 9724 9804 9915

₹66 ಲಕ್ಷ ಮೌಲ್ಯದ ಮದ್ಯವಶ



• **ಬೆಂಗಳೂರು:** ಅಬಕಾರಿ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ಮೂಲಕ ಬರೋಬ್ಬರಿ 66 ಲಕ್ಷ ರೂ. ಮೌಲ್ಯದ ಅಕ್ರಮ ಮದ್ಯವನ್ನು ವಶಪಡಿಸಿರುವುದು ಶ್ಲಾಘನೀಯ ಸಂಗತಿಯಾಗಿದೆ ಎಂದು ಅಬಕಾರಿ ಇಲಾಖೆ ಸಚಿವ ಆರ್.ಬಿ. ತಿಮ್ಮಾಪುರ ಪ್ರಶಂಸಿಸಿದ್ದಾರೆ. ಕಾರ್ಯಾಚರಣೆ ಮೂಲಕ ಶಂಕಿತ ವಿದೇಶಿ ಹಾಗೂ ಹೊರ ರಾಜ್ಯದಿಂದ ಅಕ್ರಮವಾಗಿ ಸಾಗಾಟ ಮಾಡಿದ್ದ ಸಾವಿರಾರು ಲೀ. ಮದ್ಯವನ್ನು ವಶಪಡಿಸಿಕೊಂಡಿರುವ ಅಧಿಕಾರಿಗಳು, ಸಿಬ್ಬಂದಿ ಕಾರ್ಯ ಶ್ಲಾಘನೀಯವಾಗಿದೆ ಎಂದಿದ್ದಾರೆ.

ಹೊಸದಿಲ್ಲಿಯಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ಗೂಡ್ಸ್ ರೈಲಿನಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿರುವ ಖಚಿತ ಮಾಹಿತಿ ದೊರೆಯಿತು. ತಕ್ಷಣ ಬೆಂಗಳೂರು ನಗರ ಜಿಲ್ಲೆ ಉಪ ಆಯುಕ್ತ ಭರತೇಶ್ ನೇತೃತ್ವದಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು ಹಾಗೂ ರೈಲ್ವೆ ಭದ್ರತಾ ಸಿಬ್ಬಂದಿಯೊಂದಿಗೆ ಯಶವಂತಪುರ ರೈಲ್ವೆ ನಿಲ್ದಾಣದಲ್ಲಿರುವ ಎ.ವಿ.ಜಿ ಲಾಜಿಸ್ಟಿಕ್ಸ್ ಲಿಮಿಟೆಡ್ ಪಾರ್ಸಲ್ ಗೋಡೌನ್ ಮುಂಭಾಗದಲ್ಲಿ ದಾಳಿ ನಡೆಸಿ 74 ರಟ್ಟಿನ ಪೆಟ್ಟಿಗೆಗಳಲ್ಲಿ 1,118 ಬಾಟಲಿಗಳಲ್ಲಿ ಸುಮಾರು 66,00,000 ರೂ.ಮೌಲ್ಯದ 1042 ಲೀ. ನಕಲಿ ವಿದೇಶಿ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮತಾಂತರ ನಿಷೇಧ ಕಾಯ್ದೆ ರದ್ದಿಗೆ ಮಹಾಸಭಾ ಆಗ್ರಹ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಕ್ಷದಲ್ಲಿದ್ದಾಗ, ಕರ್ನಾಟಕದಲ್ಲಿ ಜಾರಿಯಲ್ಲಿರುವ ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಮಾಡುತ್ತೇವೆ ಎಂದು ಭರವಸೆ ನೀಡಿದ್ದರು, ಆದರೆ, ಅವರು ಅಧಿಕಾರಕ್ಕೆ ಬಂದು ಮೂರು ವರ್ಷವಾದರೂ ಅದರ ಕಡೆ ಗಮನಹರಿಸಿಲ್ಲ. ಇದು ಕ್ರೈಸ್ತ ಸಮುದಾಯಕ್ಕೆ ಮಾಡಿದ ಮಹಾಮೋಸ ಎಂದು ಅಖಿಲ ಭಾರತ ಕ್ರೈಸ್ತ ಮಹಾಸಭಾ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಪ್ರಜ್ವಲ್ ಸ್ವಾಮಿ ಎಸ್. ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಇಡೀ ಕ್ರೈಸ್ತ ಸಮುದಾಯ ಮತ ನೀಡಿ ಅಧಿಕಾರಕ್ಕೆ ತಂದಿದೆ. ಚುನಾವಣೆಯ ಸಂದರ್ಭದಲ್ಲಿ ಪಕ್ಷ ಮತಾಂತರ ನಿಷೇಧ ಕಾಯ್ದೆ ಸೇರಿದಂತೆ ನಮ್ಮ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ವಾಗ್ದಾನ ನೀಡಲಾಗಿತ್ತು. ಆದರೆ ಅದು ಈಡೇರಿಲ್ಲ. ಅಷ್ಟೇ ಅಲ್ಲದೆ ಕ್ರೈಸ್ತ ಸಮುದಾಯದ ಭವನಗಳು, ಚರ್ಚುಗಳ ಜೀರ್ಣೋದ್ಧಾರ ಮತ್ತು ನಿರ್ಮಾಣಕ್ಕೆಂದು ಕೇಳಿದ ಹಣವನ್ನು ಬಿಡುಗಡೆ ಮಾಡಲಿಲ್ಲ ಎಂದು ದೂರಿದರು.

ಕೆಲವೆಡೆ ಮನೆ, ಪ್ರಾರ್ಥನೆ, ಚರ್ಚ್ ಆರಾಧನೆ, ಪ್ರಾರ್ಥನಾ ಸಭೆ ನಡೆಯುವಾಗ ಬಲವಂತ ಮತಾಂತರ ಎಂಬ ಆರೋಪ ಮಾಡಿ ಗುಂಪುಗಳು ದಾಳಿ ನಡೆಸಿದ ಪ್ರಕರಣಗಳು ಹೆಚ್ಚಾಗುತ್ತಿವೆ. ಕೆಲವು ವರದಿಗಳ ಪ್ರಕಾರ ವೈಯಕ್ತಿಕ ವೈಷಮ್ಯ, ಜಾತಿ ಭೇದಭಾವ ಅಥವಾ ಕುಟುಂಬದ ವಿರೋಧದ ಹಿನ್ನೆಲೆಯಲ್ಲಿ ಕೂಡ ಮತಾಂತರ ಆರೋಪಗಳನ್ನು ಬಳಸಲಾಗಿದೆ ಎಂದರು. ಸಮುದಾಯದ ಅಭಿವೃದ್ಧಿಗೆ 500 ಕೋಟಿ ರೂ. ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲವಾದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸರ್ಕಾರವನ್ನು ಎಚ್ಚರಿಸಿದರು.

ಸಂದರ್ಶನ



ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿ ಸೋಮವಾರ ಏರ್ಪಡಿಸಲಾಗಿದ್ದ ಉದ್ಯೋಗಮೇಳದಲ್ಲಿ ವಿವಿಧ ವಲಯಕ್ಕೆ ಸಂಬಂಧಿಸಿದ 175 ಕಂಪನಿಗಳಿಂದ ನಡೆದ ನೇರ ಸಂದರ್ಶನದಲ್ಲಿ ಸಾವಿರಾರು ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

ಐದು ಪಾಲಿಕೆ ಚುನಾವಣೆಗೆ ಪೂರ್ವ ತಯಾರಿ | ಆಕಾಂಕ್ಷಿತ ಸ್ಪರ್ಧಾಳುಗಳಿಂದ ಕಸರತ್ತು

ಬಿರುಸಾದ ವಿವಿಧ ಪಕ್ಷಗಳ ಚಟುವಟಿಕೆ

▸ ಮಹೇಶ್ ಹೆಗಡೆ

• **ಬೆಂಗಳೂರು:** ಬಹು ನಿರೀಕ್ಷಿತ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಪಂಚ ಪಾಲಿಕೆಗಳ ಚುನಾವಣೆಗೆ ರಾಜಕೀಯ ಪಕ್ಷಗಳು ನೇರ ಮತ್ತು ತೆರೆಮರೆ ತಾಲೀಮು ಆರಂಭಿಸಿವೆ. ಆದರಲ್ಲೂ ಎರಡು ರಾಷ್ಟ್ರೀಯ ಮತ್ತು ಪ್ರಮುಖವಾಗಿ ಗುರುತಿಸಿಕೊಂಡಿರುವ ಒಂದು ಪ್ರಾದೇಶಿಕ ಪಕ್ಷಕ್ಕೆ ಟಕ್ಕರ್ ಕೊಡಲು ಸಣ್ಣ ಪಕ್ಷಗಳು ತಯಾರಿ ಆರಂಭಿಸಿವೆ.

ಸುಪ್ರೀಂಕೋರ್ಟ್ ಆಗಸ್ಟ್ 31ರೊಳಗೆ ನಗರ ಪಾಲಿಕೆಗಳಿಗೆ ಚುನಾವಣೆ ನಡೆಸುವಂತೆ ಆದೇಶ ನೀಡಿದೆ. ಆ ಹಿನ್ನೆಲೆಯಲ್ಲಿ ಸದ್ಯದಲ್ಲಿ ಚುನಾವಣೆ ನಡೆಯಬಹುದೆಂಬ ನಿರೀಕ್ಷೆ ಬೆಂಗಳೂರಿನ ಜನರಲ್ಲಿ ಮೂಡಿದೆ. ರಸ್ತೆ ಗುಂಡಿಗಳು, ಕಸದ ಸಮಸ್ಯೆ, ಸಂಚಾರ ದಟ್ಟಣೆ ಸೇರಿದಂತೆ ಹದಗೆಟ್ಟ ಮೂಲಸೌಕರ್ಯ ವಿಷಯಗಳ ಮೇಲೆ ಈ ಸಲದ ಪಾಲಿಕೆ ಚುನಾವಣೆ ಕಾವು ಏರುವ ಸಾಧ್ಯತೆ ಇದೆ. ಈ ಬಗ್ಗೆ ನಗರದ ಜನರೂ ಆಕ್ರೋಶಭರಿತರಾಗಿದ್ದಾರೆ. ಈ ವಿಷಯವನ್ನೇ ಪ್ರಮುಖವಾಗಿರಿಸಿಕೊಂಡು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ವಿರುದ್ಧ ಪಾಲಿಕೆ ಚುನಾವಣೆಗೆ ಸ್ಪರ್ಧಿಸಲು ಸಣ್ಣ ಸಣ್ಣ ರಾಜಕೀಯ ಪಕ್ಷಗಳು ತಳಮಟ್ಟದಲ್ಲಿ ಸಿದ್ಧತೆ ನಡೆಸಲಾರಂಭಿಸಿವೆ.

100 ವಾರ್ಡ್‌ನಲ್ಲಿ ಸ್ಪರ್ಧೆಗೆ ಬಿಎನ್‌ಪಿ ತಯಾರಿ: ಮೊದಲಬಾರಿಗೆ ನಗರ ಪಕ್ಷವಾಗಿ ಸ್ಥಾಪನೆಯಾದ ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) 369 ವಾರ್ಡ್‌ಗಳಲ್ಲಿ 100 ವಾರ್ಡ್‌ಗಳ ಮೇಲೆ ಕಣ್ಣಿಟ್ಟಿದೆ. ಆದರಲ್ಲೂ ಪ್ರಮುಖವಾಗಿ ಪೂರ್ವ ಮತ್ತು ದಕ್ಷಿಣ ಹಾಗೂ ಕೇಂದ್ರ ನಗರಪಾಲಿಕೆಗಳ ವಾರ್ಡ್‌ಗಳಲ್ಲಿ ಸ್ಪರ್ಧಿಸಲು ಚಿಂತನೆ ನಡೆಸಿದೆ.

ಪಕ್ಷದ ಅಭ್ಯರ್ಥಿಗಳು ಮನೆ ಮನೆ ಭೇಟಿ, ವಾರ್ಡ್ ಸಮಸ್ಯೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಸಮರ್ಥ ಅಭ್ಯರ್ಥಿಗಳು ಸಿಕ್ಕರೆ ಇನ್ನೂ ಹೆಚ್ಚಿನ ವಾರ್ಡ್‌ಗಳಲ್ಲಿ ಸ್ಪರ್ಧಿಸಲಾಗುವುದು. ಪ್ರಮುಖ ಮೂರು ಪಕ್ಷಗಳಿಂದ ಜನ ಬೇಸತ್ತಿದ್ದು, ಪರ್ಯಾಯ ವೇದಿಕೆಯಾಗಿ ನಾವು ಬಂದಿದ್ದೇವೆ. 369 ವಾರ್ಡ್‌ಗಳಲ್ಲಿ ಕನಿಷ್ಠ 50 ವಾರ್ಡ್‌ಗಳಲ್ಲಿ ಗೆಲ್ಲಲಿದ್ದೇವೆ ಎಂದು ಬಿಎನ್‌ಪಿ ಅಧ್ಯಕ್ಷ ಶ್ರೀಕಾಂತ್ ನರಸಿಂಹನ್ ಹೇಳುತ್ತಾರೆ.



ಬೂತ್ ಮಟ್ಟದಲ್ಲಿ ಎಎಪಿ ಕಾರ್ಯ

ಮತ್ತೊಂದೆಡೆ ಆಮ್ ಆದ್ಮಿ ಪಾರ್ಟಿ (ಎಎಪಿ) ಸಾರ್ವಜನಿಕ ವಲಯದಲ್ಲಿ ನಮಗೆ ಪೂರಕವಾದ ವಾತಾವರಣವಿದ್ದು, ಈಗಾಗಲೇ ಬೂತ್ ಮಟ್ಟದ ಸಂಘಟನೆಯನ್ನು ಬಲಪಡಿಸುವ ಕಾರ್ಯ ಆರಂಭಿಸಿದದೇವೆ ಎಂದು ತಿಳಿಸಿದೆ. ಆಕಾಂಕ್ಷಿಗಳಿಗೆ ಮತದಾರರ ಮಾಹಿತಿ, ಬೂತ್ ನಿರ್ವಹಣೆ ಮತ್ತು ಪ್ರಜಾಪ್ರಭುತ್ವ ಬಲಪಡಿಸುವ ಉದ್ದೇಶದಿಂದ ಪಕ್ಷ ಸಂಘಟನಾ ಕಾರ್ಯದಲ್ಲಿ ತೊಡಗಿಕೊಳ್ಳು ಸೂಚಿಸಲಾಗಿದೆ. 369 ವಾರ್ಡ್‌ಗಳಲ್ಲೂ ಸ್ಪರ್ಧಿಸುವ ಗುರಿ ಹೊಂದಿದ್ದು, ಈಗಾಗಲೇ 150 ಕ್ಕೂ ಹೆಚ್ಚಿನ ವಾರ್ಡ್‌ಗಳಿಗೆ ಆಕಾಂಕ್ಷಿಗಳ ಅರ್ಜಿ ಬಂದಿವೆ. ಕಾಂಗ್ರೆಸ್, ಜೆಡಿಎಸ್, ಬಿಜೆಪಿಗೆ ಪರ್ಯಾಯವಾಗಿ ನಾವು ಜನರಿಗೆ ಸ್ವಚ್ಛ ಆಡಳಿತ ನೀಡಿತ್ತೇವೆ ಎಂದು ಎಎಪಿ ನಾಯಕರು ಮಾಹಿತಿ ಹಂಚಿಕೊಂಡಿದ್ದಾರೆ.

ಅಭ್ಯರ್ಥಿಗಳ ಹುಡುಕಾಟದಲ್ಲಿ ಕೆಆರ್‌ಎಸ್

ಭ್ರಷ್ಟಾಚಾರ ಮುಕ್ತ ಆಡಳಿತದ ಗುರಿಯೊಂದಿಗೆ ಕರ್ನಾಟಕ ರಾಷ್ಟ್ರ ಸಮಿತಿ(ಕೆಆರ್‌ಎಸ್) ನಗರ ಪಾಲಿಕೆ ಚುನಾವಣೆಗೆ ಸಿದ್ಧತೆ ನಡೆಸಿದ್ದು, ಈಗಾಗಲೇ ಆಂತರಿಕ ಆಯ್ಕೆ ಪ್ರಕ್ರಿಯೆಯ ಮೂಲಕ 47 ಕ್ಕೂ ಹೆಚ್ಚು ವಾರ್ಡ್‌ಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಸಾಧ್ಯವಾದಷ್ಟು ಹೆಚ್ಚಿನ ವಾರ್ಡ್‌ಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ಪಕ್ಷದ ಆಶಯವಾಗಿದೆ ಎಂದು ಕೆಆರ್‌ಎಸ್ ತಿಳಿಸಿದೆ. ಒಟ್ಟಾರೆ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ರಾಜಕೀಯ ತಂತ್ರವನ್ನು ಉಳಿದ ಪಕ್ಷಗಳು ಹೇಗೆ ಎದುರಿಸಲಿವೆ. ಮತದಾರ ಸಣ್ಣ ಪಕ್ಷಗಳಿಗೆ ಮನ್ನಣೆ ನೀಡಲಿದ್ದಾನಾ ಎಂದು ಕಾದು ನೋಡಬೇಕಿದೆ.



ಪ್ರಸ್ತುತ ಇರುವ 3 ಪ್ರಮುಖ ಪಕ್ಷಗಳಿಂದ ಬೆಂಗಳೂರಿನ ನಾಗರಿಕನೂ ಬೇಸತ್ತು ಹೋಗಿದ್ದಾನೆ. ಜನಸಾಮಾನ್ಯರಲ್ಲಿ ಉಂಟಾಗಿರುವ ಈ ತೀವ್ರ ನಿರಾಶೆ ಮತ್ತು ಹತಾಶೆಯೇ ನಮಗೆ ಪರ್ಯಾಯ ಶಕ್ತಿಯಾಗಿ ಹೊರಹೊಮ್ಮಲು ದೊಡ್ಡ ದಾರಿಯಾಗಿದೆ.
■ ಶ್ರೀಕಾಂತ ನರಸಿಂಹನ್, ಬಿಎನ್‌ಪಿ ಅಧ್ಯಕ್ಷ

ಕಿರುಸುದ್ದಿ

ಮದ್ಯದ ಅಮಲಿನಲ್ಲಿ ಸಹ ಕೆಲಸಗಾರನ ಹತ್ಯೆ

• **ಬೆಂಗಳೂರು:** ಕುಡಿದ ಮತ್ತಿನಲ್ಲಿ ಸಹ ಕೆಲಸಗಾರನ ಕೊಂದು ಪರಾರಿಯಾಗಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಸ್ಥಳೀಯ ನಿವಾಸಿ ಸುಂದರ್ (35) ಬಂಧಿತ ಆರೋಪಿ. ಮೆಹಬೂಬ್ ಪಾಷಾ (50) ಕೊಲೆಯಾದ ದುರ್ದೈವಿ. ಇವರಿಬ್ಬರು ಕುಂದಲಹಳ್ಳಿಯಲ್ಲಿ ನಿರ್ಮಾಣವಾಗುತ್ತಿದ್ದ ಕಟ್ಟಡವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕುಡಿದ ಮತ್ತಿನಲ್ಲಿ ಇಬ್ಬರ ನಡುವೆ ವಾಗ್ವಾದ ಉಂಟಾಗಿ ಕೊಲೆ ಆಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶವ ಪತ್ತೆಯಾಗಿತ್ತು: ನಿರ್ಮಾಣ ಹಂತದ ಕಟ್ಟಡದಲ್ಲಿ ಸೋಮವಾರ ಬೆಳಗ್ಗೆ ಶವ ಕಂಡು ಬಂದಿದೆ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ವೈಟ್‌ಫೀಲ್ಡ್ ಪೊಲೀಸರು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಕೊಲೆ ಶಂಕೆ ವ್ಯಕ್ತ ಪಡಿಸಿದ್ದರು. ತನಿಖೆ ವೇಳೆ ಕೊಲೆ ಎಂಬುದು ಗೊತ್ತಾಗಿದೆ. ಮೃತನ ಮಗಳು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಿ ತನಿಖೆಗೆ ಒಳಪಡಿಸಲಾಗಿದೆ.

ಸ್ನೇಹಿತನ ಕೊಲೆ: ಇಬ್ಬರ ಸೆರೆ

• **ಬೆಂಗಳೂರು:** ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಗಲಾಟೆಯಲ್ಲಿ ಸ್ನೇಹಿತನನ್ನೇ ಬರ್ಬರವಾಗಿ ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಕುಂಬಳಗೂಡು ಪೊಲೀಸರು ಬಂಧಿಸಿದ್ದಾರೆ. ಜ್ಞಾನಭಾರತಿಯ ಮೋಹಿನ್ ಪಾಷಾ (22), ಹಸಾನ್ (22) ಬಂಧಿತರು. ತಾವರೆಕೆರೆ ನಿವಾಸಿ ಎನ್. ರಕ್ಷಿತ್ ಕೊಲೆಯಾದ ಯುವಕ. ಈತ ಸ್ನೇಹಿತನಿಗೆ ಕೊಟ್ಟಿದ್ದ ಹಣ ಕೇಳಲು ಹೋದಾಗ ಕೊಲೆ ನಡೆದಿದೆ. ಆಟೋ ಚಾಲನೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ರಕ್ಷಿತ್, ಮೇ 24ರ ಸಂಜೆ ತನಗೆ ಬರಬೇಕಾಗಿದ್ದ ಹಣವನ್ನು ಪಡೆಯಲು ಕಂಬೀಪುರದ ತನ್ನ ಸ್ನೇಹಿತ ಮೋಹಿನ್ ಪಾಷಾನನ್ನು ಭೇಟಿಯಾಗಲು ಮನೆಯಿಂದ ತೆರಳಿದ್ದ. ರಾತ್ರಿಯಾದರೂ ರಕ್ಷಿತ್ ಮನೆಗೆ ವಾಪಸ್ ಬರದ ಕಾರಣಕ್ಕೆ ಆತಂಕಗೊಂಡ ಮೃತ ಯುವಕನ ತಾಯಿ, ಮೋಹಿನ್ ಪಾಷಾನನ್ನು ವಿಚಾರಿಸಿದಾಗ ಕೊಲೆ ಮಾಡಿದ್ದಾಗಿ ಹೇಳಿದ್ದಾನೆ. ಈ ಕುರಿತು ಕುಂಬಳಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ. ಕಷ್ಟಕ್ಕೆಂದು 2ಸಾವಿರ ರೂ. ಸಾಲ ಕೊಟ್ಟಿದ್ದ ಹಣ ವಾಪಸ್ ಕೇಳಲು ಹೋದ ರಕ್ಷಿತ್‌ನೊಂದಿಗೆ ಗಲಾಟೆ ಮಾಡಿಕೊಂಡ ಮೋಹಿನ್ ಪಾಷಾ, ತನ್ನ ಸಂಬಂಧಿ ಹಸನ್ ಜೊತೆ ಸೇರಿ ರಾಮಸಂದ್ರದ ಕೆರೆಯ ಬಳಿ ರಕ್ಷಿತ್ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಿದ್ದಾರೆ. ಅಷ್ಟೇ ಅಲ್ಲದೆ, ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಿ, ಮೃತದೇಹವನ್ನು ರಾಮಸಂದ್ರದ ಖಾಲಿ ಜಾಗದ ಗುಂಡಿಯಲ್ಲಿ ಬಿಸಾಕಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಡಿಯೋ ಚಿತ್ರೀಕರಣ: ಗೃಹಿಣಿ ದೂರು

• **ಬೆಂಗಳೂರು:** ಸರ್ಜಾಪುರ ರಸ್ತೆಯ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯೊಂದರ ಶೌಚಾಲಯದಲ್ಲಿ ಗರ್ಭಿಣಿ ಮಹಿಳೆಯ ವಿಡಿಯೋ ಚಿತ್ರೀಕರಣಕ್ಕೆ ಯತ್ನಿಸಿದ ಘಟನೆ ಸಂಬಂಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೇ 21ರಂದು ತಪಾಸಣೆಗೆ ಬಂದಿದ್ದ ಗರ್ಭಿಣಿ ಶೌಚಾಲಯ ಬಳಸುವಾಗ ಹೌಸ್‌ಕೀಪಿಂಗ್ ಸಿಬ್ಬಂದಿ ಕೃಷ್ಣ ರಾಮ್ ಪಾಂಗಿಂಗ್ ಮೊಬೈಲ್‌ನಲ್ಲಿ ದೃಶ್ಯ ಸೆರೆಹಿಡಿಯಲು ಯತ್ನಿಸಿದ್ದಾನೆ. ಇದನ್ನು ಗಮನಿಸಿದ ಮಹಿಳೆ ಆತನನ್ನು ತರಾಟೆಗೆ ತಗೆದುಕೊಂಡಿದ್ದಾರೆ. ಸಂತ್ರಸ್ತೆಯ ದೂರಿನ ಮೇರೆಗೆ ಪೊಲೀಸರು ಬಿಎನ್‌ಎಸ್ ಹಾಗೂ ಐಟಿ ಕಾಯ್ದೆಯಡಿ ಆಸ್ಪತ್ರೆ ಮಂಡಳಿ ಮತ್ತು ಆರೋಪಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಪ್ರಾಥಮಿಕ ತನಿಖೆಯ ವೇಳೆ ಆರೋಪಿಯ ಮೊಬೈಲ್‌ನಲ್ಲಿ ಸದ್ಯಕ್ಕೆ ಯಾವುದೇ ಆಕ್ಷೇಪಾರ್ಹ ದೃಶ್ಯಗಳು ಪತ್ತೆಯಾಗಿಲ್ಲವಾದರೂ ಸಿಕ್ಕಿಬೀಳುವ ಭೀತಿಯಿಂದ ಆತ ಡೇಟಾವನ್ನು ಡಿಲೀಟ್ ಮಾಡಿರುವ ಸಾಧ್ಯತೆ ಹೆಚ್ಚಾಗಿದೆ.

ಆರ್‌ಆರ್ ನಗರದ ಬಳಿ ವಾಹನ ದಟ್ಟಣೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮತ್ತು ನಮ್ಮ ಮೆಟ್ರೊ ಅಧಿಕಾರಿಗಳ ದೂರದೃಷ್ಟಿ ಇಲ್ಲದ ಹಾಗೂ ನಿರ್ಲಕ್ಷ್ಯದ ಕೆಲಸ ಒಂದು ರಾಜರಾಜೇಶ್ವರಿ ನಗರದ ಪ್ರವೇಶ ದ್ವಾರದ ಬಳಿ ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತ ಪಡಿಸುತ್ತಿದ್ದಾರೆ.



ರಾಜರಾಜೇಶ್ವರಿ ನಗರದ ಆರ್ಚ್ (ಕಮಾನು) ಕೆಳಗಿನಿಂದ ಮೆಟ್ರೊ ರೈಲು ಮಾರ್ಗದ ಕೆಳಭಾಗದವರೆಗೆ ರಸ್ತೆಯ ಮಧ್ಯದಲ್ಲೇ ನಾಲ್ಕು ಬೃಹತ್ ಕಾಂಕ್ರೀಟ್ ಸ್ತಂಭಗಳನ್ನು (ಪಿಲ್ಲರ್‌ಗಳನ್ನು) ನಿರ್ಮಿಸಿ ಹಾಗೆಯೇ ಬಿಡಲಾಗಿದೆ. ಈ ಸ್ತಂಭವನ್ನು ಯಾವ ಉದ್ದೇಶಕ್ಕಾಗಿ, ಯಾವ ಯೋಜನೆಗಾಗಿ ನಿರ್ಮಿಸಲಾಯಿತು ಎಂಬುದು ಇಂದಿಗೂ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಈ ಪಿಲ್ಲರ್‌ಗಳಿಂದ ರಾಜರಾಜೇಶ್ವರಿ ನಗರದ ಕಮಾನು ದಾಟಿ ಗೋಪಾಲನ್ ಮಾಲ್ ಬಲಬದಿಯ ರಸ್ತೆಯಲ್ಲಿ ಸಾಗಲು ಸಂಚಾರ ದಟ್ಟಣೆ ಉಂಟಾಗುತ್ತಿದೆ ಎಂದು ನಿತ್ಯ ಸಂಚರಿಸುವವರ ಅಭಿಪ್ರಾಯವಾಗಿದೆ. ಈ ಪಿಲ್ಲರ್‌ಗಳ ರಚನೆ ಮತ್ತು ಅವುಗಳ ದಿಕ್ಕನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವುಗಳ ಮೇಲೆ ಭವಿಷ್ಯದಲ್ಲಿ ಯಾವುದೇ ರಸ್ತೆ, ಫ್ಲೈಓವರ್ ಆಗಲಿ ಅಥವಾ ಮತ್ತೊಂದು ಮೆಟ್ರೋ ಮಾರ್ಗವಾಗಲಿ ನಿರ್ಮಾಣ ಮಾಡಲು ತಾಂತ್ರಿಕವಾಗಿ ಸಾಧ್ಯವೇ ಇಲ್ಲ ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಮುಂದಿನ ಹಂತದ ವಿಸ್ತರಣೆಗೆ ಅಲ್ಲಿ ಯಾವುದೇ ಜಾಗವಾಗಲಿ ಅಥವಾ ಅವಕಾಶವಾಗಲಿ ಇಲ್ಲ. ಆದರೂ ಅದನ್ನು ಯಾಕೆ ನಿರ್ಮಿಸಿದ್ದಾರೆ. ಬಳಕೆಯಿಲ್ಲದ ಮೇಲೂ ಯಾಕೆ ಹಾಗೆ ಬಿಟ್ಟಿದ್ದಾರೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ನಾಲ್ವರು ವಿದ್ಯಾರ್ಥಿಗಳ ಆಯ್ಕೆ

• **ಬೆಂಗಳೂರು:** ಜಪಾನ್‌ನಲ್ಲಿ ಮೇ 30ರವರೆಗೆ ನಡೆಯಲಿರುವ ಸಕುರಾ ಸೈನ್ಸ್ ಪ್ರೋಗ್ರಾಂ –2026ರಲ್ಲಿ ಭಾಗವಹಿಸಲು ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ನಾಲ್ವರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ಹಾಗೂ ರಾಜ್ಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜಂಟಿಯಾಗಿ ಈ ವಿದ್ಯಾರ್ಥಿಗಳನ್ನು ಜಪಾನ್‌ಗೆ ಕಳುಹಿಸಿಕೊಟ್ಟಿದೆ. ವಿಜ್ಞಾನ ಮತ್ತು ತಂತ್ರ ಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಆಸಕ್ತಿ, ಸಂಶೋಧನಾ ಮನೋಭಾವ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೈಜ್ಞಾನಿಕ ವಿನಿಮಯವನ್ನು ಉತ್ತೇಜಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳು ಜಪಾನ್‌ನ ವಿವಿಧ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡಿ, ವಿಜ್ಞಾನ ಕಾರ್ಯಾಗಾರಗಳು, ಸಂವಾದಗಳು ಮತ್ತು ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇದರ ಮೂಲಕ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ವೈಜ್ಞಾನಿಕ ಜ್ಞಾನ ಮತ್ತು ಅನುಭವ ದೊರೆಯಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಚಾಲಕನ ಮೇಲೆ ಹಲ್ಲೆ: ದರೋಡೆ

• **ಬೆಂಗಳೂರು:** ಕಾರು ಚಾಲಕ ಮತ್ತು ಆತನ ಸ್ನೇಹಿತನನ್ನು ದುಷ್ಕರ್ಮಿಗಳ ಗ್ಯಾಂಗ್ ಒಂದು ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ಬಂದು ಅಪಹರಿಸಿ, ಹಲ್ಲೆ ನಡೆಸಿ ದರೋಡೆ ಮಾಡಿರುವ ಘಟನೆ ಬಾಗಲೂರು ಪೊಲೀಸ್ ಠಾಣೆಯಲ್ಲಿ ಬೆಳಕಿಗೆ ಬಂದಿದೆ.

ಕೇರಳ ಮೂಲದ ಟ್ಯಾಕ್ಸಿ ಚಾಲಕ ಮೊಹಮ್ಮದ್ ರಫೀಕ್ (30) ಮೇ 21ರ ತಡರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತಮ್ಮ ಸ್ನೇಹಿತ ದೀಪಕ್‌ನನ್ನು ಕರೆದುಕೊಂಡು ಬರುತ್ತಿದ್ದಾಗ, ಬೇಗೂರು ಸಮೀಪ ಬೆಂಜ್ ಕಾರಿನಲ್ಲಿ ಬಂದ 5ರಿಂದ 6 ಜನರ ಗ್ಯಾಂಗ್ ಇವರನ್ನು ಅಡ್ಡಗಟ್ಟಿದೆ. ಚಾಕು ತೋರಿಸಿ ರಫೀಕ್‌ನನ್ನು ಅಪಹರಿಸಿದ ದುಷ್ಕರ್ಮಿಗಳು, ಆತನಲ್ಲಿದ್ದ 21,000 ರೂ. ನಗದು ಹಾಗೂ ಮೊಬೈಲ್ ಕಸಿದುಕೊಂಡಿದ್ದಾರೆ. ಬಳಿಕ ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿ, ರಫೀಕ್‌ಗೆ ಅಪಘಾತವಾಗಿದೆ ಎಂದು ಸುಳ್ಳು ಹೇಳಿಸಿ ಸ್ನೇಹಿತ ಜಾಬೀರ್‌ನನ್ನು ಸ್ಥಳಕ್ಕೆ ಕರೆಸಿಕೊಂಡಿದ್ದಾರೆ. ಅಲ್ಲಿಗೆ ಬಂದ ಜಾಬೀರ್‌ನನ್ನು ಸಹ ವಶಕ್ಕೆ ಪಡೆದು, ಕಬ್ಬಿಣದ ರಾಡ್‌ಗಳಿಂದ ಇಬ್ಬರನ್ನೂ ಮನಬಂದಂತೆ ಥಳಿಸಿದ್ದಾರೆ. ಈ ನಡುವೆ ರಫೀಕ್ ದುಷ್ಕರ್ಮಿಗಳಿಂದ ತಪ್ಪಿಸಿಕೊಂಡು ಬಂದು, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಸಂಪಿಗೆಹಳ್ಳಿ ಪೊಲೀಸರು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಬಿದ್ದಿದ್ದ ಜಾಬೀರ್‌ನನ್ನು ರಕ್ಷಿಸಿ ಯಲಹಂಕದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಹಲ್ಲೆಯಿಂದಾಗಿ ಜಾಬೀರ್ ಕಿವಿಗೆ ಬಲವಾದ ಗಾಯಗಳಾಗಿವೆ.

ಜೆಡಿಎಸ್ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಣೆ




• **ಬೆಂಗಳೂರು:** ಜೆಡಿಎಸ್ ಗ್ರೇಟರ್ ಬೆಂಗಳೂರು ನೂತನ ಸಮಿತಿಗೆ ವಿವಿಧ ವಿಭಾಗಗಳಿಗೆ ಆಯ್ಕೆಯಾದ ಪದಾಧಿಕಾರಿಗಳಿಗೆ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ ಹಾಗೂ ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಂ ರಮೇಶ್ ಗೌಡ ಆದೇಶ ಪತ್ರವನ್ನು ಹಸ್ತಾಂತರ ಮಾಡಿದರು.

ಈ ವೇಳೆ ನೂತನ ಪದಾಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದ ಉಭಯ ನಾಯಕರು, ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೆಂಗಳೂರು ಚುನಾವಣೆಗೆ ಬಿರುಸಿನ ತಯಾರಿ ನಡೆಸುವಂತೆ ಸ್ಪಷ್ಟವಾಗಿ ಸೂಚಿಸಿದ್ದಾರೆ. ಹೀಗಾಗಿ ನೂತನ ಪದಾಧಿಕಾರಿಗಳು ಹಾಗೂ ನಗರದ ಎಲ್ಲಾ ಮುಖಂಡರು, ಕಾರ್ಯಕರ್ತರು ಸಮರ್ಪಣಾ ಭಾವದಿಂದ ಪಕ್ಷದ ಗೆಲುವಿಗೆ ದುಡಿಮೆ ಮಾಡಬೇಕು ಎಂದು ನಿರ್ದೇಶನ ನೀಡಿದರು. ವಾರ್ಡ್ ಹಾಗೂ ಮತಗಟ್ಟೆ ಮಟ್ಟದಲ್ಲಿ ಪದಾಧಿಕಾರಿಗಳು ಅತ್ಯಂತ ಉತ್ತಮವಾಗಿ ಪಕ್ಷವನ್ನು ಸಂಘಟಿಸಬೇಕು. ಈಗಾಗಲೇ ಪಕ್ಷದ ರಾಜ್ಯಾಧ್ಯಕ್ಷರು ಕೆಲ ಸೂಚನೆಗಳನ್ನು ನೀಡಿ ಅವುಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಸ್ಪಷ್ಟವಾಗಿ ಆದೇಶ ಮಾಡಿದ್ದಾರೆ ಎಂದು ತಿಳಿಸಿದರು.

ಕ್ರಮ ಕೈಗೊಳ್ಳಲು ಪ್ರಾಣಿದಯಾ ಮಂಡಳಿ ಆಗ್ರಹ

ಜಾನುವಾರು ರಕ್ಷಕರ ಮೇಲೆ ಹಲ್ಲೆ

• **ಬೆಂಗಳೂರು:** ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಅಕ್ರಮವಾಗಿ ಮಾಂಸದ ಉದ್ದೇಶಕ್ಕೆ ಸಂಗ್ರಹಿಸಿಡಲಾಗಿದ್ದ ನೂರಾರು ಜಾನುವಾರನ್ನು ರಕ್ಷಿಸಲು ಹೋದ ಕೇಂದ್ರ ಸರ್ಕಾರದ ಪ್ರಾಣಿದಯಾ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ಸ್ಥಳೀಯರ ಗುಂಪೊಂದು ಪೊಲೀಸರ ಸಮ್ಮುಖದಲ್ಲೇ ಭೀಕರವಾಗಿ ಹಲ್ಲೆ ನಡೆಸಿದೆ.



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅನಗೊಂಡನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮೇಡಿಮಲ್ಲಸಂದ್ರದಲ್ಲಿ ಈ ಘಟನೆ ನಡೆದಿದ್ದು, ಪ್ರಾಣಿದಯಾ ಮಂಡಳಿಯ ಅಧಿಕಾರಿ ಸಂಜಯ್ ಕುಲಕರ್ಣಿ ಮತ್ತು ಸಿಬ್ಬಂದಿ ಮಂಜುನಾಥ್ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಅಕ್ರಮವಾಗಿ 100ಕ್ಕೂ ಹೆಚ್ಚು ಹಸುಗಳು ಮತ್ತು 20 ಒಂಟೆಗಳನ್ನು ಕೂಡಿ ಹಾಕಿರುವ ಖಚಿತ ಮಾಹಿತಿ ಮೇರೆಗೆ ಮೇ 22 ರಂದು ಅಧಿಕಾರಿಗಳು ಪೊಲೀಸರಿಗೆ ಲಿಖಿತ ದೂರು ನೀಡಿದ್ದರು. ಶನಿವಾರ ಪೊಲೀಸರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ದಾಖಲೆಗಾಗಿ ವಿಡಿಯೋ ಮಾಡುತ್ತಿದ್ದಾಗ ಅಲ್ಲಿಗೆ ಜಮಾಯಿಸಿದ ಗೋ ಮಾಫಿಯಾದ ಸದಸ್ಯರು ಅಧಿಕಾರಿಗಳನ್ನು ಸುತ್ತುವರೆದಿದ್ದಾರೆ. ತದನಂತರ ಅವಾಚ್ಯ ಶಬ್ದಗಳಿಂದ ನಿಂದಿಸಿ, ಆಯುಧಗಳಿಂದ ತಲೆ, ಮುಖ ಹಾಗೂ ಕುತ್ತಿಗೆಯ ಭಾಗಕ್ಕೆ ತೀವ್ರವಾಗಿ ಇರಿದು ಘಾಸಿಗೊಳಿಸಿದ್ದಾರೆ. ಗಲಭೆ ತೀವ್ರಗೊಳ್ಳುತ್ತಿದ್ದಂತೆ ಪೊಲೀಸರು ರಕ್ಷಣಾ ಕಾರ್ಯಾಚರಣೆಯನ್ನು ಅರ್ಧಕ್ಕೆ ನಿಲ್ಲಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಅನಗೊಂಡನಹಳ್ಳಿ ಪೊಲೀಸರು ಕೊಲೆ ಯತ್ನ, ಗಲಭೆ ಸೇರಿದಂತೆ ಭಾರತೀಯ ನ್ಯಾಯ ಸಂಹಿತೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹಲ್ಲೆಕೋರರಲ್ಲಿ ಅರಾಫತ್ ಶೇಖ್, ಆಯೂಬ್ ಪಾಷಾ ಹಾಗೂ ಶೈಖ್ ಮುಜೈದ್ ಅವರನ್ನು ಗುರುತಿಸಲಾಗಿದ್ದು, ತಲೆಮರೆಸಿಕೊಂಡಿರುವ ಉಳಿದ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ.

ಪೊಲೀಸರ ಸಮ್ಮುಖದಲ್ಲೇ ಈ ದಾಳಿ ನಡೆದಿರುವುದಕ್ಕೆ ಪ್ರಾಣಿದಯಾ ಸಂಘಟನೆಗಳು ತೀವ್ರ ಕಳವಳ ವ್ಯಕ್ತಪಡಿಸಿವೆ. ಹಲ್ಲೆಕೋರರ ವಿವರ ತಿಳಿದಿದ್ದರೂ ಪೊಲೀಸರು ಅಪರಿಚಿತರಿಂದ ಹಲ್ಲೆ ಎಂದು ಎಫ್‌ಐಆರ್ ದಾಖಲಿಸಿರುವುದು ಆತಂಕಕಾರಿ ಎಂದು ದೂರಿದ್ದಾರೆ.

ಉತ್ತರ ನಗರ ಪಾಲಿಕೆಯಲ್ಲಿ ಮಳೆ ನಿರ್ವಹಣೆಗೆ ತರಬೇತಿ

ವಿಪತ್ತು ನಿರ್ವಹಣಾ ತಂಡಗಳು ಸನ್ನದ್ಧ

• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಂಗಾರು ಮಳೆಯ ಪೂರ್ವ ಸಿದ್ಧತಾ ಭಾಗವಾಗಿ ಹಾಗೂ ಯಾವುದೇ ರೀತಿಯ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ವಿಪತ್ತು ನಿರ್ವಹಣೆಗೆ ಸದಾ ಸನ್ನದ್ಧರಾಗಿ ಕಾರ್ಯನಿರ್ವಹಿಸಲು ಸಂಬಂಧಪಟ್ಟ ಸಿಬ್ಬಂದಿಗೆ ತರಬೇತಿ ನೀಡಲಾಯಿತು.

ಮಳೆಗಾಲದ ಸಿದ್ಧತೆಗಳ ಅಂಗವಾಗಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ವಿಭಾಗದ ಸಿಬ್ಬಂದಿ, ಯಂತ್ರೋಪಕರಣಗಳು ಹಾಗೂ ತುರ್ತು ಕಾರ್ಯಾಚರಣೆ ತಂಡಗಳ ಸನ್ನದ್ಧತಾ ಕಾರ್ಯಕ್ರಮ ಮತ್ತು ಪರಿಶೀಲನೆ ನಡೆಸಲಾಯಿತು. ಇದರಲ್ಲಿ ಮಳೆಗಾಲದಲ್ಲಿ ಕಾರ್ಯನಿರ್ವಹಿಸುವ ವಿಪತ್ತು ನಿರ್ವಹಣಾ ತಂಡಗಳು ಹಾಗೂ ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆ ಸೇರಿದಂತೆ ವಿವಿಧ ಸಿಬ್ಬಂದಿ ಮತ್ತು ಯಂತ್ರೋಪಕರಣಗಳ ಸನ್ನದ್ಧತೆಯನ್ನು ಪರಿಶೀಲಿಸಲಾಯಿತು ಎಂದು ಪಾಲಿಕೆ ತಿಳಿಸಿದೆ.

ಎನ್‌ಡಿಆರ್‌ಎಫ್ ಕಮಾಂಡರ್ ಅಖಿಲೇಶ್ ಕುಮಾರ್ ಚೌಗಲೆ ಮಾತನಾಡಿ, ಮುಂಗಾರು



ಶೀಘ್ರದಲ್ಲೇ ಕರ್ನಾಟಕ ಹಾಗೂ ಕೇರಳ ರಾಜ್ಯಗಳಿಗೆ ಪ್ರವೇಶಿಸಲಿರುವ ಹಿನ್ನೆಲೆ ತುರ್ತು ರಕ್ಷಣಾ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ. ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ತಲುಪುವ ಮುನ್ನವೇ ಸಾರ್ವಜನಿಕರು ಪ್ರಾಥಮಿಕ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳಿದರು. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿಯಿಂದ ಪ್ರವಾಹ ಮತ್ತು ನೀರಿನಲ್ಲಿ ಮುಳುಗುವ ಅವಘಡಗಳ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ರಕ್ಷಣಾ ಕ್ರಮಗಳ ಕುರಿತು ಪ್ರಾಯೋಗಿಕ ಪ್ರದರ್ಶನ ನಡೆಸಿದರು.

ಸಮನ್ವಯ ಗ್ರೂಪ್ ಮೂಲಕ ತ್ವರಿತ ಕಾರ್ಯಾಚರಣೆ

ಮುಂಗಾರು ಮಳೆಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಯಾವುದೇ ಅಡಚಣೆಯಾಗದಂತೆ ನಗರ ಪಾಲಿಕೆಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಯಾವುದೇ ತುರ್ತು ಪರಿಸ್ಥಿತಿ ಅಥವಾ ಸಮಸ್ಯೆ ಉಂಟಾದಲ್ಲಿ ನಗರಪಾಲಿಕೆ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಮೊಬೈಲ್ ಸಂಖ್ಯೆಗಳನ್ನೊಳಗೊಂಡ ಗುಂಪು ರಚಿಸಿಕೊಂಡು ಪರಸ್ಪರ ಸಮನ್ವಯ ಸಾಧಿಸಿ ತಕ್ಷಣ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಪಾಲಿಕೆ ಸೂಚನೆ ನೀಡಲಾಯಿತು.

ಕನಿಷ್ಠ ವೇತನ ಹೆಚ್ಚಳ: ಟಿ ಎಂ ಶಾಹಿದ್ ಸಂತಸ

• **ಮಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ರಾಜ್ಯದ ವಿವಿಧ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಕನಿಷ್ಠ ವೇತನವನ್ನು ಗಣನೀಯವಾಗಿ ಹೆಚ್ಚಳ (60%) ಮಾಡುವ ಮೂಲಕ ಐತಿಹಾಸಿಕ ಮತ್ತು ಶ್ರಮಿಕ ಸ್ನೇಹಿ ನಿರ್ಧಾರವನ್ನು ಕೈಗೊಂಡಿದ್ದು, ಸರ್ಕಾರದ ಈ ಜನಪರವಾದ ಕ್ರಮದಿಂದಾಗಿ ಇಡೀ ರಾಜ್ಯಾದ್ಯಂತ ಇರುವ ಸುಮಾರು 2 ಕೋಟಿಯಷ್ಟು ಹೆಚ್ಚು ಕಾರ್ಮಿಕರು ಮತ್ತು ಅವರ ಕುಟುಂಬದವರು ನೇರ ಆರ್ಥಿಕ ಸೌಲಭ್ಯ ಹಾಗೂ ಸಾಮಾಜಿಕ ಭದ್ರತೆಯನ್ನು ಪಡೆಯುವಂತಾಗಿದೆ ಸರಕಾರದ ಕಾರ್ಮಿಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ. ಎಂ. ಶಾಹಿದ್ ತೆಕ್ಕಿಲ್ ಹೇಳಿದ್ದಾರೆ.

ಕಿರುಸುದ್ದಿ

ಭಟ್ಕಳ ದುರಂತಕ್ಕೆ ಸಂಸದ ರಾಘವೇಂದ್ರ ಸಂತಾಪ



ಬೈಂದೂರು: ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಪಡುಶಿರಾಲಿಯ ಬೆಂಗ್ರೆಯ ಅಳ್ವೆಕೋಡಿಯಲ್ಲಿ ನದಿಗೆ ಇಳಿದಿದ್ದ ಎಂಟು ಜನ ಅಮಾಯಕರು ಭೀಕರ ದುರಂತಕ್ಕೆ ಸಿಲುಕಿ ಸಾವನ್ನಪ್ಪಿರುವ ಆಘಾತಕಾರಿ ಘಟನೆಗೆ ಸಂಸದ ಬಿ. ವೈ. ರಾಘವೇಂದ್ರ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಕಪ್ಪೆಚಿಪ್ಪು ಆರಿಸಲು ನದಿಗೆ ಇಳಿದಿದ್ದ ಸಂದರ್ಭದಲ್ಲಿ, ತಡರಾತ್ರಿ ಸುರಿದ ಭಾರಿ ಮಳೆಯಿಂದಾಗಿ ನದಿಯಲ್ಲಿ ನೀರಿನ ಹರಿವು ದಿಢೀರನೆ ಹೆಚ್ಚಾಗಿ ಹಾಗೂ ಸಮುದ್ರದ ಅಲೆಗಳ ಅಬ್ಬರದಿಂದ ನೀರಿನ ಮಟ್ಟ ಏರಿಕೆಯಾಗಿ ಈ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದ್ದು, ಘಟನೆಯಲ್ಲಿ ಅಪಾಯದಿಂದ ಪಾರಾಗಿ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಾಗರತ್ನಾ ಮತ್ತು ಮಹಾದೇವಿ ಅವರು ಶೀಘ್ರವಾಗಿ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ. ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಮುಂಗಾರು ಮಳೆಯ ಅಬ್ಬರ ಹೆಚ್ಚಾಗಿರುವುದರಿಂದ ಸಾರ್ವಜನಿಕರು ಹಾಗೂ ನದಿ ಪಾತ್ರದ ನಿವಾಸಿಗಳು ನದಿ, ಹಳ್ಳ-ಕೊಳ್ಳಗಳಿಗೆ ಇಳಿಯುವಾಗ ಹೆಚ್ಚಿನ ಜಾಗರೂಕತೆ ವಹಿಸಬೇಕಾಗಿ ಸಾರ್ವಜನಿಕರಲ್ಲಿ ಸಂಸದರು ವಿನಂತಿದ್ದಾರೆ.

ಮೇ 27 ರಂದು ಪುಷ್ಪಾನಂದ ಫೌಂಡೇಶನ್‌ನಿಂದ 100% ಫಲಿತಾಂಶ ಬಂದ ಶಾಲಾ ಕಾಲೇಜುಗಳಿಗೆ ಅಭಿನಂದನೆ



ಉಡುಪಿ: ಪುಷ್ಪಾನಂದ ಫೌಂಡೇಶನ್ ವತಿಯಿಂದ ಮೇ 27 ರಂದು ಸಂಜೆ 3.30ಕ್ಕೆ ಉಡುಪಿ ಬೀಡಿನಗುಡ್ಡೆ ರಸ್ತೆಯ ಇನ್ಫೋಸಿಸ್ ಯಕ್ಷಗಾನ ಕಲಾರಂಗ ಆಡಿಟೋರಿಯಂನಲ್ಲಿ 2025-26 ಸಾಲಿನ ಎಸ್. ಎಸ್. ಎಲ್. ಸಿ. ಮತ್ತು ದ್ವಿತೀಯ ಪಿಯೂಸಿ ಪರೀಕ್ಷೆಯಲ್ಲಿ 100% ಫಲಿತಾಂಶ ಬಂದ ಉಡುಪಿ ವಿಧಾನಸಭಾ ಕ್ಷೇತ್ರದ ಶಾಲಾ ಕಾಲೇಜುಗಳಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಿರುವುದಾಗಿ ಪುಷ್ಪಾನಂದ ಫೌಂಡೇಶನ್ ಪ್ರವರ್ತಕರಾಗಿರುವ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ತಿಳಿಸಿದ್ದಾರೆ. ಪುಷ್ಪಾನಂದ ಫೌಂಡೇಶನ್ ವತಿಯಿಂದ ನೂರು ಶೇಕಡಾ ಫಲಿತಾಂಶ ಬಂದ 41ಶಾಲಾ ಕಾಲೇಜುಗಳಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಗುವುದು. ಜಿಲ್ಲೆಯ ಶೈಕ್ಷಣಿಕ ಸಾಧನೆಗೆ ವಿಶೇಷ ಮುತುವರ್ಜಿ ವಹಿಸಿದ ಶಿಕ್ಷಣ ಇಲಾಖೆಯ ಪರವಾಗಿ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಗಣ್ಯರ ಉಪಸ್ಥಿತಿಯಲ್ಲಿ ಗೌರವಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಾವಳಿ ಟೆಕ್ನಾಲಜಿಗೆ ಇಂಜಿನಿಯರಿಂಗ್‌ನಲ್ಲಿ ಶೇ.100 ಫಲಿತಾಂಶ

ಮಂಗಳೂರು: ನಗರದ ನೀರುಮಾರ್ಗದಲ್ಲಿರುವ ಪ್ರತಿಷ್ಠಿತ ಕರಾವಳಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಮೇ2026 ರಲ್ಲಿ ವಿಶ್ವೇಶ್ವರೈಯ್ಯತಾಂತ್ರಿಕ ವಿಶ್ವವಿದ್ಯಾನಿಲಯ ನಡೆಸಿದ ಅಂತಿಮ ವರ್ಷದ8ನೇ ಸೆಮಿಸ್ಟರ್ ಬಿ.ಇ ಕಂಪ್ಯೂಟರ್ ಸೈನ್ಸ್-ಇಂಜಿನಿಯರಿಂಗ್, ಬಿ.ಇಆರ್ಟಿಫಿಶಿಯಲ್‌ಇನ್ ಟೆಲಿಜೆನ್ಸ್-ಮೆಷಿನ್ ಲರ್ನಿಂಗ್‌ಮತ್ತುಬಿ.ಇ ಏರೋನಾಟಿಕಲ್ ಇಂಜಿನಿಯರಿಂಗ್‌ಪದವಿ ಪರೀಕ್ಷೆಗಳಲ್ಲಿ ಶೇಕಡಾ100 ಫಲಿತಾಂಶದೊಂದಿಗೆ ಅತ್ಯುತ್ತಮ ಸಾಧನೆ ಮಾಡಿದೆ. ಬಿ.ಇ ಕಂಪ್ಯೂಟರ್ ಸೈನ್ಸ್‌ನಲ್ಲಿ ಶೇಕಡಾ100 ಫಲಿತಾಂಶ ಬಂದಿದ್ದು, ಶೇಕಡಾ100 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ಬಿ.ಇ ಆರ್ಟಿಫಿಶಿಯಲ್ ಇನ್ ಟೆಲಿಜೆನ್ಸ್-ಮೆಷಿನ್ ಲರ್ನಿಂಗ್‌ನಲ್ಲಿ ಶೇಕಡಾ100 ಫಲಿತಾಂಶ ಬಂದಿದ್ದು, ಶೇಕಡಾ100 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿರುತ್ತಾರೆ, ಹಾಗೂಬಿ.ಇ ಏರೋನಾಟಿಕಲ್ ಇಂಜಿನಿಯರಿಂಗ್‌ಪದವಿ ಪರೀಕ್ಷೆಗಳಲ್ಲಿ ಶೇಕಡಾ100 ಫಲಿತಾಂಶ ಬಂದಿದ್ದು, ಶೇಕಡಾ 100 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿವೇಕಾನಂದ ಕಾಲೇಜಿನ ಪ್ರಾಧ್ಯಾಪಕಿ ಡಾ. ದುರ್ಗಾರತ್ನರಿಗೆ 6ನೇ ರಾಂಕ್



ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನ (ಸ್ವಾಯತ್ತ) ಹಿಂದಿ ವಿಭಾಗದ ಮುಖ್ಯಸ್ಥೆ ಡಾ.ದುರ್ಗಾರತ್ನ ಅವರು ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯು ನಡೆಸಿದ ಪ್ರಾಕೃತ ಪ್ರವೇಶ ಪರೀಕ್ಷೆಯಲ್ಲಿ 6ನೇ ರ್‍ಯಾಂಕ್ ಗಳಿಸಿದ್ದಾರೆ. ಅವರು ಬನ್ನೂರು ಗ್ರಾಮದ ನೆಕ್ಕಿಲ ನಿವಾಸಿ ಕೃಷಿಕ ರವಿಶಂಕರ್ ಅವರ ಪತ್ನಿ.



ಸವಣೂರು ವಿದ್ಯಾರಶ್ಮಿ ವಿದ್ಯಾಲಯದ ಸಂಚಾಲಕ-ಸಹಕಾರಿ ಧುರೀಣ ಕೆ. ಸೀತಾರಾಮ ರೈ ಸವಣೂರು ಹಾಗೂ ಕಸ್ತೂರಿಕಲಾ ಎಸ್. ರೈ ಅವರ ಮದುವೆಯ 50ನೇ ವಾರ್ಷಿಕೋತ್ಸವ ಸಂಭ್ರಮದ ಪ್ರಯುಕ್ತ ಸವಣೂರಿನ ರಶ್ಮಿನಿವಾಸದಲ್ಲಿ ನಡೆದ ಸೀತಾ-ಕಸ್ತೂರಿ ಕಲ್ಯಾಣ 50ರ ಸಂಭ್ರಮದಲ್ಲಿ ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ ಹಾಗೂ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಪಾಲ್ಗೊಂಡು ಶುಭ ಹಾರೈಸಿದರು. ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ, ಮಂಗಳೂರು ಲಕ್ಷ್ಮೀ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್ ಸಂಸ್ಥಾಪಕ ಡಾ.ಎ.ಜೆ.ಶೆಟ್ಟಿ, ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ, ಪಟ್ಲ ಸತೀಶ್ ಶೆಟ್ಟಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಒಡೆಯರಿಲ್ಲದ ವೇಳೆ ಮನೆಗೆ ನುಗ್ಗಿ ಒಡವೆ, ನಗದು ಹಣ ಎಗರಿಸಿದ ಕಳ್ಳರು

ಕುಂದಾಪುರ: ತಾಲೂಕಿನ ವಂಡ್ಸೆ ಸಮೀಪದ ಕರ್ಕುಂಜೆ ಗ್ರಾಮದ ನೆಂಪು ಎಂಬಲ್ಲಿನ ಮನೆಯಲ್ಲಿ ಯಾರೂ ಇಲ್ಲದ ವೇಳೆ ಮನೆಯ ಮುಂಭಾಗದ ಮುಖ್ಯ ದ್ವಾರದ ಬಾಗಿಲು ಒಡೆದು ಒಳಪ್ರವೇಶಿಸಿದ ಕಳ್ಳರು ಅಪಾರ ಪ್ರಮಾಣದ ಚಿನ್ನ, ಬೆಳ್ಳಿ ಹಾಗೂ ಲಕ್ಷ ರೂ. ನಗದನ್ನು ಕಳ್ಳತನ ಮಾಡಿದ ಪ್ರಕರಣ ಮೇ 23ರಂದು ರಾತ್ರಿ ಬೆಳಕಿಗೆ ಬಂದಿದೆ.

ರೋಬೋಸಾಫ್ಟ್ ಕಂಪೆನಿಯಲ್ಲಿ ಪ್ರೋಗ್ರಾಂ ಹೆಡ್ ಆಗಿರುವ ನಿರಂಜನ್ ಭಟ್ ಎನ್ನುವವರ ಮನೆಯಲ್ಲಿ ಕಳ್ಳತನ ಕೃತ್ಯ ನಡೆದಿದೆ. ಮೇ 23 ರಂದು ಬೆಳಿಗ್ಗೆ ಹೊತ್ತಿಗೆ ಮನೆಗೆ ಬೀಗ ಹಾಕಿ ಪತ್ನಿ, ಮಕ್ಕಳೊಂದಿಗೆ ಉಡುಪಿಗೆ ಹೋಗಿದ್ದ ಅವರು ಉಡುಪಿಯಲ್ಲಿ ಕೆಲಸ ಮುಗಿಸಿಕೊಂಡು ರಾತ್ರಿ ಮನೆಗೆ ಬಂದಾಗ ಮುಂಬಾಗಿಲಿನ ಬೀಗ ಮುರಿದಿರುವುದು ಕಂಡು ಬಂದಿದೆ. ಒಳಗಡೆಯ ಬೆಡ್ ರೂಮ್ ಬೀಗವನ್ನು ಒಡೆದಿದ್ದು ರೂಮಿನಲ್ಲಿದ್ದ ಕಬ್ಬಿಣದ ಅಲ್ಮೇರಾ ಹಾಗೂ ಇನ್ನೊಂದು ಮರದ ಅಲ್ಮೇರಾದ ಬೀಗವನ್ನು ಒಡೆದು ಅದರಲ್ಲಿದ್ದ ಚಿನ್ನದ ಕಿವಿ ಓಲೆಗಳು, ನೆಕ್ಲೇಸ್‌ಗಳು, ಪೆಂಡೆಂಟ್, ತುಳಸಿ ಮಣಿ ಸರ, ಚಿನ್ನದ ರುದ್ರಾಕ್ಷಿ ಮಾಲೆ, ಚಿನ್ನದ ಸರ, ಉಂಗುರಗಳು, ಬಳೆಗಳು, ಬ್ರಾಸ್ಲೆಟ್ ಸಹಿತ 18 ಲಕ್ಷ 42 ಸಾವಿರ ಮೌಲ್ಯದ 308 ಗ್ರಾಂ ಚಿನ್ನದ ಆಭರಣಗಳು ಹಾಗೂ ಬೆಳ್ಳಿಯ ಹರಿವಾಣ, ಕವಳಿಗೆ ಸೌಟು, ನಾಣ್ಯಗಳು, ದೀಪಗಳು, ಲೋಟ, ಬೆಳ್ಳಿಯ ಬುಟ್ಟಿಗಳು, ಶಂಖ ಸಹಿತ ಒಟ್ಟು 2 ಕೆಜಿಯ 3 ಲಕ್ಷ ರೂ. ಮೌಲ್ಯದ ಬೆಳ್ಳಿ ಸಾಮಾಗ್ರಿಗಳು, ಚಿಲ್ಲರೆ ಸಹಿತ 1 ಲಕ್ಷ ರೂ. ನಗದು ಕಳವಾಗಿದ್ದು ಎಲ್ಲದರ ಒಟ್ಟು ಮೌಲ್ಯ 22 ಲಕ್ಷ 42 ಸಾವಿರ ಆಗಿದೆ.

- ಉಡುಪಿಯಲ್ಲಿ ಕೆಲಸ ಮುಗಿಸಿಕೊಂಡು ರಾತ್ರಿ ಮನೆಗೆ ಬಂದಾಗ ಮುಂಬಾಗಿಲಿನ ಬೀಗ ಮುರಿದಿರುವುದು ಕಂಡು ಬಂದಿದೆ.
- ಕಳವಾದ ಒಟ್ಟು ಮೌಲ್ಯ 22 ಲಕ್ಷ 42 ಸಾವಿರ ಆಗಿದೆ.

ಪೊಲೀಸರ ತಂಡ, ಶ್ವಾನದಳ, ಸೋಕೋ ತಂಡ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ನಿರಂಜನ್ ಅವರು ನೀಡಿದ ದೂರಿನಂತೆ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ

ಮಹಿಳಾ ದೌರ್ಜನ್ಯ ಸಂಖ್ಯೆ ಶೂನ್ಯವಾಗಲಿ

ಉಡುಪಿ: ಜಿಲ್ಲೆಯಲ್ಲಿ ಸರ್ಕಾರಿ, ಖಾಸಗಿ ಸೇರಿದಂತೆ ಇತರೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಕೆಲಸದ ಸ್ಥಳಗಳಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸುವುದರೊಂದಿಗೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಶೂನ್ಯವಾಗಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಹೇಳಿದರು.

ಅವರು ಸೋಮವಾರ ನಗರದ ಮಣಿಪಾಲ ರಜತಾದ್ರಿಯ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರಕ್ಷಕ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಡುಪಿ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ಸ್ಥಳೀಯ ಹಾಗೂ ಆಂತರಿಕ ದೂರು ನಿವಾರಣಾ ಸಮಿತಿ ಸದಸ್ಯರಿಗೆ ನಡೆದ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ - 2013 (POSH ACT) ರ ಕುರಿತ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.



ಗೌರವ ಯುತ ವಾತಾವರಣ ನಿರ್ಮಾಣ

ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಗೌರವ ಯುತ ವಾತಾವರಣ ನಿರ್ಮಾಣವಾಗಬೇಕು. ಮಹಿಳೆಯರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಭಯಮುಕ್ತ ವಾತಾವರಣದಲ್ಲಿ ಕೆಲಸ ನಿರ್ವಹಿಸಿದ್ದಲ್ಲಿ ತಮ್ಮ ಒತ್ತಡವನ್ನು ಕುಟುಂಬದವರ ಮೇಲೆ ಹೇರುವುದಿಲ್ಲ. ಇದರಿಂದ ಕುಟುಂಬ ಹಾಗೂ ಕೆಲಸ ಎರಡನ್ನೂ ಖುಷಿಯಿಂದ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗಲಿದೆ. POSH ಅಧಿನಿಯಮವು ಕೇವಲ ಕಡತದಲ್ಲಷ್ಟೇ ಸೀಮಿತವಾಗಿರದೇ ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ ಎಂದರು.

ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ಮತ್ತು ಗೌರವಯುತ ವಾತಾವರಣ ಕಲ್ಪಿಸುವುದರೊಂದಿಗೆ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟುವುದು ಈ ಕಾಯಿದೆಯ ಮೂಲ ಉದ್ದೇಶವಾಗಿದೆ. ಪ್ರತಿ ಇಲಾಖೆ ಮತ್ತು ಖಾಸಗಿ ಸಂಸ್ಥೆಗಳು ಕಡ್ಡಾಯವಾಗಿ ಆಂತರಿಕ ದೂರು ನಿವಾರಣಾ ಸಮಿತಿಯನ್ನು ರಚಿಸಿ, ದೂರುಗಳನ್ನು ಗೌಪ್ಯವಾಗಿ ಸ್ವೀಕರಿಸಲು She-Box ಅನ್ನು ಪರಿಣಾಮಕಾರಿಯಾಗಿ ಬಳಸಬೇಕು ಎಂದರು.

ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದಂತೆ ಇಂತಹ ತರಬೇತಿ ಕಾರ್ಯಾಗಾರಗಳು ಮಹಿಳಾ ಉದ್ಯೋಗಿಗಳ ಹಕ್ಕುಗಳನ್ನು ರಕ್ಷಿಸುವುದರೊಂದಿಗೆ ಕೆಲಸದ ಸ್ಥಳದಲ್ಲಿ ಸಮಾನತೆಯನ್ನು ಒದಗಿಸುತ್ತದೆ ಎಂದ ಅವರು, ಪ್ರತಿಯೊಬ್ಬ ಮಹಿಳೆಯು ತಮ್ಮ ರಕ್ಷಣೆಗಾಗಿ ಜಾರಿಗೊಳಿಸಲಾದ ಕಾಯಿದೆ ಹಾಗೂ ಕಾನೂನಿನ ಬಗ್ಗೆ ಅರಿವು ಹೊಂದಿರಬೇಕು ಎಂದರು.

ಅಧಿಕಾರಿಗಳಲ್ಲಿ ಸಮನ್ವಯವಿರಲಿ

ಜಿಲ್ಲೆಯಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಎಲ್ಲ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ದಾಖಲಾದಲ್ಲಿ ಅವುಗಳಿಗೆ ತಕ್ಷಣವೇ ಸ್ಪಂದಿಸಿ, ಸೂಕ್ತ ಕಾನೂನು ನೆರವು ಒದಗಿಸಬೇಕು ಎಂದರು.

> ಜಿಲ್ಲೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ. ಶೈಕ್ಷಣಿಕವಾಗಿ ಮುಂಚೂಣಿಯಲ್ಲಿರುವ ಉಡುಪಿ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳಿಗೆ ಆಸ್ಪದ ನೀಡಬಾರದು. ಯಾವುದೇ ಹೆಣ್ಣುಮಗಳು ತನ್ನ ಕೆಲಸದ ಸ್ಥಳದಲ್ಲಿ ದೌರ್ಜನ್ಯ ನಡೆದಾಗ ದೂರು ನೀಡಲು ಹಿಂಜರಿಯಬಾರದು. ಈ ಕಾಯಿದೆಯನ್ನು ಅನುಷ್ಠಾನ ಮಾಡುವಲ್ಲಿ ಎಲ್ಲಾ ಅಧಿಕಾರಿಗಳ ಪಾತ್ರ ಮಹತ್ವದಾಗಿದ್ದು, ಕಾಯ್ದೆಯ ಅನುಷ್ಠಾನದಲ್ಲಿ ಎಡವದೇ ಅಧಿಕಾರಿಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು
>
> ■ ಡಾ. ನಾಗಲಕ್ಷ್ಮೀ ಚೌಧರಿ

ಜನರಲ್ಲಿ ಅರಿವು ಮೂಡಿಸಿ

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಮಾತನಾಡಿ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ - 2013 ಕುರಿತು ಜನರಲ್ಲಿ ಅರಿವು ಕಡಿಮೆ ಇದೆ. ಸಮಿತಿಗೆ ದೂರು ಬಂದಾಗ ಅದನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು ಎಂಬ ಅರಿವು ಸಮಿತಿಯ ಸದಸ್ಯರುಗಳಿಗೆ ಇರಬೇಕು. ಕಾಯಿದೆಯ ಕುರಿತು ತರಬೇತಿಯಲ್ಲಿ ಪಡೆದ ಮಾಹಿತಿಯನ್ನು ತಳಮಟ್ಟದಲ್ಲಿ ಅನುಷ್ಠಾನ ಮಾಡುವುದರೊಂದಿಗೆ ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ರಕ್ಷಣೆಯ ವಾತಾವರಣ ದೊರಕುವಂತಾಗಬೇಕು ಎಂದರು.

ಸವಿಸ್ತಾರ ಮಾಹಿತಿ ನೀಡಿಕೆ

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಆಯಿಶಾ ಸಿಂಗ್ ಅವರು, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ - 2013 ಅಡಿ ಸ್ಥಳೀಯ ದೂರು ಸಮಿತಿ (ಎಲ್.ಸಿ.ಸಿ) ಮತ್ತು ಆಂತರಿಕ ದೂರು ಸಮಿತಿ (ಐ.ಸಿ.ಸಿ) ಯ ರಚನೆ, ಕಾರ್ಯನಿರ್ವಹಣೆ, She.Box ಪೋರ್ಟಲ್ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಜಿಲ್ಲಾ ಕಾರ್ಮಿಕ ಅಧಿಕಾರಿ ಕಮಲ್ ಷಾ ಅಲ್ತಾಫ್ ಅಹಮದ್, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ಸ್ಥಳೀಯ ಹಾಗೂ ಆಂತರಿಕ ದೂರು ನಿವಾರಣಾ ಸಮಿತಿ ಸದಸ್ಯರುಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಅನುರಾಧ ಬಿ ಹಾದಿಮನೆ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿ, ಮಹಿಳಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ನಿರೀಕ್ಷಕಿ ಸಂಗೀತ ಎಂ.ಕೆ ನಿರೂಪಿಸಿ, ವಂದಿಸಿದರು.

ಕಾಸರಗೋಡು ಜಿಲ್ಲೆಯ ಲ್ಲಿ ಆಪರೇಷನ್ ಸ್ಮೈಲ್ ಯೋಜನೆ

ಎಲ್ಲಾ ಪರಿಶಿಷ್ಟ ಪಂಗಡಗಳಿಗೆ

ಕಾಸರಗೋಡು: ಜಿಲ್ಲೆಯ ಪರಿಶಿಷ್ಟ ಪಂಗಡಗಳಿಗೂ ಹಲವು ವರ್ಷಗಳಿಂದ ಕಾಡುತ್ತಿದ್ದ ಭೂ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕಾಸರಗೋಡು ಜಿಲ್ಲಾಡಳಿತದ 'ಆಪರೇಷನ್ ಸ್ಮೈಲ್' ಯೋಜನೆಯು ಜಿಲ್ಲೆಯ ಎಲ್ಲಾ ಪರಿಶಿಷ್ಟ ಪಂಗಡಗಳಿಗೂ ವಿಸ್ತರಿಸಲು ಜಿಲ್ಲಾಡಳಿತ ಕ್ರಮ ಆರಂಭಿಸಿದೆ.

ಪರಿಶಿಷ್ಟಸಮುದಾಯಗಳಭೂಮಾಲಿಕತ್ವದ ಹಕ್ಕುಗಳನ್ನು ಖಚಿತಪಡಿಸಿ ಕೊಳ್ಳಲು ಹಿಂದಿನ ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರು ಪ್ರಾರಂಭಿಸಿದ ಈ ಯೋಜನೆಯನ್ನು ಪ್ರಸ್ತುತ ಜಿಲ್ಲಾಧಿಕಾರಿ ಅರ್ಜುನ್ ಪಾಂಡಿಯನ್ ಅವರ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಪರಿಶಿಷ್ಟ ಪಂಗಡಗಳಿಗೂ ವಿಸ್ತರಿಸಲಾಗುತ್ತಿದೆ. ಯೋಜನೆಯ ಸುಗಮ ಅನುಷ್ಠಾನಕ್ಕಾಗಿ ಚಟುವಟಿಕೆಗಳನ್ನು ನಿರ್ಣಯಿಸಲು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ವಿಶೇಷ ಪರಿಶೀಲನಾ ಸಭೆಗಳನ್ನು ನಡೆಸಲಾಯಿತು. ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ ಮತ್ತು ಸರ್ವೇ ಇಲಾಖೆ ಜಂಟಿಯಾಗಿ ಈ ಯೋಜನೆಯನ್ನು ಮುನ್ನಡೆಸುತ್ತಿವೆ.

ಜಿಲ್ಲೆಯ ಒಟ್ಟು 83,867 ಪರಿಶಿಷ್ಟ ಪಂಗಡ ಜನಸಂಖ್ಯೆಯಲ್ಲಿ 1,255 ಜನರನ್ನು ಆಪರೇಷನ್ ಸ್ಮೈಲ್ ಯೋಜನೆಯ ಫಲಾನುಭವಿಗಳಾಗಿ ಪಟ್ಟಿ ಮಾಡಲಾಗಿದೆ. ಈ ಪೈಕಿ 745 ಮಂದಿ ಪರಪ್ಪ ಪರಿಶಿಷ್ಟ ಪಂಗಡ ಅಭಿವೃದ್ಧಿ ಕಚೇರಿಯಡಿಯಲ್ಲಿ ಮತ್ತು 511 ಜನರು ಕಾಸರಗೋಡು ಪರಿಶಿಷ್ಟ ಪಂಗಡ ಅಭಿವೃದ್ಧಿ ಕಚೇರಿಯಡಿಯಲ್ಲಿ ಇರುತ್ತಾರೆ. ಇದುವರೆಗೆ 262 ಪರಿಶಿಷ್ಟ ಪಂಗಡಗಳಿಗೆ ಯೋಜನೆಯಡಿಯಲ್ಲಿ ಭೂ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಆಪರೇಷನ್ ಸ್ಮೈಲ್‌ನ ಮೊದಲ ಹಂತದಲ್ಲಿ ಕಾಸರಗೋಡು ಮತ್ತು ಮಂಜೇಶ್ವರ ತಾಲೂಕುಗಳಲ್ಲಿ ಕೊರಗ ಬುಡಕಟ್ಟು ಜನಾಂಗದವರಿಗೆ ಭೂ ಹಕ್ಕುಪತ್ರಗಳನ್ನು ವಿತರಿಸಲಾಯಿತು. ಕಾಸರಗೋಡು ಮತ್ತು ಮಂಜೇಶ್ವರ ತಾಲೂಕುಗಳಲ್ಲಿ 539 ಕುಟುಂಬಗಳಲ್ಲಿ 1,706 ಬುಡಕಟ್ಟು ಜನಾಂಗದವರು ವಾಸಿಸುತ್ತಿದ್ದಾರೆ.

- ಜಿಲ್ಲೆಯ ಒಟ್ಟು 83,867 ಪರಿಶಿಷ್ಟ ಪಂಗಡ ಜನಸಂಖ್ಯೆಯಲ್ಲಿ 1,255 ಜನರನ್ನು ಆಪರೇಷನ್ ಸ್ಮೈಲ್ ಯೋಜನೆಯ ಫಲಾನುಭವಿಗಳಾಗಿ ಪಟ್ಟಿ ಮಾಡಲಾಗಿದೆ.

ಯೋಜನೆಯ ಭಾಗವಾಗಿ ಇಲ್ಲಿಯವರೆಗೆ 560 ಕೊರಗ ಕುಟುಂಬಗಳ ಭೂಮಿಯನ್ನು ಸಮೀಕ್ಷೆ ಮಾಡಲಾಗಿದೆ. ಈ ಪೈಕಿ 262 ಕುಟುಂಬಗಳಿಗೆ ಈಗಾಗಲೇ ಪಟ್ಟಾ ನೀಡಲಾಗಿದೆ. 158 ಕುಟುಂಬಗಳ ಹಕ್ಕುಪತ್ರಗಳನ್ನು ಹೊಂದಿರುವ ಭೂಮಿಯನ್ನು ಅಳತೆ ಮಾಡಿ ಮೌಲ್ಯಮಾಪನ ಮಾಡಲಾಗಿದೆ. 147 ಕುಟುಂಬಗಳು ಪಟ್ಟಾಕ್ಕಾಗಿ ಅರ್ಜಿಗಳನ್ನು ಸಲ್ಲಿಸಿವೆ. 17 ಫಲಾನುಭವಿಗಳಿಗೆಪ್ರಮಾಣೀಕೃತ ಪ್ರತಿಗಳನ್ನು ಒದಗಿಸಲಾಗಿದೆ. ಕಾಸರಗೋಡು ಮತ್ತು ಮಂಜೇಶ್ವರ ತಾಲೂಕುಗಳಲ್ಲಿನ 59 ವಸಾಹತುಗಳಲ್ಲಿ ಹರಡಿರುವ 478 ಎಕರೆ ಭೂಮಿಯಲ್ಲಿ ಪ್ರಸ್ತುತ ಈ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಈ ಯೋಜನೆಯ ದೊಡ್ಡ ವೈಶಿಷ್ಟ್ಯವೆಂದರೆ ಭೂಮಿಯ ಮಾಲಿಕತ್ವ ದೃಢಪಟ್ಟ ನಂತರ ವಸತಿ ಯೋಜನೆಗಳು ಸೇರಿದಂತೆ ಎಲ್ಲಾ ಸರ್ಕಾರಿ ಸವಲತ್ತುಗಳು ಈ ವಿಭಾಗಗಳಿಗೆ ಯಾವುದೇ ಅಡೆತಡೆಯಿಲ್ಲದೆ ಲಭ್ಯವಿರುತ್ತವೆ.

ಜಿಲ್ಲಾಧಿಕಾರಿ ಅರ್ಜುನ್ ಪಾಂಡಿಯನ್, ಉಪ ಜಿಲ್ಲಾಧಿಕಾರಿ ಲಿಪು ಎಸ್. ಲಾರೆನ್ಸ್, ಸರ್ವೇ ಉಪ ನಿರ್ದೇಶಕ ಟಿ.ಶ್ರೀಕುಮಾರ್, ಕಾಸರಗೋಡು ಟಿಡಿಒ ಕೆ.ವಿ.ರಾಘವನ್, ಪರಪ್ಪ ಟಿಡಿಒ ಅಯ್ಯಪ್ಪನ್ ಮತ್ತು ಮುಖ್ಯ ಸರ್ವೇಯರ್ ಸಂತೋಷ್‌ಕುಮಾರ್ ಅವರ ನೇತೃತ್ವದಲ್ಲಿ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.

ಕೆಂಜಾಳ ತಿರುವಿನಲ್ಲಿ ಭೀಕರ ಅಪಘಾತ

ಮಹಿಳೆ ಸಾವು; ಮಗು ಗಂಭೀರ



ಕಡಬ: ಸುಬ್ರಹ್ಮಣ್ಯ-ಗುಂಡ್ಯ ರಸ್ತೆಯ ಕೊಂಬಾರು ಗ್ರಾಮದ ಕೆಂಜಾಳ ತಿರುವಿನಲ್ಲಿ ಸುಬ್ರಹ್ಮಣ್ಯದಿಂದ ಬೆಂಗಳೂರಿನತ್ತ ತೆರಳುತ್ತಿದ್ದ ಟೆಂಪೋ ಟ್ರಾವೆಲರ್‌ಗೆ ಧರ್ಮಸ್ಥಳದಿಂದ ಸುಬ್ರಹ್ಮಣ್ಯದತ್ತ ತೆರಳುತ್ತಿದ್ದ ಕೆಎಸ್ಆರ್‌ಟಿಸಿ ಬಸ್ ಡಿಕ್ಕಿಯಾದ ಪರಿಣಾಮ ಟೆಂಪೋ ಟ್ರಾವೆಲರ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೋರ್ವರು ಸ್ಥಳದಲ್ಲೇ ಮೃತಪಟ್ಟ ಘಟನೆ ಸೋಮವಾರ (ಮೇ 25) ಮಧ್ಯಾಹ್ನ ಸಂಭವಿಸಿದೆ.

ಚಿಕ್ಕಬಳ್ಳಾಪುರ ತಾಲೂಕಿನ ಕೆರೆ ಸಂದ್ರ ಹೋಬಳಿ ಶೆಟ್ಟಿಗೆರೆ ಮನೆ ನಿವಾಸಿ ವೆಂಕಟೇಶಪ್ಪ ಅವರ ಪತ್ನಿ ಅಂಜನಮ್ಮ (47) ಮೃತಪಟ್ಟವರು. ನರಸಿಂಹಯ್ಯ ವಿ. (50), ಮಂಜುನಾಥ ವಿ. (37), ಗಂಗಾಧರ (42), ಪವಿತ್ರಾ (35), ನಯನಿಕಾ (5), ಸಿರಿಪ್ರಿಯಾ (7), ರತ್ನಮ್ಮ (65) ಎಂಬವರು ಗಾಯಗೊಂಡಿದ್ದು, ಆ ಪೈಕಿ ನಯನಿಕಾ ಸ್ಥಿತಿ ಗಂಭೀರವಾಗಿದ್ದು, ಗಾಯಾಳುಗಳನ್ನು ಪುತ್ತೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಸುಬ್ರಹ್ಮಣ್ಯದಲ್ಲಿ ಪೂಜೆ ಸಲ್ಲಿಸಿ ಹಿಂದಿರುಗುತ್ತಿದ್ದ ಯಾತ್ರಿಕರು

ಬೆಂಗಳೂರು ದೇವನಹಳ್ಳಿ ಮೂಲದ ನರಸಿಂಹಯ್ಯ ವಿ. ಅವರು ಕುಟುಂಬ ಸಮೇತ ತಮ್ಮ ಸಂಬಂಧಿಕರದೇ ಆದ ತಿಂಗಳ ಹಿಂದಷ್ಟೇ ಖರೀದಿಸಿದ್ದ ಹೊಸ ಟೆಂಪೋ ಟ್ರಾವೆಲರ್‌ನಲ್ಲಿ ಕುಕ್ಕೆಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪೂಜೆ ಸಲ್ಲಿಸಿ ಹಿಂದಿರುಗುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ದೇವನಹಳ್ಳಿಯಿಂದ ಹೊರಟಿದ್ದ ಅವರು ಶೃಂಗೇರಿ, ಹೊರನಾಡು, ಧರ್ಮಸ್ಥಳ ಯಾತ್ರೆ ಮುಗಿಸಿ ಭಾನುವಾರ ಧರ್ಮಸ್ಥಳದಲ್ಲಿ ತಂಗಿದ್ದರು. ಸೋಮವಾರ ಬೆಳಗ್ಗೆ ಧರ್ಮಸ್ಥಳದಿಂದ ಹೊರಟು ಸೌತಡ್ಕ ದೇವಸ್ಥಾನದಲ್ಲಿ ದೇವರ ದರ್ಶನ ಪಡೆದು ಬಳಿಕ ಸುಬ್ರಹ್ಮಣ್ಯಕ್ಕೆ ಆಗಮಿಸಿದ್ದರು. ಸುಬ್ರಹ್ಮಣ್ಯದಲ್ಲಿ ದೇವರ ದರ್ಶನ ಪಡೆದು ಅನ್ನಪ್ರಸಾದ ಸ್ವೀಕರಿಸಿ ಊರಿಗೆ ಹಿಂದಿರುಗುತ್ತಿದ್ದಾಗ ದುರ್ಘಟನೆ ನಡೆದಿದೆ.

ಅಪಾಯಕಾರಿ ತಿರುವು

ಅಪಘಾತ ಸಂಭವಿಸಿರುವ ಕೆಂಜಾಳ ಅಪಾಯಕಾರಿ ತಿರುವಿನಲ್ಲಿ ದಿನನಿತ್ಯ ಎಂಬಂತೆ ವಾಹನ ಅಪಘಾತಗಳು ಸಂಭವಿಸುತ್ತಿದ್ದು, ಅಲ್ಲಿ ಎಚ್ಚರಿಕೆಯ ಫಲಕಗಳನ್ನು ಅಳವಡಿಸಿದ್ದರೂ ವಾಹನ ಚಾಲಕರು ಗಣನೆಗೆ ತೆಗೆದುಕೊಳ್ಳದೇ ನಿರ್ಲಕ್ಷ್ಯದ ಚಾಲನೆ ಮಾಡುತ್ತಿರುವುದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಕಡಬ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರತಿಷ್ಠಿತ ರೋಹನ್ ಕಾರ್ಪೊರೇಷನ್ ನೇತೃತ್ವದಲ್ಲಿ 'ಇವಿನಿಂಗ್ ಆಫ್ ಗ್ರ್ಯಾಟಿಟ್ಯೂಡ್ 2026'' ವಿಶೇಷ ಕಾರ್ಯಕ್ರಮ | ಆರೋಗ್ಯ ಸೇವೆಗೆ ಸಾಥ್

ವೆನ್ಲಾಕ್ ಆಸ್ಪತ್ರೆಗೆ 10 ಲಕ್ಷಕ್ಕೂ ಅಧಿಕ ಮೌಲ್ಯದ ಆರೋಗ್ಯ ಸೇವಾ ನೆರವು

ಮಂಗಳೂರು: ಮಂಗಳೂರಿನ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಡೆವಲಪರ್‌ಗಳಲ್ಲಿ ಒಂದಾದ ರೋಹನ್ ಕಾರ್ಪೊರೇಷನ್ ವತಯಿಂದ ಶನಿವಾರ ಮಂಗಳೂರಿನಲ್ಲಿ ನಡೆದ 'ಇವಿನಿಂಗ್ ಆಫ್ ಗ್ರ್ಯಾಟಿಟ್ಯೂಡ್ 2026'' ಎಂಬ ವಿಶೇಷ ಕಾರ್ಯಕ್ರಮ ನಡೆಯಿತು.

ಈ ಸಂದರ್ಭ ರೋಹನ್ ಕಾರ್ಪೊರೇಷನ್ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಯಡಿ ಮಂಗಳೂರಿನ ವೆನ್ಲಾಕ್ ಜಿಲ್ಲಾ ಆಸ್ಪತ್ರೆಗೆ 10 ಲಕ್ಷಕ್ಕೂ ಅಧಿಕ ಮೌಲ್ಯದ ಆರೋಗ್ಯ ಸೇವಾ ನೆರವನ್ನು ನೀಡುವ ಮೂಲಕ ಸೇವಾ ಬದ್ಧತೆ ಮೆರೆಯಿತು. ಇದರ ಭಾಗವಾಗಿ ಮಲ್ಟಿ ಪ್ಯಾರಾ ಮಾನಿಟರ್‌ಗಳು ಹಾಗೂ ನೇತ್ರ ಚಿಕಿತ್ಸೆಗೆ ಅಗತ್ಯವಾದ ಆಫ್ತಾಲ್ಮಿಕ್ ಹೊರರೋಗಿ ವಿಭಾಗ ಘಟಕವನ್ನು ಹಸ್ತಾಂತರಿಸಿ ಸಾರ್ವಜನಿಕ ಆರೋಗ್ಯ ಸೇವೆಯನ್ನು ಮತ್ತಷ್ಟು ಬಲಪಡಿಸುವ ಕಾರ್ಯ ರೋಹನ್ ಕಾರ್ಪೊರೇಶನ್ ಕೈಜೋಡಿಸಿತು. ಚಾನೆಲ್ ಪಾರ್ಟ್‌ನರ್‌ಗಳು, ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ಒಂದೇ ವೇದಿಕೆಗೆ ತಂದ ಈ ಕಾರ್ಯಕ್ರಮವು ಸಹಭಾಗಿತ್ವದ ಮೌಲ್ಯ, ಸಾಮಾಜಿಕ ಬದ್ಧತೆ ಹಾಗೂ ಮಂಗಳೂರಿನ ಭವಿಷ್ಯದ ಬೆಳವಣಿಗೆಯ ಕುರಿತ ಸಮಗ್ರ ದೃಷ್ಟಿಕೋನವನ್ನು ಅನಾವರಣಗೊಳಿಸಿತು.

ಎಂಎಲ್‌ಸಿ ಐವನ್ ಡಿಸೋಜ ಮುಖ್ಯ ಅತಿಥಿಯಾಗಿದ್ದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ.ರೋಹನ್ ಮೊಂತೇರೊ ಮತ್ತು ನಿರ್ದೇಶಕರಾದ ಡಿಯೋನ್ ಮೊಂತೇರೊ ಉಪಸ್ಥಿತರಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಐವನ್ ಡಿಸೋಜ, ಮಂಗಳೂರು ಇಂದು ಅವಕಾಶಗಳ, ಅಭಿವೃದ್ಧಿಯ ಮತ್ತು ಮಹತ್ವಾಕಾಂಕ್ಷೆಗಳ ನಗರವಾಗಿ ಹೊಸ ಹೆಜ್ಜೆ ಇಡುತ್ತಿದೆ. ಈ ಪರಿವರ್ತನೆಯನ್ನು ರೂಪಿಸುವಲ್ಲಿ ರೋಹನ್ ಕಾರ್ಪೊರೇಶನ್‌ನಂತಹ ಜವಾಬ್ದಾರಿಯುತ ಡೆವಲಪರ್‌ಗಳ ಪಾತ್ರ ನಿಜವಾಗಿಯೂ ಶ್ಲಾಘನೀಯ ಎಂದರು.

ರೋಹನ್ ಕಾರ್ಪೊರೇಷನ್‌ನ ನಿರ್ದೇಶಕ ಡಿಯೋನ್ ಮೊಂತೇರೊ ಅವರು, ಐಟಿ ಕಂಪನಿಗಳು, ಜಾಗತಿಕ ಸಾಮರ್ಥ್ಯ ಕೇಂದ್ರಗಳು ಹಾಗೂ ಜಾಗತಿಕ ಕೇಂದ್ರ ಕಚೇರಿಗಳನ್ನು ಮಂಗಳೂರಿಗೆ ಕರೆತಂದು, ನಗರವನ್ನು ಬೆಳವಣಿಗೆ, ಹೂಡಿಕೆ ಮತ್ತು ಅವಕಾಶಗಳ ಪ್ರಮುಖ ಕೇಂದ್ರವನ್ನಾಗಿ ರೂಪಿಸುವ ಸಂಸ್ಥೆಯ ಆಶಯವನ್ನು ಹಂಚಿಕೊಂಡರು. ''ಮಂಗಳೂರಿಗೆ ಭಾರತದ ಅತ್ಯಂತ ಮಹತ್ವದ ಉದಯೋನ್ಮುಖ ನಗರಗಳಲ್ಲಿ ಒಂದಾಗಲು ಬೇಕಾದ ಪ್ರತಿಭೆ, ಗುಣಮಟ್ಟದ ಜೀವನಸ್ಶೈಲಿ ಮತ್ತು ಸಂಪರ್ಕ ವ್ಯವಸ್ಥೆಯಿದೆ ಎಂದು ಅವರು ಹೇಳಿದರು.

ವ್ಯವಸ್ಥಾಪಕ ನಿರ್ದೇಶಕ ಡಾ.ರೋಹನ್ ಮೊಂತೇರೊ ಮಾತನಾಡಿ, 'ಮುಂದಿನ ದಿನಗಳಲ್ಲಿ ಇನ್ನಷ್ಟು ಸಿಎಸ್‌ಆರ್ ಯೋಜನೆಗಳು, ಸಮಾಜಮುಖಿ ಕಾರ್ಯಗಳು ಮತ್ತು ಅರ್ಥಪೂರ್ಣ ಕೊಡುಗೆಗಳ ಮೂಲಕ ಮಂಗಳೂರಿನ ಅಭಿವೃದ್ಧಿಯಲ್ಲಿ ನಮ್ಮ ಪಾತ್ರವನ್ನು ಇನ್ನಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದರು.




> **ಸಮಾಜಮುಖಿ ಕಾರ್ಯ**
>
> ರೋಹನ್ ಕಾರ್ಪೋರೇಶನ್ ಸಂಸ್ಥೆ ಉದ್ಯಮದೊಂದಿಗೆ ಸಮಾಜಮುಖಿ ಕಾರ್ಯಕ್ಕೂ ವಿಶೇಷ ಆದ್ಯತೆ ನೀಡುತ್ತಾ ಬಂದಿದೆ. ಈ ಸಂಸ್ಥೆ ತನ್ನ ಬದ್ಧತೆಯನ್ನು ಎಂದೂ ಮರೆಯುವುದಿಲ್ಲ. ಅಭಿವೃದ್ಧಿಯೊಂದಿಗೆ ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನೂ ನೀಡಲಿದೆ.
>
> ■ ರೋಹನ್ ಮೊಂತೇರೊ

ಕೊಡುಗೆಯನ್ನು ಸ್ವೀಕರಿಸಿ ಮಾತನಾಡಿದ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಶಿವಪ್ರಕಾಶ್, ವೆನ್ಲಾಕ್ ಆಸ್ಪತ್ರೆಗೆ ನೀಡಲಾದ ಆಧುನಿಕ ವೈದ್ಯಕೀಯ ಉಪಕರಣಗಳು ಇಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಲವಾರು ರೋಗಿಗಳಿಗೆ ತುಂಬ ಸಹಕಾರಿಯಾಗಲಿವೆ ಎಂದು ಹೇಳಿದರು. ಈ ಮಹತ್ಕಾರ್ಯಕ್ಕಾಗಿ ಪರವಾಗಿ ರೋಹನ್ ಕಾರ್ಪೊರೇಷನ್ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ''ಭಾರತದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಮಂಗಳೂರಿನ ಬೆಳೆಯುತ್ತಿರುವ ಸ್ಥಾನ'' ಎಂಬ ವಿಷಯದ ಮೇಲೆ ಉನ್ನತ ಮಟ್ಟದ ಸಂವಾದ ಗೋಷ್ಠಿ ನಡೆಯಿತು. ಈ ಸಂವಾದದಲ್ಲಿ ದೇಶದ ಅತ್ಯಂತ ಹೆಸರಾಂತ ಉದ್ಯಮ ತಜ್ಞರಾದ ಅಂಕುಶ್ ಸಯಲ್, ದೀಪ್ತಿ ಮಲಿಕ್,ಹೇಮ್ ಬಾತ್ರಾ ಮತ್ತು ನವದೀಪ್ ಸಿಂಗ್ ಖನುಜಾ ಭಾಗವಹಿಸಿದ್ದರು.

ಅವರು ರಾಷ್ಟ್ರೀಯ ಮಾರುಕಟ್ಟೆಯ ಪ್ರವೃತ್ತಿಗಳು ಮತ್ತು ಭಾರತದ ರಿಯಲ್ ಎಸ್ಟೇಟ್ ನಕ್ಷೆಯಲ್ಲಿ ಮಂಗಳೂರಿನ ಬೆಳೆಯುತ್ತಿರುವ ಸ್ಥಾನವನ್ನು ವಿಶ್ಲೇಷಿಸಿದರು.

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ಸುದರ್ಶನ್ (ಗುಜರಾತ್) 638 ರನ್

ಭುವನೇಶ್ವರ್ (ಬೆಂಗಳೂರು) 24 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	14	9	5	0	18	+0.783
ಗುಜರಾತ್ (Q)	14	9	5	0	18	+0.695
ಹೈದರಾಬಾದ್ (Q)	14	9	5	0	18	+0.524
ರಾಜಸ್ಥಾನ (Q)	14	8	6	0	16	+0.189
ಪಂಜಾಬ್	14	6	6	1	15	+0.309
ಕೆಕೆಆರ್	13	6	6	1	13	+0.011
ಚೆನ್ನೈ	14	6	8	0	12	-0.345
ದಿಲ್ಲಿ	14	6	7	0	12	-0.871
ಮುಂಬೈ	14	4	10	0	8	-0.584
ಲಖನೌ	14	4	10	0	8	-0.740

ಕಿರುಸುದ್ದಿ

ಇಂದು ಆರ್‌ಸಿಬಿ ಪರ ಸಾಲ್ಟ್ ಆಡುವ ಸಾಧ್ಯತೆ



ಹೊಸದಿಲ್ಲಿ: ಏ.18ರಂದು ನಡೆದಿದ್ದ ದಿಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಕ್ಷೇತ್ರರಕ್ಷಣೆ ವೇಳೆ ಬೆರಳಿನ ಗಾಯಕ್ಕೊಳಗಾದ ಫಿಲ್ ಸಾಲ್ಟ್ ಭಾರತಕ್ಕೆ ಮರಳಿದ್ದಾರೆ. ತಮ್ಮ ಗಾಯದ ಚಿಕಿತ್ಸೆಗಾಗಿ ಸಾಲ್ಟ್ ಇಂಗ್ಲೆಂಡ್‌ಗೆ ತೆರಳಿದ್ದರು. ಚಿಕಿತ್ಸೆಯ ಬಳಿಕ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಫಿಟ್ ಆಗಿದ್ದೇನೆಂಬ ಪೋಸ್ಟ್ ಮಾಡಿದ್ದು, ಅವರು ಗುಜರಾತ್ ವಿರುದ್ಧ ಕ್ವಾಲಿಫೈಯರ್ 1 ಪಂದ್ಯದಲ್ಲಿ ಆರ್‌ಸಿಬಿ ಪರ ಮತ್ತೊಮ್ಮೆ ಆರಂಭಿಕರಾಗಿ ಕಣಕ್ಕಿಳಿಯುವ ಸಾಧ್ಯತೆಯಿದೆ. ವಿರಾಟ್ ಜತೆ ಸಾಲ್ಟ್ ಆರಂಭಿಕರಾಗಿ ಕ್ರೀಸ್ ಆಕ್ರಮಿಸಿದರೆ, ಆರ್‌ಸಿಬಿ ಗೆಲುವಿನ ಸಾಧ್ಯತೆ ಹೆಚ್ಚಾಗಲಿದೆ. ಸಾಲ್ಟ್ ಸ್ಥಾನವನ್ನು ತುಂಬುವಲ್ಲಿ ಇನ್ನೋರ್ವ ಇಂಗ್ಲೆಂಡ್ ಬ್ಯಾಟರ್ ಜೇಕಬ್ ಬೆಥೆಲ್ ವಿಫಲರಾಗಿದ್ದಾರೆ. ಸಾಲ್ಟ್ ಪ್ಲೇಆಫ್‌ಗೆ ಮರಳುತ್ತಿರುವುದು ಆರ್‌ಸಿಬಿ ಪಾಳಯದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ. ಸಾಲ್ಟ್ ಆಡುವ ಬಳಗದಲ್ಲಿ ಸೇರಿಸುವ ಕುರಿತ ಪ್ರಶ್ನೆಗೆ ನೇರ ಉತ್ತರ ನೀಡದರೆ ನಾಯಕ ರಜತ್ ಪಾಟಿದಾರ್, ಅಭ್ಯಾಸದ ವೇಳೆ ಸಾಲ್ಟ್ ಫಿಟ್ ಆಗಿದ್ದಾರೆ. ಆದರೆ ಆಡುವ ಬಳಗದಲ್ಲಿ ಸೇರಿಸುವ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ವಿರಾಟ್ ಜತೆ ಸಾಲ್ಟ್ ಅಭ್ಯಾಸ ನಡೆಸಿದ ಚಿತ್ರವನ್ನು ಆರ್‌ಸಿಬಿ ಎಕ್ಸ್‌ನಲ್ಲಿ ಹಂಚಿಕೊಂಡು ಸೂಚನೆ ನೀಡಿದೆ.

ವನಿತೆಯರಿಗೆ 7 ವಿಕೆಟ್ ಜಯ

ಇಂಗ್ಲೆಂಡ್ ಪ್ರವಾಸ: ಇಸಿಬಿ ವಿರುದ್ಧ ಟಿ20 ಅಭ್ಯಾಸ ಪಂದ್ಯ

ಚೆಮ್ಸ್‌ಫೋರ್ಡ್: ಇಂಗ್ಲೆಂಡ್ ಪ್ರವಾಸದಲ್ಲಿರುವ ಸ್ಮೃತಿ ಮಂದನಾ ನೇತೃತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಸೋಮವಾರ ನಡೆದ ಇಸಿಬಿ ಮಹಿಳಾ ಇಲೆವನ್ ವಿರುದ್ಧದ ಟಿ20 ಅಭ್ಯಾಸ ಪಂದ್ಯದಲ್ಲಿ 7 ವಿಕೆಟ್ ಜಯ ಸಾಧಿಸಿದೆ. 22 ಎಸೆತಗಳು ಉಳಿದಿರುವಂತೆ ಭಾರತ ತಂಡ ಗುರಿಮುಟ್ಟಿದರೂ ಅಭ್ಯಾಸದ ಉದ್ದೇಶದಿಂದ ಸಂಪೂರ್ಣ 20 ಓವರ್ ಬ್ಯಾಟಿಂಗ್ ಮಾಡಿಸಲಾಯಿತು. ಟಾಸ್ ಇಲ್ಲದೆ ಪಂದ್ಯ ಆರಂಭವಾಗಿದ್ದು, ಇಂಗ್ಲೆಂಡ್ ಕ್ರಿಕೆಟ್ ಮಂಡಳಿ (ಇಸಿಬಿ) ಡೆವಲಪ್‌ಮೆಂಟ್ ವುಮೆನ್ಸ್ ಇಲೆವೆನ್ ತಂಡ ಮೊದಲು ಬ್ಯಾಟ್ ಮಾಡಿದ್ದು, 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 154 ರನ್‌ಗಳನ್ನು ಪೇರಿಸಿತು. ಭಾರತದ ಪರ ಬೌಲಿಂಗ್‌ನಲ್ಲಿ ಮಿಂಚಿದ ಅರುಂಧತಿ ರೆಡ್ಡಿ 29 ರನ್ ನೀಡಿ 3 ವಿಕೆಟ್ ಕಬಳಿಸಿದ್ದರು. ಉಳಿದಂತೆ ಕ್ರಾಂತಿ ಗೌಡ, ಶ್ರೇಯಾಂಕ ಪಾಟೀಲ್, ದೀಪ್ತಿ ಶರ್ಮಾ ತಲಾ 1 ವಿಕೆಟ್ ಪಡೆದರು. 155 ರನ್ ಬೆನ್ನತ್ತಿದ ಭಾರತ ಪರ ಶೆಫಾಲಿ ವರ್ಮಾ ಸ್ಫೋಟಕ ಅರ್ಧ ಶತಕ ಸಿಡಿಸಿದರು. ಕೇವಲ 25 ಎಸೆತಗಳಲ್ಲಿ ಭರ್ತಿ 50 ರನ್ ಹೊಡೆದ ಶೆಫಾಲಿ ರಿಟಾಯರ್ಡ್ ಹರ್ಟ್ ಘೋಷಿಸಿ ತೆರಳಿದ್ದಾರೆ. ಉಳಿದಂತೆ ನಾಯಕಿ ಮಂದನಾ 21, ಯಸ್ತಿಕಾ 47, ಭಾರ್ತಿ 48 ಹಾಗೂ ಅರುಂಧತಿ 20 ರನ್ ಹೊಡೆದರು. ಪಂದ್ಯ ಗೆದ್ದ ಬಳಿಕವೂ 20 ಓವರ್ ಪೂರ್ತಿ ಬ್ಯಾಟ್ ಮಾಡಿದ ಭಾರತ 6 ವಿಕೆಟ್‌ಗಳ ನಷ್ಟಕ್ಕೆ 200 ರನ್ ಕಲೆಹಾಕಿತು.

ಸಂಕ್ಷಿಪ್ತ ಸ್ಕೋರ್
ಇಸಿಬಿ ವನಿತೆಯರ ಇಲೆವೆನ್ 154/6 (20): ಫ್ಲೋರೆನ್ಸ್ 48, ಜೊವನ್ನೆ 36, ಸೋಫಿಯಾ 27★ (ಅರುಂಧತಿ 29ಕ್ಕೆ 3)
ಭಾರತ ವನಿತೆಯರು 200/6 (20): ಸ್ಮೃತಿ 21, ಶೆಫಾಲಿ 50, ಯಸ್ತಿಕಾ 47, ಭಾರ್ತಿ 48, ಅರುಂಧತಿ 20 (ಎಲ್ಲಿ 39ಕ್ಕೆ 2)

ಇಂದು ಬೆಂಗಳೂರು–ಟೈಟಾನ್ಸ್ ಸೆಣಸಾಟ | ಗೆದ್ದವರು ನೇರ ಫೈನಲ್‌ಗೆ | ಸೋತವರಿಗೆ ಇನ್ನೊಂದು ಅವಕಾಶ

ಹಾಲಿ ಚಾಂಪಿಯನ್ನರಿಗೆ ಗುಜರಾತ್ ಚಾಲೆಂಜ್



ಧರ್ಮಶಾಲಾ: ಈ ಆವೃತ್ತಿಯ ಟೇಬಲ್ ಟಾಪರ್ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಮತ್ತು ದ್ವಿತೀಯ ಸ್ಥಾನ ಪಡೆದ ಗುಜರಾತ್ ಟೈಟಾನ್ಸ್ ಮಂಗಳವಾರ ಮೊದಲ ಕ್ವಾಲಿಫೈಯರ್‌ನಲ್ಲಿ ಸೆಣಸಾಡಲಿವೆ. ಫುಟ್ಬಾಲ್ ಪಂದ್ಯಾವಳಿ ಮಾದರಿಯ ಪ್ಲೇಆಫ್ ನಡೆಯುವುದರಿಂದ ಮೊದಲ ಕ್ವಾಲಿಫೈಯರ್ ಗೆದ್ದ ತಂಡ ನೇರ ಫೈನಲ್ ಪ್ರವೇಶಿಸಲಿದೆ. ಕ್ವಾಲಿಫೈಯರ್ 1ರಲ್ಲಿ ಸೋತ ತಂಡವು ಇನ್ನೊಂದು ಅವಕಾಶ ಪಡೆಯಲಿದೆ. ಈ ಪಂದ್ಯ ಅತ್ಯಂತ ಒತ್ತಡದಿಂದ ಕೂಡಿದ್ದರೂ, ಸೋತರೆ ಏಕಾಏಕಿ ಫೈನಲ್ ರೇಸ್‌ನಿಂದ ಹೊರಬೀಳಲ್ಲ, ಸೋತ ತಂಡವು ಸನ್‌ರೈಸರ್ಸ್ ಹೈದರಾಬಾದ್ ಅಥವಾ ರಾಜಸ್ಥಾನ್ ರಾಯಲ್ಸ್ ವಿರುದ್ಧ ದ್ವಿತೀಯ ಕ್ವಾಲಿಫೈಯರ್ ಆಡಬೇಕಾಗುತ್ತದೆ. ರಜತ್ ಪಾಟಿದಾರ್ ನೇತೃತ್ವದ ಹಾಲಿ ಚಾಂಪಿಯನ್ ಆರ್‌ಸಿಬಿ ಸತತ 2ನೇ ಬಾರಿಗೆ ಐಪಿಎಲ್ ಕಿರೀಟ ಮುಡಿಗೇರಿಸುವ ದೊಡ್ಡ ಗುರಿಯೊಂದಿಗೆ ಧರ್ಮಶಾಲಾದಲ್ಲಿ ಶುಬ್ಮನ್ ಗಿಲ್ ನಾಯಕತ್ವದ ಗುಜರಾತ್ ಟೈಟಾನ್ಸ್ ವಿರುದ್ಧ ಸೆಣಸಾಡಲಿದೆ.

ಕೊಹ್ಲಿಗೆ ಜಿಟಿ ವೇಗಿಗಳ ಸವಾಲು

ವಿರಾಟ್ ಕೊಹ್ಲಿ ಅವರಿಲ್ಲದ ಆರ್‌ಸಿಬಿ ಬ್ಯಾಟಿಂಗ್ ಕ್ರಮಾಂಕವನ್ನು ಊಹಿಸಲೂ ಸಾಧ್ಯವಿಲ್ಲ. ಪ್ರತಿ ಐಪಿಎಲ್‌ನಲ್ಲೂ ಆರ್‌ಸಿಬಿ ದೊಡ್ಡ ಸ್ಕೋರ್ ಮಾಡುವಾಗಲೆಲ್ಲಾ ನಿರಂತರ 18 ವರ್ಷಗಳಿಂದ ಕೊಹ್ಲಿ ಹೆಸರು ಕೇಳಿ ಬರುತ್ತಿತ್ತು. ಆದರೆ ಈ ಐಪಿಎಲ್ ಕೊಹ್ಲಿ ಹೊರತುಪಡಿಸಿ ಆರ್‌ಸಿಬಿ ಬ್ಯಾಟಿಂಗ್ ಕ್ರಮಾಂಕ ಬಲಾಢ್ಯವಾಗಿದ್ದು, ಕೆಲವು ಪಂದ್ಯಗಳಲ್ಲಿ ನಾಯಕ ಪಾಟಿದಾರ್, ಪಡಿಕ್ಕಲ್, ಡೇವಿಡ್, ಕೃಣಾಲ್ ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಆದರೂ ಕೊಹ್ಲಿ ಬೇಗನೆ ಔಟಾದರೆ ಆರ್‌ಸಿಬಿ ಕುಸಿಯುವುದೂ ಇನ್ನೂ ಮುಂದುವರಿದಿದೆ. ಈ ಆವೃತ್ತಿಯಲ್ಲೂ ಕೊಹ್ಲಿ ಆರ್‌ಸಿಬಿ ಪರ ಅತ್ಯಧಿಕ 557 ರನ್ ಕಲೆಹಾಕಿದ್ದು, ಆಗಾಗ ಆರೆಂಜ್ ಕ್ಯಾಪ್ ಧರಿಸಿದ್ದಾರೆ. ಸತತ ಎರಡು ಗೋಲ್ಡನ್ ಡಕ್ ನಂತರ ಶತಕ ದಾಖಲಿಸಿ ಅಗ್ರಸ್ಥಾನಕ್ಕೇರಿದ್ದರು (9ನೇ ಸ್ಥಾನದಲ್ಲಿದ್ದಾರೆ). ಪ್ಲೇಆಫ್‌ನಲ್ಲಿ ಟೈಟಾನ್ಸ್ ವೇಗಿಗಳು ಕೊಹ್ಲಿ ಔಟ್ ಮಾಡಲು ಏನೆಲ್ಲಾ ಯೋಜನೆ ಹಾಕಿಕೊಂಡಿದ್ದಾರೋ ಕೊಹ್ಲಿ ಎದುರಿಸಬೇಕಿದೆ. ಪವರ್‌ಪ್ಲೇ ಓವರ್‌ಗಳಲ್ಲಿ ವೇಗಿ ಕಗಿಸೊ ರಬಾಡ ಹಾಗೂ ಕೊಹ್ಲಿ ನಡುವಿನ ಸೆಣಸಾಟ ವೀಕ್ಷಕರಿಗೆ ವಿಶ್ವದರ್ಜೆ ಕ್ರಿಕೆಟ್ ಅನುಭವ ನೀಡಲಿದೆ. ಪ್ಲೇಆಫ್ ಪಂದ್ಯಗಳಲ್ಲಿ ವಿರಾಟ್ ದೊಡ್ಡ ಇನ್ನಿಂಗ್ಸ್ ಆಡುವುದರಿಂದ ಆರ್‌ಸಿಬಿ ದೊಡ್ಡ ಮೊತ್ತ ಕಲೆಹಾಕಲು ಸಾಧ್ಯ ಅಥವಾ ದೊಡ್ಡ ಮೊತ್ತ ಬೆನ್ನತ್ತಲೂ ಸಾಧ್ಯವೆಂಬುದು ಸಾರ್ವಕಾಲಿಕ ಸತ್ಯ.

ಪಿಚ್ ಹೇಗಿರಲಿದೆ?

ವೇಗವಾದ ಔಟ್‌ಫೀಲ್ಡ್ ಹೊಂದಿರುವ ಅತ್ಯಂತ ಸುಂದರವಾದ ಹಸಿರು ಮೈದಾನವಾಗಿದ್ದು, ನ್ಯೂಬಾಲ್ ಎಸೆಯಲು ನೆರವಾಗುತ್ತದೆ. ಬೌಂಡರಿ ಗೆರೆ ದೂರವಿರಲಿದ್ದು, ಮಂಜಿನ ಹನಿ ಬಿದ್ದರೆ ಸುಲಭವಾಗಿ ರನ್ ಬೆನ್ನತ್ತಲು ಸಾಧ್ಯ ಎಂಬುದು ಕ್ರಿಕೆಟ್ ಪಂಡಿತರ ಅಭಿಪ್ರಾಯ.

ಮೊದಲ ಇನ್ನಿಂಗ್ಸ್ ಸ್ಪರ್ಧಾತ್ಮಕ ಸ್ಕೋರ್: 185-205 ರನ್



ಕ್ವಾಲಿಫೈಯರ್-1
ಆರ್‌ಸಿಬಿ-ಜಿಟಿ,
ಎಚ್‌ಪಿಸಿಎ ಸ್ಟೇಡಿಯಂ,
ಧರ್ಮಶಾಲಾ, ರಾತ್ರಿ 7.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೋ ಹಾಟ್‌ಸ್ಟಾರ್.

ಬೌಲಿಂಗ್ ಅಸ್ತ್ರಗಳು

- ಆರ್‌ಸಿಬಿ: ಭುವನೇಶ್ವರ್ ಕುಮಾರ್ + ಕೃಣಾಲ್
- ಟೈಟಾನ್ಸ್: ಕಗಿಸೋ ರಬಾಡ + ರಶೀದ್ ಖಾನ್

ಯಾರು ಪ್ರಬಲ?

- ಚಾಲೆಂಜರ್ಸ್: 11 ಬಾರಿ ಪ್ಲೇಆಫ್ ಪ್ರವೇಶ, ಉತ್ತಮ ಬೌಲಿಂಗ್, ಉತ್ತಮ ನೆಟ್ ರನ್‌ರೇಟ್‌ನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದ ಆತ್ಮವಿಶ್ವಾಸ.
- ಟೈಟಾನ್ಸ್: ಲಯದಲ್ಲಿರುವ ಆರಂಭಿಕರು, ದ್ವಿತೀಯಾರ್ಧ ಕಂಬ್ಯಾಕ್ ಮೂಲಕ ಪ್ಲೇಆಫ್ ಪ್ರವೇಶಿಸಿದ ಆತ್ಮವಿಶ್ವಾಸ.
- ಚಾಲೆಂಜರ್ಸ್ ಶೇ.52, ಟೈಟಾನ್ಸ್ ಶೇ.48

ಪ್ರಮುಖ ಆಕರ್ಷಣೆಗಳು

- ಪಡಿಕ್ಕಲ್ (ಆರ್‌ಸಿಬಿ)
- ಹ್ಯಾಜಿಲ್‌ವುಡ್ (ಆರ್‌ಸಿಬಿ)
- ಫಿಲ್ ಸಾಲ್ಟ್ (ಆರ್‌ಸಿಬಿ)
- ಟಿಮ್ ಡೇವಿಡ್ (ಆರ್‌ಸಿಬಿ)
- ಸಾಯಿ ಸುದರ್ಶನ್ (ಜಿಟಿ)
- ಕಗಿಸೋ ರಬಾಡ (ಜಿಟಿ)
- ಜೋಸ್ ಬಟ್ಲರ್ (ಜಿಟಿ)
- ರಶೀದ್ ಖಾನ್ (ಜಿಟಿ)



ಬ್ಯಾಟಿಂಗ್ ಅಸ್ತ್ರಗಳು

- ಬೆಂಗಳೂರು: ಕೊಹ್ಲಿ, ದೇವದತ್ ಪಡಿಕ್ಕಲ್, ರಜತ್ ಪಾಟಿದಾರ್, ವೆಂಕಟೇಶ್ ಅಯ್ಯರ್, ಜಿತೇಶ್ ಶರ್ಮಾ
- ಗುಜರಾತ್: ಸಾಯಿ ಸುದರ್ಶನ್, ಶುಬ್ಮನ್ ಗಿಲ್, ಜೋಸ್ ಬಟ್ಲರ್, ವಾಷಿಂಗ್ಟನ್ ಸುಂದರ್,

ಈ ಆವೃತ್ತಿಯ ಕಥೆ

ಆರ್‌ಸಿಬಿ: ಹಾಲಿ ಚಾಂಪಿಯನ್ ಆಗಿ ಗೆಲುವಿನ ಆರಂಭ ಕಂಡ ಆರ್‌ಸಿಬಿ ದ್ವಿತೀಯಾರ್ಧ ಸ್ವಲ್ಪ ಒತ್ತಡ ಎದುರಿಸಿದ್ದರೂ ಅಗ್ರಸ್ಥಾನ ಸಂಪಾದಿಸಿದೆ.
- ಪ್ರಬಲ ಅಗ್ರ ಕ್ರಮಾಂಕದ ಬ್ಯಾಟಿಂಗ್
- ಹೊಂದಿಕೊಳ್ಳಬಲ್ಲ ಮಧ್ಯಮ ಕ್ರಮಾಂಕ
- ಕಳೆದ ಆವೃತ್ತಿಗಿಂತ ಉತ್ತಮ ಡೆತ್ ಓವರ್ ಬೌಲಿಂಗ್
- ಯಾವುದೇ ಹಿನ್ನಡೆಯಿಂದ ಪುಟಿದೇಳಬಲ್ಲ ತಂಡ

ಗುಜರಾತ್: ದ್ವಿತೀಯಾರ್ಧ ಪುಟಿದೇಳುವ ಮೂಲಕ ಪ್ಲೇಆಫ್ ಹಂತ ಪ್ರವೇಶ, ಸ್ಥಿರತೆ ಕಾಯ್ದುಕೊಂಡ ತಂಡ.
- ನಂಬಿಕಸ್ಥ ಆರಂಭಿಕ ಬ್ಯಾಟರ್ಸ್
- ಎಲೈಟ್ ಕ್ಲಾಸ್ ಮಿಡಲ್ ಓವರ್ ಬೌಲಿಂಗ್
- ಆವೃತ್ತಿಯಲ್ಲೇ ಶ್ರೇಷ್ಠ ವೇಗ-ಸ್ಪಿನ್ ಸಂಯೋಜನೆ
- ಸ್ಥಿರ ಪ್ರದರ್ಶನ

ಅತ್ಯಧಿಕ ವಿಕೆಟ್‌ಗಳು

- ಭುವನೇಶ್ವರ್ ಕುಮಾರ್ (ಆರ್‌ಸಿಬಿ)-24 ವಿಕೆಟ್
- ಕಗಿಸೋ ರಬಾಡ (ಜಿಟಿ)-24 ವಿಕೆಟ್
- ರಶೀದ್ ಖಾನ್ (ಜಿಟಿ)-19 ವಿಕೆಟ್
- ರಸಿಕ್ ದಾರ್ (ಆರ್‌ಸಿಬಿ)-14 ವಿಕೆಟ್

ಅತ್ಯಧಿಕ ರನ್‌ಗಳು

- ಸಾಯಿ ಸುದರ್ಶನ್ (ಜಿಟಿ) - 638 ರನ್
- ಶುಬ್ಮನ್ ಗಿಲ್ (ಜಿಟಿ) - 616 ರನ್
- ವಿರಾಟ್ ಕೊಹ್ಲಿ (ಆರ್‌ಸಿಬಿ) - 557 ರನ್
- ದೇವದತ್ ಪಡಿಕ್ಕಲ್ (ಆರ್‌ಸಿಬಿ) - 433 ರನ್

ಪವರ್‌ಪ್ಲೇ ನಿರ್ಣಾಯಕ

ಪವರ್‌ಪ್ಲೇ 6 ಓವರ್‌ಗಳು ನಿರ್ಣಾಯಕ ಪರಿಣಾಮ ಬೀರಲಿವೆ. ಪವರ್‌ಪ್ಲೇನಲ್ಲಿ ಪ್ರಾಬಲ್ಯ ಮೆರೆಯುವ ತಂಡ ಕ್ವಾಲಿಫೈಯರ್ ಗೆಲ್ಲುವ ಸಾಧ್ಯತೆಯಿದೆ.

ತವರಿನಲ್ಲಿ 40 ರನ್ ಸೋಲುಂಡ ನೈಟ್‌ರೈಡರ್ಸ್

ದಿಲ್ಲಿ ಗೆಲುವಿನ ವಿದಾಯಕ್ಕೆ ಕುಲ್ದೀಪ್, ರಾಹುಲ್ ಗಿಫ್ಟ್





ಕೋಲ್ಕತ: ಭಾನುವಾರದ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 30 ರನ್‌ಗಳ ಗೆಲುವು ಸಾಧಿಸಿದ ರಾಜಸ್ಥಾನ್ ರಾಯಲ್ಸ್ ನಾಲ್ಕನೇ ತಂಡವಾಗಿ ಪ್ಲೇಆಫ್ ಪ್ರವೇಶಿಸಿದ್ದು, ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ ನೈಟ್‌ರೈಡರ್ಸ್ ಈ ಆವೃತ್ತಿಯಿಂದ ಹೊರಬಿದ್ದಿದ್ದವು. ರಾಯಲ್ಸ್ ಗೆದ್ದಿದ್ದರಿಂದ ಈಡನ್ ಗಾರ್ಡನ್ಸ್‌ನಲ್ಲಿ ನೈಟ್‌ರೈಡರ್ಸ್ ಮತ್ತು ದಿಲ್ಲಿ ನಡುವಿನ ಪಂದ್ಯವು, ಮೊದಲ ಇನ್ನಿಂಗ್ಸ್‌ನ 4 ಓವರ್ ಮುಗಿಯುತ್ತಲೇ ಔಪಚಾರಿಕ ಎನಿಸಿಕೊಂಡಿತು. ದಿಲ್ಲಿ ಕೆಕೆಆರ್ ವಿರುದ್ಧ ದಿಲ್ಲಿ 40 ರನ್ ಅಂತರದ ಗೆಲುವು ಪಡೆದಿದ್ದು, ಈ ಆವೃತ್ತಿಗೆ ದಿಲ್ಲಿ ಗೆಲುವಿನ ವಿದಾಯಕ್ಕೆ ಕುಲ್ದೀಪ್ ಮತ್ತು ರಾಹುಲ್ ಕೊಡುಗೆ ನೀಡಿದರು. ಇದೇ ಸಂದರ್ಭ ತವರಿನ ಸೋಲಿನೊಂದಿಗೆ ಕೆಕೆಆರ್ ತನ್ನ ಅಭಿಯಾನ ಕೊನೆಗೊಳಿಸಿತು.

ಸಂಕ್ಷಿಪ್ತ ಸ್ಕೋರ್
ದಿಲ್ಲಿ 203/5 (20): ರಾಹುಲ್ 60(30), ಅಕ್ಷರ್ 39(25), ದುಬೆ 28ಕ್ಕೆ 2.
ಕೆಕೆಆರ್ 163/10 (20)
ರಹಾನೆ 63(39), ಪೊವೆಲ್ 29(21), ಎನ್‌ಗಿಡಿ 27ಕ್ಕೆ 3, ಕುಲ್ದೀಪ್ 29ಕ್ಕೆ 3.

ಮಿಂಚಿದ ರಹಾನೆ, ಕುಲ್ದೀಪ್ ಕೈಚಳಕ!

204 ರನ್ ಸವಾಲನ್ನು ಬೆನ್ನತ್ತಲು ಆರಂಭಿಸಿದ ಕೆಕೆಆರ್ ತಂಡಕ್ಕೆ ಸ್ಫೋಟಕ ಆರಂಭಿಕ ಫಿನ್ ಅಲೆನ್ ಮತ್ತು ನಾಯಕ ಅಜಿಂಕ್ಯಾ ಉತ್ತಮ ಆರಂಭ ನೀಡಿದ್ದು, ನಾಲ್ಕು ಓವರ್‌ಗಳಲ್ಲಿ 43 ರನ್ ಕಲೆಹಾಕಿದ್ದರು. ಅಲೆನ್ ಮತ್ತು ಮನೀಶ್ ವಿಕೆಟ್ ಕಬಳಿಸುವ ಮೂಲಕ ಎನ್‌ಗಿಡಿ ಮೊದಲೆರಡು ಆಘಾತ ನೀಡಿದರೆ, ಕುಲ್ದೀಪ್ ಲೆಗ್‌ಸ್ಪಿನ್ ಮೋಡಿ ಮಾಡಿದರು. ನಾಯಕ ರಹಾನೆಯೊಬ್ಬರೆ ಕೆಕೆಆರ್ ಆಧಾರಸ್ತಂಭವಾಗಿ ಬಿರುಸಿನ ಆಟ ಪ್ರದರ್ಶಿಸಿದ್ದರು. ಈ ಆವೃತ್ತಿಯ ಕೊನೆಯ ಪಂದ್ಯದಲ್ಲಿ ಸಿಡಿದ ಅವರು 2ನೇ ಅರ್ಧ ಶತಕ ದಾಖಲಿಸಿದ ರಹಾನೆ, 31 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು.

37ಕ್ಕೆ 7 ವಿಕೆಟ್ ಕಳೆದುಕೊಂಡ ಕೆಕೆಆರ್: ಗ್ರೀನ್ ವಿಕೆಟ್ ಕಬಳಿಸಿದ್ದ ಕುಲ್ದೀಪ್, ಇನ್ನೂ ಎರಡು ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದರು. ರಹಾನೆ ಮತ್ತು ರಿಂಕು ವಿಕೆಟ್ ಪಡೆದ ಕುಲ್ದೀಪ್ ಹ್ಯಾಟ್ರಿಕ್ ಅವಕಾಶ ಮಿಸ್ ಮಾಡಿದ್ದರು. ಕೆಕೆಆರ್ ತನ್ನ 7 ವಿಕೆಟ್‌ಗಳನ್ನು 37 ರನ್‌ಗಳ ಅಂತರದಿಂದ ಕಳೆದುಕೊಂಡು 40 ರನ್ ಸೋಲೊಪ್ಪಿತು.

ಫ್ರೆಂಚ್ ಓಪನ್: ಮಿಂಚಿದ ಭಾರತೀಯ ಮೂಲದ ಟೆನಿಸಿಗ

ಬಸವರೆಡ್ಡಿ ಆಟಕ್ಕೆ ಬಸವಳಿದ ಫ್ರಿಟ್ಜ್!

ಪ್ಯಾರಿಸ್: ಭಾರತೀಯ ಮೂಲದ 21ರ ಹರೆಯದ ಅಮೆರಿಕ ಟೆನಿಸಿಗ ನಿಶೇಶ್ ಬಸವರೆಡ್ಡಿ 7ನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರಿಗೆ ಆಘಾತವನ್ನು ನೀಡಿದ್ದಾರೆ. ಭಾನುವಾರ ತಡರಾತ್ರಿ ನಡೆದ ಫ್ರೆಂಚ್ ಓಪನ್ ಮೊದಲ ಸುತ್ತಿನ ಪಂದ್ಯದಲ್ಲಿ ಫ್ರಿಟ್ಜ್ ಅವರನ್ನು 7-6(5), 7-6(5), 6-7(9), 6-1 ಸೆಟ್‌ಗಳ ಅಂತರದಿಂದ ಸೋಲಿಸುವ ಮೂಲಕ ಅಚ್ಚರಿಯ ಫಲಿತಾಂಶ ಸೃಷ್ಟಿಸಿದ್ದಾರೆ. ಫ್ರೆಂಚ್ ಓಪನ್ ಮೈನ್ ಡ್ರಾದಲ್ಲಿ ತಮ್ಮ ಪದಾರ್ಪಣೆಗೈದ ಬಸವರೆಡ್ಡಿ ತಮ್ಮದೇ ದೇಶದ ಟೆನಿಸ್ ತಾರೆಯನ್ನು ಗ್ರ್ಯಾಂಡ್ ಸ್ಲಾಮ್ ಪಂದ್ಯಾವಳಿಯಿಂದಲೇ ಹೊರಹಾಕಿದ್ದಾರೆ. 148ನೇ ಶ್ರೇಯಾಂಕದ ಬಸವರೆಡ್ಡಿ ವಿರುದ್ಧ ಸೋತ ಫ್ರಿಟ್ಜ್ ಎರಡನೇ ಬಾರಿಗೆ ರೋಲ್ಯಾಂಡ್ ಗ್ಯಾರೊಸ್‌ನಲ್ಲಿ ಮೊದಲ ಸುತ್ತಿನ ಸೋಲುಂಡಿದ್ದಾರೆ.



"ಇದು ಕಣ್ತೆರೆಸಿದ ಗೆಲುವಿನ ಆರಂಭ. ಈ ಟೂರ್ನಿಯಲ್ಲಿ ಎಲ್ಲರೂ ವಿಶ್ವಶ್ರೇಷ್ಠ ಆಟಗಾರರೇ ಇದ್ದು, ಶ್ರೇಷ್ಠ ಪ್ರದರ್ಶನ ನೀಡುತ್ತಾರೆ. ನಾನು ನನ್ನ ಶ್ರೇಷ್ಠ ಪ್ರದರ್ಶನ ನೀಡುತ್ತಿದ್ದೇನೆ. ಇದೇ ರೀತಿ ಉತ್ತಮ ಪ್ರದರ್ಶನ ಮುಂದುವರಿಸುತ್ತಾ ಹೋದರೆ ಇನ್ನಷ್ಟು ಗೆಲ್ಲುವ ಅವಕಾಶಗಳಿವೆ.

■ ನಿಶೇಶ್ ಬಸವರೆಡ್ಡಿ, ಟೆನಿಸ್ ಆಟಗಾರ

ದ್ವಿತೀಯ ಸುತ್ತಿಗೆ ಜೊಕೊ, ಸ್ವಿಯಾಟೆಕ್







ಪ್ಯಾರಿಸ್: ಇತ್ತೀಚೆಗೆ ಇಟಾಲಿಯನ್ ಓಪನ್ ಪಂದ್ಯಾವಳಿಯಲ್ಲಿ ಮೊದಲ ಸುತ್ತಲ್ಲೇ ಹೊರಬಿದ್ದಿದ್ದ ಸರ್ಬಿಯಾ ದಂತಕತೆ ನೊವಾಕ್ ಜೊಕೊವಿಕ್ ಮೊದಲ ಸುತ್ತಿನ ಭೀತಿಯಿಂದ ಬಚಾವಾಗಿದ್ದು, ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸ್ಥಳೀಯ ಆಟಗಾರ ಜಿಯೊವನ್ನಿ ಎಂಪೆಟ್ಶಿ ಪೆರ್ರಿಕಾರ್ಡ್ ಅವರನ್ನು ಸೋಲಿಸುವ ಮೂಲಕ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಜೊಕೊವಿಚ್ 5-7, 7-5, 6-1, 6-4 ಸೆಟ್ ಅಂತರದಿಂದ ಪಂದ್ಯ ಗೆದ್ದಿದ್ದಾರೆ. 25ನೇ ಗ್ರ್ಯಾಂಡ್ ಸ್ಲಾಮ್ ಗೆಲ್ಲುವ ಗುರಿಯೊಂದಿಗೆ ರೋಲ್ಯಾಂಡ್ ಗೇರೊಸ್ ಆವೆಮಣ್ಣಿನ ಅಂಗಣಕ್ಕಿಳಿದಿರುವ ಜೊಕೊವಿಚ್ ಗೆಲುವಿನ ವಿಶ್ವಾಸದಲ್ಲಿ ಭೇಟೆ ಆರಂಭಿಸಿದ್ದಾರೆ.


ಸ್ವಿಯಾಟೆಕ್ ದ್ವಿತೀಯ ಸುತ್ತಿಗೆ ಲಗ್ಗೆ: ನಾಲ್ಕು ಬಾರಿಯ ಚಾಂಪಿಯನ್ ಇಗಾ ಸ್ವಿಯಾಟೆಕ್ ಆಸ್ಟ್ರೇಲಿಯಾದ ವೈಲ್ಡ್ ಕಾರ್ಡ್ ಎದುರಾಳಿ ಎಮರ್ಸನ್ ಜೋನ್ಸ್ ಅವರನ್ನು 6-1, 6-2 ನೇರ ಸೆಟ್‌ಗಳ ಅಂತರದಿಂದ ಮಣಿಸಿ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಒಂದೇ ಗಂಟೆಯಲ್ಲಿ ಸ್ವಿಯಾಟೆಕ್ ಪಂದ್ಯ ಮುಗಿಸಿದ್ದಾರೆ.


ರಾಡುಕಾನುಗೆ ಆಘಾತ!: ಇನ್ನೊಂದು ಮಹಿಳಾ ಸಿಂಗಲ್ಸ್ ರೋಚಕ ಪಂದ್ಯದಲ್ಲಿ ಎಮ್ಮಾ ರಾಡುಕಾನು ಅರ್ಜೆಂಟೀನಾ ಎದುರಾಳಿ ಸೋಲಾನಾ ಸಿಯೆರಾ ವಿರುದ್ಧ ನೇರ ಸೆಟ್‌ಗಳಿಂದ ಭಾರೀ ಸೋಲುಂಡಿದ್ದಾರೆ. ಮೊದಲ ಸೆಟ್‌ನಲ್ಲಿ ರಾಡುಕಾನು ಒಂದು ಸೆಟ್ ಅಂಕವನ್ನೂ ಗಳಿಸಿರಲಿಲ್ಲ, ಅಂದರೆ 0-6 ಅಂತರದಿಂದ ಮೊದಲ ಸೆಟ್ ಸೋತ ಎಮ್ಮಾ, ಎರಡನೇ ಸೆಟ್‌ನಲ್ಲಿ ಭಾರೀ ರೋಚಕ ಹೋರಾಟ ನೀಡಿದರೂ ಸಹ ಸಿಯೆರಾ 7-6(4) ಸೆಟ್ ಅಂಕಗಳಿಂದ ಗೆಲುವು ಸಾಧಿಸಿದರು.


ಪದ್ಮ ಸಹಿತ ಮೂರು ಕ್ರೀಡಾ ಪ್ರಶಸ್ತಿ ಪಡೆದ ಪ್ಯಾರಾ ಅಥ್ಲೀಟ್ ಪ್ರವೀಣ್

ಕ್ರೀಡಾ ಸಾಧಕರಿಗೆ ಪದ್ಮ ಪ್ರಶಸ್ತಿ ಗರಿ

ಹೊಸದಿಲ್ಲಿ: ರಾಷ್ಟ್ರಪತಿ ಭವನದಲ್ಲಿ ಸೋಮವಾರ ಸಂಜೆ ಭಾರತೀಯ ಮಹಿಳಾ ಕ್ರಿಕೆಟ್ ರಾಷ್ಟ್ರೀಯ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಪ್ಯಾರಾ ಅಥ್ಲೀಟ್ (ಹೈ ಜಂಪ್) ಪ್ರವೀಣ್ ಕುಮಾರ್, ಪ್ರಾಚೀನ ಸಮರ ಕಲೆ ಸಿಲಂಬಮ್ ಮಾಸ್ಟರ್ ಮತ್ತು ಪುದುಚೇರಿ ಸಾಂಸ್ಕೃತಿಕ ಪಾಲಕ ಕೆ.ಪಳನಿವೇಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಷ್ಠಿತ ಪದ್ಮ ಶ್ರೀ ಪ್ರಶಸ್ತಿ ಪ್ರದಾನ ಮಾಡಿದರು. ಮಹಿಳಾ ರಾಷ್ಟ್ರೀಯ ಕ್ರಿಕೆಟ್ ತಂಡದ ನಾಯಕಿಯಾಗಿ ಮಾಡಿದ ಸಾಧನೆಗಾಗಿ ಹಾಗೂ 2026ರಲ್ಲಿ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕಿ ಎಂಬ ಕಾರಣಕ್ಕಾಗಿ ಹರ್ಮನ್‌ಪ್ರೀತ್ ಅವರಿಗೆ ಈ ಪದ್ಮ ಪ್ರಶಸ್ತಿಯ ಗೌರವ ಸಂದಿದೆ. 23ರ ಹರೆಯದ ನಂ.1 ಪ್ಯಾರಾ-ಹೈ ಜಂಪ್ ಅಥ್ಲೀಟ್ ಪ್ರವೀಣ್ ಕುಮಾರ್ ಅವರು ಅರ್ಜುನ, ಖೇಲ್ ರತ್ನ ಮತ್ತು ಪದ್ಮ ಶ್ರೀ ಈ ಮೂರೂ ಪ್ರಶಸ್ತಿಗಳಿಗೆ ಭಾಜನರಾದ ವಿಶೇಷ ಅಥ್ಲೀಟ್ ಎನಿಸಿಕೊಂಡಿದ್ದಾರೆ.


ಪ್ರವೀಣ್


ಹರ್ಮನ್‌ಪ್ರೀತ್


ಪಳನಿವೇಲ್

ಪದ್ಮ ಭೂಷಣ

- ವಿಜಯ್ ಅಮೃತ್‌ರಾಜ್ (ಟೆನ್ನಿಸ್), ತಮಿಳುನಾಡು

ಪದ್ಮ ಶ್ರೀ (ಮರಣೋತ್ತರ)

- ಭಗ್ವನ್‌ದಾಸ್ ರಾಯ್ಕ್‌ವರ್ (ಬುಂದೇಲಿ ಸಮರ ಕಲೆ-ಅಖಾಡ), ಮಧ್ಯಪ್ರದೇಶ
- ವ್ಲಾಡಿಮಿರ್ ಮೆಸ್ಟ್‌ವಿರಿಶ್ವಿಲಿ (ಕುಸ್ತಿ ತರಬೇತಿ), ಜಾರ್ಜಿಯಾ

ಪದ್ಮ ಶ್ರೀ

- ರೋಹಿತ್ ಶರ್ಮಾ (ಕ್ರಿಕೆಟ್), ಮಹಾರಾಷ್ಟ್ರ
- ಹರ್ಮನ್‌ಪ್ರೀತ್ ಕೌರ್ (ಕ್ರಿಕೆಟ್), ಪಂಜಾಬ್
- ಸವಿತಾ ಪೂನಿಯಾ (ಹಾಕಿ), ಹರ್ಯಾಣ
- ಪ್ರವೀಣ್ ಕುಮಾರ್ (ಪ್ಯಾರಾ ಅಥ್ಲೆಟಿಕ್ಸ್- ಹೈ ಜಂಪ್), ಉತ್ತರಪ್ರದೇಶ
- ಬಲ್‌ದೇವ್ ಸಿಂಗ್ (ಹಾಕಿ ತರಬೇತಿ), ಪಂಜಾಬ್
- ಕೆ. ಪಳನಿವೇಲ್ (ಸಿಲಂಬಂ ಸಮರ ಕಲೆ), ಪುದುಚೇರಿ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5995

5994 ಉತ್ತರ

ಎಡದಿಂದ ಬಲಕ್ಕೆ:
1.ತೀರಿಸು 3.ಪುಟಮಾಡು
4.ಕಾರೋಡಲ
6.ಕದ್ದಿಂಗಳು 8.ಕಪಿಕೂಟ
10.ತೇರೀಜು 11.ಸಿಡಿತ
13.ಕಮಲ 15.ತುಕ್ಕುಹಿಡಿ
16.ಕುಳವಾಡಿ

ಮೇಲಿನಿಂದ ಕೆಳಕ್ಕೆ :
1.ತೀಡು 2.ಕಾಸು
3.ಪುಸ್ತಕ 5.ಲಲಾಟ
7.ಗರಜು 9.ಪಿಕಾಸಿ
10.ತೇಲುಮಾತು
12.ತಡೆಹಿಡಿ 13.ಕನ್ನಡಿ
14.ಕುಟಿಲ

ಎಡದಿಂದ ಬಲಕ್ಕೆ
1.ದೈತ್ಯರು ಕಟ್ಟಿಕೊಂಡ ಮೂರು ಪಟ್ಟಣಗಳು (3)
2.ಅಕ್ಟೋಬರ್-ನವೆಂಬರ್‌ನಲ್ಲಿ ಬರುವ ಹಿಂದೂ ತಿಂಗಳು (3)
4.ಮೇಲಧಿಕಾರಿಯಿಂದ ಬಂದ ಸೂಚನೆ (3)
6. ನೀರನ್ನು ಸಂಗ್ರಹಿಸಿಟ್ಟ ಸ್ಥಳ (4)
7. ಪೂರ್ವಾಪರ ವೃತ್ತಾಂತವಿದು (4)
8.ನೀರಿಗೆ ಆಶ್ರಯವಾದುದು-ಸರೋವರ (4)
10.ಸ್ಥಿರ-ಅಸ್ಥಿರವಾದುದು ತಿರುಗಿ ಕಾಣುತ್ತಿವೆ (4)
13.ಕಾಳಗದಲ್ಲಿ ಪ್ರೀತಿಯುಳ್ಳವನು-ಯುದ್ಧೋತ್ಸಾಹಿ (5)
16.ಈ ಔಷಧಿ ಧಾತುವಿನ ಕಡೆಯಲ್ಲಿ ಜನರಿದ್ದಾರೆ (4)
17.ಕತ್ತು ಇದರ ನಡುವೆ ಅಚ್ಚರಿ ಮೂಡಿಸುವ ಸಾಧನೆಯಿದೆ (4)

ಮೇಲಿನಿಂದ ಕೆಳಕ್ಕೆ
1.ಮೂರು ಬಾಹುಗಳುಳ್ಳ ಆಕೃತಿ (3)
3.ಜ್ಯೋತಿಷ್ಯದಲ್ಲಿ ಲಗ್ನದಿಂದ ಎಂಟನೆಯ ಸ್ಥಾನ (3)
4.ಆದಾಯ-ಖರ್ಚಿನ ಲೆಕ್ಕ-ಹಣದ ವ್ಯವಹಾರ (4)
5.ರಾಮಸೀತೆಯರ ಜೋಡಿಕುಮಾರರು ತಲೆಕೆಳಗಾಗಿದ್ದಾರೆ (4)
8.ರಣವನ್ನೊಳಗೊಂಡ ಹೆಬ್ಬಾಗಿಲು (5)
9.ಕ್ರಿಕೆಟ್ ಆಟಗಾರನ ನೂರು ಓಟಗಳು (3)
11.ಚೆನ್ನಾಗಿ ಬೇಯುತ್ತಿರುವ ತೊಗರಿಬೇಳೆಯ ಬಗೆ (3)
12.ತುಟಿ ಪಿಟಕ್ಕೆನ್ನು ಎಂಬರ್ಥದ ಶಬ್ದ (5)
14.ದನದ ನಡುವೆ ನಾಶ ಮಾಡುವಿಕೆಯಿದೆ (3)
15.ಇದು ಅರಸರ ಗುಂಪು (3)

ಪ್ರತಿ ದಿನ 50 ಸಾವಿರಕ್ಕೂ ಅಧಿಕ ಮಂದಿಯ ನಿರೀಕ್ಷೆ | ವಿದೇಶದಿಂದಲೂ ಬರಲಿದ್ದಾರೆ ಭಕ್ತರು

'ಅಮ್ಮ'ನ ಕಾಣಲು ಕಾತರಿಸಿದೆ ಕಡಲತಡಿ!

ಮಂಗಳೂರು: ಇಲ್ಲಿನ ಬೋಳೂರು ಅಮೃತಾನಂದ ಮಯಿ ಮಠದಲ್ಲಿ ಮೇ 28 ಮತ್ತು 29ರಂದು 'ಅಮೃತ ಸಂಗಮ–2026' ಕಾರ್ಯಕ್ರಮ ವೈಭವದಿಂದ ನಡೆಯಲಿದೆ. ಏಳು ವರ್ಷಗಳ ಬಳಿಕ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿಯವರು ಮಂಗಳೂರಿಗೆ ಆಗಮಿಸುತ್ತಿದ್ದು, ಕಾರ್ಯಕ್ರಮ ಯಶಸ್ಸಿಗೆ ಸಕಲ ಸಿದ್ಧತೆ ನಡೆದಿದೆ ಎಂದು ಮಾತಾ ಅಮೃತಾನಂದಮಯಿ ಸೇವಾ ಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿ ದಿನ 50 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳಲಿದ್ದಾರೆ. ವಿದೇಶದಿಂದಲೂ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವರು. ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಶ್ರೀಪಾದ್ ಯೆಸ್ಸೋ ನಾಯಕ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿರುವರು. ರಾಜ್ಯ ವಿಧಾನ ಸಭಾ ಅಧ್ಯಕ್ಷ ಯು. ಟಿ.ಖಾದರ್, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕ ಡಿ.ವೇದವ್ಯಾಸ ಕಾಮತ್, ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಮತ್ತಿತರರು ಪಾಲ್ಗೊಳ್ಳುವರು ಎಂದವರು ತಿಳಿಸಿದರು.

ಭವ್ಯ ಸ್ವಾಗತಕ್ಕೆ ಸಿದ್ಧತೆ

ಅಮ್ಮನವರಿಗೆ ಭವ್ಯ ಸ್ವಾಗತ ಕೋರಲು ಪೂರ್ವ ಸಿದ್ಧತೆಗಳು ನಡೆದಿವೆ. ಮಠವು 25 ನೆಯ ವರ್ಷದ ಸಂಭ್ರಮಾಚರಣೆ ಎಂಬ ವಿಶೇಷತೆ ಹೊಂದಿರುವುದರಿಂದಲೂ ಅಮ್ಮನವರಿಗೆ ಪ್ರಿಯವಾದ ಸಮಾಜಮುಖಿ ಮಾನವೀಯ ಸೇವಾ ಯೋಜನೆಗಳಿಗೆ ಕೂಡಾ ಅಮ್ಮನವರಿಂದ ಚಾಲನೆ ದೊರೆಯಲಿದೆ ಎಂದವರು ತಿಳಿಸಿದರು.



ವೈವಿಧ್ಯಮಯ ಕಾರ್ಯಕ್ರಮಗಳು:

ಮೇ 28ರಂದು ಏನೇನು ಕಾರ್ಯಕ್ರಮ?

ಮೇ 28ರಂದು ಅಮೃತ ಸಂಗಮಸಂಗಮ – ಯಜ್ಞಶಾಲೆಯಲ್ಲಿ ಬೆಳಗ್ಗೆ 5.45ಕ್ಕೆ ಲಲಿತಾ ಸಹಸ್ರನಾಮ ಅರ್ಚನೆ, 7.30 ಕ್ಕೆ ರಾಹು ದೋಷ ನಿವಾರಣಾ ಪೂಜೆ ಮತ್ತು 10.30ರಿಂದ ಅಮ್ಮನ ಸತ್ಸಂಗ, ಭಜನೆ, ಧ್ಯಾನ, ವೈಯಕ್ತಿಕ ದರ್ಶನ – ಅಮೃತಾಲಿಂಗನ ಕಾರ್ಯಕ್ರಮ ನಡೆಯಲಿದೆ. ಅದೇ ರೀತಿ ಮಹಾಗಣಪತಿ ಹೋಮ ನವಗ್ರಹ ಶಾಂತಿ ಹೋಮ, ಮಹಾ ಮೃತ್ಯುಂಜಯ ಹೋಮ, ಮಹಾ ಸುದರ್ಶನ ಹೋಮ, ಅಲಂಕಾರ ಪೂಜೆ, ದೇವಿ ಪೂಜೆ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ ಎಂದು ಸುರೇಶ್ ಅಮೀನ್ ವಿವರಿಸಿದರು.

ಬ್ರಹ್ಮಸ್ಥಾನಂ ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮ

ಮೇ 29ರಂದು ಅಮೃತಸಂಗಮ – ಯಜ್ಞಶಾಲೆಯಲ್ಲಿ 5.45ಕ್ಕೆ ಲಲಿತಾ ಸಹಸ್ರನಾಮ ಅರ್ಚನೆ, 7.30ಕ್ಕೆ ಶನಿ ದೋಷ ನಿವಾರಣ ಪೂಜೆ, 10.30 ಕ್ಕೆ ಅಮ್ಮನ ಸತ್ಸಂಗ, ಭಜನೆ, ಧ್ಯಾನ ವೈಯಕ್ತಿಕ ದರ್ಶನ–ಅಮೃತಾಲಿಂಗನ ನಡೆಯಲಿದೆ. ಶ್ರೀ ಬ್ರಹ್ಮಸ್ಥಾನಂ ಕ್ಷೇತ್ರದಲ್ಲಿ ಮಹಾ ಗಣಪತಿ ಹೋಮ, ನವಗ್ರಹ ಶಾಂತಿ ಹೋಮ, ಮಹಾ ಧನ್ವಂತರಿ ಹೋಮ, ಮಹಾ ಸುದರ್ಶನ ಹೋಮ, ಅಲಂಕಾರ ಪೂಜೆ, ದುರ್ಗಾ ಪೂಜೆ ನೆರವೇರಲಿದೆ ಎಂದು ಮಾತಾ ಅಮೃತಾನಂದಮಯಿ ಸೇವಾ ಸಮಿತಿ ಗೌರವಾಧ್ಯಕ್ಷ ಡಾ.ಜೀವರಾಜ್ ಸೊರಕೆ ತಿಳಿಸಿದರು.

ಪುಟ್ಟ ಮಗುವಿಗೂ ಬೇಕು ಟೋಕನ್

ಅಮ್ಮನವರ ಸತ್ಸಂಗ, ಧ್ಯಾನ, ಭಜನೆಯ ನಂತರ ಅಮ್ಮನವರು ದರ್ಶನ ಟೋಕನ್‌ನ ಸರದಿಯಂತೆ ಟೋಕನ್ ಹೊಂದಿರುವ ಪ್ರತಿಯೊಬ್ಬರಿಗೂ ಅಮ್ಮನವರು ಅಪ್ಪುಗೆಯ ಅಮೃತಾಲಿಂಗನದ ಅನುಗ್ರಹ ದರ್ಶನ ನೀಡಲಿರುವರು. ದರ್ಶನಕ್ಕೆ ಪುಟ್ಟ ಮಗುವಿಗೂ ಟೋಕನ್ ಪಡೆಯುವುದು ಅವಶ್ಯಕ ಎಂದವರು ಹೇಳಿದರು.

ಭಕ್ತರ ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ಮಜ್ಜಿಗೆ ಮತ್ತು ಬಿಸ್ಕೆಟ್ ಸೌಲಭ್ಯ ಕಲ್ಪಿಸಲಾಗುತ್ತದೆ. ಮಧ್ಯಾಹ್ನ ಮತ್ತು ರಾತ್ರಿ ಭೋಜನ ವ್ಯವಸ್ಥೆಯೂ ಇದೆ. ಕಾರ್ಯಕ್ರಮದ ನಂತರ ಮತ್ತು ಅಮ್ಮನ ದರ್ಶನ ಪಡೆದ ನಂತರ ವಿವಿಧ ಸ್ಥಳಗಳಿಗೆ ತೆರಳಲು ಬಸ್ಸಿನ ವ್ಯವಸ್ಥೆ ಮಾಡಲಾಗಿದೆ ಎಂದು ಡಾ.ಜೀವರಾಜ್ ಸೊರಕೆ ವಿವರ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತಾ ಅಮೃತಾನಂದ ಮಯಿ ಸೇವಾ ಸಮಿತಿ ಗೌರವಾಧ್ಯಕ್ಷರಾದ ಸಿ ಎ ವಾಮನ್ ಕಾಮತ್, ಡಾ.ವಸಂತಕುಮಾರ ಪೆರ್ಲ, ಆಯೋಜನಾ ಸಮಿತಿ ಕಾರ್ಯದರ್ಶಿ ಸಿಎ ರಾಮನಾಥ್, ಸೇವಾ ಸಮಿತಿಯ ಡಾ.ದೇವದಾಸ್ ಪುತ್ರನ್ ಉಪಸ್ಥಿತರಿದ್ದರು.

ದರ್ಶನಕ್ಕೆ ಶುಲ್ಕವಿಲ್ಲ

ಅಮ್ಮನ ದರ್ಶನಕ್ಕೆ ಯಾವುದೇ ಶುಲ್ಕವಿರುವುದಿಲ್ಲ, ದರ್ಶನಕ್ಕಾಗಿ ಟೋಕನ್ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ 9.30ರ ಒಳಗೆ ಬಂದು ಕುಳಿತವರಿಗೆ ಟೈಮ್ ಕಾರ್ಡ್ ನೀಡಲಾಗುತ್ತದೆ. ಜನರು ಬಂದ ಸಮಯಕ್ಕೆ ಅನುಗುಣವಾಗಿ ಟೈಮ್ ಕಾರ್ಡ್ ಸಂಖ್ಯೆಗಳಿದ್ದು ಅದಕ್ಕೆ ತಕ್ಕಂತೆ ಆನಂತರ ದರ್ಶನ ಟೋಕನ್ ನೀಡಲಾಗುತ್ತದೆ.



ವಿಶೇಷ ಲೇಖನ ಯಜ್ಞ

ಅಮ್ಮನವರ ಮಂಗಳೂರು ಭೇಟಿ ಮತ್ತು ಬ್ರಹ್ಮಸ್ಥಾನಂ ಮಹೋತ್ಸವದ ಪ್ರಯುಕ್ತ 'ಓಂ ಶಿವ ಶಕ್ತೈಕ್ಯ ರೂಪಿಣ್ಯೈ ನಮಃ' ಎಂಬ ಮಂತ್ರದ ಲೇಖನ ಯಜ್ಞದೊಂದಿಗೆ ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ ಹಾಗೂ ಅಮ್ಮನವರಿಗೆ ಭಕ್ತಿಭಾವದ ಕೃತಜ್ಞತೆ ಅರ್ಪಿಸಲಾಗುತ್ತದೆ. ಈ ವಿಶೇಷ ಲೇಖನ ಯಜ್ಞಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದವರು ಹೇಳಿದರು.

ಕಿರುಸುದ್ದಿ

ನೀಲೇಶ್ವರ ಕೋಟಪುರಂ ಕ್ಷೇತ್ರದಿಂದ ಕಳವು: ಸಿಸಿಟಿವಿಯಲ್ಲಿ ಕಳ್ಳರ ಚಿತ್ರ ದಾಖಲು

ಕಾಞಂಗಾಡು: ನೀಲೇಶ್ವರ ಕೋಟಪ್ಪುರಂ ವೈಕುಂಠ ಕ್ಷೇತ್ರದಿಂದ ಕಳವು ನಡೆಸಲಾಗಿದೆ. ಗರ್ಭಗುಡಿಯ ಹಾಗೂ ಕಚೇರಿಯ ಬೀಗಿ ಮುರಿದು ಒಳನುಗ್ಗಿದ ಕಳ್ಳರು ಆರರಷ್ಟು ಕಾಣಿಕೆ ಹುಂಡಿಗಳನ್ನು ಮುರಿದ ಸ್ಥಿತಿಯಲ್ಲಿ ಪತ್ತೆಹಚ್ಚಲಾಗಿದೆ. ಕೇತ್ರ ಆಡಳಿತಾ ಸಮಿತಿ ಕಾರ್ಯದರ್ಶಿ ಎ.ರಾಜು ಅವರ ದೂರಿನಂತೆ ನೀಲೇಶ್ವರ ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ಆರಂಭಿಸಿದ್ದಾರೆ. ಭಾನುವಾರ ರಾತ್ರಿ 8.30ರ ವೇಳೆ ಕ್ಷೇತ್ರದ ಒಳ ನುಗ್ಗಿದ ಕಳ್ಳ ರಾತ್ರಿ 12.30ರ ವೇಳೆ ಅಲ್ಲಿಂದ ತೆರಳಿದ ಬಗ್ಗೆ ಸಿಸಿಟಿವಿ ಕ್ಯಾಮರಾದಲ್ಲಿ ಕಳ್ಳರ ದೃಶ್ಯಗಳು ದಾಖಲಾಗಿದ್ದು, ಮುಂದಿನ ತನಿಖೆ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದರು.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಫೋಟೋಗ್ರಾಫರ್ ಮೃತ್ಯು

ಬೆಳ್ತಂಗಡಿ: ಕಾರು ಮತ್ತು ಬೈಕ್ ನಡುವೆ ಸೋಮಂತಡ್ಕ ಆಗರಿ ಕ್ರಾಸ್ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗಂಭಿರವಾಗಿ ಗಾಯಗೊಂಡಿದ್ದ ಯುವ ಫೋಟೋಗ್ರಾಫರ್ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಬೆಳ್ತಂಗಡಿ ತಾಲೂಕಿನ ಕಳೆಂಜ ಅಶ್ವಥಡಿ ಮನೆಯ ನಿವಾಸಿ ನೋಣಯ್ಯ ಗೌಡ ಅವರ ಪುತ್ರ, ಯುವ ಫೋಟೋಗ್ರಾಫರ್ ಗಣೇಶ್ ಗೌಡ (36ವ) ಮೃತ ವ್ಯಕ್ತಿಯಾಗಿದ್ದಾರೆ. ಇವರು ಮೇ 24 ರಂದು ಉಜಿರೆಯಿಂದ ಕಕ್ಕಿಂಜೆ ಕಡೆಗೆ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಎದುರಿನಿಂದ ಬಂದ ಕಾರಿಗೆ ಡಿಕ್ಕಿಹೊಡೆದಿದ್ದು ರಸ್ತೆಗೆ ಎಸೆಯಲ್ಪಟ್ಟು ಗಂಭೀರವಾಗಿ ಗಾಯಗೊಂಡಿದ್ದರು ಕೂಡಲೇ ಅವರನ್ನು ಮಂಗಳೂರಿನ ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ನೀಡಿದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತ ಪಟ್ಟಿದ್ದಾರೆ. ಬೆಳ್ತಂಗಡಿ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಲಾರಿಗೆ ಸ್ಕೂಟರ್ ಡಿಕ್ಕಿ: ಸವಾರ ಮೃತ್ಯು

ವಿಟ್ಲ: ಮಾಣಿ ಸಮೀಪ ಸೋಮವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಡಿಯೋ ಸ್ಕೂಟರ್ ಸವಾರರೊಬ್ಬರು ಮೃತಪಟ್ಟಿದ್ದಾರೆ. ಕಲ್ಲಡ್ಕದಿಂದ ಪುತ್ತೂರಿನತ್ತ ಬರುತ್ತಿದ್ದ ಡಿಯೋ ಸ್ಕೂಟರ್ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಸವಾರ ಕಲಂದರ್ ಶಾ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಲಂದರ್ ಶಾ ಮೂಲತಃ ಸುಳ್ಯ ನಿವಾಸಿಯಾಗಿದ್ದು, ಪ್ರಸ್ತುತ ಪುತ್ತೂರಿನ ಕಲ್ಲರ್ಪೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ಮಂಗಳೂರು ಧಕ್ಕೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಘಟನೆಯ ಕುರಿತು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಕಡಬ: ಸ್ನಾನಕ್ಕೆ ತೆರಳಿದ್ದ ವೃದ್ಧ ನದಿಯಲ್ಲಿ ಮುಳುಗಿ ಸಾವು

ಕಡಬ: ಕಡಬ ತಾಲೂಕಿನ ಕೊಣಾಜೆ ಗ್ರಾಮದಲ್ಲಿ ನದಿಗೆ ಸ್ನಾನಕ್ಕೆ ತೆರಳಿದ್ದ ವೃದ್ಧರೊಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಮೇ 24ರಂದು ಸಂಜೆ ಸಂಭವಿಸಿದೆ. ಕೊಣಾಜೆ ಗ್ರಾಮದ ಸುಬ್ರಹ್ಮಣ್ಯ (70) ಮೃತಪಟ್ಟವರು.

ಇವರು ಕಳೆದ ಒಂದು ವರ್ಷದಿಂದ ಕಡಬ, ಮರ್ದಾಳ ಮುಂತಾದೆಡೆ ವಿವಿಧ ಹೊಟೇಲ್‌ಗಳಲ್ಲಿ ಕೆಲಸ ಮಾಡಿಕೊಂಡಿದ್ದರು. ಮೇ 24ರಂದು ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ ಸುಬ್ರಹ್ಮಣ್ಯ ಅವರು ಪ್ರತಿದಿನದ ಅಭ್ಯಾಸದಂತೆ ಸಂಜೆ ಸುಮಾರು 5.45ರ ವೇಳೆಗೆ ಮನೆಯ ಸಮೀಪದ ನದಿಗೆ ಸ್ನಾನಕ್ಕೆ ತೆರಳಿದ್ದರು. ಸಾಕಷ್ಟು ಸಮಯವಾದರೂ ಅವರು ಮನೆಗೆ ಮರಳಿ ಬಾರದ ಹಿನ್ನೆಲೆಯಲ್ಲಿ ಪುತ್ರ ಧರ್ಮರಾಜ್ ಹೋಗಿ ನೋಡಿದಾಗ ಅವರು ನೀರಿನಲ್ಲಿ ಮುಳುಗುತ್ತಿರುವುದು ಕಂಡು ಬಂತು. ಕೂಡಲೇ ಅವರು ಸ್ನೇಹಿತರಾದ ಶಿವರಾಜ್, ಮಣಿ ಹಾಗೂ ಇತರರ ಸಹಾಯದಿಂದ ಸುಬ್ರಹ್ಮಣ್ಯ ಅವರನ್ನು ನದಿಯಿಂದ ಮೇಲಕ್ಕೆತ್ತಿ ಆ್ಯಂಬುಲೆನ್ಸ್ ಮೂಲಕ ಕಡಬ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಆದರೆ ಅದಾಗಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಉಪ್ಪಿನಂಗಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಡೀಮ್ಡ್ ಅರಣ್ಯ ತಪ್ಪು ಸರಿಪಡಿಸಲು ಯತ್ನ: ಸಚಿವ ಖಂಡ್ರೆ

ಸುಪ್ರೀಂಗೆ ಮನವಿ ಸಲ್ಲಿಸಲು ಸಮಿತಿ ರಚನೆ

ಉಡುಪಿ: ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶದಲ್ಲಿ ಸರ್ಕಾರಿ ಕಟ್ಟಡ, ಆಸ್ಪತ್ರೆ, ಅಂಗನವಾಡಿ ಇತ್ಯಾದಿ ಇದ್ದು, ಆಗಿರುವ ತಪ್ಪು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಕಾರ್ಕಳದಲ್ಲಿ ವಲಯ ಅರಣ್ಯಾಧಿಕಾರಿಗಳ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ನೂತನ ಕಟ್ಟಡ ಉದ್ಘಾಟಿಸಿ, ಅರಣ್ಯ ಹುತಾತ್ಮರಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಡೀಮ್ಡ್ ಅರಣ್ಯ ಸಮಸ್ಯೆ ಪರಿಹರಿಸಲು ಕೊನೆಯ ಅವಕಾಶ ದೊರೆತಿದ್ದು, ಸರ್ವೋನ್ನತ ನ್ಯಾಯಾಲಯಕ್ಕೆ ಮರು ಮನವಿ ಸಲ್ಲಿಸುವ ಸಲುವಾಗಿ ಜಿಲ್ಲಾ ಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಸಮಿತಿ ರಚಿಸಲಾಗಿದೆ ಎಂದರು.

ಮೊದಲಿಗೆ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದಾಗ 9 ಲಕ್ಷ ಹೆಕ್ಟೇರ್ ಜಮೀನನ್ನು ಡೀಮ್ಡ್ ಎಂದು ಗುರುತಿಸಲಾಗಿತ್ತು, ನಂತರ 2022ರಲ್ಲಿ ಪ್ರಮಾಣಪತ್ರ ಸಲ್ಲಿಸಿದಾಗ 3 ಲಕ್ಷ 33 ಸಾವಿರ ಹೆಕ್ಟೇರ್ ಜಮೀನು ಎಂದು ಪರಿಷ್ಕರಿಸಲಾಯಿತು. ಆಗ ಸಮರ್ಪಕವಾಗಿ ಸರ್ವೆ ನಡೆಸದೆ, ಖುದ್ದು ಪರಿಶೀಲಿಸದ ಕಾರಣ ಸರ್ಕಾರಿ ಕಟ್ಟಡ, ಶಾಲೆ, ಆಸ್ಪತ್ರೆ, ಪಟ್ಟಾ ಭೂಮಿ ಸೇರಿದೆ. ಬಡ ಮತ್ತು ಮಧ್ಯಮ ವರ್ಗದ ಜನರು ಸಂಕಷ್ಟ ಎದುರಿಸುತ್ತಿದ್ದು, ಈ ಲೋಪ ಸರಿಪಡಿಸಬೇಕಾಗಿದೆ ಎಂದರು.

ಕುದುರೆಮುಖ ಪ್ರಕರಣದಲ್ಲಿ ಕೋರ್ಟ್ ನಿರ್ದೇಶನ ಪಾಲನೆ

ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಅರಣ್ಯ ಇಲಾಖೆಗೆ ದಂಡ ಮತ್ತು ಇತರ ಶುಲ್ಕವನ್ನು ಪಾವತಿಸಬೇಕಾಗಿದೆ. ಪ್ರಸ್ತುತ ಹೈಕೋರ್ಟ್ ಈ ಸಂಬಂಧ ನಿರ್ದೇಶನ ನೀಡಿದ್ದು, ನ್ಯಾಯಾಲಯದ ಆದೇಶದಂತೆ ಸರ್ಕಾರ ನಡೆಯಲಿದೆ ಎಂದರು.ಇದೇ ಸಂದರ್ಭದಲ್ಲಿ ವಲಯ ಅರಣ್ಯಾಧಿಕಾರಿಗಳ ಕಚೇರಿಯ ಆವರಣದಲ್ಲಿ ಸಸಿ ನೆಟ್ಟು ನೀರೆರೆದರು.

ಮುಂಚೂಣಿ ಸಿಬ್ಬಂದಿಗೆ ಸುರಕ್ಷತಾ ಸಲಕರಣೆ ನೀಡಿ

ಅರಣ್ಯ ರಕ್ಷಣೆಯಲ್ಲಿ ಮುಂಚೂಣಿ ಸಿಬ್ಬಂದಿಯ ಪಾತ್ರ ಮಹತ್ವದ್ದಾಗಿದ್ದು, ಅವರಸುರಕ್ಷತೆಗಾಗಿ ವಿದ್ಯುತ್ ಪ್ರವಹಿಸುವ ಕೈಗೋಲು (ಸ್ಟಿಕ್), ಮಳೆಯಿಂದ ರಕ್ಷಿಸುವ ಜಾಕೆಟ್, ಶೂ ಇತ್ಯಾದಿ ನೀಡುವಂತೆ ಸಚಿವರುಸೂಚಿಸಿದ್ದಾರೆ. ಈಸಂದರ್ಭದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕರಿಕಳನ್, ಕಮಲಾ ಕರಿಕಳನ್ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

1224 ಸರ್ವೇ ನಂಬರ್‌ಗಳು ಡೀಮ್ಡ್

ಉಡುಪಿ ಜಿಲ್ಲೆಯಲ್ಲಿ 1224 ಸರ್ವೆ ನಂಬರ್ ಗಳಲ್ಲಿ ಪರಿಭಾವಿತ (ಡೀಮ್ಡ್) ಅರಣ್ಯವಿದ್ದು, ಇದರಲ್ಲಿ ಸಂಪೂರ್ಣ ಡೀಮ್ಡ್ ಇರುವ 400 ಸರ್ವೆ ನಂಬರ್ ಗಳಿವೆ. ಉಳಿದ 800 ಸರ್ವೆ ನಂಬರ್ ಗಳ ಪೈಕಿ 94 ಸರ್ವೆ ನಂಬರ್‌ಗಳ ಜಂಟಿ ಸರ್ವೆ ಮಾಡಲಾಗಿದೆ ಎಂದು ಸಭೆಗೆ ಜಿಲ್ಲಾಧಿಕಾರಿಗಳು ತಿಳಿಸಿದರು. ಕೂಡಲೇ ಹೆಚ್ಚುವರಿ ಮೋಜಣಿದಾರರನ್ನು ಅರಣ್ಯ ಮತ್ತು ಕಂದಾಯ ಇಲಾಖೆಯಿಂದ ನಿಯೋಜಿಸಿ ಉಳಿದ ಸರ್ವೆ ನಂಬರ್ ಗಳ ಸರ್ವೆ ಕಾರ್ಯ ವನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ, ಕೆ.ಎಂ.ಎಲ್.ನಲ್ಲಿ ಅಳವಡಿಸುವಂತೆ ಅರಣ್ಯ ಸಚಿವರು ಸೂಚಿಸಿದರು.

ವನ್ಯಜೀವಿ–ಮಾನವ ಸಂಘರ್ಷ ತಡೆಗೆ ಸೂಚನೆ

ಪುತ್ತೂರು, ಹೆಬ್ರಿ, ಸುಳ್ಯ, ಉಪ್ಪಿನಂಗಡಿ, ಬೆಳ್ತಂಗಡಿ, ವೇಣೂರು, ಕಾರ್ಕಳ ಮೊದಲಾದ ಕಡೆಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷದ ಪ್ರಕರಣಗಳು ನಡೆಯುತ್ತಿದ್ದು, ಇದನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಇದೇ ವೇಳೆ ಶಂಕರನಾರಾಯಣ ವಲಯ ಹೆನ್ನಬಯಲು ಸೆಕ್ಷನ್‌ನಲ್ಲಿ ಚಿರತೆಯೊಂದನ್ನು ಕೊಂದು ಅದರ ಕಾಲುಗಳನ್ನು ಕತ್ತರಿಸಿಕೊಂಡು ಹೋಗಿದ್ದ ದುಷ್ಕರ್ಮಿಗಳನ್ನು ಹುಡುಕಿ ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಅಧಿಕಾರಿ ಸಿಬ್ಬಂದಿಯ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಫಿಶ್‌ಮಿಲ್‌ಗಳ ವಿರುದ್ಧ ಕ್ರಮಕ್ಕೆ ಸೂಚನೆ

ಮಾಲಿನ್ಯಕಾರಕವಾದ ಫಿಶ್ ಮಿಲ್‌ಗಳ ವಿರುದ್ಧ ಕ್ರಮ ವಹಿಸಲು ಸೂಚಿಸಿದ ಅರಣ್ಯ ಸಚಿವರು, ನದಿಗಳ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಿ, ಶುದ್ಧೀಕರಣ ಘಟಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬ ಬಗ್ಗೆ ನಿಗಾ ಇಡುವಂತೆ ಸೂಚಿಸಿದರು.

ಜಿಲ್ಲಾಧಿಕಾರಿ ಸ್ವರೂಪ .ಟಿ. ಕೆ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ತ್ರಿಪಾಠಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕರಿಕಳನ್ ಮತ್ತು ಕಮಲಾ ಕರಿಕಳನ್ ಮತ್ತಿತರರು ಪಾಲ್ಗೊಂಡಿದ್ದರು.



ಸೆಕ್ಷನ್ 4 ಸಮಸ್ಯೆ ಪರಿಹರಿಸಲು ವ್ಯವಸ್ಥಾಪನಾಧಿಕಾರಿ ನೇಮಕ

ಸೆಕ್ಷನ್ 4 ಪ್ರಕ್ರಿಯೆ ನಡೆದು, ಸೆಕ್ಷನ್ 17 ಮಾಡಿರುವ ಸುಮಾರು 2000 ಎಕರೆ ಪ್ರದೇಶವನ್ನು ಕೂಡಲೇ ಅಧಿಸೂಚಿತ ಅರಣ್ಯ ಎಂದು ದಾಖಲಿಸಲು ಕ್ರಮ ವಹಿಸುವಂತೆ ಸಚಿವರು ಸೂಚಿಸಿದರು. ಉಡುಪಿಯಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮಂಗಳೂರು ವೃತ್ತದಲ್ಲಿ 6144.99 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ 55 ಪ್ರಕರಣಗಳು ಸೆಕ್ಷನ್ 17 ಅಂದರೆ ಅಧಿಸೂಚಿತ ಅರಣ್ಯ ಎಂದು ಘೋಷಿಸಲು ಬಾಕಿ ಇದ್ದು, ಈ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ವ್ಯವಸ್ಥಾಪನಾಧಿಕಾರಿ ನೇಮಕಕ್ಕೆ ಕ್ರಮ ವಹಿಸಲಾಗುವುದು ಎಂದರು.

ನೀಲಾವರದಲ್ಲಿ ಪೇಜಾವರ ಶ್ರೀಗಳ ಸ್ಮೃತಿವನ ಉದ್ಘಾಟನೆ

ಶ್ರೀಗಳು ಪ್ರಗತಿಪರ ಚಿಂತನೆಯ ಯತಿ

ಉಡುಪಿ: ಪೇಜಾವರ ಮಠದ ಪೀಠಾಧಿಪತಿಗಳಾಗಿದ್ದ ಕೀರ್ತಿಶೇಷ ಪೇಜಾವರ ಶ್ರೀಗಳು ತಮ್ಮ ಪ್ರಗತಿಪರ ಚಿಂತನೆಗಳಿಂದ ನಾಡಿನ ಜನರ ಮನಗೆದ್ದಿದ್ದರು ಎಂದು ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ಉಡುಪಿ ಬಳಿಯ ನೀಲಾವರದಲ್ಲಿ ಪೇಜಾವರ ಶ್ರೀಗಳ ಸ್ಮೃತಿವನ ಉದ್ಘಾಟಿಸಿ ಮಾತನಾಡಿದ ಅವರು, ಪ್ರಕೃತಿ, ಪರಿಸರ ಸಂರಕ್ಷಣೆಯ ಕ್ಷೇತ್ರಕ್ಕೂ ಶ್ರೀಗಳು ನೀಡಿರುವ ಕೊಡುಗೆ ಅಪಾರವಾದ್ದು, ಅವರು ನಕ್ಸಲರ ಮನವೊಲಿಸುವ ಕಾರ್ಯವನ್ನೂ ಮಾಡಿದ್ದರು, ಶಾಂತಿಯನ್ನು ಪ್ರತಿಪಾದಿಸುತ್ತಿದ್ದರು ಎಂದರು.

₹1 ಕೋ.ಅನುದಾನದ ಭರವಸೆ

33ನೇ ಯತಿಗಳಾಗಿದ್ದ ಶ್ರೀ ಪೇಜಾವರ ಶ್ರೀಗಳ ಹೆಸರಿನ ಸ್ಮೃತಿವನ ಉದ್ಘಾಟಿಸುತ್ತಿರುವುದು ತಮ್ಮ ಸೌಭಾಗ್ಯ ಎಂದ ಅವರು, ನೀಲಾವರದ ಸ್ಮೃತಿವನದ ಸಮೀಪದಲ್ಲೇ 2 ಎಕರೆ ಪ್ರದೇಶದಲ್ಲಿ ಮತ್ತೊಂದು ವನ ನಿರ್ಮಿಸಲು ಮುಂದಾಗಿರುವ ಮಠಕ್ಕೆ 1 ಕೋಟಿ ರೂ. ಅನುದಾನ ನೀಡುವ ಭರವಸೆ ನೀಡಿದರು. ಇದೇ ವೇಳೆ ಕಳೆದ ಆರು ತಿಂಗಳ ಹಿಂದೆ ನಡೆದಾಡುವ ದೇವರು ಎಂದೇ ಖ್ಯಾತರಾಗಿದ್ದ ಸಿದ್ದಗಂಗಾಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ ಹೆಸರಿನಲ್ಲೂ ಸ್ಮೃತಿವನ ಉದ್ಘಾಟಿಸಿದ್ದನ್ನು ಸ್ಮರಿಸಿದರು.

ಮಹಾವನ ನಿರ್ಮಿಸಲು ಶ್ರೀಮಠ ಸಿದ್ಧ : ವಿದ್ಯಾಪ್ರಸನ್ನ ತೀರ್ಥರು.

ಪೇಜಾವರದ ಶ್ರೀ ವಿಶ್ವ ಪ್ರಸನ್ನ ಶ್ರೀಪಾದರು ಮಾತನಾಡಿ, ಪೇಜಾವರ ಶ್ರೀಗಳ ಸ್ಮೃತಿವನ ಸಾಕಾರಕ್ಕೆ ಸಹಕಾರ ನೀಡಿದ ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಅವರನ್ನು ಅಭಿನಂದಿಸಿದರು.

2031 ಶ್ರೀ ಪೇಜಾವರಶ್ರೀಗಳ ಜನ್ಮ ಶತಮಾನೋತ್ಸವ ವರ್ಷವಾಗಿದ್ದು, ಅವರ ಹೆಸರಿನಲ್ಲಿ ಒಂದು ಮಹಾವನ ನಿರ್ಮಿಸುವ ಕನಸಿದೆ. ಸರ್ಕಾರ 1 ಸಾವಿರ ಎಕರೆ ಬರಡು ಭೂಮಿ ನೀಡಿದರೂ ಮಹಾವನ ನಿರ್ಮಿಸಲು ಶ್ರೀಮಠ ಸಿದ್ಧ ಎಂದು ಹೇಳಿದರು. ಇದಕ್ಕೆ ಸ್ಪಂದಿಸಿದ ಸಚಿವ ಈಶ್ವರ ಖಂಡ್ರೆ ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಶಾಸಕ ಯಶಪಾಲ್ ಸುವರ್ಣ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ತ್ರಿಪಾಠಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕರಿಕಳನ್ ಮತ್ತಿತರರುಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ವರದಕ್ಷಿಣೆ ಹಿಂಸೆಗೆ ಬೇಸತ್ತು ಆ್ಯಸಿಡ್ ಸೇವಿಸಿ ಮಹಿಳೆ ಸಾವು: ಪತಿಯ ಸೆರೆ

ಕಾಸರಗೋಡು: ಹೊಸದಾಗಿ ಮದುವೆಯಾದಯುವಮಹಿಳೆಯೊಬ್ಬಳು ಪತಿಯ ವರದಕ್ಷಿಣೆ ಹಿಂಸೆಯಿಂದ ನಲುಗಿಹೋಗಿ ಪತಿ ಮನೆಯಲ್ಲೇ ಆ್ಯಸಿಡ್ ಸೇವಿಸಿ ಸಾವನ್ನಪ್ಪಿದ ದಾರುಣ ಘಟನೆ ಕಾಸರಗೋಡು ಜಿಲ್ಲೆಯ ಪನಾಲಮ್‌ನಲ್ಲಿ ನಡೆದಿದೆ. ಸಾವನ್ನಪ್ಪಿದ ಮಹಿಳೆಯನ್ನು 24ರ ಹರೆಯದ ಫಾತಿಮತ್ ಸುಫೈದಾ ಎಂದು ಗುರುತಿಸಲಾಗಿದ್ದು, ಈಕೆ ಚೆರ್ಲಾಡುಕ್ಕಮ್ ಮೂಲದವರಾಗಿದ್ದಾರೆ.

ಶನಿವಾರ ರಾತ್ರಿ ಅತ್ತೆಮಾವನ ಮುಂದೆಯೇ ಈಕೆ ಆ್ಯಸಿಡ್ ಸೇವಿಸಿದ್ದು, ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಲಿಲ್ಲ. ಯುವಮಹಿಳೆಗೆ ಪತಿ ಆದಿಲ್ ಮತ್ತು ಅತ್ತೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದು, ವರದಕ್ಷಿಣೆಗಾಗಿ ಪತಿ ಆಕೆಯನ್ನು ಇನ್ನಿಲ್ಲದಂತೆ ಹಿಂಸಿಸುತ್ತಿದ್ದುದಾಗಿ ಕುಟುಂಬ ಆರೋಪಿಸಿದೆ.ಮನೆಯಲ್ಲಿ ಇದಕ್ಕೂ ಮುನ್ನ ಗಲಾಟೆಯಾಗಿದ್ದು ಆಕೆ ತನ್ನ ಸಹೋದರ ಎಂ.ಕೆ.ಅಬ್ದುಲ್ ವಾಸಿಲ್‌ಗೆ ಕರೆ ಮಾಡಿದ್ದು, ತಾನು ತವರು ಮನೆಗೆ ವಾಪಸಾಗುವುದಾಗಿ ತಿಳಿಸಿದ್ದಾಳೆ. ಆದರೆ ಪತಿ ಆಕೆಯ ಕೈಯ್ಯಿಂದ ಮೊಬೈಲನ್ನು ಕಸಿದುಕೊಂಡು ಗೋಡೆಗೆ ಅಪ್ಪಳಿಸಿ ಪುಡಿಗೈದಿದ್ದಾಗಿ ಪೊಲೀಸ್ ಮೂಲಗಳು ತಿಳಿಸಿವೆ.ಇದೀಗ ಪತಿ ಆದಿಲ್‌ನನ್ನು ಬಂಧಿಸಲಾಗಿದೆ.

ಆಸ್ಪತ್ರೆಯಲ್ಲಿ ದಾಖಲಾಗಿದ್ದ ಮಹಿಳೆಯ ಮೊಬೈಲ್ ಫೋನ್ ಕಳವು: ಆರೋಪಿ ಪೊಲೀಸ್ ವಶಕ್ಕೆ

ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದ ಮಹಿಳೆಯ ಮೊಬೈಲ್ ಫೋನ್ ಕಳವುಗೈದ ಪ್ರಕರಣದ ಆರೋಪಿಯನ್ನು ಕಾಸರಗೋಡು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ.

ಚೆರ್ಕಳ ಕ್ವಾರ್ಟರ್ಸ್ಒಂದರಲ್ಲಿ ವಾಸಿಸುತ್ತಿರುವ ಮೂಲತ ಮುಟ್ಟತ್ತೋಡಿ ತೈವಳಪ್ ನಿವಾಸಿ ಅಜ್ಮಲ್ ಫಿರೋಸಾ (23) ಪೊಲೀಸ್ ಕಸ್ಟಡಿಗೊಳಗಾದ ಆರೋಪಿ. ಮೇ 5ರಂದು ಚಿಕಿತ್ಸೆಗಾಗಿ ಕಾಸರಗೋಡು ಜನರಲ್ ಆಸ್ಪತ್ರೆಯ ಮಹಿಳಾ ವಾರ್ಡ್‌ನಲ್ಲಿ ದಾಖಲಾಗಿದ್ದ ಬೋವಿಕ್ಕಾನ ನಿವಾಸಿ ರಮ್ಯಾ ಎಂಬವರ 70 ಸಾವಿರ ರೂ. ಮೌಲ್ಯದ ಮೊಬೈಲ್ ಫೋನ್ ಕಳವುಗೈದ ಬಗ್ಗೆ ಅವರು ನೀಡಿದ ದೂರಿನಂತೆ ಕಾಸರಗೋಡು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಬಗ್ಗೆ ಆರೋಪಿಯನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ.

ಕೊಲ್ಲೂರು ಸಮೀಪ ನಡೆದಿದ್ದ ಅಪಘಾತದಲ್ಲಿ ಮೃತರ ಮೈಮೇಲಿನ ಚಿನ್ನ ದೋಚಿದ್ದ ಕಟುಕ

ಸೊತ್ತು ಸಹಿತ 24 ತಾಸಿನೊಳಗೆ ಆರೋಪಿ ಸೆರೆ

ಉಡುಪಿ: ಕೊಲ್ಲೂರು ಸಮೀಪದ ದಳಿಯಲ್ಲಿ ಇತ್ತೀಚೆಗೆ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ಕೇರಳ ಮೂಲದ ಮಹಿಳಾ ಯಾತ್ರಾರ್ಥಿಯೋರ್ವರ ಮೈಮೇಲಿನ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಕಳವು ಮಾಡಿದ್ದ ಕಟುಕ ಆರೋಪಿಯನ್ನು ಕೊಲ್ಲೂರು ಪೊಲೀಸರು ಕೇವಲ 24 ಗಂಟೆಗಳ ಅವಧಿಯಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಲ್ಲೂರು ಗ್ರಾಮದ ಕಲ್ಯಾಣಿಗುಡ್ಡೆ ನಿವಾಸಿ ಹೇಮಂತ (40) ಬಂಧಿತ ಆರೋಪಿ. ಈತನಿಂದ ಸುಮಾರು 2,07,000 ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ದುರಂತದ ಸ್ಥಳದಲ್ಲೇ ವಿಕೃತಿ ಮೆರೆದ ಕಳ್ಳ!

ಮೇ 17 ರಂದು ಕೊಲ್ಲೂರು ಗ್ರಾಮದ ದಳಿ ಎಂಬಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಕೇರಳ ಮೂಲದ ಇಬ್ಬರು ಮಹಿಳಾ ಯಾತ್ರಾರ್ಥಿಗಳು ಮೃತಪಟ್ಟಿದ್ದರು. ಈ ಬಗ್ಗೆ ಕೊಲ್ಲೂರು ಠಾಣೆಯಲ್ಲಿ ಅಪರಾಧ ಕ್ರಮಾಂಕ 37/2026 ರಂತೆ ಪ್ರಕರಣ ದಾಖಲಾಗಿತ್ತು. ಆದರೆ, ಅಪಘಾತದ ತೀವ್ರತೆಗೆ ಸ್ಥಳದಲ್ಲೇ ಮೃತಪಟ್ಟಿದ್ದ ಮಹಿಳೆಯೋರ್ವರ ಮೈಮೇಲಿನ ಚಿನ್ನಾಭರಣಗಳನ್ನು ಅಪರಿಚಿತ ವ್ಯಕ್ತಿಯೊಬ್ಬ ಕಿತ್ತುಕೊಂಡು ಪರಾರಿಯಾಗಿದ್ದ. ಈ ಅಮಾನುಷ ಕೃತ್ಯದ ಕುರಿತು ಶ್ರೀಕುಮಾರ ಎಂಬವರು ನೀಡಿದ ದೂರಿನಂತೆ ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಕಳ್ಳತನ ಪ್ರಕರಣ ದಾಖಲಾಗಿತ್ತು.



ಫೋಟೋ, ಸಿಸಿಟಿವಿ ಜಾಲಾಡಿ ಆರೋಪಿ ಪತ್ತೆ

ಕುಂದಾಪುರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ಹೆಚ್. ಡಿ. ಕುಲಕರ್ಣಿ ಹಾಗೂ ಬೈಂದೂರು ವೃತ್ತ ನಿರೀಕ್ಷಕ ಶಿವಕುಮಾರ ಅವರ ಮಾರ್ಗದರ್ಶನದಲ್ಲಿ ಕಾರ್ಯಪ್ರವೃತ್ತರಾದ ಕೊಲ್ಲೂರು ಉಪನಿರೀಕ್ಷಕ ವಿನಯ ಎಂ. ಕೊರ್ಲಹಳ್ಳಿ ಮತ್ತು ತಂಡದ ಹೆಚ್‌ಸಿಗಳಾದ ನಾಗೇಂದ್ರ, ಲಕ್ಷ್ಮಣ ಗಾಣಿಗ, ರಾಘವೇಂದ್ರ ಹಾಗೂ ಪಿಸಿ ನಾಗರಾಜ ಅವರು ಕಾರ್ಯಾಚರಣೆ ಕೈಗೆತ್ತಿಕೊಂಡರು.

ಘಟನಾ ಸ್ಥಳದಲ್ಲಿದ್ದ ಸಿಸಿಟಿವಿ ದೃಶ್ಯಾವಳಿಗಳು, ಅಪಘಾತದ ವೇಳೆ ಸಾರ್ವಜನಿಕರು ಮೊಬೈಲ್‌ನಲ್ಲಿ ತೆಗೆದಿದ್ದ ವಿವಿಧ ಫೋಟೋಗಳು ಹಾಗೂ ತಾಂತ್ರಿಕ ಸೂಕ್ಷ್ಮ ಸುಳಿವುಗಳ ಆಧಾರದ ಮೇಲೆ ಆರೋಪಿ ಹೇಮಂತನನ್ನು ಪೊಲೀಸರು ಪ್ರಕರಣ ದಾಖಲಾದ 24 ಗಂಟೆಯೊಳಗೆ ದಸ್ತಗಿರಿ ಮಾಡಿದ್ದಾರೆ.

ರೂ. 2.07 ಲಕ್ಷದ ಚಿನ್ನಾಭರಣ ವಶ, ನ್ಯಾಯಾಂಗ ಬಂಧನ

ಬಂಧಿತನಿಂದ 57,000 ರೂ. ಮೌಲ್ಯದ 1 ಚಿನ್ನದ ಉಂಗುರ (3.910 ಗ್ರಾಂ), 50,000 ರೂ. ಮೌಲ್ಯದ 1 ಚಿನ್ನದ ಬಳೆ (3.450 ಗ್ರಾಂ) ಹಾಗೂ 1,00,000 ರೂ. ಮೌಲ್ಯದ 1 ಚಿನ್ನದ ಸರ (7.160 ಗ್ರಾಂ) ಸೇರಿದಂತೆ ಒಟ್ಟು 2,07,000 ರೂ. ಮೌಲ್ಯದ ಒಡವೆಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ನ್ಯಾಯಾಲಯವು ಆತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಇಂದು ಕಟೀಲು ಮೇಳಗಳ ತಿರುಗಾಟಕ್ಕೆ ತೆರೆ : ಡಿಸೆಂಬರ್ 3ಕ್ಕೆ ಮತ್ತೆ ಆರಂಭ

ಕಿನ್ನಿಗೋಳಿ: ಕಟೀಲು ಶ್ರೀ ದುರ್ಗಾಪರಮೇಶ್ವರೀ ದಶಾವತಾರ ಯಕ್ಷಗಾನ ಮಂಡಳಿಯ ಏಳೂ ಮೇಳಗಳ ಈ ವರುಷದ ತಿರುಗಾಟ ಇಂದು ಕೊನೆಗೊಳ್ಳಲಿದೆ. ಮುಂದಿನ ತಿರುಗಾಟ ಡಿಸೆಂಬರ್ 3ರಂದು ಆರಂಭವಾಗಲಿದೆ.

ಸಪ್ತಕಲ್ಯಾಣ

ಇಂದು ಸಂಜೆ 6.15ಕ್ಕೆ ಚೌಕಪೂಜೆಯಾಗಿ ಏಳು ರಂಗಸ್ಥಳಗಳಲ್ಲಿ ಏಕಕಾಲಕ್ಕೆ ಪೂರ್ವರಂಗ ನಡೆದು, ಬಳಿಕ 8.30ರಿಂದ ಒಂದು ರಂಗಸ್ಥಳದಲ್ಲಿ ಏಳು ಮೇಳಗಳ ಕಲಾವಿದರಿಂದ ಸಪ್ತಕಲ್ಯಾಣ ಪ್ರಸಂಗಗಳು ಪ್ರದರ್ಶನಗೊಳ್ಳಲಿವೆ. ಶಶಿಪ್ರಭೆ, ದ್ರೌಪದಿ, ಸುಭದ್ರೆ, ಸ್ವಯಂಪ್ರಭೆ, ಶಿವಪ್ರಭೆ, ರತಿ, ಪದ್ಮಾವತಿ ಕಲ್ಯಾಣಗಳು ಪ್ರದರ್ಶನಗೊಂಡು, ಮರುದಿನ ಬೆಳಿಗ್ಗೆ ಮಂಗಳವಾಗಿ, ಕಲಾವಿದರು ದೇವರ ಎದುರು ಗೆಜ್ಜೆ ಬಿಚ್ಚಲಿದ್ದಾರೆ.

ಕಟೀಲು ಮೇಳಗಳ ಆಸಕ್ತ ಕಲಾವಿದರ ತಾಳಮದ್ದಲೆ ಒಂದು ವಾರಗಳ ಕಾಲ ಕಟೀಲು ದೇವಳದಲ್ಲಿ ನಡೆಯಲಿದೆ.

720 ದೇವೀಮಾಹಾತ್ಮ್ಯೆ

ಹೊಸದಾದ ಏಳನೆಯ ಮೇಳದೊಂದಿಗೆ ಕಟೀಲು ಮೇಳಗಳ ತಿರುಗಾಟ ನವೆಂಬರ್ 17ರಂದು ಆರಂಭವಾಗಿದ್ದು, 189ದಿನಗಳಲ್ಲಿ 1323 ಬಯಲಾಟಗಳಾಗಿವೆ. ಇವುಗಳಲ್ಲಿ 720 ದೇವೀಮಾಹಾತ್ಮ್ಯೆ ಪ್ರಸಂಗಗಳೇ ಆಗಿವೆ. ಒಂದನೇ ಮೇಳ 113, ಎರಡನೇ ಮೇಳ 108, ಮೂರನೇ ಮೇಳ 96, ನಾಲ್ಕನೇ ಮೇಳ 91, ಐದನೇ ಮೇಳ 107, ಆರನೇ ಮೇಳ 105, ಏಳನೇ ಮೇಳ 100 ಹೀಗೆ 720 ದೇವೀಮಾಹಾತ್ಮ್ಯೆ ಪ್ರಸಂಗಗಳು ಪ್ರದರ್ಶನಗೊಂಡವೆ. ಎರಡು ದಿನ ಎಲ್ಲ ಮೇಳಗಳೂ ದೇವೀ ಮಾಹಾತ್ಮ್ಯೆಯನ್ನೇ ಪ್ರದರ್ಶಿಸಿವೆ. ಕರಾವಳಿಯ ಮೂರು ಜಿಲ್ಲೆಗಳಲ್ಲದೆ, ಶಿವಮೊಗ್ಗ, ಬೆಂಗಳೂರು, ಚಿಕ್ಕಮಗಳೂರು, ತುಮಕೂರು ಜಿಲ್ಲೆಗಳಲ್ಲೂ ಈ ಬಾರಿ ಕಟೀಲು ಮೇಳಗಳ ಪ್ರದರ್ಶನ ನಡೆದಿದೆ. ಮುಂದಿನ ತಿರುಗಾಟದಲ್ಲೂ ಬೆಂಗಳೂರು ಆಟಕ್ಕೆ ಬೇಡಿಕೆ ಬಂದಿದೆ. ಮೇ ತಿಂಗಳಲ್ಲಿ ಮಳೆ ಹೆಚ್ಚಾಗಿದ್ದುದರಿಂದ ಕಟೀಲಿನ ಸಭಾಭವನಗಳಲ್ಲಿ ಹೆಚ್ಚು ಹರಕೆಯಾಟಗಳು ನಡೆದಿವೆ. ಕೆಲವು ದಿನ ನಾಲ್ಕು, ಐದು ಆಟಗಳೂ ನಡೆದಿವೆ. ಒಂದು ದಿನ ಆರೂ ಮೇಳಗಳ ಆಟ ಕಟೀಲಿನಲ್ಲೇ ಪ್ರದರ್ಶನವಾಗಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಮಂಗಳವಾರ 26, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
33° 26°	33° 27°


ಪುಟ 5
ಬದಲಾವಣೆ ಹಾದಿಯಲ್ಲಿ ಕಾಸರಗೋಡು ಜಿಲ್ಲೆಯ ಪರಪ್ಪ ಬುಡಕಟ್ಟು ಜನಾಂಗ


ಪುಟ 6
ಕೊಲ್ಲೂರು - ರಾಣಿಬೆನ್ನೂರು ದ್ವಿಪಥ ರಸ್ತೆ ಕಾಮಗಾರಿ ಅರೆಬರೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಹೊಸ ದಿಗಂತ
ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ

ಹೆಚ್ಚಿನ ಮಾಹಿತಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ
88612 09102
88612 09100

ಉಡುಪಿಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಮಹಿಳಾ ಆಯೋಗದ ಅಧ್ಯಕ್ಷೆ ಕುಶಲೋಪರಿ ಭೇಟಿ


ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ಸೋಮವಾರ ಉಡುಪಿ ನಗರದ ಕೂಸಮ್ಮ ಶಂಭು ಶೆಟ್ಟಿ ಸ್ಮಾರಕ ಹಾಜಿ ಅಬ್ದುಲ್ಲಾ ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ದಾಖಲಾಗಿರುವ ಗರ್ಭಿಣಿಯರು, ಬಾಣಂತಿಯರು, ರೋಗಿಗಳ ಜೊತೆ ಕುಶಲೋಪರಿ ನಡೆಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಅನುರಾಧ ಬಿ ಹಾದಿಮನೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಜಿಲ್ಲಾ ಸರ್ಜನ್ ಡಾ. ಅಶೋಕ್ ಹೆಚ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ನಾಯಕ್ ಹಾಗೂ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹಸಿಕಸಗಳ ಕಟ್ಟು ಮತ್ತೆ ಜೀವನದಿಯ ಒಡಲಿಗೆ!

ಉಪ್ಪಿನಂಗಡಿ: ಇಲ್ಲಿನ ಪಂಚಾಯತ್ ಆಡಳಿತದ ನೆಲೆಯಲ್ಲಿ ಸಂಜೀವಿನಿ ಮಹಿಳಾ ಸಂಘದ ಮೂಲಕ ನಡೆಸಲಾಗುತ್ತಿದ್ದ ತ್ಯಾಜ್ಯ ಸಂಗ್ರಹಣಾ ಕಾರ್ಯದಲ್ಲಿ ಕಳೆದ ಕೆಲ ದಿನಗಳಿಂದ ಹಸಿ ಕಸವನ್ನು ಸಂಗ್ರಹಿಸದೆ ಇದ್ದ ಪರಿಣಾಮ ನಾಗರಿಕರು ಹಸಿ ಕಸದ ಕಟ್ಟುಗಳನ್ನು ನದಿಗೆಸೆಯಲು ಪ್ರಾರಂಭಿಸಿದ್ದು, ಅಣೆಕಟ್ಟಿನ ಹಿನ್ನೀರು ತುಂಬಿದ ನದಿಯಲ್ಲಿ ಇದೀಗ ತ್ಯಾಜ್ಯಗಳು ತೇಲುವಂತಾಗಿದೆ.



ತ್ಯಾಜ್ಯ ಸಂಗ್ರಹಕ್ಕೆ 'ಸಂಜೀವಿನಿ' ಹಿಂದೇಟು?
ವ್ಯವಸ್ಥಿತವಾಗಿ ನಡೆಯುತ್ತಿದ್ದ ತ್ಯಾಜ್ಯ ಸಂಗ್ರಹಣಾ ಕಾರ್ಯದವು ಮೊದ ಮೊದಲು ಸಿಬ್ಬಂದಿ ಕೊರತೆಯ ಕಾರಣಕ್ಕೆ ಲೋಪವಾಗುತ್ತಿದೆ ಎನ್ನಲಾಗಿದ್ದರೆ, ಇದೀಗ ಹಸಿ ಕಸ ಸಂಗ್ರಹಣಕ್ಕೆ ಕಸ ಸಂಗ್ರಹಣದ ಹೊಣೆ ಹೊತ್ತ ಸಂಜೀವಿನಿ ತಂಡದ ಹಿಂದೇಟು ಕಾರಣ ಎಂದು ತಿಳಿಸಲಾಗಿದೆ. ಕಳೆದ ಒಂದು ವಾರದಿಂದ ಹಸಿ ಕಸವನ್ನು ಸಂಗ್ರಹಿಸದ ಕಾರಣ ಪೇಟೆಯುದ್ದಕ್ಕೂ ಸಮಸ್ಯೆ ಕಾಡಿದ್ದು, ತತ್ ಪರಿಣಾಮ ಜನತೆ ತಮ್ಮ ತಮ್ಮ ಮನೆ, ಸಂಸ್ಥೆಗಳಲ್ಲಿ ಸಂಗ್ರಹಿತವಾದ ಹಸಿ ತ್ಯಾಜ್ಯವನ್ನು ನದಿಗೆಸೆಯುವಂತಾಗಿದೆ. ತತ್ ಪರಿಣಾಮ ನದಿಯ ನೀರಿನ ಶುದ್ಧತೆಗೆ ಅಪಾಯ ಮೂಡಿದೆ. ಜಿಲ್ಲಾಡಳಿತ ಈ ಬಗ್ಗೆ ಗಮನ ಹರಿಸಿ ಉಪ್ಪಿನಂಗಡಿಯಲ್ಲಿನ ತ್ಯಾಜ್ಯ ವಿಲೇವಾರಿಯಲ್ಲಿ ಉಂಟಾಗಿರುವ ಲೋಪವನ್ನು ನಿವಾರಿಸುವತ್ತ ಗಮನಹರಿಸಬೇಕು. ತನ್ಮೂಲಕ ಜಿಲ್ಲೆಯ ಜೀವ ನದಿಯನ್ನೂ ತ್ಯಾಜ್ಯ ಮುಕ್ತಗೊಳಿಸಬೇಕೆಂದು ನೆಲ ಜಲ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಕೈಲಾರ್ ರಾಜಗೋಪಾಲ ಭಟ್ ಅಗ್ರಹಿಸಿದ್ದಾರೆ.

ಮುಂಗಾರು ಪೂರ್ವದಲ್ಲೇ ಮೆಸ್ಕಾಂಗೆ ಸಂಕಷ್ಟಗಳ ಸುರಿಮಳೆ

2 ತಿಂಗಳು, ನಷ್ಟ 303.18 ಲ.ರೂ.!

ಸಿಡಿಲು ಗಾಳಿಗೆ ತಂತಿ, ಕಂಬ, ಟ್ರಾನ್ಸ್‌ಫಾರ್ಮರ್ ಜಖಂ

■ ಸುದೀಪ್ ರಾಜ್ ಸುಳ್ಯ

ಸಂಗಮ ವಿಶೇಷ





ಉಡುಪಿ: ಜಿಲ್ಲೆಯಾದ್ಯಂತ ಕಳೆದ ಎರಡು ತಿಂಗಳುಗಳಿಂದ ಸುರಿಯುತ್ತಿರುವ ಮುಂಗಾರು ಪೂರ್ವ ಮಳೆಯ ಆರ್ಭಟಕ್ಕೆ ಮೆಸ್ಕಾಂ ಉಡುಪಿ ವಲಯವು ಅಕ್ಷರಶಃ ತೀವ್ರವಾಗಿ ತತ್ತರಿಸಿದೆ.

ಭಾರಿ ಗಾಳಿ-ಮಳೆ ಹಾಗೂ ಸಿಡಿಲಿನ ಹೊಡೆತಕ್ಕೆ ಉಡುಪಿ ಜಿಲ್ಲೆಯಾದ್ಯಂತ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಲೈನ್‌ಗಳು ಭಾರೀ ಪ್ರಮಾಣ ದಲ್ಲಿ ಜಖಂಗೊಂಡಿದ್ದು, ಕೋಟ್ಯಂತರ ರೂಪಾಯಿ ಆಸ್ತಿಪಾಸ್ತಿ ನಷ್ಟ ಸಂಭವಿಸಿದೆ. ಈ ವರ್ಷದ ಏ.1, ರಿಂದ ಮೇ 24ರವರೆಗಿನ ಅವಧಿಯಲ್ಲಿ ಉಡುಪಿ ಜಿಲ್ಲೆಯಾದ್ಯಂತ ಒಟ್ಟು ಮೂರು ಕೋಟಿಗೂ ಅಧಿಕ (ಸುಮಾರು 303.18 ಲಕ್ಷ ರೂ.) ನಷ್ಟ ಉಂಟಾಗಿದೆ.

ಟ್ರಾನ್ಸ್‌ಫಾರ್ಮರ್, ಲೈನ್‌ಗಳಿಗೆ ಅಪಾರ ಹಾನಿ
ಮುಂಗಾರು ಪೂರ್ವ ಮಳೆಯ ಜೊತೆಗೆ ಅಪ್ಪಳಿಸಿದ ಭೀಕರ ಸಿಡಿಲು ಹಾಗೂ ತಾಂತ್ರಿಕ ದೋಷಗಳಿಂದಾಗಿ ಜಿಲ್ಲಾದ್ಯಂತ ಒಟ್ಟು 190 ಟ್ರಾನ್ಸ್‌ಫಾರ್ಮರ್‌ಗಳು (ಟಿ.ಸಿ) ಸುಟ್ಟು ಹೋಗಿದ್ದು, ಇದರಿಂದ ಮೆಸ್ಕಾಂ ಇಲಾಖೆಗೆ 95 ಲಕ್ಷ ರೂಪಾಯಿ ನಷ್ಟವಾಗಿದೆ. ಉಡುಪಿ ವಿಭಾಗದಲ್ಲೇ ಗರಿಷ್ಠ ಅಂದರೆ 81 ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗಿದ್ದು, 40.50 ಲ.ರೂ. ಹಾನಿಯಾಗಿದೆ. ಕುಂದಾಪುರ ವಿಭಾಗದಲ್ಲಿ 61 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿ 30.50 ಲಕ್ಷ ರೂಪಾಯಿ ಹಾಗೂ ಕಾರ್ಕಳ ವಿಭಾಗದಲ್ಲಿ 48 ಟ್ರಾನ್ಸ್‌ಫಾರ್ಮರ್‌ಗಳು ಜಖಂಗೊಂಡು 24.00 ಲಕ್ಷ ರೂಪಾಯಿ ನಷ್ಟ ದಾಖಲಾಗಿದೆ. ಇದರೊಂದಿಗೆ ಜಿಲ್ಲೆಯಾದ್ಯಂತ ಒಟ್ಟು 11.08 ಕಿಲೋಮೀಟರ್ ಉದ್ದದ ವಿದ್ಯುತ್ ತಂತಿಗಳು ಹರಿದು ಬಿದ್ದಿದ್ದು, ಇದರಿಂದ 11.09 ಲಕ್ಷ ರೂಪಾಯಿ ನಷ್ಟವಾಗಿದೆ. ಇದರಲ್ಲಿ ಕಾರ್ಕಳ ವಿಭಾಗದಲ್ಲಿ 4.77 ಕಿ.ಮೀ., ಕುಂದಾಪುರದಲ್ಲಿ 4.72 ಕಿ.ಮೀ. ಹಾಗೂ ಉಡುಪಿಯಲ್ಲಿ 1.60 ಕಿ.ಮೀ. ನಷ್ಟ ವಿದ್ಯುತ್ ಲೈನ್‌ಗಳು ಹಾನಿಗೊಳಗಾಗಿವೆ.

- ಜಿಲ್ಲೆಯಲ್ಲಿ ಒಟ್ಟು 190 ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿವೆ
- ಒಟ್ಟು 11.08 ಕಿಲೋಮೀಟರ್ ಉದ್ದದ ವಿದ್ಯುತ್ ತಂತಿ ನೆಲಸೇರಿವೆ
- ಒಟ್ಟು 968 ವಿದ್ಯುತ್ ಕಂಬಗಳು ಗಾಳಿ ಮಳೆ ಆರ್ಭಟದಲ್ಲಿ ಸಂಪೂರ್ಣವಾಗಿ ನೆಲಸಮವಾಗಿವೆ

ಸುಮಾರು 197.09 ಲಕ್ಷ ರೂಪಾಯಿಗಳ ಭಾರೀ ನಷ್ಟ

ಉಡುಪಿ ಜಿಲ್ಲೆಯಾದ್ಯಂತ ಭಾರಿ ಗಾಳಿಗೆ ಮರಗಳು ಬುಡಮೇಲಾಗಿ ವಿದ್ಯುತ್ ಲೈನ್‌ಗಳ ಮೇಲೆ ಬಿದ್ದ ಪರಿಣಾಮವಾಗಿ ಒಟ್ಟು 968 ವಿದ್ಯುತ್ ಕಂಬಗಳು ನೆಲಸಮವಾಗಿವೆ. ಇದರಿಂದಾಗಿ ಮೆಸ್ಕಾಂಗೆ ಸುಮಾರು 197.09 ಲಕ್ಷ ರೂಪಾಯಿಗಳ ಭಾರಿ ನಷ್ಟ ಸಂಭವಿಸಿದೆ. ಈ ಪೈಕಿ ಕಾರ್ಕಳ ವಿಭಾಗದಲ್ಲಿ ಅತ್ಯಂತ ಗರಿಷ್ಠ ಪ್ರಮಾಣದ ಹಾನಿಯಾಗಿದ್ದು ಒಟ್ಟು 481 ಕಂಬಗಳು ಧ್ವಂಸಗೊಂಡು 97.93 ಲಕ್ಷ ರೂಪಾಯಿ ನಷ್ಟವಾಗಿದೆ. ಇನ್ನುಳಿದಂತೆ ಕುಂದಾಪುರ ವಿಭಾಗದಲ್ಲಿ 314 ಕಂಬಗಳು ಮುರಿದು ಬಿದ್ದು 63.93 ಲಕ್ಷ ರೂಪಾಯಿ ಹಾಗೂ ಉಡುಪಿ ವಿಭಾಗದಲ್ಲಿ 173 ಕಂಬಗಳು ಜಖಂಗೊಂಡು 35.22 ಲಕ್ಷ ರೂಪಾಯಿ ಹಾನಿ ಸಂಭವಿಸಿದೆ.

ಬಂಟ್ವಾಳ ತಾಲೂಕಿನ ಕುದ್ರಬೆಟ್ಟುವಿನಲ್ಲಿ ನಾಡಿಗೇ ಮಾದರಿಯಾದ ಕಾರ್ಯಕ್ರಮ

ಐದು ತಲೆಮಾರಿನ ಕುಟುಂಬದಿಂದ ಮಾತೃನಮನ

ಬಂಟ್ವಾಳ: ತಾಲೂಕಿನ ಕಲ್ಲಡ್ಕ ಸಮೀಪದ ಕುದ್ರಬೆಟ್ಟುವಿನಲ್ಲಿ ಇರುವ ಅಪರೂಪದ ಐದು ತಲೆಮಾರಿನ ಕುಟುಂಬವೊಂದು ನಾಡಿಗೇ ಮಾದರಿಯಾಗುವಂತೆ 'ಮಾತೃ ನಮನ' ಸಂಭ್ರಮವನ್ನು ಆಚರಿಸಿಕೊಂಡಿದೆ.

ಅಮ್ಮ ಎಂದರೆ ಸುಮ್ಮನೆ ಅಲ್ಲ
ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ, ಸಲಹಿ ಮೊದಲ ಗುರುವಿನ ಸ್ಥಾನದಲ್ಲಿ ನಿಲ್ಲುವ ತಾಯಿ ಹೃದಯ ತನ್ನ ಮಕ್ಕಳನ್ನು ಪ್ರತೀ ಕ್ಷಣವೂ ಪ್ರೀತಿಸುತ್ತಲೇ ಇರುತ್ತದೆ. ಎಷ್ಟೇ ಕಷ್ಟ ಇದ್ದರೂ, ತಾನು ಉಪವಾಸ ಇದ್ದರೂ ಕೂಡಾ ತನ್ನ ಮಕ್ಕಳನ್ನು ಮಡಿಲಲ್ಲಿ ಮಲಗಿಸಿ ತನ್ನ ಕಷ್ಟವನ್ನು ತಾನೇ ನುಂಗಿಕೊಂಡು ಮಕ್ಕಳನ್ನು ಹಸಿವು ಮುಕ್ತ ಮಾಡುತ್ತಾಳೆ. ಮಕ್ಕಳ ಭವಿಷ್ಯದ ಕುರಿತು ಹಲವಾರು ಕನಸುಗಳನ್ನು ಕಾಣುತ್ತಾ ಸಮಾಜದಲ್ಲಿ ಮಾದರಿಯಾಗಿ ಜೀವಿಸುವಲ್ಲಿ ಶ್ರಮಿಸುತ್ತಾಳೆ. ಇಂತಹ ಪವಿತ್ರ ತಾಯಿಯ ಸ್ಥಾನದಲ್ಲಿ ನಿಂತಿರುವವರೆ ವೆಂಕಮ್ಮ ಪೂಜಾರಿ ಕುದ್ರೆಬೆಟ್ಟು. ಅವರಿಗೀಗ ಸಮಾರು 98 ವರ್ಷ ಪ್ರಾಯ. ಈ ವೆಂಕಮ್ಮ ಪೂಜಾರಿಯವರ ಮಗಳು ಮೋನಮ್ಮ (75) ಅವರು ನೇರಳಕಟ್ಟೆಯ ಕೊಪ್ಪರಿಗೆ ಎಂಬಲ್ಲಿ ವಾಸಿಸುತ್ತಿದ್ದು ಮೋನಮ್ಮ ಅವರ ಮಗಳು ನೀಲಾಕ್ಷಿ (52) ಕಡೇಶಿವಾಲಯದಲ್ಲಿ ವಾಸಿಸುತ್ತಿದ್ದಾರೆ. ನೀಲಾಕ್ಷಿ ಅವರ ಮಗಳು ದೀಪ್ತಿ (26) ಶನಿವಾರಸಂತೆ ಎಂಬಲ್ಲಿ ವಾಸಿಸುತ್ತಿದ್ದಾರೆ. ದೀಪ್ತಿಯವರ ಪುತ್ರಿ ರಿಯಾಂಶಿ ಎರಡು ತಿಂಗಳ ಮಗು. ಒಟ್ಟಿನಲ್ಲಿ ಈ ಕಾರ್ಯಕ್ರಮವು ಎಲ್ಲರ ಗಮನ ಸೆಳೆದಿದ್ದು, ನಾಡಿಗೆ ಮಾದರಿಯಾಗಿದೆ.



ಕುಟುಂಬದವರನ್ನು ಒಟ್ಟು ಸೇರಿಸಿದರು
ಬಂಟ್ವಾಳ ತಾಲೂಕಿನ ಕುದ್ರಬೆಟ್ಟುವಿನಲ್ಲಿ ಈ ರೀತಿ 5 ತಲೆಮಾರಿನ ಎಲ್ಲರನ್ನು ಕುಟುಂಬದವರು ಕಲ್ಲಡ್ಕ ಕುದ್ರೆಬೆಟ್ಟುವಿನಲ್ಲಿ ಸೇರಿಸಿ ಮಾತೃನಮನ ಎನ್ನುವ ವಿಶೇಷ ಕಾರ್ಯಕ್ರಮವನ್ನು ಆಚರಿಸಿದರು.


ಮಣ್ಣು ಸಾಗಾಟದ ಲಾರಿಯೊಂದು ಹೊಂಡಕ್ಕೆ ಮಗುಚಿ ಬಿದ್ದು ಚಾಲಕ ಅಪಾಯದಿಂದ ಪಾರಾದ ಘಟನೆ ಕಾಸರಗೋಡು ಜಿಲ್ಲೆಯ ಬಾಯಾರು ಮುಳಿಗದ್ದೆಯಲ್ಲಿ ಭಾನುವಾರ ನಡೆದಿದೆ.

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂದುವರಿದ ಮೋಡ: ಇಳೆಗೆ ಇನ್ನೂ ಮಳೆ ನಿರೀಕ್ಷೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರವೂ ಮೋಡ ಮುಸುಕಿದ ವಾತಾವರಣ ಮುಂದುವರಿದಿದೆ. ಗ್ರಾಮೀಣ ಭಾಗದ ಕೆಲವೆಡೆ ಭಾನುವಾರ ರಾತ್ರಿ ತುಂತುರು ಮಳೆಯಾಗಿದೆ. ತಾಪಮಾನದಲ್ಲಿ ಮತ್ತಷ್ಟು ಇಳಿಕೆಯಾಗಿದ್ದು, ಜಿಲ್ಲೆಯ ಕನಿಷ್ಠ ತಾಪಮಾನ 26 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ. ಈ ನಡುವೆ ಹವಾಮಾನ ಇಲಾಖೆ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದ್ದು, ಮಳೆಯ ನಿರೀಕ್ಷೆಯಲ್ಲಿ ಜಿಲ್ಲೆಯ ಜನತೆ, ಕೃಷಿ ವಲಯ ಕಾದುಕುಳಿತಿದೆ.


ಭಾವಪೂರ್ಣ ಶ್ರದ್ಧಾಂಜಲಿ
ನಳಿನಿ ಶೆಟ್ಟಿಗಾರ್ ಬೆಳ್ಳಾಯರು, ಹಳೆಯಂಗಡಿ
01.04.1944 - 14.05.2026
ಜೀವನದಲ್ಲಿ ಸಾಕಷ್ಟು ಸುಖ - ದುಃಖ, ನೋವು ನಲಿವನ್ನು ಕಂಡು, ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನು ನೀಡಿ, ಸಮಾಜದಲ್ಲಿ ಗೌರವಯುತ ಬದುಕನ್ನು ಕಟ್ಟಿಕೊಟ್ಟು, ಜೀವನದಲ್ಲಿ ಉತ್ತಮ ಮೌಲ್ಯಗಳಿಂದ ಬಾಳಿದ ನಿಮ್ಮ ಆಶೀರ್ವಾದವೇ ನಮಗೆ ಶ್ರೀ ರಕ್ಷೆ, ಇಹಲೋಕವನ್ನು ತ್ಯಜಿಸಿದ ನಿಮ್ಮ ದಿವ್ಯ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುವ,
ಮಕ್ಕಳು, ಅಳಿಯಂದಿರು, ಸೊಸೆ, ಹಾಗೂ ಮೊಮ್ಮಕ್ಕಳು
BHUVAN Gas booking Agency, Haleyangadi

ಎಲ್ಲೆಡೆ ಸಾಗುತ್ತಿದೆ ಶಾಲಾರಂಭಕ್ಕೆ ಭರ್ಜರಿಯಾಗಿ ಸಿದ್ಧತೆ | ಕಾಸರಗೋಡಿಗೆ ಶಿಕ್ಷಣ ಉಪನಿರ್ದೇಶಕರೇ ಇಲ್ಲ

ಯೋಜನೆ, ಯೋಚನೆ ಇಲ್ಲದೇ ಇಲ್ಲಿ ಶೈಕ್ಷಣಿಕ ವರ್ಷಕ್ಕೆ ಸ್ವಾಗತ?

ಕಾಸರಗೋಡು: ಇತ್ತ ಶಾಲೆ, ಶೈಕ್ಷಣಿಕ ಕಚೇರಿ, ವಿದ್ಯಾರ್ಥಿ, ಶಿಕ್ಷಕ ರಕ್ಷಕರು ನೂತನ ಶೈಕ್ಷಣಿಕ ವರ್ಷಕ್ಕೆ ಸಿದ್ಧತೆ ನಡೆಸುತ್ತಿರುವ ಕಾಸರಗೋಡಿಗೆ ಅತ್ತ ಶಿಕ್ಷಣ ಉಪನಿರ್ದೇಶಕರೇ ಇಲ್ಲ!

ಹೌದು, ಕಳೆದ ಎರಡು ವರ್ಷಗಳಿಗಿಂತಲೂ ಹೆಚ್ಚು ಕಾಲ ಈ ಹುದ್ದೆಗೆ ಸೇವೆ ಸಲ್ಲಿಸಿದ್ದ ಉದುಮ ನಿವಾಸಿ ಟಿ.ವಿ. ಮಧುಸೂದನನ್ ಅವರು ನಿವೃತ್ತಿ ಹೊಂದಿದ ಬಳಿಕ ಮಂಜೇಶ್ವರದ ಬಿ. ಇಬ್ರಾಹಿಂ ಎಂಬವರನ್ನು ನೇಮಿಸಲಾಗಿತ್ತು. ತಿರುವನಂತಪುರದಿಂದ ವರ್ಗಾವಣೆಗೊಂಡು ಬಂದ ಅವರು, ಮಾ. 31ರಂದು ನಿವೃತ್ತರಾದರು. ಶಿಕ್ಷಣ ಮುಖ್ಯಸ್ಥರು ನಿವೃತ್ತರಾದಾಗ ಬದಲಿಗೆ ನೇಮಕಗೊಳ್ಳಲು ಈ ಹಿಂದೆಯೂ ವಿಳಂಬವಾಗಿತ್ತು. ಆದರೆ ಶೈಕ್ಷಣಿಕ ವರ್ಷ ಆರಂಭಗೊಳ್ಳುವಾಗ ಶಿಕ್ಷಣ ಉಪನಿರ್ದೇಶಕರ ಕುರ್ಚಿ ಖಾಲಿ ಬಿದ್ದಿರುವ ಘಟನೆಗಳು ಈ ಹಿಂದೆ ಸಂಭವಿಸಿಲ್ಲ.


ಸಂಗಮ ವಿಶೇಷ

ಡಿಇಒಗೆ ಹೆಚ್ಚುವರಿ ಹೊಣೆಗಾರಿಕೆ
ಇಲ್ಲಿ ಡಿಡಿಇ ಇಲ್ಲದ ಕಾರಣ ಕಾಸರಗೋಡಿನ ಶೈಕ್ಷಣಿಕ ಕ್ಷೇತ್ರದಲ್ಲಿ ಭಾರಿ ಸಮಸ್ಯೆಗಳು ಎದುರಾಗಲಿವೆ. ಕಾಸರಗೋಡು ಶಿಕ್ಷಣ ಜಿಲ್ಲಾ ಅಧಿಕಾರಿ ಪಿ. ಸವಿತಾ ಅವರಿಗೆ ಡಿಡಿಇ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ಡಿಇಒ, ಡಿಡಿಇ ಕರ್ತವ್ಯ ಒಟ್ಟಿಗೆ ನಡೆಸುವಾಗ ಎದುರಾಗುವ ಕಷ್ಟಗಳು ಸಣ್ಣದಲ್ಲ. ಜಿಲ್ಲಾಧಿಕಾರಿಯವರು ನಡೆಸುವ ಸಭೆಗಳಲ್ಲಿ ಭಾಗವಹಿಸಬೇಕು, ಶಾಲಾ ಭೇಟಿ ನಡೆಸಬೇಕು, ಪ್ರವೇಶೋತ್ಸವ ವಿಷಯಗಳನ್ನು ಚರ್ಚಿಸಬೇಕು, ಪಾಠಪುಸ್ತಕ ವಿತರಣೆಯಲ್ಲಿ ಎಲ್ಲಾದರೂ ಲೋಪಗಳಿದ್ದರೆ ಪರಿಶೀಲಿಸಬೇಕು. ಮುಖ್ಯ ಶಿಕ್ಷಕರಿಗೆ ಅಗತ್ಯ ನಿರ್ದೇಶನ ನೀಡಬೇಕು. ಇಷ್ಟೆಲ್ಲಾ ಕೆಲಸದೊತ್ತಡ ನಡುವೆ ಶಿಕ್ಷಣ ಉಪನಿರ್ದೇಶಕರ ಹೊಣೆಗಾರಿಕೆಯನ್ನು ನಿಭಾಯಿಸುವುದು ಕಷ್ಟವಾಗಿದೆ. ತಾತ್ಕಾಲಿಕ ಶಿಕ್ಷಕರಿಗೆ ವೇತನ ನೀಡಲು, ಆ ಪಟ್ಟಿಯಲ್ಲಿ ಡಿಡಿಇಯ ಸಹಿ ಅಗತ್ಯವಿದೆ. ಹೊಣೆಗಾರಿಕೆ ಇರುವವರಿಗೆ ಅದರಲ್ಲಿ ಸಹಿ ಹಾಕಲು ಸಾಧ್ಯವಿಲ್ಲ, ನೂರಾರು ತಾತ್ಕಾಲಿಕ ನೇಮಕಾತಿಗಳು ನಡೆಯುತ್ತವೆ.

ಹುದ್ದೆಗಳೂ ಖಾಲಿ!!
ಡಿಡಿಇ ನೇಮಕಾತಿಯು ವಿಳಂಬಗೊಂಡರೆ ತಾತ್ಕಾಲಿಕ ಶಿಕ್ಷಕರ ವೇತನವು ಮೊಟಕುಗೊಳ್ಳಲಿದೆ. ಖಾಲಿ ಬಿದ್ದ ಕಾಸರಗೋಡು ಎಇಒ ಹುದ್ದೆಯನ್ನು ಭರಿಸಿಲ್ಲ, ಹೆಚ್ಚಿನ ಸರಕಾರಿ ಶಾಲೆಗಳಲ್ಲಿ ಮುಖ್ಯಶಿಕ್ಷಕರ ಹುದ್ದೆಗಳೂ ಖಾಲಿ ಬಿದ್ದಿವೆ.

ಯೋಜನೆ, ಯೋಚನೆ ಇಲ್ಲದೇ ಶೈಕ್ಷಣಿಕ ವರ್ಷ ಶುರು?
ಡಿಇಒ ಹೊಣೆಗಾರಿಕೆ ಇರುವ ಡಿಇಒಗೆ ಕಾಸರಗೋಡು ಶಿಕ್ಷಣ ಜಿಲ್ಲಾ ಮಟ್ಟದ ವಿಷಯಗಳನ್ನು ನೋಡಬೇಕಾಗುತ್ತದೆ. ಎಷ್ಟೇ ಓಡಿದರೂ ಇದೆಲ್ಲವನ್ನೂ ಸಮಯೋಚಿತವಾಗಿ ಪೂರ್ತಿಗೊಳಿಸಲು ಸಾಧ್ಯವಿಲ್ಲ, ಇವೆಲ್ಲವುಗಳ ಹೊರತು ಶಿಕ್ಷಣ ಜಿಲ್ಲಾ ಮುಖ್ಯಸ್ಥರಿಗೆ ಹಲವು ಆಶಯಗಳನ್ನು ಜಾರಿಗೊಳಿಸಬೇಕಾಗುತ್ತದೆ. ಜಿಲ್ಲೆಯ ಶಿಕ್ಷಣ ಮುನ್ನಡೆಗೆ ಯೋಗ್ಯವಾದ ಯೋಜನೆಗಳನ್ನು ಜಾರಿಗೆ ತರಬೇಕು. ಈ ಬಾರಿ ಇದ್ಯಾವುದೂ ಇಲ್ಲದ ನೂತನ ಶೈಕ್ಷಣಿಕ ವರ್ಷವನ್ನು ಈ ಭಾರಿ ಕಾಸರಗೋಡು ಜಿಲ್ಲೆ ಬರಮಾಡಿಕೊಳ್ಳಲಿದೆ.

ಮನಪಾದಲ್ಲಿ ಆನ್‌ಲೈನ್, ಆಫ್‌ಲೈನ್ ವ್ಯವಸ್ಥೆಯ ಪ್ರಾಯೋಗಿಕ ಬಿಡುಗಡೆ 2
ಬೆಂಗಳೂರಿನ ಯಕ್ಷದೇಗುಲ ತಂಡದಿಂದ 'ಯಕ್ಷಾತರಂಗ' ವಿಭಿನ್ನ ಕಾರ್ಯಕ್ರಮ 3
ಮೇ 27ರಂದು ಉಪ್ಪಿನಂಗಡಿಯಲ್ಲಿ ಮಂಜ ಬೈದ್ಯರ ಸಂಸ್ಮರಣೆ ಆಯೋಜನೆ 4

ಸುತ್ತಮುತ್ತ

ಹೆದ್ದಾರಿ ದಾಟುತ್ತಿದ್ದ ವ್ಯಕ್ತಿಗೆ ಕಾರು ಡಿಕ್ಕಿ

ಬಂಟ್ವಾಳ: ರಾಷ್ಟ್ರೀಯ ಹೆದ್ದಾರಿಯ ಫರಂಗಿಪೇಟೆ ಜಂಕ್ಷನಿನಲ್ಲಿ ಕಾರು ಡಿಕ್ಕಿ ಹೊಡೆದು ರಸ್ತೆ ದಾಟುತ್ತಿದ್ದ ಪಾದಚಾರಿ ವ್ಯಕ್ತಿಯೋರ್ವರು ಗಾಯಗೊಂಡ ಘಟನೆ ಸಂಭವಿಸಿದೆ. ಗಾಯಾಳು ಪಾದಚಾರಿಯನ್ನು ಬೆಂಗಳೂರು-ವಿವೇಕನಗರ ನಿವಾಸಿ ನಿಖಿಲ್ (36) ಎಂದು ಹೆಸರಿಸಲಾಗಿದೆ. ಇವರು ಸಂಜೆ ಕೆಲಸ ಮುಗಿಸಿಕೊಂಡು ಮನೆ ಕಡೆ ಹೋಗಲು ಫರಂಗಿಪೇಟೆ ಜಂಕ್ಷನ್ನಿನಲ್ಲಿ ಹೆದ್ದಾರಿ ದಾಟುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಗಾಯಾಳುವನ್ನು ಸ್ಥಳೀಯರು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಬಗ್ಗೆ ಬಂಟ್ವಾಳ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕೊಣಾಜೆ ಉಪಕೇಂದ್ರದಿಂದ ಹೊರಡುವ 11ಕೆವಿ ಮಂಜನಾಡಿ ಫೀಡರ್ ಹಾಗೂ ಕೋಟೆಕಾರ್ ಉಪಕೇಂದ್ರದಿಂದ ಹೊರಡುವ ತಲಪಾಡಿ, ಕೊಂಡಾಣ ಮತ್ತು ಕೋಟೆಕಾರ್ ಫೀಡರ್ ಕಿನ್ಯಾ, ಪಜೀರ್ ಮತ್ತು ಬೋಳಿಯಾರ್ ಫೀಡರ್‌ಗಳಲ್ಲಿ ಹಾಗೂ ತೊಕ್ಕೊಟ್ಟು ಉಪಕೇಂದ್ರದಿಂದ ಹೊರಡುವ 11ಕೆವಿ ಕುತ್ತಾರ್‌ಗಳಲ್ಲಿ ವ್ಯವಸ್ಥೆ ಸುಧಾರಣೆ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಮೇ 27ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಹಮ್ಮಿಕೊಂಡಿರುವುದರಿಂದ, ಶಿಬ್ಲೆಪದವು, ಕುರಿಯಾ, ರೆಹಮತ್ ನಗರ, ಭಜಂಗ್ರಿ, ಬೆಳರಿಂಗೆ ದೈವಸ್ಥಾನ, ಕಲ್ಲರಕೋಡಿ, ತೌಡುಗೋಳಿ, ಪಟ್ಟೋಲಿಕೆ, ಆಳ್ವರಬೆಟ್ಟು, ಮೊಂಟೆಪದವು, ಗ್ರೀನ್‌ಭಾಗ್, ನಾಟೆಕಲ್, ಮಿಂಪ್ರಿ, ಪನ್ನೀರ್ ಸೈಟ್, ನಡುಕುಮೇರ್, ಉಕ್ಕುಡ, ಕೈಕಂಬ, ಕೆ.ಸಿ. ರೋಡ್, ಹೊಸನಗರ, ಕೆ.ಸಿ ನಗರ, ಅಲಂಕಾರಗುಡ್ಡೆ, ತಲಪಾಡಿ, ನಾರ್ಲ, ತಚ್ಚಾಣಿ, ಗ್ರಾಮಚಾವಡಿ, ನ್ಯೂಪಡ್ಪು, ಟಿ.ಸಿ.ಒ, ಹರೇಕಳ, ಬೈತಾರ್, ಕುತ್ತಿಮುಗೇರು, ಪಾವೂರು, ಉಳಿಯ, ಮಲಾರ್, ಗಾಡಿಗದ್ದೆ, ಬಿ.ಐ.ಟಿ ಕಾಲೇಜ್, ಇನೋಳಿ, ಕುತ್ತಿಮುಗೇರು, ಸಂಪಿಗೆದಡಿ, ಕೊಪ್ಪರಿಗೆ, ಪಜೀರ್, ಬಬ್ಬುಕಟ್ಟೆ, ಹಿರಾನಗರ, ನಿತ್ಯಾಧರ ನಗರ, ಪ್ರಕಾಶ್ ನಗರ, ಪಂಡಿತ್ ಹೌಸ್, ಶಿವಾಜಿನಗರ, ಮುಂಡೋಳಿ, ಸೇವಂತಿಗುಡ್ಡೆ, ಸೇವಂತಿಗುತ್ತು, ಗಂಡಿ, ವಿಜೇತನಗರ, ತಾರಿಪಡ್ಪು ದಾರಂದಬಾಗಿಲು, ಹೊಸಗದ್ದೆ ತಲಪಾಡಿ, ಟೋಲ್ ಗೇಟ್, ಮೇಲಿನ ತಲಪಾಡಿ, ನಾರ್ಲ, ತಚ್ಚಾಣಿ, ವಿವೇಕನಂದ ನಗರ, ಸಾಂತ್ಯ, ನೆತ್ತಿಲಪದವು, ಜಲ್ಲಿ ಕ್ರಷರ್, ಸಂಕೇಶ, ಬೆಳರಿಂಗೆ, ನಡುಕುಮೇರ್, ಉಕ್ಕುಡ, ಅಡ್ಕ ಕೋಟೆಕಾರ್, ಬೀರಿ, ಮಾಡೂರು, ಕೊಂಡಾಣ, ನಡಾರ್, ಮಡ್ಯಾರ್, ಕಾಯರ್ ಮಜಲ್, ಸಂಕೋಳಿಗೆ, ಉಚ್ಚಿಲ, ನಯಪಟ್ನ, ಬೋವಿಶಾಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕಟೀಲು

ಮೇ 27ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಎಂ.ಎಸ್.ಇ.ಝಡ್ ಉಪಕೇಂದ್ರದಿಂದ ಹೊರಡುವ ಕಟೀಲು ಟೆಂಪಲ್, ಪೆರ್ಮುದೆ ಮತ್ತು ಬಜಪೆ ಟೌನ್, ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಬಜಪೆ ಸಿಟಿ, ಕಿನ್ನಿಪದವು, ಕಲ್ಲಜರಿ, ಬಿ.ಪಿ ಕಂಪೌಂಡ್, ಅಡ್ಕಬಾರೆ, ಪೆರ್ಮುದೆ, ಭಟ್ರಕೆರೆ, ಸ್ವಾಮಿಲಪದವು, ತೆಂಕ ಎಕ್ಕಾರು, ಮೆಂಗಲಪದವು, ಹುಣ್ಸೆಕಟ್ಟೆ, ಎಕ್ಕಾರು, ಕಟೀಲು ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಹಕ್ಕುಪತ್ರದ ವಿಚಾರದಲ್ಲಿ ಬಿಜೆಪಿ ಕೀಳು ಮಟ್ಟದ ರಾಜಕೀಯ: ಕಾಂಗ್ರೆಸ್

ಪುತ್ತೂರು: ಪುತ್ತೂರಿನಲ್ಲಿ ಶಾಸಕರ ನೇತೃತ್ವದಲ್ಲಿ ದಾಖಲೆ ಸಂಖ್ಯೆಯ ಅಕ್ರಮ-ಸಕ್ರಮ ಮಂಜೂರು, 94 ಸಿ, ಸಿಸಿ ಹಕ್ಕುಪತ್ರ ವಿತರಣೆಯ ಕಾರ್ಯ ನಡೆಯುತ್ತಿದ್ದು, ಅದನ್ನು ಸಹಿಸದ ಬಿಜೆಪಿ ಪುಣಚದ ಪರಿಶಿಷ್ಟ ಪಂಗಡದ 3 ಕುಟುಂಬಗಳ ಹಕ್ಕುಪತ್ರದ ವಿಚಾರದಲ್ಲಿ ಕೀಳು ಮಟ್ಟದ ರಾಜಕೀಯ ಪ್ರದರ್ಶಿಸಿ ಪ್ರತಿಭಟನೆಯ ನಾಟಕ ಮಾಡಿದೆ ಎಂದು ಪುತ್ತೂರು ಅಕ್ರಮ-ಸಕ್ರಮ ಸಮಿತಿ ಸದಸ್ಯ ಮಹಮ್ಮದ್ ಬಡಗನ್ನೂರು ಆರೋಪಿಸಿದರು.

ಶನಿವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪುತ್ತೂರು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳ ಜತೆಗೆ ಶಾಸಕ ಅಶೋಕ್ ಕುಮಾರ್ ರೈ ಅವರು ಬಡವರ ಕಣ್ಣೀರು ಒರೆಸುವ ಕಾರ್ಯ ಮಾಡುತ್ತಿದ್ದು, ಬರೀ ತಾಲೂಕು ಕಚೇರಿಯಲ್ಲಿ ನಡೆಯುತ್ತಿದ್ದ ಅಕ್ರಮ-ಸಕ್ರಮ ಬೈಠಕನ್ನು ಗ್ರಾಮಗಳಿಗೆ ಕೊಂಡುಹೋಗುವ ಕಾರ್ಯ ಮಾಡಿದ್ದಾರೆ. ಈಗಾಗಲೇ 24 ಗ್ರಾಮಗಳನ್ನು ತಲುಪಿ 1600 ಅಕ್ರಮ-ಸಕ್ರಮ ಕಡತ ಮಂಜೂರು ಮಾಡಲಾಗಿದ್ದು, ಜತೆಗೆ 1500 ರಷ್ಟು 94ಸಿ, ಸಿಸಿ ಹಕ್ಕುಪತ್ರ ವಿತರಿಸಲಾಗಿದೆ.

ಆದರೆ ಬಿಜೆಪಿ ಶಾಸಕರ ಅವಧಿಯಲ್ಲಿ 5 ವರ್ಷಗಳಲ್ಲಿ ಸುಮಾರು ಅಕ್ರಮ-ಸಕ್ರಮ ಬೈಠಕನ್ನು ಮಾಡಿ 200ರಷ್ಟು ಕಡತ ಮಂಜೂರು ಮಾಡಿರಬಹುದು. ಪುಣಚದ ಕುಟುಂಬಗಳಿಗೆ 8 ವರ್ಷದಲ್ಲಿ ಹಕ್ಕುಪತ್ರ ನೀಡಿಲ್ಲ ಎಂದು ಬಿಜೆಪಿ ಆರೋಪಿಸಿದ್ದು, ಕಳೆದ ಅವಧಿಯ 5 ವರ್ಷದಲ್ಲಿ ಇವರು ಯಾಕೆ ಕೊಟ್ಟಿಲ್ಲ ಎಂಬುದನ್ನು ತಿಳಿಸಲಿ ಎಂದರು. ಪುತ್ತೂರಿನಲ್ಲಿ ವಿರೋಧ ಪಕ್ಷವಾಗಿ ಬಿಜೆಪಿ ಶೂನ್ಯವಾಗಿದ್ದು, ಇಲ್ಲಿನ ಒಬ್ಬ ಹೆಣ್ಣು ಮಗಳಿಗೆ ಅನ್ಯಾಯವಾದಾಗ ಬಿಜೆಪಿ ಎಷ್ಟು ಪ್ರತಿಭಟನೆ ಮಾಡಿದೆ. ಶಾಸಕರ ಇಚ್ಛಾಶಕ್ತಿಯ ಕಾರಣಕ್ಕೆ ಪುತ್ತೂರಿಗೆ ಮೆಡಿಕಲ್ ಕಾಲೇಜು ಸೇರಿದಂತೆ ಹತ್ತಾರು ಹೊಸ ಯೋಜನೆಗಳು ಬಂದಿದೆಯೇ ಹೊರತು ಇವರ ಜುಜುಬಿ ಪ್ರತಿಭಟನೆಯಿಂದ ಬಂದಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಪುತ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ, ಪುಡಾ ಅಧ್ಯಕ್ಷ ಅಮಳ ರಾಮಚಂದ್ರ, ಅಕ್ರಮ-ಸಕ್ರಮ ಸಮಿತಿ ಸದಸ್ಯ ರಾಮಣ್ಣ ಪಿಲಿಂಜ, ಎಸ್ಸಿ ಘಟಕದ ಅಧ್ಯಕ್ಷ ಮಹಾಲಿಂಗ ನಾಯ್ಕ್ ಉಪಸ್ಥಿತರಿದ್ದರು.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆನ್‌ಲೈನ್, ಆಫ್‌ಲೈನ್ ವ್ಯವಸ್ಥೆಯ ಪ್ರಾಯೋಗಿಕ ಬಿಡುಗಡೆ

ತೆರಿಗೆ ಸಹಿತ ವಿವಿಧ ಶುಲ್ಕ ಆನ್‌ಲೈನ್ ಪಾವತಿಗೆ ಅವಕಾಶ

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಯಿಂದ ತೆರಿಗೆ ಸೇರಿದಂತೆ ವಿವಿಧ ವ್ಯವಸ್ಥೆಗಳನ್ನು ಆನ್‌ಲೈನ್‌ಗೆ ತರಲಾಗಿದೆ. ಇನ್ನು ಮುಂದೆ ಜಾಹೀರಾತು ಫಲಕ ಅಳವಡಿಕೆಗೆ ಶುಲ್ಕ ಪಾವತಿ ವ್ಯವಸ್ಥೆ ಕೂಡ ಆನ್ ಲೈನ್ ಮೂಲಕವೇ ಆಗಲಿದೆ ಎಂದು ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ತಿಳಿಸಿದ್ದಾರೆ.

ಮಹಾನಗರಪಾಲಿಕೆ ವ್ಯಾಪ್ತಿಯ ಜಾಹೀರಾತು ಫಲಕ ಅಳವಡಿಕೆ ಹಾಗೂ ಸಂಬಂಧಪಟ್ಟ ಶುಲ್ಕವನ್ನು ಪಾವತಿಸಲು ಆನ್‌ಲೈನ್ ಮತ್ತು ಆಫ್‌ಲೈನ್ ವ್ಯವಸ್ಥೆಯ ಪ್ರಾಯೋಗಿಕ ಬಿಡುಗಡೆ ಕಾರ್ಯಕ್ರಮ ಪಾಲಿಕೆಯ ಕಮಿಷನರ್ ಕಚೇರಿಯಲ್ಲಿ ಸೋಮವಾರ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಪಾಲಿಕೆಯಲ್ಲಿ ಮಹತ್ತರ ಬದಲಾವಣೆಗೆ ಒತ್ತು ನೀಡಲಾಗುದೆ ಎಂದರು.

ಹೊಸದಾಗಿ ಅರ್ಜಿ ನೀಡಲು ಮತ್ತು ಅವ ಮುಗಿದಿರುವ ಫಲಕಗಳ ಪರವನಾಗಿ ನವೀಕರಿಸಲು ಹಾಗೂ ಪರವಾನಗಿ ರದ್ದು ಮಾಡಲು ಅವಕಾಶ ಕಲ್ಪಿಸಲಾಗಿದೆ. ಜಾಹೀರಾತು ಫಲಕ ನವೀಕರಣಕ್ಕೆ ಅಗತ್ಯವಿರುವ ದಾಖಲೆಗಳನ್ನು ಆನ್‌ಲೈನ್ ಮೂಲಕ ನೀಡಿ ಕಂದಾಯ ವಿ'ಗದ ಕಂದಾಯ ನಿರೀಕ್ಷಕರ ಮೂಲಕ ಸ್ಥಳ ಪರಿಶೀಲನೆ ನಡೆಸಿ ಮೇಲಾಧಿಕಾರಿಗಳ ಆದೇಶವಾದ ನಂತ ಜಾಹೀರಾತು ಫಲಕದ ಅನುಮತಿ ನೀಡಲಾಗುವುದು ಎಂದರು.

ಆನ್‌ಲೈನ್ ತಂತ್ರಾಂಶದಲ್ಲಿ ಪರವಾನಗಿ ಶುಲ್ದ ಮೊತ್ತವನ್ನು ಆನ್‌ಲೈನ್ ಮೂಲಕ ಮತ್ತು ಆಫ್‌ಲೈನ್ ಚಲನ್ ಮೂಲಕ ಪಾವತಿಸಲು ಸರಳ ವಿ'ನಗಳನ್ನು ಅಳವಡಿಸಲಾಗಿದೆ. ಈ ವಿ'ನದಿಂದ ಸಮಯದ ಉಳಿತಾಯವಾಗಲಿದೆ. ಈ ತಂತ್ರಾಂಶದಲ್ಲಿ ಮುಂಬರುವ ಜಾಹೀರಾತು ಫಲಕ ನವೀಕರಣ ಶುಲ್ಕದ ಪಾವತಿಯ ಸಂದೇಶಗಳನ್ನು ಎಸ್‌ಎಂಎಸ್ ಮೂಲಕ ತಿಳಿಸಲು ಅವಕಾಶವಿದೆ. ಸಾರ್ವಜನಿಕರಿಗೆ ವಿತರಿಸಲಾಗುವ ಚಲನ್‌ನಲ್ಲಿ ಹಾಗೂ ಅಳವಡಿಸಲಾದ ಜಾಹೀರಾತು ಫಲಕದಲ್ಲಿ ಕ್ಯುಆರ್ ಕೋಡ್ ಇದ್ದು ಸ್ಕ್ಯಾನ್ ಮಾಡಿದಾಗ ಸದ್ರಿ ಫಲಕವು ಯಾವ ಏಜನ್ಸಿ ಅಥವಾ ವ್ಯಕ್ತಿ ಸಂಬಂಧಿಸಿದ ಎಂಬುವುದು ತಿಳಿಯುತ್ತದೆ ಎಂದವರು ತಿಳಿಸಿದರು. ಸಾರ್ವಜನಿಕರು ತಂತ್ರಾಂಶ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅದರ ಹೋರ್ಡಿಂಗ್ಸ್ ಗಾತ್ರ, ಮಾದರಿ ಇತರ ಮಾಹಿತಿಗಳನ್ನು ತುಂಬಬೇಕು.





- ಮಹಾನಗರಪಾಲಿಕೆ ವ್ಯಾಪ್ತಿಯ ಜಾಹೀರಾತು ಫಲಕ ಅಳವಡಿಕೆ ಹಾಗೂ ಸಂಬಂಧಪಟ್ಟ ಶುಲ್ಕವನ್ನು ಪಾವತಿಸಲು ಆನ್‌ಲೈನ್ ಮತ್ತು ಆಫ್‌ಲೈನ್ ವ್ಯವಸ್ಥೆಯ ಪ್ರಾಯೋಗಿಕ ಬಿಡುಗಡೆ
- ಹೊಸದಾಗಿ ಅರ್ಜಿ ನೀಡಲು ಮತ್ತು ಅವ ಮುಗಿದಿರುವ ಫಲಕಗಳ ಪರವನಾಗಿ ನವೀಕರಿಸಲು ಹಾಗೂ ಪರವಾನಗಿ ರದ್ದು ಮಾಡಲು ಅವಕಾಶ

ಹೋರ್ಡಿಂಗ್‌ಗಳ ಬಗ್ಗೆ ಮಾಹಿತಿ	
ಸರಕಾರಿ ಹೋರ್ಡಿಂಗ್ಸ್	198
ಖಾಸಗಿ ಹೋರ್ಡಿಂಗ್ಸ್	886
ಎಲ್‌ಇಡಿ ಹೋರ್ಡಿಂಗ್ಸ್	8
ಕಳೆದ ವರ್ಷದ ಆದಾಯ ಕೋಟಿ ರೂ.	2,61,37,760

ಈ ಅರ್ಜಿಯನ್ನು ಆರ್‌ಐ (ಸ್ಥಳ ಪರಿಶೀಲನೆ) ಪರಿಷ್ಕರಿಸಿದರೆ ಬಳಿಕ ಆರ್‌ಒ ಪರಿಷ್ಕರಿಸಲಿದ್ದಾರೆ. ಇದಾದ ಬಳಿಕ ಡಿಸಿಆರ್ (ರೆವಿನ್ಯೂ ಉಪ ಆಯುಕ್ತರು) ಪರಿಶೀಲನೆ ನಡೆಸಿ ಅನುಮತಿ ನೀಡಲಿದ್ದಾರೆ. ಇದಾದ ಬಳಿಕ ಅದರ ವೆಚ್ಚವನ್ನು ಕಟ್ಟಬಹುದಾಗಿದೆ. ಅರ್ಜಿ ಹಾಕಿದ 7ದಿನದೊಳಗೆ ಅರ್ಜಿ ಇತ್ಯರ್ಥವಾಗಲಿದೆ ಎಂದು ಕಮಿಷನರ್ ತಿಳಿಸಿದ್ದಾರೆ.

ಈ ಸಂದರ್ಭ ನಗರ ಪಾಲಿಕೆ ಉಪಆಯುಕ್ತರಾದ ಅಕ್ಷತಾ ಉಪಸ್ಥಿತರಿದ್ದರು.

ನರೇಂದ್ರ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ಪ್ರಾರಂಭೋತ್ಸವ

ಶಕ್ತಿ-ಸಾಮರ್ಥ್ಯ ವೃದ್ಧಿಸಿಕೊಳ್ಳಿ: ಅಶ್ವಿನಿಕೃಷ್ಣ ಮುಳಿಯ

ಪುತ್ತೂರು: ವಿದ್ಯಾರ್ಥಿ ಸಾಧಕನಾಗಬೇಕಾದರೆ ಒಳ್ಳೆಯ ಹವ್ಯಾಸಗಳ ಜೊತೆಗೆ ಕ್ರಿಯಾಶೀಲರಾಗಿ ಅಭ್ಯಾಸದ ಕಡೆ ಗಮನ ಹರಿಸಿದರೆ ಮಾತ್ರ ಉತ್ತಮ ಭವಿಷ್ಯತ್ತಿಗೆ ನಾಂದಿಯಾಗುತ್ತದೆ. ದೇಶದ ಭವಿಷ್ಯವು ಯುವ ಶಕ್ತಿಯನ್ನು ಅವಲಂಬಿಸಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯುವ ಜನಾಂಗವು ಅತ್ಯಾಧುನಿಕ ಕೌಶಲ್ಯ ಮತ್ತು ಜ್ಞಾನವನ್ನು ಹೊಂದಿರಬೇಕು ಹಾಗೂ ತನ್ನಲ್ಲಿರುವ ದೌರ್ಬಲ್ಯವನ್ನು ಅರಿತುಕೊಂಡು ಶಕ್ತಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ಕಾಲೇಜಿನ ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷೆ ಅಶ್ವಿನಿಕೃಷ್ಣ ಮುಳಿಯ ಹೇಳಿದರು.

ನರೇಂದ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಪ್ರಾರಂಭೋತ್ಸವ ಮತ್ತು ಇಂಟರ್ ಲಾಕ್ ಅಳವಡಿಸಿ ನವೀಕರಿಸಲಾಗಿರುವ ನೂತನ ಹಂಸಧ್ವನಿ ಸಭಾಂಗಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸರಿಯಾದ ಸಮಯದಲ್ಲಿ ಸರಿಯಾದ ಶಿಕ್ಷಣ ದೊರಕಿದಾಗ ಒಬ್ಬ ಸಾಮಾನ್ಯ ವ್ಯಕ್ತಿಯು ಅಸಾಮಾನ್ಯ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯ ಎಂದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀಕಾಂತ ಕೊಳತ್ತಾಯ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕ ಸಂತೋಷ ಬಿ., ಕೋಶಾಕಾರಿ ಸಂಪತ್ ಕುಮಾರ್ ಇದ್ದರು. ಪ್ರಾಂಶುಪಾಲ ಪ್ರಸಾದ್ ಶ್ಯಾನಭಾಗ್ ಪ್ರಾಸ್ತಾವಿಸಿದರು. ಉಪನ್ಯಾಸಕಿ ಮಧುರಾ ಸ್ವಾಗತಿಸಿ, ವಂದಿಸಿದರು.



ಸರಸ್ವತಿ ಪೂಜೆ, ತಿಲಕ ಧಾರಣೆ

ಪ್ರಾರಂಭೋತ್ಸವದ ಅಂಗವಾಗಿ ಗಣಪತಿಹೋಮ ಮತ್ತು ಸರಸ್ವತಿ ಪೂಜೆ ಸೋಮವಾರ ಕಶೆಕೋಡಿ ಸೂರ್ಯನಾರಾಯಣ ಭಟ್ ಅವರ ನೇತೃತ್ವದಲ್ಲಿ ನಡೆಯಿತು. ಹರಿಪ್ರಸಾದ್ ಮತ್ತು ಪ್ರಕಾಶ್ ಸಹಕರಿಸಿದರು. ಪ್ರಥಮ ವರ್ಷದ ಪಿಯುಸಿ ವಿದ್ಯಾರ್ಥಿಗಳಿಗೆ ತಿಲಕ ಧಾರಣೆ ಮಾಡುವುದರ ಮೂಲಕ ಸಂಸ್ಥೆಗೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ನಮಿಸಿದರು.

ವಿದ್ಯೆಯ ಪ್ರಾಮುಖ್ಯತೆ ಅರಿಯಿರಿ

ಬದುಕಿನ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸವನ್ನು ಉತ್ತಮ ಗುಣಮಟ್ಟದ ಶಿಕ್ಷಣದಿಂದ ಪಡೆಯಲು ಸಾಧ್ಯ. ವಿದ್ಯಾರ್ಥಿಗಳೆಲ್ಲರೂ ವಿದ್ಯೆಯ ಪ್ರಾಮುಖ್ಯತೆಯನ್ನು ಅರಿತು ಅದರ ಸದುಪಯೋಗವನ್ನು ಪಡೆಯಬೇಕು. ಈ ಮೂಲಕ ಆ ದೇವರ ಅನುಗ್ರಹ ಪ್ರಾಪ್ತಿಯಾಗಲಿ.

- ಶ್ರೀಕಾಂತ ಕೊಳತ್ತಾಯ, ಆಡಳಿತ ಮಂಡಳಿಯ ಅಧ್ಯಕ್ಷ

ವಿಟ್ಲ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ | ಶಾಸಕ ರೈ ಹೇಳಿಕೆ

ಬೊಬ್ಬೆಕೇರಿಯ 15 ವರ್ಷಗಳ ವಿವಾದ ಇತ್ಯರ್ಥ

ವಿಟ್ಲ: ಬೊಬ್ಬೆಕೇರಿಯಲ್ಲಿ ರಸ್ತೆ ಅಗಲ ಕಿರಿದಾಗಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಫುಟ್‌ಪಾತ್ ಇಲ್ಲದೆ ವಾಹನ ಸಂಚರಿಸುವಾಗ ಪಾದಚಾರಿಗಳಿಗೆ ತೊಂದರೆಯಾಗುತ್ತಿತ್ತು. ಮಳೆಗಾಲದಲ್ಲಿ ಮಳೆ ನೀರು ಕೂಡಾ ಹರಿದು ಹೋಗುವ ವ್ಯವಸ್ಥೆ ಇಲ್ಲದೇ ಸಮಸ್ಯೆಯ ಬಗ್ಗೆ ಸಾರ್ವಜನಿಕರಿಂದ ಮನವಿಗಳು ಬಂದಿತ್ತು. ಖಾಸಗಿ ಜಾಗದ ಮಾಲೀಕರು ಈಗ ಜಾಗ ಬಿಟ್ಟು ಕೊಟ್ಟಿದ್ದು, 15 ವರ್ಷದ ವಿವಾದ ಇತ್ಯರ್ಥವಾಗಿದೆ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ವಿಟ್ಲ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ ನಡೆಸಿ ಮಾತನಾಡಿದರು. ವಿಟ್ಲ ಪಟ್ಟಣದಲ್ಲಿ ಅಗಲೀಕರಣ ಮಾಡುವ ಮೂಲಕ ಅಭಿವೃದ್ಧಿ ಮಾಡುವ ಆಲೋಚನೆ ಇದೆ. ತೊಂದರೆ ಕೊಟ್ಟು ಅಭಿವೃದ್ಧಿ ಮಾಡುವ ಅಗತ್ಯವೂ ಇಲ್ಲ, ರಸ್ತೆ ಅಭಿವೃದ್ಧಿಯಾದರೆ, ಪಟ್ಟಣ ಬೆಳೆಯುತ್ತದೆ. ಅಂಗಡಿ ಮಾಲೀಕರು, ಕಟ್ಟಡ ಮಾಲೀಕರು ಒಪ್ಪಿಗೆ ನೀಡಿದ್ದಲ್ಲಿ ಮಾತ್ರ ಈ ಕಾಮಗಾರಿ ನಡೆಯಬಹುದು ಎಂದು ಹೇಳಿದರು.

ವಿಟ್ಲ ಬ್ಲಾಕ್ ಅಧ್ಯಕ್ಷ ಪದ್ಮನಾಭ ಪೂಜಾರಿ ಮಾತನಾಡಿ, ಬೊಬ್ಬೆಕೇರಿಯಲ್ಲಿ ಕೇವಲ 200 ಮೀಟರ್‌ನಷ್ಟು ರಸ್ತೆಯನ್ನು ಅಭಿವೃದ್ಧಿ ಮಾಡಲು ಸಾರ್ವಜನಿಕರು ಹೋರಾಟ ಮಾಡಬೇಕಾ ಅನಿವಾರ್ಯತೆ ಎದುರಾಗಿತ್ತು. ರಸ್ತೆ ಬದಿಯ ಕಟ್ಟಡ ಮಾಲೀಕರು ಈ ವಿಚಾರದಲ್ಲಿ ಕೋರ್ಟಿಗೆ ಹೋಗಿದ್ದರಿಂದ ಸಮಸ್ಯೆಯಾಗಿತ್ತು. ಶಾಸಕ ಅಶೋಕ್ ರೈ ಮುತುವರ್ಜಿ ವಹಿಸಿ ರೂ.60 ಲಕ್ಷ ಅನುದಾನವನ್ನು ತಂದಿದ್ದಾರೆ ಮಾತ್ರವಲ್ಲ ವಿವಾದವನ್ನು ಇತ್ಯರ್ಥಪಡಿಸಿದ್ದಾರೆ ಎಂದು ಹೇಳಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್, ವಕ್ತಾರ ರಮನಾಥ ವಿಟ್ಲ, ಪ್ರಮುಖರಾದ ಮಹಾಲಿಂಗ ನಾಯ್ಕ, ಶ್ರೀನಿವಾಸ ಶೆಟ್ಟಿ, ಹಂಝ ವಿಟ್ಲ, ಹಸೈನರ್ ನೆಲ್ಲಿಗುಡ್ಡೆ, ಡೀಕಯ್ಯ, ಲತಾ ಅಶೋಕ್ ಪೂಜಾರಿ, ಸುನಿತಾ ಕೋಟ್ಯಾನ್, ಜಾನ್ಸನ್ ವಿಟ್ಲ, ಸಂತೋಷ್ ವಿಟ್ಲ, ವಲೇರಿಯನ್ ಮಾರ್ತ, ಉಮೇಶ್, ಹಾರಿಸ್, ಸಿದ್ದಿಕ್, ಶರೀಫ್ ಒಕ್ಕೆತ್ತೂರು, ಶ್ರೀಧರ್ ಬಾಳೆಕಲ್ಲು, ಅಬ್ಬು ನವಗ್ರಾಮ, ಅಶೋಕ್ ಪೂಜಾರಿ, ಎಂ.ಕೆ. ಮೂಸಾ, ಶರೀಫ್ ಸೇರಾಜೆ, ಶೇಕಾಲಿ ಸೇರಾಜೆ, ಉರುಂಬಳ ಅಬ್ದುಲ್ ರಹಿಮಾನ್, ಅಬ್ದುಲ್ ರಹಿಮಾನ್, ರಾಮಣ್ಣ ಪಿಲಿಂಜ ಉಪಸ್ಥಿತರಿದ್ದರು.



ಕಾಮಗಾರಿಗಳ ಚಾಲನೆ

ವಿಟ್ಲ-ಮಂಗಳೂರು ರಸ್ತೆಯ ಬೊಬ್ಬೆಕೇರಿಯಲ್ಲಿ ಸುಮಾರು ರೂ.60 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿಗೆ ಚಾಲನೆ, ಕೆದುಮೂಲೆಯಲ್ಲಿ ರೂ.65 ಲಕ್ಷ ವೆಚ್ಚದ ಮಂಗಿಲಪದವು ಆರೋಗ್ಯ ಉಪಕೇಂದ್ರ ಕಟ್ಟಡ ನಿರ್ಮಾಣಕ್ಕೆ ಶಿಲಾನ್ಯಾಸ, ಅಣ್ಣಮೂಲೆಯಲ್ಲಿ ರೂ.6 ಲಕ್ಷ ವೆಚ್ಚದ ಪರಿಶಿಷ್ಟ ಪಂಗಡ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಯಿತು.

ವಾಣಿ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಓರಿಯೆಂಟೇಷನ್



ಬೆಳ್ತಂಗಡಿ: ಜೀವನದಲ್ಲಿ ಉತ್ತಮ ಸಾಧನೆಯನ್ನು ಮಾಡಬೇಕಾದರೆ ನಿರ್ದಿಷ್ಟ ಗುರಿಯನ್ನು ಹೊಂದಿರಬೇಕು ಎಂದು ವಾಣಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀಪಿ ಕುಶಾಲಪ್ಪ ಗೌಡ ಹೇಳಿದರು.

ಅವರು ವಾಣಿ ಪದವಿಪೂರ್ವ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ನಡೆದ ಇಗ್ನೈಟ್ - 2026 ಓರಿಯೆಂಟೇಷನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುರು ಹಿರಿಯರಲ್ಲಿ, ಕುಟುಂಬದಲ್ಲಿ ಗೌರವ ಪೂರ್ವಕವಾಗಿ ಪಡೆದುಕೊಳ್ಳಬೇಕು. ಪಠ್ಯೇತರ ಚಟುವಟಿಕೆಗಳಲ್ಲಿಯೂ ಆಸಕ್ತಿಯನ್ನು ಬೆಳೆಸಿಕೊಂಡು ಸರ್ವತಮುಖ ಏಳಿಗೆಯನ್ನು ಪಡೆಯಬೇಕು ಎಂದರು.

ವಾಣಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ನಾರಾಯಣಗೌಡ ದೇವಸ್ಯ, ಕಾರ್ಯದರ್ಶಿ ಗಣೇಶ್ ಗೌಡ, ಆಡಳಿತ ಅಧಿಕಾರಿ ಪ್ರಸಾದ್ ಕುಮಾರ್ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ವಿಷ್ಣುಪ್ರಕಾಶ್ ಎಂ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಕಾಲೇಜಿನ ರೀತಿ ನಿಯಮಗಳ ಕುರಿತು ಮಾಹಿತಿ ನೀಡಿದರು.

ಸಾಧಕರಿಗೆ ಅಭಿನಂದನೆ

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 600ಕ್ಕಿಂತ ಹೆಚ್ಚು ಅಂಕಗಳಿಸಿ ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಗಣಿತ ವಿಭಾಗದ ಮುಖ್ಯಸ್ಥೆ ಶ್ರೀಮತಿ ಹೇಮಲತಾ ಸ್ವಾಗತಿಸಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ರವಿಶಂಕರ್ ಪಿ. ವಂದಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಮಹಾಬಲ ಗೌಡ ನಿರೂಪಿಸಿದರು.

ಬೆಳ್ತಂಗಡಿ ತಾಲೂಕು ಚಿತ್ಪಾವನ ಮಹಿಳಾ ಘಟಕದ ಪ್ರಥಮ ಸಭೆ



ಕಡಬ: ಇತ್ತೀಚೆಗೆ ಆರಂಭಗೊಂಡ ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ, ಮಹಿಳಾ ಘಟಕದ ಪ್ರಥಮ ಸಭೆ ಹಾಗೂ ಹೊಸಮಠ ವಾಳ್ಯಸ್ಥರ ಕುಟುಂಬ ಸಮ್ಮಿಲನ ಕಾರ್ಯಕ್ರಮ ಕಡಬ ತಾಲೂಕು ಕುಟ್ರುಪ್ಪಾಡಿ ಗ್ರಾಮದ ಹೊಸಮಠದಲ್ಲಿ ಜರಗಿತು.

ಕಾರ್ಯಕ್ರಮ ಉದ್ಘಾಟಿಸಿದ ಬೆಳ್ತಂಗಡಿ ಚಿತ್ಪಾವನ ಮಹಿಳಾ ಘಟಕದ ಅಧ್ಯಕ್ಷೆ ಅಶ್ವಿನಿ ಎ. ಹೆಬ್ಬಾರ್ ಮಾತನಾಡಿ, ಮಹಿಳೆಯರು ಬಲಗೊಳ್ಳಲು ಕುಟುಂಬಸ್ಥರ ಸಹಕಾರವು ಅತ್ಯಗತ್ಯವಾದುದು ಎಂದರು.

ಸಂಪನ್ಮೂಲ ವ್ಯಕ್ತಿ ಬೆಂಗಳೂರಿನ ಸೌಮ್ಯಾ ಪ್ರದೀಪ ಹೆಬ್ಬಾರ್ ಮಾತನಾಡಿ, ನಮಗಾಗಿ ಜೀವಿಸುತ್ತಾ ಇತರರ ಬಗ್ಗೆಯೂ ಯೋಚಿಸಬೇಕು ಎಂದರು.

ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ ಅಧ್ಯಕ್ಷ ತ್ರಿವಿಕ್ರಮ ಹೆಬ್ಬಾರ್, ಕಾರ್ಯದರ್ಶಿ ಸುಷ್ಮಾ ಎಸ್. ಭಿಡೆ, ಮಹಿಳಾ ಘಟಕದ ಕಾರ್ಯದರ್ಶಿ ದೀಪಾಲಿ ಡೋಂಗ್ರೆ, ಉಪಾಧ್ಯಕ್ಷೆ ಪ್ರಜ್ಞಾ ಹೆಬ್ಬಾರ್, ಜತೆ ಕಾರ್ಯದರ್ಶಿ ಉಷಾಕಿರಣ ಆಠವಳೆ, ಹೊಸಮಠ ಪ್ಯಾಕ್ಸ್ ಮಾಜಿ ಅಧ್ಯಕ್ಷ ಕರುಣಾಕರ ಗೋಗಟೆ, ನಿರ್ದೇಶಕ ಶಶಾಂಕ ಗೋಖಲೆ, ಪಂಚಾಯತ್ ಮಾಜಿ ಸದಸ್ಯ ಕಿರಣ ಗೋಗಟೆ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸಂಘಟಿಸಿದ ಅನುಷಾ ಹಾಗೂ ಅಜಿತ್ ಹೆಬ್ಬಾರ್ ದಂಪತಿಯನ್ನು ಗೌರವಿಸಲಾಯಿತು.

ಆಶಾ ಅಜಿತ್ ಹೆಬ್ಬಾರ್ ಅತಿಥಿಗಳನ್ನು ಪರಿಚಯಿಸಿದರು. ಉಷಾಕಿರಣ ಸ್ವಾಗತಿಸಿ, ಕಾವ್ಯಾ ಕಿರಣ ಗೋಗಟೆ ವಂದಿಸಿದರು. ಪಂಚಮಿ ಗೋಗಟೆ ಕಾರ್ಯಕ್ರಮ ನಿರ್ವಹಿಸಿದರು. ಧಾತ್ರಿ ಗೋಗಟೆ ಸಹಕರಿಸಿದರು.

ವೈಜ್ಞಾನಿಕ ಕೃಷಿಗೆ ರೈತರು ಒತ್ತು ನೀಡುವುದು ಅಗತ್ಯ: ಡಾ.ನಿರಾಲ್



ಸುಬ್ರಹ್ಮಣ್ಯ: ಗ್ರಾಮೀಣ ರೈತರು ವೈಜ್ಞಾನಿಕ ಕೃಷಿಯತ್ತ ಹೆಚ್ಚು ಹೆಚ್ಚು ಆಕರ್ಷಿತರಾಗುವುದು ಅತ್ಯಗತ್ಯ. ಮಣ್ಣಿನ ಫಲವತ್ತತೆ ಕುಸಿತವು ಇಂದಿನ ಕೃಷಿಗೆ ದೊಡ್ಡ ಸವಾಲಾಗಿದೆ. ರೈತರು ವೈಜ್ಞಾನಿಕ ಶಿಫಾರಸುಗಳ ಆಧಾರದ ಮೇಲೆ ಗೊಬ್ಬರ ಬಳಕೆ ಮಾಡುವತ್ತ ಗಮನ ಹರಿಸಬೇಕು. ಇದರಿಂದ ಕೃಷಿ ಪ್ರಗತಿ ಸಾಧ್ಯ. ಸಂಸ್ಥೆಯು ರೈತ ಕೇಂದ್ರಿತ ತಂತ್ರಜ್ಞಾನಗಳನ್ನು ಗ್ರಾಮೀಣ ಮಟ್ಟಕ್ಕೆ ತಲುಪಿಸಲು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹಿರಿಯ ಕೃಷಿ ವಿಜ್ಞಾನಿ ಡಾ. ನಿರಾಲ್ ವಿ. ಹೇಳಿದರು.

ಕಿದುವಿನ ಸಿ.ಪಿ.ಸಿ.ಆರ್.ಐ.ನಲ್ಲಿ ಎಸ್‌ಸಿಎಸ್‌ಪಿ ಯೋಜನೆಯಡಿಯಲ್ಲಿ 'ಮಣ್ಣಿನ ಆರೋಗ್ಯ ನಿರ್ವಹಣೆ ಹಾಗೂ ಸಮತೋಲನ ಗೊಬ್ಬರ ಬಳಕೆಯಲ್ಲಿ ರೈತ ಕೇಂದ್ರಿತ ಕ್ರಮಗಳು' ಎಂಬ ವಿಷಯದಲ್ಲಿ ರೈತರಿಗೆ ಸೋಮವಾರ ನಡೆದ ವಿಶೇಷ ತರಬೇತಿ ಹಾಗೂ ಇನ್‌ಪುಟ್ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಜ್ಞಾನಿ ಡಾ. ಅನಿತಾ ಕುಮಾರಿ ಪಿ., ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೇಲ್ವಿಚಾರಕ ರವೀಂದ್ರ, ಪ್ರಮುಖರಾದ ಸತೀಶ್, ಸೋಮೇಶ್ ಮುಖ್ಯ ಅತಿಥಿಗಳಾಗಿದ್ದರು. ಕೃಷಿ ವಿಜ್ಞಾನಿ ಡಾ. ದಿವಾಕರ್ ವೈ. ಅವರು ಮಣ್ಣಿನ ಆರೋಗ್ಯ ನಿರ್ವಹಣೆ, ಸಮತೋಲನ ಗೊಬ್ಬರ ಬಳಕೆ ಹಾಗೂ ಮಣ್ಣಿನ ಸೂಕ್ಷ್ಮಜೀವಿ ಸಂಯೋಜನೆ ಬಳಕೆಯ ಕುರಿತು ತಾಂತ್ರಿಕ ಮಾಹಿತಿ ನೀಡಿದರು. ರೈತರಿಗೆ ತಲಾ 1 ಕೆ.ಜಿ. ಮಣ್ಣಿನ ಸೂಕ್ಷ್ಮಜೀವಿ ಸಂಯೋಜನೆ ಕಿಟ್ ವಿತರಿಸಲಾಯಿತು. ಕಿದುವಿನ ಗೋಪಾಲಕೃಷ್ಣ ಸ್ವಾಗತಿಸಿದರು.

ಉಜಿರೆಯ ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವಿಟಿಯು ಕಬಡ್ಡಿ ಪಂದ್ಯಕೂಟ | ವಿದ್ಯಾರ್ಥಿಗಳ ಸಾಧನೆ

ಪುತ್ತೂರು ವಿಸಿಇಟಿ ವಿಭಾಗ ಮಟ್ಟದಲ್ಲಿ ಚಾಂಪಿಯನ್, ರಾಜ್ಯಮಟ್ಟದಲ್ಲಿ ದ್ವಿತೀಯ

ಪುತ್ತೂರು: ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಪುರುಷರಕಬಡ್ಡಿತಂಡವು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಮಂಗಳೂರು ವಿಭಾಗ ಮಟ್ಟದ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದು, ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದೆ.

ಉಜಿರೆಯ ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮ್ಯಾಟ್ ಅಂಕಣದಲ್ಲಿ ನಡೆದ ರಾಜ್ಯ ಮಟ್ಟದ ಕ್ರೀಡಾ ಕೂಟದಲ್ಲಿ ರಾಜ್ಯಾದ್ಯಂತ 8 ವಿಭಾಗದ ಒಟ್ಟು 16 ತಂಡಗಳು ಭಾಗವಹಿಸಿದ್ದವು. ಇದರಲ್ಲಿ ಅತ್ಯುತ್ತಮ ನಿರ್ವಹಣೆಯನ್ನು ನೀಡಿದ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ತಂಡ ರನ್ನರ್ ಅಪ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ದ್ವಿತೀಯ ವರ್ಷದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಗೌರವ್ ಎಸ್.ಜಿ. ಉತ್ತಮ ದಾಳಿಗಾರ ವೈಯಕ್ತಿಕ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ

ಈ ಮೊದಲು ಅದೇ ಅಂಕಣದಲ್ಲಿ ನಡೆದ ಮಂಗಳೂರು ವಿಭಾಗ ಮಟ್ಟದ ಸ್ಪರ್ಧೆಯಲ್ಲಿ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ತಂಡ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದು, ರಾಜ್ಯ ಮಟ್ಟಕ್ಕೆ ಅರ್ಹತೆಯನ್ನು ಗಳಿಸಿಕೊಂಡಿತ್ತು. ವಿಭಾಗ ಮಟ್ಟದ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ವೈಯಕ್ತಿಕ ಪ್ರಶಸ್ತಿಯನ್ನು ಪಡೆದುಕೊಂಡಿದ್ದು, ದ್ವಿತೀಯ ವರ್ಷದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಗೌರವ್ ಎಸ್.ಜಿ. ಉತ್ತಮ ಆಲ್‌ರೌಂಡರ್ ಪ್ರಶಸ್ತಿಯನ್ನು ಮತ್ತು ಪ್ರಥಮ ವರ್ಷದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಎಂ. ವಿಜೇತ್ ಪೂಜಾರಿ ಉತ್ತಮ ಡಿಫೆಂಡರ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ.

ತೃತೀಯ ವರ್ಷದ ಮೆಕ್ಯಾನಿಕಲ್ ವಿಭಾಗದ ಭುವನ್ ರಾಂ ಜೆ. ಭಂಡಾರಿ ತಂಡದ ಕಪ್ತಾನನಾಗಿದ್ದು, ಪ್ರಥಮ ವರ್ಷದ ಎಐಎಂಎಲ್ ವಿಭಾಗದ ವಿಕಾಸ್ ಎಸ್.ಕೆ., ದ್ವಿತೀಯ ಎಲೆಕ್ಟ್ರಾನಿಕ್ಸ್ ವಿಭಾಗದ ತೇಜಸ್ವಿ, ದ್ವಿತೀಯ ವರ್ಷದ ಡಾಟಾ ಸೈನ್ಸ್ ವಿಭಾಗದ ಯಕ್ಷಿತ್, ಪ್ರಥಮ ವರ್ಷದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಎಂ. ವಿಜೇತ್ ಪೂಜಾರಿ, ಪ್ರಥಮ ವರ್ಷದ ಎಂಬಿಎ ವಿಭಾಗದ ಕೌಶಿಕ್ ಬಿ., ಪ್ರಥಮ ವರ್ಷದ ಎಲೆಕ್ಟ್ರಾನಿಕ್ಸ್ ವಿಭಾಗದ ನೆಹಾಲ್ ಎಂ.ಪಿ., ಪ್ರಥಮ ವರ್ಷದ ಎಐಎಂಎಲ್ ವಿಭಾಗದ ಗೋಪಾಲ್ ಎಚ್. ಮಿರಿಂಗಾ, ತೃತೀಯ ವರ್ಷದ ಡಾಟಾ ಸೈನ್ಸ್ ವಿಭಾಗದ ಜಿ. ರಾಜಶೇಖರ್ ರೆಡ್ಡಿ, ತೃತೀಯ ವರ್ಷದ ಮೆಕ್ಯಾನಿಕಲ್ ವಿಭಾಗದ ನಿತ್ಯಾ ಎನ್., ದ್ವಿತೀಯ ವರ್ಷದ ಎಲೆಕ್ಟ್ರಾನಿಕ್ಸ್ ವಿಭಾಗದ ವಂಶಿಕ್ ಮತ್ತು ಪ್ರಥಮ ವರ್ಷದ ಮೆಕ್ಯಾನಿಕಲ್ ವಿಭಾಗದ ನಿತೀಶ್ ಕೆ.ಆರ್. ವಿಜೇತ ತಂಡದ ಆಟಗಾರರಾಗಿದ್ದಾರೆ.

ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಬಾಲಚಂದ್ರ ಗೌಡ ಭಾರ್ತಿಕುಮೇರು ತಂಡಕ್ಕೆ ತರಬೇತಿಯನ್ನು ನೀಡಿದ್ದಾರೆ ಎಂದು ಪ್ರಾಂಶುಪಾಲ ಡಾ. ಮಹೇಶ್ ಪ್ರಸನ್ನ ಕೆ. ತಿಳಿಸಿದ್ದಾರೆ



ಸುತ್ತಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಮೂರ್ನಾಡು 33/11 ಕೆ.ವಿ ವಿದ್ಯುತ್ ವಿತರಣಾ ಉಪ ಕೇಂದ್ರದ ಕೇಂದ್ರದಿಂದ ಹೊರಹೊಮ್ಮುವ ಎಫ್3 ಮೂರ್ನಾಡು ಫೀಡರ್‌ನಲ್ಲಿ ಮೇ 26 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕೊಡಗು ಜಾಲ ಬಲವರ್ಧನೆ ಹಾಗೂ ಮಳೆಗಾಲ ಮುಂಜಾಗ್ರತಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಕೆಲವೆಡೆ ವಿದ್ಯುತ್ ವ್ಯತ್ಯಯ ಮಾಡಲಾಗುವುದು.
ಮೂರ್ನಾಡು ಟೌನ್, ಮುತ್ತಾರ್ಮುಡಿ, ಕುಂಬಳದಾಳು, ಕಿಗ್ಗಾಲು, ಕಬಡಗೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಇಂದು ಮಾಧ್ಯಮ, ಸಮಾಜ ಉಪನ್ಯಾಸ

ಮಂಗಳೂರು : ರೋಟರಿ ಕ್ಲಬ್ ಮಂಗಳೂರು ನಾರ್ತ್ ಇದರ ವತಿಯಿಂದ ಮೇ 26ರಂದು ಸಂಜೆ 7ಕ್ಕೆ ನಗರದ ಮಲ್ಲಿಕಟ್ಟೆಯ ರೋಟರಿ ಬಾಲ ಭವನದಲ್ಲಿ ಮಾಧ್ಯಮ ಮತ್ತು ಸಮಾಜ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಉಪನ್ಯಾಸ ನೀಡಲಿದ್ದಾರೆ. ರೋಟರಿ ಕ್ಲಬ್ ಮಂಗಳೂರು ನಾತ್‌ನ ಅಧ್ಯಕ್ಷ ಡಾ.ಅರುಣ್ ಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆಂದು ಕ್ಲಬ್ ಕಾರ್ಯದರ್ಶಿ ಶಾಂಭವಿ ಶೆಟ್ಟಿ ತಿಳಿಸಿದ್ದಾರೆ.

ಕಸ ವಿಂಗಡಿಸಿ ನೀಡುವುದು ಕಡ್ಡಾಯ: ನಗರಸಭೆ

ಮಡಿಕೇರಿ: ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು –2026 ಅನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಗದಿತ ಕಾಲಾವಧಿಯೊಳಗೆ ಅನುಷ್ಠಾನಗೊಳಿಸುವ ಕುರಿತು ಸರ್ವೋಚ್ಛ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣ ದಾಖಲಾಗಿದೆ. ಆದ್ದರಿಂದ ಮಡಿಕೇರಿ ನಗರ ವ್ಯಾಪ್ತಿಯಲ್ಲಿರುವ ವಾಣಿಜ್ಯ ಬಳಕೆದಾರರು, ಬಸ್ ನಿಲ್ದಾಣ, ಡಿಪೋಗಳು, ಕೈಗಾರಿಕಾ ಘಟಕಗಳು, ಕೈಗಾರಿಕಾ ವಲಯಗಳು, ಹೋಟೆಲ್‌ಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ಹಾಸ್ಟೆಲ್‌ಗಳು, ಕ್ರೀಡಾಂಗಣಗಳು, ಕ್ರೀಡಾ ಸಂಕೀರ್ಣಗಳು, ಸಮುದಾಯ ಸಭಾಂಗಣಗಳು, ಸಮಾವೇಶ ಸಭಾಂಗಣಗಳು, ಮದುವೆ , ಔತಣ ಕೂಟ ಸಭಾಂಗಣ, ಪ್ರವಾಸಿ ತಾಣಗಳು, ವಸತಿ ಸಂಘಗಳು, ಇತರೆ ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು ತಮ್ಮ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ನಾಲ್ಕು ವಿಧಗಳಲ್ಲಿ ವಿಂಗಡಿಸಿ ಕಡ್ಡಾಯ ಪ್ರತ್ಯೇಕಿಸಿ ನಗರಸಭೆ ತ್ಯಾಜ್ಯ ಸಂಗ್ರಹ ವಾಹನಗಳಿಗೆ ಹಸ್ತಾಂತರಿಸಬೇಕು.
ಹಸಿ ತ್ಯಾಜ್ಯ: ಅಡುಗೆ ಮನೆ ಕಸ, ತ್ಯಾಜ್ಯ ಆಹಾರ ತ್ಯಾಜ್ಯ ತರಕಾರಿ ತ್ಯಾಜ್ಯ, ಹಣ್ಣಿನ ತ್ಯಾಜ್ಯ ಹೂವಿನ ತ್ಯಾಜ್ಯ ಗಾರ್ಡನ್ ವೇಸ್ಟ್ ಇತರೆ ಕರಗುವ ತ್ಯಾಜ್ಯ ವಸ್ತುಗಳು.
ಒಣ ತ್ಯಾಜ್ಯ: ಎಲ್ಲಾ ರೀತಿಯ ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳು, ಬಟ್ಟೆ ತ್ಯಾಜ್ಯ ವಸ್ತುಗಳು, ಕಬ್ಬಿಣ, ರಬ್ಬರ್, ಮರದ ತ್ಯಾಜ್ಯ ಮತ್ತಿತರ. ಸ್ಯಾನಿಟರಿ ತ್ಯಾಜ್ಯ: ಡೈಪರ್ಸ್, ಸ್ಯಾನಿಟರಿ ನ್ಯಾಪ್ಕಿನ್ಸ್, ಕಾಂಡಮ್ ಇತ್ಯಾದಿ.
ಸ್ಪೆಷಲ್ ಕೇರ್ ವೇಸ್ಟ್ : ಪೇಯಿಂಟ್ ಡ್ರಮ್ಸ್/ ಕಂಟೇನರ್, ಔಷಧಿ ಕ್ಯಾನ್‌ಟಿಗಳು/ ಡ್ರಮ್‌ಗಳು/ ಬಾಟಲ್‌ಗಳು, ಬಲ್ಬು/ ಟ್ಯೂಬ್ ಲೈಟ್, ಅವಧಿ ಮೀರಿದ ಔಷಧಿಗಳು, ಒಡೆದ ಥರ್ಮೋಮೀಟರ್, ಹಳೆ ಬ್ಯಾಟರಿಗಳು ಬಳಸಿದ ನೀಡಲ್ಸ್/ ಸಿರಿಂಜ್ ಮತ್ತು ಬ್ಯಾಂಡೇಜ್ ಮತ್ತಿತರ.
ಅದರಂತೆ ನಗರಸಭಾ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳ ಕಸ ವಿಂಗಡಣೆ ಮಾಡದೆ ಇರುವವರ ವಿರುದ್ಧ ಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ)ನಿಯಮಗಳು 2026ರಂತೆ ದಂಡ ವಿಧಿಸುವುದಲ್ಲದೆ ಮೂಲಭೂತ ಸೌಕರ್ಯಗಳಾದ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮವಹಿಸಲಾಗುವುದು. ಆದ್ದರಿಂದ ಮಡಿಕೇರಿ ನಗರಸಭೆ ವ್ಯಾಪ್ತಿಯ ಸಾರ್ವಜನಿಕರು ಘನ ತ್ಯಾಜ್ಯ ವಸ್ತುಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ನಿಯಮಗಳು 2026ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಕಾರ ನೀಡುವಂತೆ ನಗರಸಭೆ ಪೌರಾಯುಕ್ತ ಎಚ್. ಆರ್.ರಮೇಶ್ ಅವರು ಕೋರಿದ್ದಾರೆ.

ಮಾಜಿ ಸಚಿವರ ಭೇಟಿ



ಸುಬ್ರಹ್ಮಣ್ಯ: ಮಾಜಿ ಸಚಿವ ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳಕ್ಕೆ ಭೇಟಿ ನೀಡಿ ಶ್ರೀ ದೇವರ ದರುಶನ ಪಡೆದರು. ಅರ್ಚಕರು ಅವರಿಗೆ ಶಾಲು ಹೊದಿಸಿ ಮಹಾಪ್ರಸಾದ ನೀಡಿದರು. ಬಳಿಕ ಅವರು ಹೊಸಳಿಗಮ್ಮನ ದರುಶನ ಪಡೆದು ಆದಿ ಸುಬ್ರಹ್ಮಣ್ಯ ದೇವಳಕ್ಕೆ ಭೇಟಿ ನೀಡಿದರು.

ಬೆಂಗಳೂರಿನ ಯಕ್ಷದೇಗುಲ ತಂಡದವರಿಂದ 'ಯಕ್ಷಾತರಂಗ' ವಿಭಿನ್ನ ಕಾರ್ಯಕ್ರಮ

ಯಕ್ಷದೇಗುಲ ಪರಿಕಲ್ಪನೆಯ ವಿನೂತನ ಯಕ್ಷಗಾನ ಪ್ರಾತ್ಯಕ್ಷಿಕೆ

ಕೋಟ: ಬೆಂಗಳೂರಿನ ಜಯನಗರದ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ ಉದ್ಯಮಿ ಮನೋಜ ಅವರ ಪ್ರಾಯೋಜಕತ್ವದಲ್ಲಿ ಬೆಂಗಳೂರಿನ ಯಕ್ಷದೇಗುಲ ತಂಡದವರಿಂದ 'ಯಕ್ಷಾತರಂಗ'ವನ್ನು ಪರಿಚಯಿಸುವ ಯಕ್ಷದೇಗುಲ ಪರಿಕಲ್ಪನೆಯ ವಿನೂತನ ಯಕ್ಷಗಾನ 'ಪ್ರಾತ್ಯಕ್ಷಿಕೆ' ನಡೆಯಿತು.
ವಾಚಿಕ, ಆಂಗಿಕ, ಸಾತ್ವಿಕ, ಆಹಾರ್ಯಗಳನ್ನೊಳಗೊಂಡು, ಮೂಲ ಸತ್ತ್ವವನ್ನು ಹೊಸ ತಲೆಮಾರಿನವರಿಗೆ ತಿಳಿಸುವ 'ಯಕ್ಷಾಂತರಂಗ'ವನ್ನು ಪರಿಚಯಿಸುವ, ಹಾಗೆ ಹೆಜ್ಜೆಗಾರಿಕೆ, ಪದಾಭಿನಯ, ಸಭಾಲಕ್ಷಣದ ಬಾಲಗೋಪಾಲ, ಸ್ತ್ರೀ ವೇಷ, ಕೃಷ್ಣನ ಒಡ್ಡೋಲಗ, ಯುದ್ಧಕುಣಿತ, ಕಿಲಾತನ ಒಡ್ಡೋಲಗ, ಅಲ್ಲದೇ ಪ್ರೇಕ್ಷಕರ ಮುಂದೆ (ರಂಗದ ಮುಂದೆ) ಬಣ್ಣದ ವೇಷದ ಮುಖವರ್ಣಿಕೆ (ಅಕ್ಕಿಹಿಟ್ಟಿನ ಚುಟ್ಟಿ ಇಡುವ ಕ್ರಮ) ಕಿರಾತ ವೇಷದ ಅಟ್ಟೆ ಜೋಡು ಮುಂಡಾಸು ಕಟ್ಟುವ ಕ್ರಮ, ವಸ್ತ್ರ ವಿನ್ಯಾಸಗಳ ಕುರಿತು ಮಾಹಿತಿ ಮತ್ತು ಪಾಂಚಜನ್ಯ ಪ್ರಸಂಗದ ಸ್ವಾರಸ್ಯಕರ ಸನ್ನಿವೇಶ ಈ ಪ್ರಾತ್ಯಕ್ಷಿಕೆಯಲ್ಲಿ ಪ್ರದರ್ಶಿಸಲಾಯಿತು.









ಅಭಿನಂದನಾರ್ಹ
ಡಾ. ಆನಂದ ರಾಮ ಉಪಾಧ್ಯಾಯರು ಯಕ್ಷಗಾನದ ಕುರಿತು ಕೇವಲ ಮಾತುಗಳನ್ನಾಡುವುದಕ್ಕಿಂತ ಸಮಗ್ರ ಪರಿಚಯ ಮಾಡಿಕೊಡುವ ಪ್ರಾತ್ಯಕ್ಷಿಕೆಯ ಮೂಲಕ ಹೊಸ ತಲೆಮಾರಿಗೆ ಆಸಕ್ತಿ ಮೂಡಿಸುತ್ತಿರುವ ಕಾರ್ಯ ಅಭಿನಂದನಾರ್ಹ ಎಂದರು.
ಕೆ. ಮೋಹನ್ ನಿರ್ದೇಶನದಲ್ಲಿ ಸುದರ್ಶನ ಉರಾಳರ ಸಂಯೋಜನೆಯಲ್ಲಿ ಕಲಾವಿದರಾಗಿ ಬಾಲಕೃಷ್ಣ ಭಟ್, ಸುಜಯಂದ್ರ ಹಂದೆ, ಪ್ರಿಯಾಂಕ ಕೆ. ಮೋಹನ್, ಕೃಷ್ಣಮೂರ್ತಿ ತುಂಗ, ಲಂಬೋದರ ಹೆಗಡೆ, ಶ್ರೀನಾಥ್ ಉರಾಳ, ದಿನೇಶ್ ಕನ್ನಾರ್, ವಿಶ್ವನಾಥ ಉರಾಳ, ಸಂಪತ್ ಕುಮಾರ್, ಕಾರ್ತೀಕ ಧಾರೇಶ್ವರ ಮತ್ತು ಯಕ್ಷದೇಗುಲದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬೆಂಗಳೂರಿನ ಜಯನಗರದ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ ಉದ್ಯಮಿ ಮನೋಜರವರ ಪ್ರಾಯೋಜಕತ್ವದಲ್ಲಿ ಬೆಂಗಳೂರಿನ

ಪ್ರಾತ್ಯಕ್ಷಿಕೆ
'ಯಕ್ಷಾಂತರಂಗ'ವನ್ನು ಪರಿಚಯಿಸುವ, ಹಾಗೆ ಹೆಜ್ಜೆಗಾರಿಕೆ, ಪದಾಭಿನಯ, ಸಭಾಲಕ್ಷಣದ ಬಾಲಗೋಪಾಲ, ಸ್ತ್ರೀ ವೇಷ, ಕೃಷ್ಣನ ಒಡ್ಡೋಲಗ, ಯುದ್ಧಕುಣಿತ, ಕಿಲಾತನ ಒಡ್ಡೋಲಗ, ಕಿರಾತ ವೇಷದ ಅಟ್ಟೆ ಜೋಡು ಮುಂಡಾಸು ಕಟ್ಟುವ ಕ್ರಮ, ವಸ್ತ್ರ ವಿನ್ಯಾಸಗಳ ಕುರಿತು ಮಾಹಿತಿ, ಪ್ರಾತ್ಯಕ್ಷಿಕೆ ನೀಡಲಾಯಿತು.

> **ಪ್ರಯೋಜನಕಾರಿ**
> **ಯಕ್ಷಗಾನದ ಕೆಲವು ಪ್ರದರ್ಶನಗಳು ಇಂದು ಮೂಲ ಆಶಯಗಳ ಬಿಟ್ಟು ಪ್ರದರ್ಶನಗೊಳ್ಳುತ್ತಿದೆ. ಯಕ್ಷಗಾನ ಸಾರಸತ್ವವನ್ನು ಅರಿಯುವ ಪ್ರಯತ್ನ ವನ್ನು ಮಾಡಬೇಕು ಇಂಥ ಪ್ರಾತ್ಯಕ್ಷಿಕೆಗಳು ಸಹೃದಯೀ ಪ್ರೇಕ್ಷಕರನ್ನು ರೂಪಿಸುವಲ್ಲಿ ಅತ್ಯಂತ ಪ್ರಯೋಜನಕಾರಿ, ನಮಗೆ ಪ್ರಾಥಮಿಕ ಶಿಕ್ಷಣದ ನೆನಪಾಯಿತು.**
> ● **ಉದ್ಯಮಿ ಮನೋಜ**

ಯಕ್ಷದೇಗುಲ ತಂಡದವರಿಂದ 'ಯಕ್ಷಾತರಂಗ'ವನ್ನು ಪರಿಚಯಿಸುವ ಯಕ್ಷದೇಗುಲ ಪರಿಕಲ್ಪನೆಯ ವಿನೂತನ ಯಕ್ಷಗಾನ 'ಪ್ರಾತ್ಯಕ್ಷಿಕೆ' ನಡೆಯಿತು. ಕೆ. ಮೋಹನ್ ನಿರ್ದೇಶನದಲ್ಲಿ ಸುದರ್ಶನ ಉರಾಳ, ಕಲಾವಿದರಾಗಿ ಬಾಲಕೃಷ್ಣ ಭಟ್, ಸುಜಯಂದ್ರ ಹಂದೆ, ಪ್ರಿಯಾಂಕ ಕೆ. ಮೋಹನ್, ಕೃಷ್ಣಮೂರ್ತಿ ತುಂಗ ಮೊದಲಾದವರು ಉಪಸ್ಥಿತರಿದ್ದರು.

ಸಂಸ್ಕೃತಿ, ಪರಂಪರೆ ಸಮೃದ್ಧವಾಗಿರುವ ನಾಡು ಭಾರತ: ಡಾ. ಪ್ರಭಾಕರ್ ಭಟ್



ಸುರತ್ಕಲ್: ಜಾಗತಿಕ ಮಟ್ಟದಲ್ಲಿ ಸಂಸ್ಕೃತಿ, ಪರಂಪರೆ, ಆದರ್ಶಗಳು ಸಮೃದ್ಧವಾಗಿರುವ ಭಾರತ ದೇಶದಂತಹ ಇನ್ನೊಂದು ದೇಶ ಇರಲು ಸಾಧ್ಯವಿಲ್ಲ ಎಂದು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಹೇಳಿದ್ದಾರೆ.
ಅವರು ಕರ್ನಾಟಕ ಮಹಾವಿದ್ಯಾಲಯ ಶಿಕ್ಷಕರ ಸಂಘ, ಸುರತ್ಕಲ್ ಹಿಂದು ವಿದ್ಯಾದಾಯಿನೀ ಸಂಘದ ಆಡಳಿತಕ್ಕೊಳಪಟ್ಟ ಗೋವಿಂದದಾಸ ಕಾಲೇಜು, ಸುರತ್ಕಲ್‌ನ ಹಿಂದಿ ವಿಭಾಗ ಸಂತ ರವಿದಾಸರ 650ನೇ ಜನ್ಮ ದಿನಾಚರಣೆಯ ಪ್ರಯುಕ್ತ ಜಂಟಿಯಾಗಿ ಆಯೋಜಿಸಿದ 'ಭಾರತೀಯ ಸಂತ ಪರಂಪರೆ' ಎಂಬ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.
ತತ್ವಗಳನ್ನು ಅಳವಡಿಸಿಕೊಳ್ಳಿ
ಭಾರತವು ಶ್ರೇಷ್ಠಸಂತಪರಂಪರೆ ಹೊಂದಿದ್ದು ಸಂತ ರವಿದಾಸರಂತಹ ಸಂತರು ಸಾರಿದ ತತ್ವಗಳನ್ನು ಯುವ ಜನತೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಭಾರತವನ್ನು ವಿಶ್ವಗುರುವನ್ನಾಗಿಸಲು ಪ್ರಯತ್ನಿಸಬೇಕು ಎಂದರು.
ಅಧ್ಯಕ್ಷತೆ ವಹಿಸಿದ ಹಿಂದು ವಿದ್ಯಾದಾಯಿನೀ ಸಂಘದ ಅಧ್ಯಕ್ಷ ಜಯಚಂದ್ರ ಎಸ್. ಹತ್ವಾರ್ ಮಾತನಾಡಿ, ವಿದ್ಯಾ ಸಂಸ್ಥೆಗಳಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ಯುವಜನರಲ್ಲಿ ಭಾರತದ ಭವ್ಯ ಪರಂಪರೆ ಬಗೆಗೆ ಜಾಗೃತಿ ಮೂಡಿಸಬೇಕು ಎಂದರು.
ಕೆ.ಆರ್.ಎಂ.ಎಸ್.ಎಸ್‌ನ ರಾಜ್ಯ ಜಂಟಿ ಪ್ರಧಾನ ಕಾರ್ಯದರ್ಶಿ ಡಾ. ಮಾಧವ ಎಂ.ಕೆ. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಕಾಲೇಜಿನ ಆಡಳಿತಾತ್ಮಕ ನಿರ್ದೇಶಕ ಪ್ರೊ. ರಮೇಶ್ ಭಟ್ ಎಸ್.ಜಿ., ಕೆ.ಆರ್. ಎಂ.ಎಸ್.ಎಸ್‌ನ ಮಂಗಳೂರು ವಿಭಾಗದ ಅಧ್ಯಕ್ಷೆ ಡಾ. ಸುಧಾ ಯು., ಸದಸ್ಯೆ ಸೌಮ್ಯ, ಗೋವಿಂದ ದಾಸ ಕಾಲೇಜಿನ ಉಪನ್ಯಾಸಕ ವರ್ಗ, ಶಿಕ್ಷಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.
ಪ್ರಾಂಶುಪಾಲ ಪ್ರೊ. ಹರೀಶ ಆಚಾರ್ಯ ಪಿ. ಸ್ವಾಗತಿಸಿ, ಹಿಂದಿ ವಿಭಾಗದ ಮುಖ್ಯಸ್ಥೆ ಜ್ಯೋತಿ ಕಾಮತ್ ವಂದಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ. ವಿಜಯಲಕ್ಷ್ಮೀ ಕಾರ್ಯಕ್ರಮ ನಿರೂಪಿಸಿದರು.

ಅಶಕ್ತರಿಗೆ ನೆರವಾಗುವ ಶ್ರೀನಿಧಿ ಸೇವಾ ಟ್ರಸ್ಟ್‌ನ ಕಾರ್ಯ ಅಭಿನಂದನಾರ್ಹ: ನಿರ್ಮಲ್ ಜೈನ್



- **ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳ ನಟರಾಜ ವೇದಿಕೆಯಲ್ಲಿ ನಡೆದ ಕಾರ್ಯಕ್ರಮ**
- **ಪುತ್ತೂರಿನ ಶ್ರೀನಿಧಿ ಸೇವಾ ಟ್ರಸ್ಟ್‌ನಿಂದ ಅಶಕ್ತರಿಗೆ ಆಹಾರ ಕಿಟ್ ವಿತರಣೆ**

ಪುತ್ತೂರು: ಜನಸೇವೆಯೇ ಜನಾರ್ದನ ಸೇವೆಯಾಗಿದ್ದು, ನಿಸ್ವಾರ್ಥ ಸೇವೆಯ ರೂಪದಲ್ಲಿ ಭಗವಂತನನ್ನು ಕಾಣಬಹುದು. ಅಶಕ್ತರಿಗೆ ನೆರವಾಗುತ್ತಿರುವ ಶ್ರೀನಿಧಿ ಸೇವಾ ಟ್ರಸ್ಟಿನ ಕಾರ್ಯ ಅಭಿನಂದನಾರ್ಹ ಎಂದು ವಕೀಲ ನಿರ್ಮಲ್ ಕುಮಾರ್ ಜೈನ್ ಹೇಳಿದ್ದಾರೆ.
ಅವರು ನಗರದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನಟರಾಜ ವೇದಿಕೆಯಲ್ಲಿ ಪುತ್ತೂರಿನ ಶ್ರೀನಿಧಿ ಸೇವಾ ಟ್ರಸ್ಟ್ ನಡೆಸಿಕೊಂಡು ಬರುತ್ತಿರುವ ಅಶಕ್ತರಿಗೆ ಆಹಾರ ಕಿಟ್ ವಿತರಣಾ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು.
ಸದುಪಯೋಗಿಸಿ
ಸಂಪನ್ಮೂಲ ವ್ಯಕ್ತಿಯಾಗಿದ್ದ ಪದ್ಮಲತಾ ಮಾತನಾಡಿ, ಟ್ರಸ್ಟಿನ ಕಾರ್ಯವೈಖರಿ ಬಗ್ಗೆ ಶ್ಲಾಘಿಸಿ, ಟ್ರಸ್ಟಿನ ಸಹಾಯಾರ್ಥ ಸದುಪಯೋಗ ಮಾಡಿಕೊಳ್ಳುವಂತೆ ಫಲಾನುಭವಿಗಳಿಗೆ ತಿಳಿಸಿದರು.
ಟ್ರಸ್ಟ್‌ನ ಅಧ್ಯಕ್ಷೆ ಉಷಾ ಕಾವು ಮಾತನಾಡಿ, ಪರಸ್ಪರ ಸಹಾಯವೇ ಟ್ರಸ್ಟಿನ ಉದ್ದೇಶವಾಗಿದೆ. ಮಾನವೀಯತೆ ಇದ್ದಾಗ ಸೇವಾ ಮನೋಭಾವನೆ ಮೂಡಲು ಸಾಧ್ಯವಿದೆ. ಅಶಕ್ತರ ಸೇವೆಯಲ್ಲಿ ದೇವರನ್ನು ಕಾಣಬಹುದು ಎಂಬ ನಿಟ್ಟಿನಲ್ಲಿ ಟ್ರಸ್ಟ್ ಈ ಸೇವಾ ಕಾರ್ಯ ಮಾಡುತ್ತಿದೆ ಎಂದರು.
18 ಫಲಾನುಭವಿಗಳಿಗೆ ವಿತರಣೆ
ಈ ಸಂದರ್ಭ ಬಳಿಕ 18 ಫಲಾನುಭವಿಗಳಿಗೆ ಆಹಾರದ ಕಿಟ್ ವಿತರಿಸಲಾಯಿತು. ಫಲಾನುಭವಿಗಳಾದ ಸಾಧು ನಾಯ್ಕ ಹಾಗೂ ರಮ್ಯಾ ಅನಿಸಿಕೆ ವ್ಯಕ್ತಪಡಿಸಿದರು. ಸೌಜನ್ಯ ಬಿ.ಎಂ. ಕೆಯ್ಯೂರು ಸ್ವಾಗತಿಸಿ, ಲಕ್ಷ್ಮಣ ವಂದಿಸಿದರು. ರಂಗಕರ್ಮಿ ಕೃಷ್ಣಪ್ಪ ಬಂಬಿಲ ಕಾರ್ಯಕ್ರಮ ನಿರೂಪಿಸಿದರು.

ಗಾಳದಕೊಂಕಣಿ ಅಭ್ಯುದಯ ಸಂಘದ ವಾರ್ಷಿಕ ಸಭೆ, ಪುಸ್ತಕ ವಿತರಣೆ, ಸನ್ಮಾನ



ಬಂಟ್ವಾಳ: ಗಾಳದಕೊಂಕಣಿ ಅಭ್ಯುದಯ ಸಂಘದ 72ನೇ ವಾರ್ಷಿಕ ಮಹಾಸಭೆ, ಉಚಿತ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮ ತೊಕ್ಕೊಟ್ಟು ಕಾಪಿಕಾಡಿನಲ್ಲಿರುವ ಕುದ್ಮಲ್ ರಂಗರಾವ್ ಸಭಾಭವನದಲ್ಲಿ ನಡೆಯಿತು.
ಸಂಘದ ಅಧ್ಯಕ್ಷ ನರಸಿಂಹ ನಾಯಕ್ ಹರೇಕಳ ಅಧ್ಯಕ್ಷತೆ ವಹಿಸಿದ್ದರು.
ಸೋಮನಾಥ ಉಳಿಯ ಕ್ಷೇತ್ರದ ಗಡಿಪ್ರಧಾನರಾದ ಬಸಪ್ಪ ಯಾನೆ ಜೆ.ರವೀಂದ್ರ ನಾಯಕ್ ಸಭೆಯನ್ನು ಉದ್ಘಾಟಿಸಿ, ಸಂಘವು ಶಿಕ್ಷಣಕ್ಕೆ ವಿಶೇಷ ಒತ್ತು ನೀಡುವುದರ ಜೊತೆಗೆ ಪ್ರಸಕ್ತ ದಿನಗಳಲ್ಲಿ ಸಂಘಟನಾತ್ಮಕವಾಗಿ ಬೆಳೆಯುತ್ತಿರುವುದು ಶ್ಲಾಘನೀಯ ಎಂದರು.
ಅತಿಥಿಯಾಗಿದ್ದಸೋಮನಾಥಉಳಿಯ ಕ್ಷೇತ್ರದ ಆಡಳಿತ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ್, ಗೌರವಾಧ್ಯಕ್ಷ ಯು. ದಯಾನಂದ ನಾಯಕ್, ಮುಂಬೈ ಸಜ್ಜನ್ ಸೇವಾ ಸಂಘದ ಮಾಜಿ ಅಧ್ಯಕ್ಷ ದೇವದಾಸ್ ನಾಯಕ್ ಮಾತನಾಡಿದರು.
ಸಂಘದ ಉಪಾಧ್ಯಕ್ಷರಾದ ಮಿಥಿಲೇಶ್ ನಾಯಕ್ ಮಣ್ಣಗುಡ್ಡೆಹೇಮಾ ಕೇಶವ ನಾಯಕ್ ವೇದಿಕೆಯಲ್ಲಿದ್ದರು.

> **ಪ್ರತಿಭಾ ಪುರಸ್ಕಾರ**
> **ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ - ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಸಮುದಾಯದ ವಿದ್ಯಾರ್ಥಿ ಗಳನ್ನು ಪ್ರೋತ್ಸಾಹ ಧನ ದೊಂದಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.**

ಸಂಘದ ಚಟುವಟಿಕೆಯಿಂದ ನಿವೃತ್ತರಾದ ಇಬ್ಬರು ಹಿರಿಯರನ್ನು ಸನ್ಮಾನಿಸಲಾಯಿತು. 1–10ನೇ ತರಗತಿ ವರೆಗಿನ ಸಮುದಾಯ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ, ಸಮುದಾಯದ ಅಶಕ್ತರು, ವಿಕಲಚೇತನರಿಗೆ ಸಹಾಯಧನ ವಿತರಿಸಲಾಯಿತು.
ಸಂಘದ ಸದಸ್ಯೆ ನಳಿನಿ ಎಸ್.ನಾಯಕ್ ಪ್ರಾರ್ಥಿಸಿ, ಆಶಾ ನಾಯಕ್ ಗೋರಿಗುಡ್ಡೆ ಸ್ವಾಗತಿಸಿದರು.ಕೋಶಾಧಿಕಾರಿ ಡಾ.ಧನಲಕ್ಷ್ಮೀ ಎಂ.ಮಣ್ಣಗುಡ್ಡೆ ವಾರ್ಷಿಕ ವರದಿ ವಾಚಿಸಿದರು. ಪ್ರಧಾನ ಕಾರ್ಯದರ್ಶಿ ಮುರಳೀಧರ ನಾಯಕ್ ಬಬ್ಬುಕಟ್ಟೆ ಲೆಕ್ಕಪತ್ರ ಮಂಡಿಸಿ, ಮಾಜಿ ಪ್ರಧಾನ ಕಾರ್ಯದರ್ಶಿ ಕೋಡಿ ಜಯ ನಾಯಕ್ ಅನಿಸಿಕೆ ವ್ಯಕ್ತಪಡಿಸಿದರು. ವೆಂಕಟೇಶ್ ಬಂಟ್ವಾಳ ನಿರೂಪಿಸಿದರು.

ಪುತ್ತೂರು ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘದ ವಾರ್ಷಿಕ ಮಹಾಸಭೆ



ಮಂಗಳೂರು: ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘ ಬೊಳುವಾರು ಪುತ್ತೂರು ಇದರ ವಾರ್ಷಿಕ ಮಹಾಸಭೆ, ನೂತನ ಪದಾಧಿಕಾರಿಗಳ ಪದಗ್ರಹಣ, ಪತ್ತನಾಜೆ ತಾಳಮದ್ದಳೆ ಕೂಟ ಬೊಳುವಾರು ಶ್ರೀ ಶಕ್ತಿ ಆಂಜನೇಯ ಮಂತ್ರಾಲಯದಲ್ಲಿ ಶನಿವಾರ ನಡೆಯಿತು.
ಸಂಘದ ಅಧ್ಯಕ್ಷ ಭಾಸ್ಕರ ಬಾರ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಆನಂದ್ ಸವಣೂರು ವರದಿ ವಾಚಿಸಿದರು. ಕೋಶಾಧಿಕಾರಿ ದುಗ್ಗಪ್ಪ ನಡುಗಲ್ಲು ಲೆಕ್ಕಪತ್ರ ಮಂಡಿಸಿದರು.
ಬಳಿಕ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಮುಂದಿನ ಸಾಲಿಗೆ ಗೌರವಾಧ್ಯಕ್ಷರಾಗಿ ರಮಾನಂದ ನಾಯಕ್ ಬೊಳುವಾರು, ಅಧ್ಯಕ್ಷರಾಗಿ ಭಾಸ್ಕರ ಬಾರ್ಯ, ಸಂಚಾಲಕರಾಗಿ ಪ್ರೇಮಲತಾ ರಾವ್, ಅಚ್ಯುತ ಪಾಂಗಣ್ಣಾಯ, ಉಪಾಧ್ಯಕ್ಷರಾಗಿ ಗುಂಡ್ಯಡ್ಕ ಈಶ್ವರ ಭಟ್, ಗುಡ್ಡಪ್ಪ ಬಲ್ಯ, ಪ್ರವೀಣ ಮಣಿಯಾಣಿ, ಶುಭಾ ಅಡಿಗ, ಹರ್ಷ ಪುಣಚ, ಪ್ರಧಾನ ಕಾರ್ಯದರ್ಶಿಯಾಗಿ ಆನಂದ ಸವಣೂರು, ಜೊತೆ ಕಾರ್ಯದರ್ಶಿ ಸತೀಶ್ ಇರ್ದೆ, ಕೋಶಾಽಕಾರಿಯಾಗಿ ದುಗ್ಗಪ್ಪ ನಡುಗಲ್ಲು, ಗೌರವ ಕಾರ್ಯದರ್ಶಿ ರಂಗನಾಥ ರಾವ್, ಸಂಘಟನಾ ಕಾರ್ಯದರ್ಶಿಯಾಗಿ ಹರಿಣಾಕ್ಷಿ ಜೆ. ಶೆಟ್ಟಿ, ಶಾರದಾ ಅರಸ್, ಕಿಶೋರಿ ದುಗ್ಗಪ್ಪ ನಡುಗಲ್ಲು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.
ಬಳಿಕ ಪತ್ತನಾಜೆ ಕೂಟ ಹಟ್ಟಿಯಂಗಡಿ ರಾಮ ಭಟ್ಟ ವಿರಚಿತ ಸುಭದ್ರಾ ಕಲ್ಯಾಣ ಎಂಬ ಆಖ್ಯಾನದೊಂದಿಗೆ ನಡೆಯಿತು.
ಸಂಘದ ಅಧ್ಯಕ್ಷ ಭಾಸ್ಕರ ಬಾರ್ಯ ಸ್ವಾಗತಿಸಿ, ಹರಿಣಾಕ್ಷಿ ಜೆ. ಶೆಟ್ಟಿ ವಂದಿಸಿ, ಗೌರವಕಾರ್ಯದರ್ಶಿ ರಂಗನಾಥ ರಾವ್ ಸಹಕರಿಸಿದರು.

ಕುರ್ನಾಡು ದತ್ತಾತ್ರೇಯ ಶಾಲೆಯ ಹಳೆ ವಿದ್ಯಾರ್ಥಿಗಳ ಮಹಾಸಂಗಮ ಕಾರ್ಯಕ್ರಮ



ಕೊಣಾಜೆ: ತಾಲೂಕಿನ ಕುರ್ನಾಡು ಶ್ರೀ ದತ್ತಾತ್ರೇಯ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಹಳೆವಿದ್ಯಾರ್ಥಿಗಳ ಮಹಾ ಸಂಗಮ ಕಾರ್ಯಕ್ರಮ ಭಾನುವಾರ ನಡೆಯಿತು. ಸಾಂಪ್ರದಾಯಿಕವಾಗಿ ದೀಪ ಪ್ರಜಲನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.
ಶಿವರಾಮ ಶೆಟ್ಟಿಗೆ ಸನ್ಮಾನ
ನಿವೃತ್ತ ಮುಖ್ಯೋಪಾಧ್ಯಾಯ ಪಿ. ಶಿವರಾಮ ಶೆಟ್ಟಿ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.
ಈ ಸಂದರ್ಭದಲ್ಲಿ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ದೇವದಾಸ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು.
ಶಾಲಾ ಸಂಚಾಲಕ ಗಣೇಶ್ ನಾಯ್ಕ್, ಶಾಲಾ ಮುಖ್ಯೋಪಾಧ್ಯಾಯಿನಿ ವಸಂತಿ,

> **ಸಾಧಕ ಮಕ್ಕಳಿಗೆ ಸನ್ಮಾನ**
> **ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ವಿಶೇಷ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ ಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.**

ಶ್ರೀ ದತ್ತಾತ್ರೇಯ ಯಕ್ಷಗಾನ ಮತ್ತು ಭಜನಾ ಮಂಡಳಿ ಅಧ್ಯಕ್ಷ ನಾಗರಾಜ ಭಟ್, ಹಾಪ್ ಕಾಮ್ಸ್ ಅಧ್ಯಕ್ಷ ಪ್ರಶಾಂತ ಗಟ್ಟಿ, ಹಿರಿಯ ವಿದ್ಯಾರ್ಥಿ ಮೊಯಿದಿನ್ ಹಾಜಿ, ಮದ್ಯನಡ್ಕತ್ವಾಹಾ ಜುಮಾ ಮಸೀದಿ ಅಧ್ಯಕ್ಷ ಅಬೂಬಕ್ಕರ್ ಮತ್ತಿತರರು ಹಾಜರಿದ್ದರು.
ದೀಕ್ಷಾ ತೃಷಾ ಪ್ರಾರ್ಥಿಸಿದರು. ಭಾರತಿ ಶೆಟ್ಟಿ ಸ್ವಾಗತಿಸಿದರು. ಆಲ್ವಿನ್ ಪಿಂಟೋ ವಂದಿಸಿದರು. ರೇಖಾ ಪ್ರಶಾಂತ್ ಕಾರ್ಯಕ್ರಮ ನಿರೂಪಿಸಿದರು.

ವಜ್ರತೇಜಸ್‌ನಿಂದ ಸಹಾಯಧನ ವಿತರಣೆ




ಪುತ್ತೂರು: ವಿಶ್ವ ಹಿಂದೂ ಪರಿಷದ್ ಬಜರಂಗದಳ ಪುತ್ತೂರು ಇದರ ಸೇವಾ ಪ್ರಕಲ್ಪವಾದ 'ವಜ್ರತೇಜಸ್' ಹಿಂದೂ ಕವಚ್ ವಾಟ್ಸ್ ಆಪ್ ಗ್ರೂಪ್‌ನಲ್ಲಿ ಸಂಗ್ರಹವಾದ ಮೊತ್ತದಲ್ಲಿ ಅಪಘಾತದಿಂದ ತೀವ್ರ ಗಾಯಗೊಂಡು ಪುತ್ತೂರು ಆಸ್ಪತ್ರೆಯಲ್ಲಿ ದಾಖಲಾಗಿರುವ ಸಶಿತ್ ಬೆಟ್ಟಂಪಾಡಿ ಅವರನ್ನು ಭೇಟಿ ನೀಡಿ ಆರೋಗ್ಯ ವಿಚಾರಿಸಿ ಚಿಕಿತ್ಸಾ ವೆಚ್ಚಕ್ಕೆ ಸಹಾಯಧನ ನೀಡಲಾಯಿತು.
ವಜ್ರತೇಜಸ್ ಹಿಂದೂ ಕವಚ್‌ನ ಅಧ್ಯಕ್ಷ ಮುರಳೀಕೃಷ್ಣ ಹಸಂತಡ್ಕ, ವಿಶ್ವ ಹಿಂದೂ ಪರಿಷದ್ ಜಿಲ್ಲಾ ಸಹ ಕಾರ್ಯದರ್ಶಿ ಶ್ರೀಧರ್ ತೆಂಕಿಲ, ಜಿಲ್ಲಾ ಪ್ರಚಾರ ಪ್ರಸಾರ ಪ್ರಮುಖ್ ಕೇಶವಪ್ರಸಾದ್ ಬಜಪ್ಪಳ, ವಿಶ್ವಹಿಂದೂ ಪರಿಷದ್ ನಗರ ಕಾರ್ಯದರ್ಶಿ ಜಿತೇಶ್ ಬಲ್ನಾಡ್, ಬಜರಂಗದಳ ನಗರ ಸಪ್ತಾಹಿಕ್ ಮಿಲನ್ ಪ್ರಮುಖ್ ಸಂದೀಪ್ ಸಿಂಗಣೆ, ಸಂಘಟನಾ ಪ್ರಮುಖರು ಉಪಸ್ಥಿತರಿದ್ದರು.

ಮೇ 31ರಂದು ನೀರ್ಚಾಲಿನಲ್ಲಿ ಡಾ.ರಮಾನಂದ ಬನಾರಿ ಸಾಕ್ಷ್ಯಚಿತ್ರ ಲೋಕಾರ್ಪಣೆ, ಕೃತಿ ಬಿಡುಗಡೆ

ಕಾಸರಗೋಡು: ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕ ಕಾಸರಗೋಡು, ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘ, ಕೀರಿಕ್ಕಾಡು ಸ್ಮಾರಕ ಸಾಂಸ್ಕೃತಿಕ ಅಧ್ಯಯನ ಕೇಂದ್ರ ದೇಲಂಪಾಡಿ, ಗಿಳಿವಿಂಡು ಮಂಜೇಶ್ವರ ಕಾಲೇಜು, ಸ್ನೇಹರಂಗ ಕಾಸರಗೋಡು ಸರಕಾರೀ ಕಾಲೇಜು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಮೇ 31ರಂದು ನೀರ್ಚಾಲು ಮಹಾಜನ ವಿದ್ಯಾಸಂಸ್ಥೆಯ ಸಭಾಭವನದಲ್ಲಿ ಕನ್ನಡದ ಹಿರಿಯ ಸಾಹಿತಿ, ಡಾ.ರಮಾನಂದ ಬನಾರಿ 85ರ ಅಭಿನಂದನಾ ಪೂರ್ವ 'ಮಂಜೇಶ್ವರದ ಮುತ್ತು' ಸಾಕ್ಷ್ಯ ಚಿತ್ರದ ಬಿಡುಗಡೆ, ಕುಟ್ಟಿಯಾನ ಮುಹಮ್ಮದ್ ಅವರ ಕನಸುಗಳ ಭೂಮಿಗೆ ಯಾತ್ರೆ, ಕನ್ನಡಿಯಲ್ಲಿ ಕನ್ನಡಿಗ ಕೃತಿ ಸರಣಿಯ 7ನೇ ಸಂಚಿಕೆ ಬಿಡುಗಡೆ ಮತ್ತು ಕನ್ನಡ ಸಾಹಿತ್ಯ ಸಂಸ್ಕೃತಿ ಸಮ್ಮೇಳನ ನಡೆಯುವುದು.

ಸಾಹಿತ್ಯ ಸಂಸ್ಕೃತಿ ಸಮ್ಮೇಳನ
ಡಾ.ರಮಾನಂದ ಬನಾರಿ 85ರ ಅಭಿನಂದನಾ ಪೂರ್ವ 'ಮಂಜೇಶ್ವರದ ಮುತ್ತು' ಸಾಕ್ಷ್ಯ ಚಿತ್ರ' ಬಿಡುಗಡೆ, ಕುಟ್ಟಿಯಾನ ಮುಹಮ್ಮದ್ ಅವರ ಕನಸುಗಳ ಭೂಮಿಗೆ ಯಾತ್ರೆ, ಸಾಹಿತ್ಯ ಸಂಸ್ಕೃತಿ ಸಮ್ಮೇಳನ ನಡೆಯಲಿದೆ.



ಅಂದು ಬೆಳಗ್ಗೆ 9 ಗಂಟೆಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಕಾರ್ಯಕ್ರಮ ಉದ್ಘಾಟಿಸುವರು.
ಸಾಕ್ಷ್ಯಚಿತ್ರವನ್ನು ಲೋಕಾರ್ಪಣೆ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು 'ಮಂಜೇಶ್ವರದ ಮುತ್ತು' ಸಾಕ್ಷ್ಯಚಿತ್ರವನ್ನು ಲೋಕಾರ್ಪಣೆ ಮಾಡುವರು. ಕರ್ನಾಟಕ ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಅವರು ಕುಟ್ಟಿಯಾನ ಮುಹಮ್ಮದ್ ಅವರ 'ಕನಸುಗಳ ಭೂಮಿಗೆ ಯಾತ್ರೆ' ಕೃತಿಯನ್ನು ಬಿಡುಗಡೆಗೊಳಿಸುವರು.
ಖ್ಯಾತ ಸಾಹಿತಿ ಡಾ.ಮೋಹನ ಕುಂಟಾರು ಅಧ್ಯಕ್ಷತೆ ವಹಿಸುವರು. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ನೀರ್ಚಾಲು ಮಹಾಜನ ವಿದ್ಯಾಸಂಸ್ಥೆಯ ಪ್ರಬಂಧಕ ಜಯದೇವ ಖಂಡಿಗೆ, ಕಸಾಪ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.
ಕಾಸರಗೋಡು ಸರಕಾರಿ ಕಾಲೇಜಿನ ಪ್ರಾಧ್ಯಾಪಕ ಡಾ.ರಾಧಾಕೃಷ್ಣ ಬೆಳ್ಳೂರು ಅಭಿನಂದನಾ ಭಾಷಣ ಮಾಡುವರು. ಆಕಾಶವಾಣಿ ವಿಶ್ರಾಂತ ಕಾರ್ಯಕ್ರಮ ನಿರ್ದೇಶಕ ಡಾ.ವಸಂತಕುಮಾರ ಪೆರ್ಲ ಪ್ರಾಸ್ತಾವಿಕ ಭಾಷಣ ಮಾಡುವರು. ಮಂಜೇಶ್ವರದ ಮುತ್ತು ಸಾಕ್ಷ ಚಿತ್ರದ ನಿರ್ದೇಶಕ ಡಾ..ಪ್ರವೀಣರಾಜ್ ಎಸ್.ರಾವ್ ಅವರನ್ನು ಈ ಸಂದರ್ಭ ಗೌರವಿಸಲಾಗುವುದು. ಗಡಿ ಪ್ರದೇಶ ಅಭಿವೃದ್ಧಿಪ್ರಾಧಿಕಾರ ಸದಸ್ಯ ಎ.ಆರ್.ಸುಬ್ಬಯ್ಯ ಕಟ್ಟೆ, ಸಾಹಿತಿಗಳಾದ ವಿಜಯಲಕ್ಷ್ಮಿ ಶಾನುಭೋಗ್, ಡಾ.ಮಹೇಶ್ವರಿ ಯು.ಉಪಸ್ಥಿತರಿರುವರು.
ಬಳಿಕ ನಡೆಯುವ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಂಶುಪಾಲ ಡಾ.ವರದರಾಜ ಚಂದ್ರಗಿರಿ ಕಾಸರಗೋಡಿನ ಸಾಹಿತ್ಯದ ಸ್ಥೂಲ ಅವಲೋಕನ ಮಾಡುವರು. ಕಾಸರಗೋಡು ಸರಕಾರಿ ಕಾಲೇಜಿನ ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆ ಕಾಸರಗೋಡಿನ ಸಮಗ್ರ ಸಂಸ್ಕೃತಿ ಬಗ್ಗೆ ವಿಷಯ ಮಂಡಿಸುವರು.
ಅಪರಾಹ್ನ ನಡೆಯುವ ವಿಚಾರಗೋಷ್ಠಿಯಲ್ಲಿ ಡಾ.ಬನಾರಿಯವರ ಕಾವ್ಯಗಳ ಕುರಿತು ಸಾಹಿತಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ , ಬನಾರಿಯವರ ಗದ್ಯ ಮತ್ತು ಅರ್ಥಗಾರಿಕೆಯ ಕುರಿತು ಪ್ರಾಧ್ಯಾಪಕ ಡಾ.ಧನಂಜಯ ಕುಂಬಳೆ, ಕರ್ನಾಟಕದೊಂದಿಗೆ ಕಾಸರಗೋಡಿನ ಸಾಂಸ್ಕೃತಿಕ ವಿಲೀನೀಕರಣದ ಕುರಿತು ಉಪನ್ಯಾಸಕ ಟಿ.ಎ.ಎನ್.ಖಂಡಿಗೆ ಮಾತನಾಡುವರು.
'ನ್ಯಾಯಾಂಗದ ಮುಂದೆ ಕಾಸರಗೋಡಿನ ಸಮಸ್ಯೆ' ಎಂಬ ವಿಷಯದ ಕುರಿತು ವಕೀಲ ಎನ್. ಕೆ.ಮೋಹನದಾಸ್,ಕಾಸರಗೋಡಿನಕನ್ನಡಸಂಘಟನೆಗಳ ಪಾತ್ರದ ಬಗ್ಗೆ ಪ್ರಾಧ್ಯಾಪಕ ಡಾ.ಬಾಲಕೃಷ್ಣ ಹೊಸಂಗಡಿ, ಸಾಹಿತ್ಯ, ಸಂಸ್ಕೃತಿಗಳ ಸಂವರ್ಧನೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಕುರಿತು ಮಂಜೇಶ್ವರ ಗೋವಿಂದ ಪೈ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಶಿವಶಂಕರ ಪಿ. ವಿಷಯ ಮಂಡನೆ ಮಾಡುವರು.
ಸಮಾರೋಪ ಸಮಾರಂಭ
ಸಂಜೆ ನಡೆಯುವ ಸಮಾರೋಪದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು 'ಕನ್ನಡಿಯಲ್ಲಿ ಕನ್ನಡಿಗ ಕೃತಿ ಸರಣಿಯ 7ನೇ ಸಂಚಿಕೆ'ಯನ್ನು ಬಿಡುಗಡೆಗೊಳಿಸುವರು. ಕಸಾಪ ಮಾಜಿ ಅಧ್ಯಕ್ಷ , ಧರ್ಮದರ್ಶಿ ಹರಿಕೃಷ್ಣ ಪುನರೂರು ಮುಖ್ಯ ಅತಿಥಿಗಳಾಗಿರುವರು. ಸಾಹಿತಿ ಡಾ.ಪ್ರಮೀಳಾ ಮಾಧವ್ ಕೃತಿಯ ಕುರಿತು ಮಾತನಾಡುವರು.
ಕರ್ನಾಟಕ ಸಮಿತಿಯ ಅಧ್ಯಕ್ಷ ಕೆ.ಮುರಳೀಧರ ಬಳ್ಳಕ್ಕುರಾಯ, ದಕ್ಷಿಣ ಕನ್ನಡ ಕಸಾಪ ಮಾಜಿ ಅಧ್ಯಕ್ಷ ಪ್ರದೀಪಕುಮಾರ್ ಕಲ್ಕೂರ, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ ಎ., ಪತ್ರಕರ್ತರ ಕ್ಷೇಮಾಭ್ಯುದಯ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ನಿವೃತ್ತ ಉಪನ್ಯಾಸಕ ಪ್ರೊ.ಎ.ಶ್ರೀನಾಥ್, ಯಕ್ಷಗಾನ ಅಕಾಡೆಮಿ ಸದಸ್ಯ ಸಂಕಬೈಲು ಸತೀಶ ಅಡಪ ಉಪಸ್ಥಿತರಿರುವರು.
ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಯೋಗ ಪ್ರದರ್ಶನ, ಕಾಸರಗೋಡಿನ ನಾಟ್ಯ ತರಂಗಿಣಿ ಸಂಸ್ಥೆಯಿಂದ ಮೋಹಿನಿಯಾಟ್ಟಂ, ವಿದುಷಿ ಅನುಪಮಾ ರಾಘವೇಂದ್ರ ಉಡುಪುಮೂಲೆ ಇವರಿಂದ ನಾಟ್ಯ ತರಂಗಿಣಿ, ಗುರುರಾಜ್ ಕಾಸರಗೋಡು ನೇತೃತ್ವದ ಗಡಿನಾಡ ಸಾಂಸ್ಕೃತಿಕ ಕಲಾವೇದಿಕೆಯಿಂದ ಸಾಂಸ್ಕೃತಿಕ ಕಲಾ ವೈಭವ ಜರಗಲಿದೆ.

ಸುತ್ತಮುತ್ತ

ಇಂದು ವಿದ್ಯುತ್ ವ್ಯತ್ಯಯ

ಉಡುಪಿ: ಕುಂಜಿಬೆಟ್ಟು ಉಪಕೇಂದ್ರಗಳಲ್ಲಿ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಪರ್ಕಳ ವಿದ್ಯುತ್ ಉಪಕೇಂದ್ರದಿಂದ ಹೊರಡುವ 80 ಬಿಬಿಟಿ, ವೈರಾಲಜಿ, ಎಂ.ಐ.ಟಿ ಕ್ಯಾಂಪಸ್, ಹೆರ್ಗ, ಪರೀಕಾ, ಆತ್ರಾಡಿ ಫೀಡರ್ ಮಾರ್ಗದಲ್ಲಿ ನಡಿದಾರೆ, ನಲ್ಲೂರು, ಹಿರೇಬೆಟ್ಟು, ವೈರಾಲಜಿ ಹಾಸ್ಟೆಲ್, ಎಂ.ಐ.ಟಿ ಕ್ಯಾಂಪಸ್, ಪರ್ಕಳ ಸಿಟಿ, ಶೆಟ್ಟಿಬೆಟ್ಟು, ಗೋಳಿಕಟ್ಟೆ, ಪರೀಕಾ, ಕುಕ್ಕೆಹಳ್ಳಿ, ಬೆಳ್ಳಂಪಳ್ಳಿ, ಆತ್ರಾಡಿ ಸಿಟಿ, ಮದಗ, ಆತ್ರಾಡಿ, ಮಾಹೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿನಾಂಕ ಮೇ 26ರಂದು ಬೆಳಿಗ್ಗೆ 9ರಿಂದ ಸಂಜೆ 4:30 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ. ಉದ್ಯಾವರ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಪಿತ್ರೋಡಿ, ಪಿತ್ರೋಡಿ ಇಂಡಸ್ಟ್ರಿಯಲ್ ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಅಂಕುದ್ರು, ಗೋವಿಂದಗುಡ್ಡೆ, ಪಿತ್ರೋಡಿ, ಮುದ್ದಲಗುಡ್ಡೆ, ಪಿತ್ರೋಡಿ ಇಂಡಸ್ಟ್ರಿಯಲ್ ಏರಿಯಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 26ರಂದು ಬೆಳಿಗ್ಗೆ 9.30ರಿಂದ ಸಂಜೆ 5:30 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಮಣ್ಣಗುಡ್ಡ ಉಪಕೇಂದ್ರದಿಂದ ಹೊರಡುವ ಉರ್ವಮಾರ್ಕೆಟ್ ಫೀಡರ್ ಮತು ಮಠದಕಣಿ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಗಾಂಧಿನಗರ, ಅಭಿಯಾನ್ ಪ್ಯಾಲೇಸ್, ಲೇಡಿಹಿಲ್, ಗಾಂಧಿಪಾರ್ಕ್, ಉರ್ವ ಗಾರ್ಡ್, ಸೋಡ ಶೋರೂಂ, ಕೊರಗಜ್ಜ ದೈವಸ್ಥಾನ, ಸುಲ್ತಾನ್ ಬತ್ತೇರಿ ರಸ್ತೆ, ಬಿಲ್ಲವ ಸಂಘ, ಗುಂಡೂರಾವ್ ಲೇನ್, ಮಿಷನ್ ಗೋರಿ ರಸ್ತೆ, ಬರ್ಕೆ ಪೋಲೀಸ್ ಸ್ಟೇಷನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 26ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಜೂ.8: ಅಂಚೆ ಅದಾಲತ್

ಉಡುಪಿ: ಅಂಚೆ ಇಲಾಖೆ ವತಿಯಿಂದ ಉಡುಪಿ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಜೂನ್ 8 ರಂದು ಮಧ್ಯಾಹ್ನ 3.30ಕ್ಕೆ ತ್ರೈಮಾಸಿಕ ಅಂಚೆ ಅದಾಲತ್ ನಡೆಯಲಿದೆ. ಅಂಚೆ ಗ್ರಾಹಕರು ತಮ್ಮ ದೂರು ಮತ್ತು ಸಲಹೆಗಳನ್ನು ಜೂನ್ 5ರ ಮೊದಲು ಅಧೀಕ್ಷಕರಿಗೆ ಕಳುಹಿಸಬಹುದು ಅಥವಾ ಅದಾಲತ್ ನಡೆಯುವ ದಿನದಂದು ಹಾಜರಿದ್ದು ಸಮಕ್ಷಮ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿ ನಿಲಯ ಪ್ರವೇಶಾತಿ

ಉಡುಪಿ: ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಗಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ -1, 2ಎ, 2ಬಿ, 3ಎ, 3ಬಿ, ಪ.ಜಾತಿ/ಪ.ವರ್ಗಗಳ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ವೆಬ್ ಸೈಟ್ https://shp.karnataka.gov.in/bcwd ನಲ್ಲಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 8 ಕೊನೆಯ ದಿನ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ವ್ಯಕ್ತಿ ನಾಪತ್ತೆ: ಪ್ರಕರಣ ದಾಖಲು

ಕಡಬ: ಕಡಬ ತಾಲೂಕಿನ ಚಾರ್ವಾಕ ಗ್ರಾಮದ ಮುದ್ವ ನಿವಾಸಿ ಗಣೇಶ್ ಪ್ರಸಾದ್(29) ಎಂಬವರು ನಾಪತ್ತೆಯಾಗಿರುವ ಬಗ್ಗೆ ಕಡಬ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಾಪತ್ತೆಯಾಗಿರುವ



ಯುವಕ ಕೂಲಿ ಕೆಲಸ ಮಡಿಕೊಂಡಿದ್ದು ಮೇ 21 ರಂದು ಕೆಲಸಕ್ಕೆ ಹೋದವರು ವಾಪಾಸಾಗಲಿಲ್ಲ, ಈ ಬಗ್ಗೆ ಗಣೇಶ್ ಅವರ ಪತ್ನಿ ಲತಾ ನೀಡಿದ ದೂರಿನಂತೆ ಕಡಬ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರುದಾರರ. ಸಂಬಂಧಿಕರ ಮನೆಯಲ್ಲಿ ಹಾಗೂ ಗಣೇಶ್ ಪ್ರಸಾದ್ ಅವರ ಸಂಬಂಧಿಕರ ಮನೆಯಲ್ಲಿ ಹುಡುಕಾಡಿ ಎಲ್ಲಿಯೂ ಪತ್ತೆಯಾಗದ ಕಾರಣ ಠಾಣೆಗೆ ದೂರು ನೀಡಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ, ಗುರುತುಪತ್ತೆ ಸಿಕ್ಕಿದವರು ಕೂಡಲೇ ಕಡಬ ಠಾಣೆಗೆ ತಿಳಿಸುವಂತೆ ಕೋರಲಾಗಿದೆ.

ಇತಿಹಾಸದ ಪುಟಗಳಲ್ಲಿ ಲೀನವಾಗಿ, ಕಾಲಗರ್ಭದಲ್ಲಿ ಮರೆಯಾಗಿ ಹೋಗಿದ್ದ ಸ್ವಾತಂತ್ರ್ಯ ಹೋರಾಟಗಾರ

ಮೇ 27ರಂದು ಉಪ್ಪಿನಂಗಡಿಯಲ್ಲಿ ಮಂಜ ಬೈದ್ಯರ ಸಂಸ್ಮರಣೆ



ಉಪ್ಪಿನಂಗಡಿ: ಇತಿಹಾಸದ ಮಟಗಳಲ್ಲಿ ಲೀನವಾಗಿ, ಕಾಲ ಗರ್ಭದಲ್ಲಿ ಮರೆಯಾಗಿ ಹೋಗಿದ್ದ ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರ, ಬ್ರಿಟಿಷರ ವಿರುದ್ಧ ದಂಗೆ ಎದ್ದು ಹುತಾತ್ಮರಾದ ಉಬಾರ್ ಮಂಜ ಬೈದ್ಯರ ವೀರ ಚರಿತ್ರೆಯನ್ನು ಮತ್ತೆ ಸಮಾಜಕ್ಕೆ ನೆನಪಾಗಿ ಉಳಿಸುವ ಕಾರ್ಯಕ್ಕೆ ದ.ಕ. ಜಿಲ್ಲಾ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿ ಹಾಗೂ ಬೆಳ್ತಂಗಡಿಯ ಸುವರ್ಣ ಪ್ರತಿಷ್ಠಾನವು ಮುಂದಾಗಿದ್ದು, ಮಂಜ ಬೈದ್ಯರು ಹುತಾತ್ಮರಾಗಿ 190ನೇ ವರ್ಷದ ದಿನವಾದ ಮೇ 27ರಂದು ಉಪ್ಪಿನಂಗಡಿಯಲ್ಲಿ ಕ್ರಾಂತಿವೀರ ಮಂಜ ಬೈದ್ಯರ ಸಂಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಿದೆ.

ಈ ಕುರಿತು ಉಪ್ಪಿನಂಗಡಿಯ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಾಲಯದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿಯ ದ.ಕ. ಜಿಲ್ಲಾಧ್ಯಕ್ಷ ಸಂಪತ್ ಸುವರ್ಣ, ಸ್ವಾತಂತ್ರ್ಯ ಹೋರಾಟಗಾರ ಮಂಜು ಬೈದ್ಯರು ಉಪ್ಪಿನಂಗಡಿಯವರಾಗಿದ್ದು, ಬ್ರಿಟಿಷರ ಆಡಳಿತದ ವಿರುದ್ಧ ಸಡ್ಡು ಹೊಡೆದು ಅವರ ದಾಸ್ಯದಿಂದ ನಮ್ಮ ಜನರನ್ನು ಮುಕ್ತಗೊಳಿಸಲು ಹೋರಾಟ ಮಾಡಿದವರು. 1837ನೇ ಮೇ 27ರಂದು ಅವರನ್ನು ಬ್ರಿಟಿಷರು ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಿದರು. ಅವರು ಹುತಾತ್ಮರಾಗಿ 190 ವರ್ಷಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಅವರಿಗೆ ಗೌರವ ಸಲ್ಲಿಸುವುದು, ಅವರ ನೆನಪನ್ನು ಸದಾ ಕಾಲ ಅಮರವಾಗಿರುವಂತೆ ಮಾಡುವುದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಭಾರತೀಯರಾದ ನಾವೆಲ್ಲಾ ಜಾತಿ, ಧರ್ಮ, ರಾಜಕೀಯ ಬೇಧ ಬಿಟ್ಟು ಒಂದಾಗಿ ಉಬಾರ್ ಮಂಜು ಬೈದ್ಯರ ಸಂಸ್ಮರಣಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದರು.

ಮೇ 27ರಂದು ಬೆಳಗ್ಗೆ 10 ಗಂಟೆಗೆ ಉಪ್ಪಿನಂಗಡಿಯ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಾಲಯದ ನೇತ್ರಾವತಿ ಸಭಾಂಗಣದಲ್ಲಿ ಉಬಾರ್ ಮಂಜು ಬೈದ್ಯರ ಸಂಸ್ಮರಣಾ ಕಾರ್ಯಕ್ರಮ ನಡೆಸಲು ಈ ಸಂದರ್ಭ ತೀರ್ಮಾನಿಸಲಾಯಿತು.

ಸಭೆಯಲ್ಲಿ ಪ್ರಮುಖರಾದ ಡಾ. ನಿರಂಜನ ರೈ, ಡಾ. ರಾಜಾರಾಮ್ ಕೆ.ಬಿ., ಸುನೀಲ್ ಕುಮಾರ್ ದಡ್ಡು, ಉಮಾನಾಥ ಶೆಟ್ಟಿ ಪೆರ್ನೆ, ಜಯವಿಕ್ರಮ್ ಕಲ್ಲಾಪು, ಕೃಷ್ಣರಾವ್ ಆರ್ತಿಲ, ಆರ್.ಸಿ. ನಾರಾಯಣ, ಕರುಣಾಕರ ಸುವರ್ಣ, ಯು. ರಾಮ, ಶೇಖರ ಗೌಂಡತ್ತಿಗೆ, ರಾಮಚಂದ್ರ ಪೂಜಾರಿ, ವೆಂಕಪ್ಪ ಪೂಜಾರಿ ಮರುವೇಲು, ಅಜಿತ್ ಕುಮಾರ್ ಪಾಲೇರಿ, ತಿಮ್ಮಪ್ಪ ಪೂಜಾರಿ ಬನ್ನೂರು, ಅಝೀರುಝ್ ಬಸ್ತಿಕ್ಕಾರ್, ಮಹಾಲಿಂಗ ಕೆಜೆಕ್ಕಾರು, ಸದಾನಂದ ನೆಕ್ಕಿಲಾಡಿ, ತನಿಯಪ್ಪ ಪೆರ್ನೆ, ಹರೀಶ್ ನಿರಾಲ, ಮನೋಹರ ಅಠಾಳ, ಅಶೋಕ್ ಪಡ್ಪು ಮತ್ತಿತರರು ಉಪಸ್ಥಿತರಿದ್ದರು.

ಮಂಜ ಬೈದ್ಯನ ಮೂಲ ಪತ್ತೆ

ಕ್ರಾಂತಿವೀರ ಮಂಜ ಬೈದ್ಯ ಉಪ್ಪಿನಂಗಡಿಯವರಾಗಿದ್ದು, ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆಯಲ್ಪಡುವ 1857ರ ಹೋರಾಟಕ್ಕಿಂತ 20 ವರ್ಷ ಮೊದಲೇ ಮಂಜ ಬೈದ್ಯರು ಕಲ್ಯಾಣಪ್ಪನ ಕಾಟುಕಾಯಿ ಹೋರಾಟ ಅಥವಾ ಅಮರ ಸುಳ್ಯದ ಸ್ವಾತಂತ್ರ್ಯ ದಂಗೆಯಲ್ಲಿ ಸಕ್ರೀಯರಾಗಿದ್ದವರು. ತನ್ನಂಥ ಕ್ರಾಂತಿಕಾರಿಗಳೊಂದಿಗೆ ಸೇರಿ ತಮ್ಮದೇ ಪಡೆ ಕಟ್ಟಿ 1837ರ ಏ.5ರಂದು ಮಂಗಳೂರಿನ ಬಾವುಟಗುಡ್ಡದಲ್ಲಿದ್ದ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ ಕನ್ನಡಿಗರಾದ ಹಾಲೇರಿ ರಾಜವಂಶದ ಧ್ವಜವನ್ನು ಹಾರಿಸಿದ್ದರು. ಉಪ್ಪಿನಂಗಡಿ ಗ್ರಾಮದ ಪುಳಿತ್ತಡಿಯ ಕೊಪ್ಪಳದ ಕುಕ್ಕುಜೆ ಪರಿಸರದವರಾದ ಅವರು ಪದಾಳದ ಶ್ರೀ ಸುಬ್ರಹ್ಮಣ್ಯ ದೇವಾಲಯದ ಬಳಿಯಿದ್ದ ಮನೆಯಲ್ಲಿ ವಾಸವಿದ್ದರೆಂದು ಹೇಳಲಾಗುತ್ತಿದೆ. ಬಳಿಕ ಅವರು ಅಲ್ಲೇ ಸಮೀಪದ ಕುಕ್ಕುಜೆಗೆ ಸ್ಥಳಾಂತರಗೊಂಡರು ಎನ್ನಲಾಗುತ್ತಿದೆ. ಈ ಮನೆಯಲ್ಲಿ ಅವರ ಬಳಿಕ ಹಲವು ಪ್ರತಿಷ್ಠಿತ ಕುಟುಂಬಗಳು ನೆಲೆಸಿದ್ದವು. ಇದರಲ್ಲಿ ಶಾಲೆ ಕೂಡಾ ನಡೆಯುತ್ತಿತ್ತು ಎಂದು ಹಿರಿಯರು ನೆನಪಿಸುತ್ತಾರೆ. ಈ ಮನೆಯೀಗ ನಿರ್ನಾಮಗೊಂಡಿದೆ. ಮಂಜ ಬೈದ್ಯರವರ ವಂಶಸ್ಥರು ಈಗಲೂ ಕುಕ್ಕುಜೆಯಲ್ಲಿ ನೆಲೆಸಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಇಂಧನ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಬಂಟ್ವಾಳ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ವಿರುದ್ಧ ಪಾಣೆಮಂಗಳೂರು ಮತ್ತು ಬಂಟ್ವಾಳ ಬ್ಲಾಕ್, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಹಾಗೂ ಎನ್.ಎಸ್.ಯು.ಐ. ವತಿಯಿಂದ ಸೋಮವಾರ ಬಿ.ಸಿ.ರೋಡಿನಲ್ಲಿ ನಡೆಯಿತು.

ಪ್ರತಿಭಟನೆಯನ್ನುದ್ದೇಶಿಸಿ ಮಾಜಿ ಸಚಿವ ಬಿ.ರಮಾನಾಥ ರೈ ಮಾತನಾಡಿ, ಯುಪಿಎ ಸರಕಾರ ಅಧಿಕಾರದಲ್ಲಿದ್ದಾಗ ಹಾಗೂ ಎನ್‌ಡಿಎ ಸರಕಾರದ ಅವಧಿಯಲ್ಲಿನ ಕಚ್ಚಾತೈಲದ ಬೆಲೆಯ ಬಗ್ಗೆ ಸಾರ್ವಜನಿಕರು ಅವಲೋಕನ ಮಾಡಬೇಕಾಗಿದೆ ಎಂದರು.

ಯುಪಿಎ ಸರಕಾರವಿದ್ದಾಗ ಕಚ್ಚಾ ತೈಲದ ಬೆಲೆ ಹೆಚ್ಚಳವಾಗಿದ್ದರೂ ಕೂಡ ಜನರಿಗೆ ಹೊರೆಯಾಗದಂತೆ ಸುಲಭವಾಗಿ ಸಿಗುತಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ನಿರಂತರವಾಗಿ ಬೆಲೆ ಏರಿಕೆ ಮಾಡುತ್ತಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಜನರನ್ನು ಮೂರ್ಖರನ್ನಾಗಿ ಮಾಡುವ ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಮುಖಂಡ ಎಂ.ಜಿ.ಹೆಗಡೆ, ಜಿ.ಪಂ.ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯಲ್ಲಿ ಕೆಪಿಸಿಸಿ ಸದಸ್ಯ ಪಿಯೂಸ್ ಎಲ್ ರೋಡ್ರಿಗಸ್, ಬೂಡಾ ಅಧ್ಯಕ್ಷ ಬೇಬಿ ಕುಂದರ್, ಜ.ಪಂ. ಮಾಜಿ ಸದಸ್ಯ ಪದ್ಮಶೇಖರ್ ಜೈನ್ ,ತಾ.ಪಂ.ಮಾಜಿ ಉಪಾಧ್ಯಕ್ಷ ಅಬ್ಬಾಸ್ ಆಲಿ, ತಾ.ಪಂ.ಮಾಜಿ ಅಧ್ಯಕ್ಷ ಪದ್ಮನಾಭ ರೈ, ಪಕ್ಷದ ಮುಖಂಡರಾದ ಸುದೀಪ್ ಕುಮಾರ್ ಶೆಟ್ಟಿ, ಚಂದ್ರಶೇಖರ ಭಂಡಾರಿ, ಬಾಲಕೃಷ್ಣ ಅಂಚನ್, ಸಂಜೀವ ಪೂಜಾರಿ, ಸದಾಶಿವ ಬಂಗೇರ, ಜಯಂತಿ ಪೂಜಾರಿ, ಮಧುಸೂದನ್, ಶೈಲಜಾ ರಾಜೇಶ್, ಸುಭಾಶ್ಚಂದ್ರ ಶೆಟ್ಟಿ ಕೊಳ್ನಾಡು, ಮಹಮ್ಮದ್ ನಂದಾವರ, ಚಿತ್ತರಂಜನ್ ಶೆಟ್ಟಿ, ವಾಸು ಪೂಜಾರಿ, ಮೋಹನ್ ಶೆಟ್ಟಿ, ವೆಂಕಪ್ಪ ಪೂಜಾರಿ, ನಿರಂಜನ್ ರೈ, ಜಗದೀಶ್ ಕುಂದರ್, ಶೈಲೇಶ್ ಪೂಜಾರಿ, ಸಿದ್ದೀಕ್ ಬೋಗೋಡಿ, ಇಬ್ರಾಹಿಂ ನವಾಜ್, ಉಮೇಶ್ ನರಿಕೊಂಬು, ಮಹಮ್ಮದ್ ಶರೀಫ್, ಕುಶಲ ಪೆರಾಜೆ ಉಪಸ್ಥಿತರಿದ್ದರು.

ಸವಣೂರು: ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರ್ಷಿಕೋತ್ಸವ



ಸವಣೂರು: ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನ ಶೈಕ್ಷಣಿಕ ವರ್ಷದ ವಾರ್ಷಿಕೋತ್ಸವ ಸೋಮವಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ, ವಾರ್ಷಿಕೋತ್ಸವ ಎಂದರೆ ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸುವ ಸಮಯ ಎಂದರು.

ಮುಖ್ಯ ಅತಿಥಿಯಾಗಿದ್ದ ನಿತ್ಯೋಪಾಸನ ಕಲಾ ಆಕಾಡೆಮಿ ನೃತ್ಯ ತರಬೇತುದಾರರಾದ ವಿದುಷಿ ಶಾಲಿನಿ ಆತ್ಮಭೂಷಣ್ ಮಾತನಾಡಿ, ವಾರ್ಷಿಕೋತ್ಸವ ಒಂದು ದಿನದ ಹಬ್ಬವಲ್ಲ, ಅದು ಒಂದು ವರ್ಷದ ಶ್ರಮದಾನ ಎಂದರು. ಶಾಲಿನಿ ಟ್ರಸ್ಟಿ ಮಹೇಶ್ ರೈ ಎಸ್., ಡಾ. ರಾಜೇಶ್ ರೈ ಎಸ್., ಅಧ್ಯಕ್ಷತೆ ವಹಿಸಿದ್ದ ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ ಶುಭಾಶಂಸನೆಗೈದರು.

ಸಮ್ಮಾನ

ಸಂಸ್ಥೆಯಲ್ಲಿ 20 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಕನ್ನಡ ಉಪನ್ಯಾಸಕ ಶೇಷಗಿರಿ ಎಂ. ಅವರನ್ನು ಸನ್ಮಾನಿಸಲಾಯಿತು. ಸನ್ಮಾನ ಪತ್ರವನ್ನು ಉಪನ್ಯಾಸಕ ಗಿರೀಶ್ ಭಟ್ ವಾಚಿಸಿದರು. ವೇದಿಕೆಯಲ್ಲಿ ಟ್ರಸ್ಟಿಗಳಾದ ಎನ್.ಸುಂದರ ರೈ, ರಶ್ಮಿ ಅಶ್ವಿನ್ ಎಲ್. ಶೆಟ್ಟಿ ವಿದ್ಯಾರಶ್ಮಿ ವಿದ್ಯಾಲಯದ ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ ಉಪಸ್ಥಿತರಿದ್ದರು. ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಪ್ರಾಂಶುಪಾಲೆ ಡಾ. ರಾಜಲಕ್ಷ್ಮೀ ಎಸ್. ರೈ ಕಾಲೇಜಿನ ವಾರ್ಷಿಕ ವರದಿ ವಾಚಿಸಿದರು. ವಿದ್ಯಾರ್ಥಿಗಳಾದ ಕುಷಿತಾ ಸ್ವಾಗತಿಸಿ, ಪವಿತ್ರಾ ವಂದಿಸಿದರು. ಸಝಾನ ಕಾರ್ಯಕ್ರಮ ನಿರ್ವಹಿಸಿದರು.

ಗುಡ್ಡಿ ಶಾಲೆಗೆ ಲ್ಯಾಪ್‌ಟಾಪ್ ಹಸ್ತಾಂತರ



ಕೋಟ: ವಿದ್ಯಾಗಿರಿ ತೆಕ್ಕಟ್ಟೆಯ ಸೇವಾ ಸಂಗಮ ವಿದ್ಯಾಕೇಂದ್ರದಲ್ಲಿ ಗುಡ್ಡಿ ಶಾಲೆ ಪ್ರಥಮ ಬ್ಯಾಚ್ ವಿದ್ಯಾರ್ಥಿಗಳ ವತಿಯಿಂದ ಶಾಲೆಗೆ ಲ್ಯಾಪ್ ಟಾಪ್ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಸುರೇಶ್ ಬೆಟ್ಟಿನ್ ವಹಿಸಿ ಮಾತನಾಡಿ ಶಾಲೆಯ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳು ಹಾಗೂ ದಾನಿಗಳ ಸಹಕಾರ ಶ್ಲಾಘನೀಯವಾಗಿದೆ. ಇಂತಹ ಕೊಡುಗೆಗಳು ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಉತ್ತೇಜನ ನೀಡಲಿವೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಗುಡ್ಡಿ ಶಾಲೆಯ ಪ್ರಥಮ ಬ್ಯಾಚ್ ವಿದ್ಯಾರ್ಥಿಗಳಾದ ವಿಶಾಖ ಹಾಗೂ ಪ್ರಮೋದ್ ಭಟ್ ಉಪಸ್ಥಿತರಿದ್ದರು. ವಿದ್ಯಾಸಂಗಮದ ಗೌರವಾಧ್ಯಕ್ಷ ನಸಂಜೀವ ಗುಂಡ್ಮಿ, ಕಾರ್ಯದರ್ಶಿ ಕಮಲಾಕ್ಷ ಪೈ ಹಾಗೂ ಶಾಲಾ ಆಡಳಿತ ಮಂಡಳಿಯ ಪದಾಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಗಾಯತ್ರಿ ಮಾತಾಜಿ ಸ್ವಾಗತಿಸಿ, ದಿವ್ಯಾ ಎಸ್. ವಂದಿಸಿದರು. ಶೃತಿ ನಿರೂಪಿಸಿದರು.

36,000 ಕನಿಷ್ಠ ವೇತನಕ್ಕೆ ಆಗ್ರಹಿಸಿ ಡಿಸಿ ಕಚೇರಿಗೆ ಮುತ್ತಿಗೆ ಮೇ 30ಕ್ಕೆ

ಮಡಿಕೇರಿ: ಕಾರ್ಮಿಕರ ಕನಿಷ್ಟ ವೇತನವನ್ನು 36,000ಕ್ಕೆ ಹೆಚ್ಚಿಸಬೇಕು ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಬೇಕು ಎಂದು ಒತ್ತಾಯಿಸುವ ಸಲುವಾಗಿ ಮೇ 30ರಂದು ಕೊಡಗು ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ನಗರದಲ್ಲಿ ನಡೆದ ಸಿಐಟಿಯು ಕಾರ್ಯಾಗಾರದಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಜಿಲ್ಲಾ ಕೇಂದ್ರಗಳಲ್ಲಿ ಸಂಘಟನೆಯನ್ನು ಬಲಪಡಿಸುವ ಹಾಗೂ ಕಾರ್ಮಿಕರ ವಿವಿಧ ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸುವ ಸಲುವಾಗಿ ಕೊಡಗು ಜಿಲ್ಲಾ ಸಿಐಟಿಯು ವತಿಯಿಂದ ಮಡಿಕೇರಿಯಲ್ಲಿ ಒಂದು ದಿನದ ಹಿರಿಯ ಮುಖಂಡರ ಹಾಗೂ ಕಾರ್ಯಕರ್ತರ ಜಿಲ್ಲಾ ಮಟ್ಟದ ಸಂಘಟನಾ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಧರ್ಮೇಶ್ ಅವರು, ಕಾರ್ಮಿಕರ ಕನಿಷ್ಟ ವೇತನವನ್ನು 36,000ಕ್ಕೆ ಹೆಚ್ಚಿಸಬೇಕು ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಬೇಕು. ಈ ಸಂಬಂಧ ಮೇ 30ರಂದು ಮಡಿಕೇರಿ ಜಿಲ್ಲಾಧಿಕಾರಿಗಳ ಕಚೇರಿಗೆ ಬೃಹತ್ ಮುತ್ತಿಗೆ ಹಾಕಲಾಗುವುದು ಎಂದು ಪ್ರಕಟಿಸಿದರು. ಧರ್ಮೇಶ್ ಮಾತನಾಡಿದರು. ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷ ಎ.ಸಿ. ಸಾಬು ವಹಿಸಿದ್ದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್. ಭರತ್ ಜಿಲ್ಲೆಯ ಸಂಘಟನಾ ಯೋಜನೆಯನ್ನು ಮಂಡಿಸಿದರು. ವೇದಿಕೆಯಲ್ಲಿ ಅಂಗನವಾಡಿ ನೌಕರರ ಸಂಘದ ಮುಖಂಡರಾದ ಸುಮಿತ್ರಾ, ಹಮಾಲಿ ಕಾರ್ಮಿಕರ ಮುಖಂಡರಾದ ಶಾಜಿ ರಮೇಶ್, ಎನ್.ಡಿ. ಕುಟ್ಟಪ್ಪ ಉಪಸ್ಥಿತರಿದ್ದರು.

ಬ್ರಹ್ಮಾವರದಲ್ಲಿ ಹಲಸು, ಹಣ್ಣುಮೇಳ ಯಶಸ್ವಿಯಾಗಿ ಸಂಪನ್ನ



ಬ್ರಹ್ಮಾವರ: ಬಾರಕೂರು ರೋಟರಿ, ಕೃಷಿ ವಿಜ್ಞಾನ ಕೇಂದ್ರ, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನ ಕೇಂದ್ರ ಹಾಗೂ ಡಿಪ್ಲೊಮಾ ಕೃಷಿ ಮಹಾ ವಿದ್ಯಾಲಯ ಆಶ್ರಯದಲ್ಲಿ ಎಸ್.ಎಂ.ಎಸ್. ಸಮುದಾಯ ಭವನದಲ್ಲಿ ಮೂರು ದಿನಗಳ ಹಲಸು ಮತ್ತು ಹಣ್ಣುಮೇಳ ಯಶಸ್ವಿಯಾಗಿ ಸಂಪನ್ನಗೊಂಡಿತು.

ಉತ್ಪಾದಕರಿಂದ ನೇರವಾಗಿ ಗ್ರಾಹಕರಿಗೆ, ರೈತರಿಂದ ನೇರವಾಗಿ ಮಾರುಕಟ್ಟೆಗೆ' ಎನ್ನುವ ಚಿಂತನೆಯಲ್ಲಿ ಆಯೋಜಿಸಲಾಗುತ್ತಿರುವ 5ನೇ ವರ್ಷದ ಈ ಮೇಳದಲ್ಲಿ ಲಕ್ಷಕ್ಕೂ ಮಿಕ್ಕಿ ಭೇಟಿ ನೀಡಿದರು.

ವಿವಿಧ ರೀತಿಯ ಖಾದ್ಯಗಳನ್ನು ಸವಿದು, ವಸ್ತುಗಳನ್ನು ಖರೀದಿಸಿ ಸಂಭ್ರಮಿಸಿದರು. ನೂರಾರು ಸಣ್ಣ ಸಣ್ಣ ಉದ್ಯಮಿಗಳು, ಗೃಹ ಉತ್ಪನ್ನಗಳು ಮೇಳಕ್ಕೆ ಆಗಮಿಸಿದ್ದು, ವಿವಿಧ ರೀತಿಯ ಹಣ್ಣು, ಬಯಲು ಸೀಮೆಯ ಸಿಹಿಯಾದ ಮಾವು ಹಾಗೂ ಪ್ರಸಿದ್ಧ ಕೆಂಪು ಹಲಸು, ಹಣ್ಣಿನ ಉತ್ಪನ್ನಗಳು, ಹಲವಾರು ಹಣ್ಣಿನ ಖಾದ್ಯಗಳು, ಬಗೆ ಬಗೆ ಹಣ್ಣಿನ ಐಸ್‌ಕ್ರೀಂ, ಹಲಸಿನ ಹೋಳಿಗೆ ಅಲ್ಲದೇ ವಿವಿಧ ಹಣ್ಣಿನ ಗಿಡ, ತರಕಾರಿ ಬೀಜ, ಆಯುರ್ವೇದಿಕ್ ಹಾಗೂ ಗೃಹ ತಯಾರಿಕೆಯ ವಸ್ತುಗಳು ಹಾಗೂ ತಿಂಡಿ ತಿನಿಸುಗಳ ಸ್ಟಾಲ್ ಗಳಿಗೆ ಆಗಮಿಸಿದ ಗ್ರಾಹಕರು ಹೆಚ್ಚಾಗಿ ಖರೀದಿಸಿ ಸಂತೋಷ ಪಟ್ಟರು. ಒಟ್ಟಿನಲ್ಲಿ ಹಲಸು ಮೇಳ ಒಂದಿಷ್ಟು ಜನರಿಗೆ ವ್ಯವಹಾರ ಇನ್ನು ಒಂದಿಷ್ಟು ಜನರಿಗೆ ಖರೀದಿ ಮಾಡಲು ಅವಕಾಶ ಲಭಿಸಿತು.

ಕೆರೆಬೈಲ್‌ಗುಡ್ಡೆ ಹಿಂದೂ ಯುವಸೇನೆ, ಕೊರಗಜ್ಜ ಶಾಖೆಯ ಮಹಾಸಭೆ



ಉಳ್ಳಾಲ: ತೊಕ್ಕೊಟ್ಟು ಕೆರೆಬೈಲ್ ಗುಡ್ಡೆಯ ಹಿಂದೂ ಯುವಸೇನೆ, ಕೊರಗಜ್ಜ ಶಾಖೆಯ ಮಹಾಸಭೆಯು ಕೆರೆಬೈಲ್ ಗುಡ್ಡೆಯ ಕೊರಗತನಿಯ ಸೇವಾ ಸಮಿತಿ ಆವರಣದಲ್ಲಿ ಶಾಖೆಯ ಅಧ್ಯಕ್ಷ ನಾರಾಯಣ ಬಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಲೋಕೇಶ್ ಶೆಟ್ಟಿ,ಹರೀಶ್ ಕುಂದರ್, ಕಿಶೋರ್ ಕೆರೆಬೈಲ್, ಗಣೇಶ್ ಚೆಂಬುಗುಡ್ಡೆ, ಗಣೇಶ್ ಶೆಟ್ಟಿ ಕೆರೆಬೈಲ್ ಗುಡ್ಡೆ, ಮನೋಜ್ ಶೆಟ್ಟಿ ಕೆರೆಬೈಲ್ ಗುಡ್ಡೆ, ಯಶವಂತ್ ಶೆಟ್ಟಿ ಚೆಂಬುಗುಡ್ಡೆ,ಮನೋಜ್ ಚೆಂಬುಗುಡ್ಡೆ, ರಮಾನಂದ.ರೈ ಕೆರೆಬೈಲ್ ಗುಡ್ಡೆ, ಗಣೇಶ್ ಪಜೀರ್, ದಿನೇಶ್ ಅಡ್ಯಾರ್ ಪದವು, ದಯಾನಂದ ಸಾಲಿಯನ್, ಪ್ರವೀಣ್ ರೈ ಹಾಗೂ ರಾಕೇಶ್ ಕೆರೆಬೈಲ್ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ಸ್ವಾಗತಿಸಿ ಲೆಕ್ಕಪತ್ರ ಮಂಡಿಸಿದರು.ಅಧ್ಯಕ್ಷರಾದ ನಾರಾಯಣ.ಬಿ ವಂದಿಸಿದರು.

ಪದಾಧಿಕಾರಿಗಳ ಆಯ್ಕೆ

ಸಭೆಯಲ್ಲಿ 2026-27ನೇ ಸಾಲಿಗೆ ಕೆಲ ಪ್ರಮುಖ ಹುದ್ದೆಗಳ ನೇಮಕಾತಿ ಮಾಡಲಾಯಿತು. ಉಪಾಧ್ಯಕ್ಷರಾಗಿ ಮನೋಜ್ ಚೆಂಬುಗುಡ್ಡೆ, ಕ್ರೀಡಾ ಸಲಹೆಗಾರರಾಗಿ ಕರ್ನಾಟಕದ ಖ್ಯಾತ ಹಿರಿಯ ಪವರ್ ಲಿಫ್ಟರ್ ಗಣೇಶ್ ಚೆಂಬುಗುಡ್ಡೆ ಹಾಗೂ ಹಿರಿಯ ಸಲಹೆಗಾರರಾಗಿ ಗಣೇಶ್ ಪಜೀರ್ ಅವರನ್ನು ಆಯ್ಕೆ ಮಾಡಲಾಯಿತು. ಉಳಿದ ಎಲ್ಲಾ ಪದಾಧಿಕಾರಿಗಳನ್ನು ಅದೇ ಹುದ್ದೆಗಳಲ್ಲಿ ಮುಂದುವರಿಸಲಾಯಿತು.



ಜೋಯಾಲುಕ್ಕಾಸ್ ಆಭರಣ ಮಳಿಗೆಯ ಉಡುಪಿ ನಗರ ಶಾಖೆ ವತಿಯಿಂದ ಸಿಎಸ್‌ಆರ್ ನಿಧಿಯಡಿ ಬಿಪಿಎಲ್ ಫಲಾನುಭವಿಗಳಿಗೆ ಹೊಸ ಮನೆ ನಿರ್ಮಾಣ ಮಾಡಿಕೊಡುವ ಯೋಜನೆಯಡಿ ರವಿಚಂದ್ರ ಗುಂಡ್ಮಿ, ಲಕ್ಷ್ಮಿ ಕೋಡಿ - ಕನ್ಯಾಣ ಅವರಿಗೆ ಚೆಕ್ ವಿತರಿಸಲಾಯಿತು. ಕೋಟ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಪಾಂಡು ಪೂಜಾರಿ, ಕೋಡಿ ಗ್ರಾ.ಪಂ. ಮಾಜಿ ಸದಸ್ಯರಾದ ಕೃಷ್ಣ ಪೂಜಾರಿ, ಶ್ರೀನಿವಾಸ್, ಶಾಖೆಯ ವ್ಯವಸ್ಥಾಪಕ ವೀರೇಂದ್ರ ಇದ್ದರು.

ಬಪ್ಪಳಿಗೆ ಅಂಬಿಕಾ ಪದವಿಪೂರ್ವ ವಿದ್ಯಾಲಯದಲ್ಲಿ ಪ್ರಥಮ ಪಿಯುಸಿ ತರಗತಿ ಉದ್ಘಾಟನೆ

ವ್ಯಕ್ತಿತ್ವಕ್ಕೆ ಗೌರವ ಸಿಗುವುದು ಸಂಸ್ಕಾರದಿಂದ: ಡಾ.ನರಸಿಂಹಮೂರ್ತಿ

ಪುತ್ತೂರು: ನಮ್ಮ ವ್ಯಕ್ತಿತ್ವಕ್ಕೆ ಗೌರವ ಸಿಗುವುದು ನಾವು ಧರಿಸಿದ ಬಟ್ಟೆಯಿಂದಲ್ಲ, ಬದಲಾಗಿ ಸಂಸ್ಕಾರಯುತ ನಡೆ ನುಡಿಯಿಂದ. ಆದ್ದರಿಂದ ಮೌಲ್ಯಯುತವಾದ ನಡೆ ನುಡಿಗಳನ್ನು ಅಳವಡಿಸಿಕೊಂಡು ಉತ್ತಮ ಸಂಸ್ಕಾರಯುತ ಜೀವನ ನಡೆಸಬೇಕು ಎಂದು ದೆಹಲಿಯ ಜೆಎನ್‌ಯುವಿನ ಪ್ರಾಧ್ಯಾಪಕ ಡಾ. ನರಸಿಂಹಮೂರ್ತಿ ಹೇಳಿದರು.



ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯದಲ್ಲಿ ನಡೆದ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ವಿರಾಜಪೇಟೆಯ ಪ್ರಗತಿ ವಿದ್ಯಾ ಕೇಂದ್ರದ ಆಡಳಿತಾಧಿಕಾರಿ, 42 ಬಾರಿ ದೇಶವನ್ನು ಕ್ರೀಡಾ ವಿಭಾಗದಲ್ಲಿ ಪ್ರತಿನಿಧಿಸಿದ ಹೆಗ್ಗಳಿಕೆ ಹೊಂದಿರುವ ತಿಮ್ಮಯ್ಯ ಮಾದಂಡ ಕಾರ್ಯಕ್ರಮ ಉದ್ಘಾಟಿಸಿ, ಯಶಸ್ಸಿಗೆ ಕಠಿಣ ಪರಿಶ್ರಮವೊಂದೇ ಪರಿಹಾರ. ದಿನದ 24 ಗಂಟೆಯನ್ನು ಬಹಳ ಜಾಣ್ಮೆಯಿಂದ ಸದುಪಯೋಗಪಡಿಸಿಕೊಂಡು ಯಶಸ್ಸಿನ ಮೆಟ್ಟಿಲನ್ನು ಏರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ, ಅಂಬಿಕಾ ವಿದ್ಯಾಲಯ ದಲ್ಲಿ ಪಠ್ಯಪುಸ್ತಕಗಳ ಬೋಧನೆಯ ಜೊತೆ ಜೊತೆಗೆ ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗುವಂತಹ ಸೂರ್ಯ ನಮಸ್ಕಾರ, ಯೋಗ, ಧ್ಯಾನ, ಪ್ರಾಣಾಯಾಮಗಳಂತಹ ಮೌಲ್ಯಯುತ ಶಿಕ್ಷಣವನ್ನು ನೀಡಲಾಗುತ್ತಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿ ರಾಜಶ್ರೀ ನಟ್ಟೋಜ ಶುಭಾಶಂಸನೆಗೈದರು. ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯ, ವಿಶ್ರಾಂತ ಪ್ರಾಚಾರ್ಯ ಡಾ.ಎಚ್. ಮಾಧವ ಭಟ್ ಉಪಸ್ಥಿತರಿದ್ದರು. ಅವನಿ ನಾಯಕ್ ಪ್ರಾರ್ಥಿಸಿದರು. ಸಂಸ್ಥೆಯ ಪ್ರಾಚಾರ್ಯ ಗಣೇಶ್ ಪ್ರಸಾದ್ ಡಿ.ಎಸ್.

ದಡ್ಡಲಕಾಡು ಪಿಎಂ ಶ್ರೀ ಸರ್ಕಾರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ

ದಾಖಲಾತಿ ಆಂದೋಲನಾ, ಜಾಥಾ



ಬಂಟ್ವಾಳ: ದಡ್ಡಲಕಾಡು ಪಿಎಂ ಶ್ರೀ ಸರ್ಕಾರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಶನಿವಾರ ಮಕ್ಕಳ ದಾಖಲಾತಿ ಆಂದೋಲನವನ್ನು ಜಾಥಾದ ಮೂಲಕ ನಡೆಸಲಾಯಿತು.

ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಶಿಕ್ಷಣ ಸಿಗಬೇಕು ಯಾರೊಬ್ಬರೂ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ದೃಷ್ಟಿಯಿಂದ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀ ದುರ್ಗಾ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷರಾದ ಪ್ರಕಾಶ್ ಅಂಚನ್, ಪ್ರೌಢಶಾಲಾ ವಿಭಾಗದ ಮುಖ್ಯಸ್ಥರಾದ ಶೈಲೇಂದ್ರ ಕುಮಾರ್ , ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಜಯಶ್ರೀ, ಸಂಸ್ಥೆಯ ಹಿರಿಯ ಶಿಕ್ಷಕಿ ಹಿಲ್ಡಾ ಫೆರ್ನಾಂಡಿಸ್, ಪ್ರಾಥಮಿಕ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಬಾಲಕೃಷ್ಣ ಗೌಡ, ಎಸ್ ಡಿ ಎಂ ಸಿ ಸದಸ್ಯರ, ಸಂಸ್ಥೆಯ ಶಿಕ್ಷಕರು ಉಪಸ್ಥಿತರಿದ್ದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸ ದಿಗಂತ ಸಂಗಮ 5

ಮಂಗಳವಾರ 26, ಮೇ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪುಟ ಸಂಖ್ಯೆ

ಸುತ್ತಮುತ್ತ

ಕೆಎಸ್‌ಆರ್‌ಟಿಸಿ ಕೊಟ್ಟಿಯೂರು ಪ್ರವಾಸ

ಕಾಸರಗೋಡು: ಕಾಞಂಗಾಡ್ ಕೆಎಸ್‌ಆರ್‌ಟಿಸಿ ಡಿಪೋ ಜೂನ್ 2, 4, 6, 8, 10, 12, 13, 15, 17, 19 ರಂದು ವೈಶಾಖ ಮಹೋತ್ಸವ ನಡೆಯುತ್ತಿರುವ ಕೊಟ್ಟಿಯೂರಿಗೆ ಭಕ್ತರಿಗೆ ಪ್ರಯಾಣ ವ್ಯವಸ್ಥೆ ಮಾಡುತ್ತಿದೆ. 520 ರೂ. ವೆಚ್ಚದ ಈ ಪ್ರವಾಸಕ್ಕೆ ಬುಕ್ಕಿಂಗ್ ಪ್ರಾರಂಭವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 94426088378, 9497290637ಕರೆ ಮಾಡಬಹುದಾಗಿದೆ.

ಮೇ 29ರಂದು ಸಂದರ್ಶನ

ಕಾಸರಗೋಡು: ಪೆರಿಯ ಸಿಎಚ್‌ಸಿ ಆಸ್ಪತ್ರೆಗೆ ವಾಚ್‌ಮನ್ ನೇಮಕಾತಿಗಾಗಿ ಮೇ 29ರಂದು ಬೆಳಗ್ಗೆ 10.30ಕ್ಕೆ ಸಿಎಚ್‌ಸಿ ಪೆರಿಯದಲ್ಲಿ ಸಂದರ್ಶನ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಅರ್ಹತೆ ಇರುವ, ಹೆಚ್ಚಿನ ದೈಹಿಕ ಸಾಮರ್ಥ್ಯ, (ಮಾಜಿ ಸೈನಿಕರಿಗೆ ಆದ್ಯತೆ). ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8848079174, 9400684230ಗೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಹಿಳಾ ಸಹಾಯಕರ ನೇಮಕಾತಿಗಾಗಿ ಅರ್ಜಿ ಆಹ್ವಾನ

ಕಾಸರಗೋಡು: ಅಜಾನೂರು ಗ್ರಾಮ ಪಂಚಾಯತ್‌ನ ಚಟುವಟಿಕೆಗಳು, ಮಹಿಳಾ ಸ್ಥಿತಿಗತಿ ಅಧ್ಯಯನ ಮತ್ತು ಇತರ ಸಂಬಂಧಿತ ಚಟುವಟಿಕೆಗಳಿಗೆ ಸಮುದಾಯ ಮಹಿಳಾ ಸಹಾಯಕಿಯರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಿಳಾ ಅಧ್ಯಯನ, ಮನೋವಿಜ್ಞಾನ, ಸಮಾಜಶಾಸ್ತ್ರ ಅಥವಾ ಪದವಿ ಅರ್ಹತೆ ಅಥವಾ ತತ್ಸಮಾನ ಪದವಿ ಹೊಂದಿರುವ ಮಹಿಳೆಯರು ಅರ್ಜಿ ಸಲ್ಲಿಸಬಹುದು. (ನಿಯಮಿತ ಬ್ಯಾಚ್). ಜೂನ್ 3ರಂದು ಬೆಳಗ್ಗೆ 11 ಗಂಟೆಗೆ ಅಜಾನೂರು ಪಂಚಾಯತ್ ಕಚೇರಿಯಲ್ಲಿ ಸಭೆ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಮೇ 30ರೊಳಗೆ ಅಜಾನೂರು ಪಂ.ಗೆ ಸಲ್ಲಿಸಬೇಕಾಗಿದೆ. ಮಾಹಿತಿಗಾಗಿ ಮೊಬೈಲ್ ಸಂಖ್ಯೆಗೆ 9207112666ಗೆ ಕರೆ ಮಾಡಬಹುದು.

ಮೇ 30: ಸಂದರ್ಶನ

ಕಾಸರಗೋಡು: ಬಂದಡ್ಕ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಎಚ್‌ಎಸ್‌ಟಿ ಇಂಗ್ಲಿಷ್, ಭೌತ ವಿಜ್ಞಾನ (ಕನ್ನಡ) ಭೌತ ವಿಜ್ಞಾನ (ಮಲೆಯಾಳಂ). ಎಲ್‌ಪಿಎಸ್‌ಟಿ ಕನ್ನಡ ಹುದ್ದೆಗೆ ಶಿಕ್ಷಕರ ನೇಮಕಾತಿಗಾಗಿ ಮೇ 30ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

ಸಭೆ ಮುಂದೂಡಿಕೆ

ಕಾಸರಗೋಡು: ಕಾಸರಗೋಡು ಸರ್ಕಾರಿ ವಿಶೇಷ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಮನೋವಿಜ್ಞಾನ ವಿಭಾಗದ ಅಧ್ಯಾಪಕರ ನೇಮಕಾತಿಗಾಗಿ ಕಾಸರಗೋಡು ಶಿಕ್ಷಣ ಉಪ ನಿರ್ದೇಶಕರ ಕಚೇರಿಯಲ್ಲಿ ಮೇ 29ರಂದು ಬೆಳಗ್ಗೆ 10.30ಕ್ಕೆ ನಡೆಯಬೇಕಿದ್ದ ಸಭೆಯನ್ನು ಜೂನ್ 2ನೇ ದಿನಾಂಕಕ್ಕೆ ಮುಂದೂಡಲಾಗಿದೆ.

ಜಿಲ್ಲೆಯಲ್ಲಿ ಕೊಳವೆ ಬಾವಿ ನಿರ್ಮಾಣ ಚುರುಕು: ಹೊಸ ರಿಗ್ ಸಿದ್ಧ

ಕಾಸರಗೋಡು: ಜಿಲ್ಲೆಯಲ್ಲಿ ಬೋರ್‌ವೆಲ್‌ಗಳ ನಿರ್ಮಾಣ ಕಾರ್ಯ ಶೀಘ್ರದಲ್ಲೇ ತ್ವರಿತಗತಿಯಲ್ಲಿ ಪ್ರಾರಂಭವಾಗಲಿದೆ. ಈ ನಿಟ್ಟಿನಲ್ಲಿ ಹೊಸ ರಿಗ್ ಸಿದ್ಧಗೊಂಡಿದೆ ಎಂದು ಅಂತರ್ಜಲ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ತಿಳಿಸಿದ್ದಾರೆ. ಈ ಮೂಲಕ ಜಿಲ್ಲೆಯಲ್ಲಿ ಕುಡಿಯುವ ನೀರು ಮತ್ತು ಕೃಷಿ ಉದ್ದೇಶಗಳಿಗಾಗಿ ಬೋರ್‌ವೆಲ್‌ಗಳ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿ ಕಾಯುತ್ತಿರುವ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ತ್ವರಿತವಾಗಿ ಪಡೆಯಲು ಸಾಧ್ಯವಾಗುತ್ತದೆ. ಕಳೆದ ಫೆಬ್ರವರಿಯಲ್ಲಿ ಕಾಸರಗೋಡು, ಕೋಟ್ಟಾಯಂ, ಕಲ್ಲಿಕೋಟೆ, ಎರ್ನಾಕುಳಂ, ಪಾಲಕ್ಕಾಡು ಜಿಲ್ಲೆಗಳಿಗೆ ಹೊಸ ಅತ್ಯಾಧುನಿಕ ಬೋರ್‌ವೆಲ್ ನಿರ್ಮಾಣದ ಅಂಗವಾಗಿ ರಿಗ್‌ಗಳನ್ನು ಖರೀದಿಸಲಾಗಿತ್ತು. ಬೋರ್‌ವೆಲ್‌ನ ಈ ನೂತನ ರಿಗ್ ಕಾಸರಗೋಡಿಗೆ ಬಂದು ತಲುಪಿದೆ. ಕಾಸರಗೋಡು ಜಿಲ್ಲೆಗೆ ಹೊಸದಾಗಿ ಒದಗಿಸಲಾದ ಅಧಿಕ ಒತ್ತಡದ ಸಾಮರ್ಥ್ಯದ ರಿಗ್ ಯಂತ್ರದ ಕಾರ್ಯಾರಂಭದ ಪ್ರಾಯೋಗಿಕ ಕಾರ್ಯಗಳನ್ನು ಪೂರ್ಣಗೊಳಿಸಲು ಮತ್ತು ಉದ್ಯೋಗಿಗಳಿಗೆ ತರಬೇತಿ ನೀಡಲು ವ್ಯವಸ್ಥೆಗೊಳಿಸಲಾಗಿದೆ. ಇಂತಹ ಅತ್ಯಾಧುನಿಕ ಬೋರ್‌ವೆಲ್ ನಿರ್ಮಾಣ ಘಟಕಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ತಾಂತ್ರಿಕ ಸಿಬ್ಬಂದಿಗಳಿಗೆ ತಜ್ಞರ ತರಬೇತಿ ಅತ್ಯಗತ್ಯವಾಗಿದ್ದು, ಇದರ ಭಾಗವಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರ ಸೂಚನೆಯಂತೆ ಕಾಸರಗೋಡು ಜಿಲ್ಲಾ ಕಚೇರಿಯ ಅಧಿಕಾರಿಗಳನ್ನು ತರಬೇತಿಗಾಗಿ ಕೊಲ್ಲಂನಲ್ಲಿರುವ ಕಾರ್ಯಾಗಾರ ಮತ್ತು ಸ್ಟಾರ್ಸ್‌ಗೆ ಕಳುಹಿಸಲಾಗಿತ್ತು. ಕೊಲ್ಲಂನಲ್ಲಿ ನೀಡಲಾದ ತಾಂತ್ರಿಕ ತರಬೇತಿ ಮತ್ತು ಯಂತ್ರದ ಪ್ರಾಯೋಗಿಕ ಚಾಲನೆ ಈಗ ಯಶಸ್ವಿಯಾಗಿ ಪೂರ್ಣಗೊಂಡಿದೆ. ಹೊಸ ರಿಗ್ ಮತ್ತು ತರಬೇತಿ ಪಡೆದ ಸಿಬ್ಬಂದಿಗಳು ಸಿದ್ಧರಾದರೆ ಜಿಲ್ಲೆಯಲ್ಲಿ ಬೋರ್‌ವೆಲ್ ನಿರ್ಮಾಣ ಕಾರ್ಯವು ಮುಂದಿನ ದಿನಗಳಲ್ಲಿ ಹೆಚ್ಚು ವೇಗವಾಗಿ ಪೂರ್ಣಗೊಳ್ಳಲಿದೆ ಎಂದು ಅಂತರ್ಜಲ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ಒ.ರತೀಶ್ ತಿಳಿಸಿದ್ದಾರೆ.



ಮಳೆಗಾಲದ ಹಿನ್ನೆಲೆಯಲ್ಲಿ ಮಂಗಲ್ಪಾಡಿ ಪಂ.ನ 7ನೇ ವಾರ್ಡ್ ಪ್ರತಾಪನಗರದಲ್ಲಿ ಮಳೆ ನೀರು ಹರಿಯಲು ಚರಂಡಿಯನ್ನು ಶುಚೀಕರಿಸಲಾಯಿತು. ವಾರ್ಡ್ ಸದಸ್ಯ ವಸಂತಕುಮಾರ್ ಮಯ್ಯ ನೇತೃತ್ವ ವಹಿಸಿದ್ದರು.

ಮಲೆನಾಡು ಪ್ರದೇಶದ ಆರೋಗ್ಯ ಕಾಪಾಡುವ ಗುರಿಯೊಂದಿಗೆ 'ಸಂಜೀವಿನಿ' ಯೋಜನೆ ಅನುಷ್ಠಾನ

ಬದಲಾವಣೆ ಹಾದಿಯಲ್ಲಿ ಪರಪ್ಪ ಬುಡಕಟ್ಟು ಸಮುದಾಯ

ಕಾಸರಗೋಡು: ಪರಪ್ಪ ಬ್ಲಾಕ್ ಪಂ.ನ ನೇತೃತ್ವದಲ್ಲಿ ಸಂಜೀವಿನಿ ಆರೋಗ್ಯ ಯೋಜನೆ ಜಾರಿಗೊಳಿಸಲಾಗಿದೆ. ಜಿಲ್ಲೆಯ ಮಲೆನಾಡು (ಪೂರ್ವ ಗುಡ್ಡಗಾಡು) ಪ್ರದೇಶದ ಹಸಿರಿನ ನಡುವೆ ವಾಸಿಸುವ ಬುಡಕಟ್ಟು ಸಮುದಾಯದ ಆರೋಗ್ಯ –ಆರೈಕೆ ಗುರಿಯೊಂದಿಗೆ ಈ ಯೋಜನೆ ಅನುಷ್ಠಾನಕ್ಕೆ ತರಲಾಗಿದೆ.

ಪ್ರಸ್ತುತ ಯೋಜನೆಯನ್ನು ಬ್ಲಾಕ್ ಪಂ. ಮತ್ತು ಜಿ.ಪಂ. ಸಹಯೋಗದೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ. 7 ಗ್ರಾ.ಪಂ.ಗಳಲ್ಲಿ ಹರಡಿರುವ ಬ್ಲಾಕ್ ವ್ಯಾಪ್ತಿಯ ಜನಸಂಖ್ಯೆಯ ಸುಮಾರು ಶೇ.20ರಷ್ಟು ಜನರು ಬುಡಕಟ್ಟು ಜನಾಂಗದವರು. ಜನಸಂಖ್ಯಾ ಯೋಜನೆ – ಸರಕಾರಿ ಯೋಜನೆಗಳು ಅವರ ಜೀವನದಲ್ಲಿ ಪ್ರಮುಖ ಬದಲಾವಣೆಗಳ ತಂದಿದ್ದರೂ ಕೆಲವು ಮೂಲಭೂತ ಸಮಸ್ಯೆಗಳು ಇನ್ನೂ ಉಳಿದಿವೆ.

ವೈಯಕ್ತಿಕ ನೈರ್ಮಲ್ಯದ ಕೊರತೆ, ಸಾಂಕ್ರಾಮಿಕ ರೋಗಗಳು, ಜೀವನಶೈಲಿ ರೋಗಗಳು, ಅಪೌಷ್ಟಿಕತೆ, ಮಾದಕ ದ್ರವ್ಯ ಸೇವನೆ , ಕಾನೂನು ಜ್ಞಾನದ ಕೊರತೆಯ ಸಮಸ್ಯೆಗಳ ನಿವಾರಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಈ ಸಮಗ್ರ





ಆರೋಗ್ಯ ಯೋಜನೆಯ ಉದ್ದೇಶವಾಗಿದೆ.

ಬಿಟಿಎಚ್ಎನ್ ನರ್ಸ್‌ಗಳು ಕಾರ್ಯಪ್ರವೃತ್ತ

ಬುಡಕಟ್ಟು ಸಮುದಾಯದ ನರ್ಸ್‌ಗಳೇ ಆರೋಗ್ಯ ಸೇವೆಗಾಗಿ ಬರುತ್ತಾರೆ. ನರ್ಸಿಂಗ್ ಅಧ್ಯಯನವನ್ನು ಪೂರ್ಣಗೊಳಿಸಿದವರನ್ನು ಬ್ಲಾಕ್ ಟ್ರೈಬಲ್ ಹೆಲ್ತ್ ನರ್ಸ್ (ಬಿಟಿಎಚ್‌ಎನ್) ಆಗಿ ನೇಮಿಸಲಾಗುತ್ತದೆ. ಅವರ ಕೆಲಸವು ಬ್ಲಾಕ್‌ನಲ್ಲಿರುವ ಎಲ್ಲಾ ಒಂಭತ್ತು ಆರೋಗ್ಯ ಕೇಂದ್ರಗಳ ಮೇಲೆ ಕೇಂದ್ರೀಕೃತವಾಗಿದೆ. ರಕ್ತದೊತ್ತಡ ಪರೀಕ್ಷಿಸಲು ಬಿಪಿ ಉಪಕರಣ, ಮಧುಮೇಹ ಪರೀಕ್ಷಿಸಲು ಗ್ಲುಕೋಮೀಟರ್, ರಕ್ತಹೀನತೆ ಪತ್ತೆಹಚ್ಚಲು ಹಿಮೋಗ್ಲೋಬಿನ್ ಕಿಟ್ ಮತ್ತು ಪ್ರಾಥಮಿಕ ಆರೈಕೆಗಾಗಿ ಪ್ರಥಮ ಚಿಕಿತ್ಸಾ ಕಿಟ್‌ಗಳನ್ನು ಒಳಗೊಂಡಿರುವ ವಿಶೇಷ ವೈದ್ಯಕೀಯ ಕಿಟ್‌ಗಳನ್ನು ಒದಗಿಸಲಾಗಿದೆ. ಪನತ್ತಡಿ ತಾಲೂಕು ಆಸ್ಪತ್ರೆ ವೈದ್ಯಕೀಯ ಅಧಿಕಾರಿ ನೇತೃತ್ವದ ತಜ್ಞರ ಸಮಿತಿ ಐದು ದಿನಗಳ ಕಠಿಣ ತರಬೇತಿ ನೀಡಿದ ನಂತರ ನರ್ಸ್‌ಗಳ ಮನೆಗಳಿಗೆ ಕಳುಹಿಸಲಾಗುತ್ತದೆ.

ಆರೋಗ್ಯ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆ

ರೋಗ ಬಂದ ನಂತರ ಚಿಕಿತ್ಸೆ ನೀಡುವ ಬದಲು ಅದನ್ನು ತಡೆಗಟ್ಟುವತ್ತ ಸಂಜೀವನಿ ಓಜನೆಯು ಒತ್ತು ನೀಡುತ್ತದೆ. ಇದಕ್ಕಾಗಿ ಆರೋಗ್ಯ ಸಮಸ್ಯೆಗಳ ಮುಂಚಿತವಾಗಿ ಪತ್ತೆಹಚ್ಚಲು ವಿಶೇಷ ವೈದ್ಯಕೀಯ ಶಿಬಿರ ಆಯೋಜಿಸಲಾಗುತ್ತದೆ. ಈ ಶಿಬಿರಗಳು ರಕ್ತಹೀನತೆ, ಕ್ಯಾಲ್ಸಿಯಂ ಕೊರತೆ, ಥೈರಾಯ್ಡ್ ಸಮಸ್ಯೆಗಳು, ಕಣ್ಣು ಮತ್ತು ದಂತ ಕಾಯಿಲೆಗಳು ಮತ್ತು ಜೀವನಶೈಲಿ ಕಾಯಿಲೆಗಳನ್ನು ಪತ್ತೆಹಚ್ಚಲು ಮತ್ತು ತಜ್ಞರ ಚಿಕಿತ್ಸೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಪೌಷ್ಟಿಕಾಂಶ, ವೈಯಕ್ತಿಕ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಮಹತ್ವದ ಬಗ್ಗೆ ಜನರಿಗೆ ಅರಿವು ಮೂಡಿಸುವುದರ ಜೊತೆಗೆ ಮದ್ಯ, ಮಾದಕ ದ್ರವ್ಯಗಳು ಮತ್ತು ತಂಬಾಕು ಉತ್ಪನ್ನಗಳ ಬಳಕೆಯ ಕುರಿತು ಜಾಗೃತಿ ಮೂಡಿಸಲಾಗುತ್ತದೆ. ಮಕ್ಕಳ ಮೇಲಿನ ದೌರ್ಜನ್ಯ ತಡೆಯುವ ಪೋಕ್ಸೋ ಕಾಯ್ದೆ ಮತ್ತು ಕೌಟುಂಬಿಕ ಹಿಂಸಾಚಾರ ತಡೆಗಟ್ಟುವಿಕೆ ಹಾಗೂ ಅವರ ಹಕ್ಕುಗಳ ಬಗ್ಗೆ ಬುಡಕಟ್ಟು ಜನರಲ್ಲಿ ಕಾನೂನು ಅರಿವು ಮೂಡಿಸಲು ಯೋಜನೆ ಸಹಾಯ ಮಾಡುತ್ತದೆ.

ಅಡುಗೆ ತೋಟಗಳಿಂದ ಕುರಿ ಸಾಕಣೆವರೆಗೆ

ಕೃಷಿ ಇಲಾಖೆ ಸಹಯೋಗದೊಂದಿಗೆ ಪ್ರತಿ ಮನೆಗೆ ತರಕಾರಿ ಬೀಜಗಳು , ಎರಡು ಬಾಳೆ ಸಸಿ ವಿತರಿಸಲಾಗುತ್ತದೆ. ಅವರು ತಮ್ಮ ಹಿತ್ತಲಿನಲ್ಲಿ ಪೌಷ್ಟಿಕ ತರಕಾರಿ ಬೆಳೆಯುವ ನಿಟ್ಟಿನಲ್ಲಿ ಅನುವು ಮಾಡಿಕೊಡಲು ವಿಶೇಷ ತರಬೇತಿ ತರಗತಿ ನೀಡಲಾಗುತ್ತದೆ. ಇದರ ಜೊತೆಗೆ ಪಶುಸಂಗೋಪನಾ ಇಲಾಖೆ ಸಹಾಯದಿಂದ ಹಾಲು ಉತ್ಪಾದನೆ ಹೆಚ್ಚಿಸಲು ಮೇಕೆ, ಹಸು, ಎಮ್ಮೆ ಇತ್ಯಾದಿಗಳನ್ನು ಸಾಕಲು ಪ್ರೋತ್ಸಾಹಿಸಲಾಗುತ್ತದೆ.

ಪಾರದರ್ಶಕ ಕಾರ್ಯಾಚರಣೆ

ಆರೋಗ್ಯ ನಿರೀಕ್ಷಕರು ಮತ್ತು ವೈದ್ಯಕೀಯ ಅಧಿಕಾರಿಗಳು ದಾದಿಯರ ದೈನಂದಿನ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ. ದಾದಿಯರ ವೇತನ, ವೈದ್ಯಕೀಯ ಕಿಟ್‌ಗಳು, ಶಿಬಿರಗಳು, ಔಷಧಿಗಳು ಇತ್ಯಾದಿಗಳ ಸಂಪೂರ್ಣ ಆರ್ಥಿಕ ವೆಚ್ಚವನ್ನು ಪರಪ್ಪ ಬ್ಲಾಕ್ ಪಂಚಾಯತ್ ಮತ್ತು ಕಾಸರಗೋಡು ಜಿಲ್ಲಾ ಪಂಚಾಯತ್ ಭರಿಸುತ್ತವೆ. ಪರಪ್ಪ ಬ್ಲಾಕ್ ವ್ಯಾಪ್ತಿಯ ಬುಡಕಟ್ಟು ಸಮುದಾಯದವರು ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆಯನ್ನು ತಮ್ಮ ಹೃದಯಕ್ಕೆ ಹತ್ತಿರವಾಗಿಟ್ಟುಕೊಂಡು ಆರೋಗ್ಯ ಮತ್ತು ಸಮಾಜದ ದೃಷ್ಟಿಯಿಂದ ಉತ್ತಮ ಜೀವನದತ್ತ ಸಾಗುತ್ತಿದ್ದಾರೆ.

ಬದಿಯಡ್ಕದಲ್ಲಿ ನಿವೃತ್ತಿ ಹೊಂದಲಿರುವ ಸಬ್‌ಇನ್‌ಸ್ಪೆಕ್ಟರ್ ಥೋಮಸ್‌ಗೆ ಬೀಳ್ಕೊಡುಗೆ



ಬದಿಯಡ್ಕ: 31 ವರ್ಷಗಳ ಸುದೀರ್ಘ ಸೇವೆ ಮುಗಿಸಿ ನಿವೃತ್ತಿ ಹೊಂದಲಿರುವ ಸಬ್ ಇನ್ಸ್‌ಪೆಕ್ಟರ್‌ಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಬದಿಯಡ್ಕ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಸಿ.ಎಂ.ಥೋಮಸ್ ಅವರು ಮೇ 31ರಂದು ಅಧಿಕೃತ ಸೇವೆಯಿಂದ ನಿವೃತ್ತರಾಗಲಿದ್ದಾರೆ.

ದಕ್ಷ ಅಧಿಕಾರಿಯಾಗಿದ್ದರು

ಭಾನುವಾರ ಬದಿಯಡ್ಕ ಪೊಲೀಸ್ ಠಾಣೆಯಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭವನ್ನು ಸ್ಟೇಷನ್ ಹೌಸ್ ಆಫೀಸರ್ ಆರ್.ಪಿ.ಅನೂಪ್‌ಕೃಷ್ಣ ಉದ್ಘಾಟಿಸಿದರು. ದಕ್ಷ ಅಧಿಕಾರಿಯಾಗಿದ್ದ ಥೋಮಸ್ ಅವರು ಎಲ್ಲರ ಜೊತೆ ಉತ್ತಮ ಬಾಂಧವ್ಯವನ್ನು ಹೊಂದಿದ್ದರು ಎಂದು ಹೇಳಿದರು.

ಈ ಸಂದರ್ಭ ನಿವೃತ್ತಿ ಹೊಂದಲಿರುವ ಸಬ್ ಇನ್‌ಸ್ಪೆಕ್ಟರ್ ಥೋಮಸ್ ಅವರಿಗೆ ಸನ್ಮಾನ ಹಾಗೂ ಸ್ಮರಣಿಕೆಯನ್ನು ನೀಡಿ ಗೌರವಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಠಾಣೆಯ ಸಬ್ ಇನ್‌ಸ್ಪೆಕ್ಟರ್ ರಾಧಾಕೃಷ್ಣನ್ ವಹಿಸಿದ್ದರು. ಸಬ್ ಇನ್‌ಸ್ಪೆಕ್ಟರ್ ಇ.ಸುಕುಮಾರನ್ ಸ್ವಾಗತಿಸಿದರು. ನಿವೃತ್ತ ಎಸ್‌ಐ ಫಿಲಿಪ್ ಥೋಮಸ್, ಸ್ಟೇಷನ್ ರೈಟರ್ ಪಿ.ಮನೋಜ್ ಸೇರಿದಂತೆ ಇತರ ಪೊಲೀಸ್ ಅಧಿಕಾರಿಗಳು ಮತ್ತು ಅವರ ಕುಟುಂಬಸ್ಥರು ಕಾರ್ಯಕ್ರಮದಲ್ಲಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ ಸಾಧಕರಿಗೆ ಅಭಿನಂದನೆ

ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಎಸ್‌ಐ. ಸುಕುಮಾರನ್ ಅವರ ಪುತ್ರ ಆವೇದ್ ಮತ್ತು ಸಿವಿಲ್ ಪೊಲೀಸ್ ಅಧಿಕಾರಿ ಶಿಬಿನ್ ಅವರ ಪುತ್ರಿ ಶಿಖಾ ಶಾ ಅವರನ್ನು ಅಭಿನಂದಿಸಲಾಯಿತು.

ಸಂಚಾರಿ ಪಶು ವೈದ್ಯಕೀಯ ಘಟಕ: 3000ಕ್ಕೂ ಹೆಚ್ಚು ಪ್ರಾಣಿಗಳಿಗೆ ಚಿಕಿತ್ಸೆ

ಕಾಸರಗೋಡು: ಪರಪ್ಪ ಬ್ಲಾಕ್ ಪಂಚಾಯತ್‌ನ ಸಂಚಾರಿ ಪಶು ಚಿಕಿತ್ಸಾಲಯವು ಗುಡ್ಡಗಾಡು ಪ್ರದೇಶದ ಹೈನುಗಾರರಿಗೆ ಪರಿಹಾರ ಒದಗಿಸುತ್ತಿದೆ. ಪ್ರಾಣಿಗಳನ್ನು ಆಸ್ಪತ್ರೆಗಳಿಗೆ ಸಾಗಿಸುವ ತೊಂದರೆ ನಿವಾರಿಸುವುದು ಮತ್ತು ಮನೆ ಬಾಗಿಲಿಗೆ ತಜ್ಞ ಚಿಕಿತ್ಸೆ ಖಚಿತಪಡಿಸಿಕೊಳ್ಳುವುದು ಈ ಯೋಜನೆಯ ಗುರಿಯಾಗಿದೆ. ಯೋಜನೆ ಪ್ರಾರಂಭವಾದಾಗಿನಿಂದ ಸಂಚಾರಿ ಘಟಕವು ವಿವಿಧ ರೀತಿಯ 3000 ಕ್ಕೂ ಹೆಚ್ಚು ಪ್ರಕರಣಗಳಿಗೆ ಚಿಕಿತ್ಸೆ ನೀಡಿದೆ.

ಬ್ಲಾಕ್ ಪಂ.ನ ವಾರ್ಷಿಕ ಯೋಜನೆ ಭಾಗವಾಗಿ ಸಂಚಾರಿ ಪಶು ವೈದ್ಯಕೀಯ ಚಿಕಿತ್ಸಾಲಯ 2022 ನವೆಂಬರ್ 1ರಂದು ತನ್ನ ಕಾರ್ಯಾಚರಣೆ ಪ್ರಾರಂಭಿಸಿತು. ಚಿಕಿತ್ಸಾಲಯದ ಕಾರ್ಯಾಚರಣೆ ಸಮಯ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ. ಪ್ರಸ್ತುತ ತಿಂಗಳಿಗೆ 70 ರಿಂದ 80 ಪ್ರಕರಣಗಳು ವರದಿಯಾಗುತ್ತಿವೆ. ಹೆಚ್ಚಿನ ಚಿಕಿತ್ಸೆ ಹಸುಗಳು– ಮೇಕೆಗಳಿಗೆ ನೀಡಲಾಗುತ್ತದೆ. ತುರ್ತು ಸಂದರ್ಭ ಸಣ್ಣ ಶಸ್ತ್ರಚಿಕಿತ್ಸೆಗಳನ್ನು ಮನೆಯಲ್ಲಿಯೇ ಮಾಡಲಾಗುತ್ತದೆ.

ಈ ಯೋಜನೆ ಕೃಷಿಕರು ಅತ್ಯಂತ ಕಷ್ಟಕರವಾದ ತುರ್ತು ಚಿಕಿತ್ಸೆಗಳನ್ನು ಸಹ ನೇರವಾಗಿ ತಮ್ಮ ಮನೆಗಳಲ್ಲಿ ಪಡೆಯಲು ಸಹಕಾರಿಯಾಗುತ್ತದೆ. ಪಶು ವೈದ್ಯಕೀಯ ಶಸ್ತ್ರಚಿಕಿತ್ಸಕ ಡಾ.ಆಲ್ವಿನ್ ಜೇಮ್ಸ್‌ಕುಟ್ಟಿ ಇದರ ಉಸ್ತುವಾರಿ ವಹಿಸಿದ್ದಾರೆ. ಇದುವರೆಗೆ ಡಾ.ಆಲ್ವಿನ್ ಅವರು 3,300ಕ್ಕೂ ಹೆಚ್ಚು ವಿವಿಧ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಸಮರ್ಥರಾಗಿದ್ದಾರೆ.



ಸಂಚಾರಿ ಘಟಕದಿಂದ ಶಾಶ್ವತ ಪರಿಹಾರ

ಸರಿಯಾದ ರಸ್ತೆಯೇ ಇಲ್ಲದಿರುವ ಗುಡ್ಡಗಾಡು ಪ್ರದೇಶದ ಕೃಷಿಕರಿಗೆತಮ್ಮ ಜಾನುವಾರುಗಳು, ಸಾಕು ಪ್ರಾಣಿಗಳು ಅನಾರೋಗ್ಯಕ್ಕೆ ಒಳಗಾದಾಗ ಆಸ್ಪತ್ರೆಗೆ ಕರೆದೊಯ್ಯುವುದು ದೊಡ್ಡ ಸವಾಲಾಗಿತ್ತು. ಆದರೆ ಸಂಚಾರಿ ಪಶುವೈದ್ಯಕೀಯ ಘಟಕ ದಿಂದ ಇದಕ್ಕೆ ಶಾಶ್ವತ ಪರಿಹಾರ ಸಿಗುತ್ತಿದೆ.

ಬನಾತ್ ಹಸುವಿನ ಗರ್ಭಕೋಶ ಹೆರಿಗೆ ನಂತರ ಹೊರಬಂದಾಗ ಬ್ಲಾಕ್‌ನ ಸಂಚಾರಿ ಪಶು ವೈದ್ಯಕೀಯ ಘಟಕವು ಸಹಾಯಕ್ಕೆ ಬಂದಿತು. ಹೆರಿಗೆಯ ನಂತರ ಗರ್ಭಾಶಯ ಹಿಗ್ಗುವುದು ಹಸುಗಳಲ್ಲಿ ಸಂಭವಿಸಬಹುದಾದ ಅತ್ಯಂತ ಗಂಭೀರ ತೊಡಕುಗಳಲ್ಲಿ ಒಂದಾಗಿದೆ. ಗರ್ಭಕೋಶ ಭಾಗಶಃ ಅಥವಾ ಸಂಪೂರ್ಣ ಹೊರಹಾಕಲ್ಪಟ್ಟರೆ, ಅದನ್ನು ತಕ್ಷಣವೇ ಚಿಕಿತ್ಸೆ ನೀಡಿ ಪುನರ್ ಸ್ಥಾಪಿಸದಿದ್ದರೆ, ರಕ್ತಸ್ರಾವ ಸೇರಿದಂತೆ ಸಮಸ್ಯೆಗಳು ಉಲ್ಬಣಗೊಳ್ಳಬಹುದು ಮತ್ತು ಹಸು ಸಾಯಬಹುದು.

ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದಿಂದ ರೆ.ಫಾ. ಬಾಸಿಲ್ ವಾಸ್‌ಗೆ ಅಭಿನಂದನೆ



ಕಾಸರಗೋಡು: ವರ್ಕಾಡಿ ಸೇಕ್ರೆಡ್ ಹಾರ್ಟ್ ಆಫ್ ಜೀಸಸ್ ಚರ್ಚ್‌ನ ಧರ್ಮಗುರುಗಳಾಗಿ ಕಾಸರಗೋಡಿನ, ಕನ್ನಡ, ತುಳು ಸಂಘಟನಾತ್ಮಕ ಕೆಲಸ ಕಾರ್ಯಗಳಲ್ಲಿ ಸಾಹಿತ್ಯ ಕಲಾ ಪ್ರೋತ್ಸಾಹಕರಾಗಿದ್ದ ಅತೀ ರೆ.ಫಾ. ಸ್ವಾಮಿ ಬಾಸಿಲ್ ವಾಸ್ ಅವರು ಮಂಗಳೂರು ಬೊಂದೇಲ್ ಚರ್ಚ್‌ಗೆ ವರ್ಗಾವಣೆಯಾಗುತ್ತಿರುವ ಹಿನ್ನೆಲೆಯಲ್ಲಿ ಕನ್ನಡ ಕಾರ್ಯನಿರತ ಪತ್ರಕರ್ತರ ಶ್ರೇಯೋಭಿವೃದ್ಧಿ ಸಂಘ ಹಾಗೂ ಕನ್ನಡ ಸಂಘಟನೆಗಳ ಪರವಾಗಿ ಅವರನ್ನು ಅಭಿನಂದಿಸಲಾಯಿತು.

ಕನ್ನಡ ಪತ್ರಕರ್ತರ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಅವರ ಅಧ್ಯಕ್ಷತೆಯಲ್ಲಿ ಕಾಸರಗೋಡು ಸಿಟಿ ಟವರ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್.ಸುಬ್ಬಯ್ಯಕಟ್ಟೆ, ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ರಾಧಾಕೃಷ್ಣ ಕೆ.ಉಳಿಯತ್ತಡ್ಕ, ಗಮಕ ಪರಿಷತ್‌ನ ಅಧ್ಯಕ್ಷ ಶಂಕರನಾರಾಯಣ ಭಟ್, ಕನ್ನಡ ಹೋರಾಟಗಾರ ಗಣೇಶ ಪ್ರಸಾದ್ ಪಾಣೂರು, ಪತ್ರಕರ್ತ ಬಂಧುಗಳು ಭಾಗವಹಿಸಿದ್ದರು.

ಗಡಿನಾಡು ಕಾಸರಗೋಡಿನ ಕನ್ನಡ ಬಂಧುಗಳ ಸಹಕಾರವನ್ನು ಮೆಚ್ಚಿ ಫಾದರ್ ಬಾಸಿಲ್ ವಾಸ್ ಅವರು ಹೃದಯಸ್ಪರ್ಶಿ ಕೃತಜ್ಞತೆ ಸಲ್ಲಿಸಿದರು.

ಬೊಂದೇಲ್ ಚರ್ಚ್‌ನಲ್ಲಿ ಕಾರ್ಯನಿರ್ವಹಣೆ

ಈ ಹಿಂದೆ ಬೇಳ ಶೋಕಮಾತ ದೇವಾಲಯದಲ್ಲೂ ಇದೀಗ ವರ್ಕಾಡಿ ಇಗರ್ಜಿಯಲ್ಲೂ ಸೇವೆ ಸಲ್ಲಿಸಿದ ಅವರು ಮುಂದೆ ಮಂಗಳೂರಿನ ಬೊಂದೇಲ್ ಚರ್ಚ್‌ನಲ್ಲಿ ಕಾರ್ಯ ನಿರತರಾಗಲಿದ್ದಾರೆ.

ಯುವ ತಲೆಮಾರು ರಂಗಭೂಮಿ ಕಡೆ ಆಸಕ್ತಿ ವಹಿಸುವುದು ಇಂದಿನ ಅತ್ಯಗತ್ಯ



ಕಾಸರಗೋಡು: ಕನ್ನಡ ಸಾಹಿತ್ಯ ಪರಂಪರೆಗೆ ಕಾಸರಗೋಡಿನ ಕೊಡುಗೆ ಅಪೂರ್ವವಾದುದು. ಸುಧೀರ್ಘ ಬಿಡುವಿನ ಬಳಿಕ ಈಗ ಮತ್ತೆ ಕಾಸರಗೋಡಿನಲ್ಲಿ ಕನ್ನಡ ನಾಟಕೋತ್ಸವ ಆಯೋಜಿಸಿರುವುದು ಭರವಸೆ ಮೂಡಿಸಿದೆ. ಹೊಸ ಯುವ ತಲೆಮಾರು ರಂಗಭೂಮಿಯತ್ತ ಆಕರ್ಷಿಸಬೇಕಾದ ಅಗತ್ಯ ಇದೆ ಎಂದು ಕಾಸರಗೋಡು ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಂಗಶಂಕರ ಬೆಂಗಳೂರು, ಕಾಸರಗೋಡು ಥಿಯಾಟ್ರಿಕ್ಸ್ ಸೊಸೈಟಿ, ಸವಾಕ್ ಕಾಸರಗೋಡು ಸಹಯೋಗದಲ್ಲಿ ಕಾಸರ ಗೋಡು ನಗರಸಭಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕನ್ನಡ ನಾಟಕೋತ್ಸವದ ಭಾನುವಾರ ನಡೆದ ಸಮಾರೋಪದಲ್ಲಿ ಅವರು ಮಾತನಾಡಿದರು.

ಯುವರಂಗನಿರ್ದೇಶಕಪದ್ಮನಾಭಬ್ಲಾತ್ತೂರ್, ಗೋವಿಂದ ಪೈ ಸ್ಮಾರಕ ಗಿಳಿವಿಂಡಿನ ಕೋಶಾಧಿಕಾರಿ ಬಾಲಕೃಷ್ಣ ಶೆಟ್ಟಿಗಾರ್, ರಂಗ ನಿರ್ದೇಶಕ ವಕೀಲ ಟಿ.ವಿ.ಗಂಗಾಧರನ್, ನಗರಸಭಾ ಸದಸ್ಯ ಮಧುಕರ, ಪ್ರಾಧ್ಯಾಪಕ ಡಾ.ಬಾಲಕೃಷ್ಣ ಹೊಸಂಗಡಿ, ರಂಗ ಶಂಕರದ ನಿರ್ದೇಶಕ ಮುದ್ದಣ್ಣ ರಾಟೆಹಳ್ಳಿ ಉಪಸ್ಥಿತರಿದ್ದರು. ಸವಾಕ್ ರಾಜ್ಯ ಕೋಶಾಧಿಕಾರಿ ಎಂ.ಉಮೇಶ ಸಾಲ್ಯಾನ್ ಕಾಸರಗೋಡು ಸ್ವಾಗತಿಸಿದರು.

ನಾಟಕೋತ್ಸವದ ಅಂಗವಾಗಿ ಆಯೋಜಿಸಲಾದ ಏಕಪಾತ್ರಾಭಿನಯ ಮತ್ತು ರಂಗಗೀತೆಗಳ ಸ್ಪರ್ಧೆಯಲ್ಲಿ ವಿಜೇತರಾದ ಸಮನ್ವಿತಾ ಗಣೇಶ್ ಅಣಂಗೂರು, ಅದಿತಿ ಪಾಣೇನಗರ (ಏಕಪಾತ್ರಾಭಿನಯ), ವರದರಾಜ ಅಡ್ಕ ಜಯಶ್ರೀ ದಿವಾಕರ್ (ರಂಗಗೀತೆ) ಗೆ ಬಹುಮಾನಗಳನ್ನು ದಿವಾಕರ ಅಶೋಕ ನಗರ ವಿತರಿಸಿದರು. ಬಳಿಕ ಕುವೆಂಪು ರಚನೆಯ ಬೆರಳ್ಗೆ ಕೊರಳ್ ನಾಟಕವನ್ನು ನವೀನ್ ಸಾಣೆಹಳ್ಳಿ ನಿರ್ದೇಶನದಲ್ಲಿ ಶೇಷಗಿರಿಯ ಗಜಾನನ ಯುವಕ ಮಂಡಳಿ ಪ್ರದರ್ಶಿಸಿದರು.

ಕಲಾಕುಂಚದಿಂದ ಗಮಕ ಕಲೆಯ ವಿಶೇಷ ಉಪನ್ಯಾಸ ಕಾರ್ಯಕ್ರಮ

ಕುಂಬಳೆ: ಗಮಕ ಕಲೆಗೆ ವಿಶೇಷವಾದ ಮನ್ನಣೆ ಇದ್ದು, ಸಾಹಿತ್ಯ ಮತ್ತು ಸಂಗೀತದ ಸರಸ ಸಾಮರಸ್ಯ ಗಮಕ ಕಲೆಯ ವೈಶಿಷ್ಟ್ಯ. ಅವಿಭಜಿತ ದಕ್ಷಿಣ ಕನ್ನಡ ಸಹಿತ ಕಾಸರಗೋಡಿನ ಗಮಕ ಪರಂಪರೆ ವಿಶಾಲ, ವಿಶಿಷ್ಟವಾದುದು ಎಂದು ಹಿರಿಯ ಶಿಕ್ಷಣ ತಜ್ಞ, ನಿವೃತ್ತ ಅಧ್ಯಾಪಕ, ಸಾಹಿತಿ ವಿ.ಬಿ.ಕುಳಮರ್ವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಲಾಕುಂಚ ಸಂಘಟನೆಯ ಕಾಸರಗೋಡು ಘಟಕ ಭಾನುವಾರ ಸಂಜೆ ನಾರಾಯಣ ಮಂಗಲ ಶ್ರೀನಿಧಿಯಲ್ಲಿ ಆಯೋಜಿಸಿದ್ದ ತಿಂಗಳ ಕಾರ್ಯಕ್ರಮದಲ್ಲಿ ಗಮಕ ಕಲೆಯಲ್ಲಿ ಕಾಸರಗೋಡಿನ ಕೊಡುಗೆ ವಿಷಯದ ಬಗ್ಗೆ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು. ಕವಿ, ಗಮಕಿ, ವಾದಿ ಮತ್ತು ವಾಗ್ಮಿಗಳಿಗೆ ಹಿಂದಿನ ರಾಜ ಪರಂಪರೆಯಲ್ಲಿ ವಿಶೇಷ ಮನ್ನಣೆಗಳಿದ್ದವು. ಆ ಹಿನ್ನೆಲೆಯಿಂದ ಮೂಡಿಬಂದ ಗಮಕ ಕಲೆ ಕಾವ್ಯವನ್ನು ಸಲಲಿತವಾಗಿ ಗ್ರಾಹ್ಯವಾಗಿಸಲು ನೆರವಾಗಿದೆ. ಸಾಹಿತ್ಯ, ಸಂಗೀತಗಳ ಮೇಲ್ಮೈಸುವಿಕೆಯಿಂದ ಕಾವ್ಯ ಗಮಕ ರೂಪದಲ್ಲಿ ಜನಸಾಮಾನ್ಯರ ಮನಸ್ಸುಗಳಿಗೆ ಸುಲಭವಾಗಿ ದಾಟಿ ಕಥಾನಕವನ್ನು ಸುಂದರಗೊಳಿಸುತ್ತದೆ. ಗಮಕ ಕಲೆಯನ್ನು ಶ್ರಾವಣ ಮಾಸದ ವಿಶೇಷ ಸಂದರ್ಭ ಪ್ರಚುರ ಪಡಿಸಿದ ಕೀರ್ತಿ ಕಾಸರಗೋಡು ಗಡಿನಾಡ ಘಟಕದ ವಿಶಿಷ್ಟ ಕೊಡುಗೆಯಾಗಿದೆ. ಇಲ್ಲಿಯ ಹಿರಿಯ ಪರಂಪರೆ ಅನೇಕ ಸಾಧಕರು ಈ ಕಲೆ ಪ್ರಚುರಪಡಿಸುವಲ್ಲಿ ವ್ಯಾಪಕ ಚಟುವಟಿಕೆ ನಡೆಸಿದ್ದಾರೆ ಎಂದು 1960–70ರ ದಶಕದ ಹಿರಿಯರನ್ನು ನೆನಪಿಸಿಕೊಂಡರು.



ಗಮಕ ಕಲಾ ಪರಿಷತ್ತು ಕೇರಳ ಗಡಿನಾಡ ಘಟಕದ ಅಧ್ಯಕ್ಷ ತೆಕ್ಕೇಕೆರೆ ಶಂಕರನಾರಾಯಣ ಭಟ್ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಕಲಾಕುಂಚ ಸಾಹಿತ್ಯ, ಸಾಂಸ್ಕೃತಿಕ ಸಂಘಟನೆ ಕಾಸರಗೋಡು ಗಡಿನಾಡ ಘಟಕದ ಅಧ್ಯಕ್ಷೆ ಜಯಲಕ್ಷ್ಮಿ ಕಾರಂತ ಮಂಗಲ್ಪಾಡಿ ಸ್ವಾಗತಿಸಿದರು. ಜಯಲಕ್ಷ್ಮಿ ಆರ್.ಹೊಳ್ಳ ನಿರೂಪಿಸಿದರು. ನಿವೃತ್ತ ಮುಖ್ಯೋಪಾಧ್ಯಾಯ ರಾಜಾರಾಮ ರಾವ್ ಮೀಯಪದವು ವಂದಿಸಿದರು. ಚೇತನ ಹೆಬ್ಬಾರ್, ದಿವ್ಯಾ ಕಾರಂತ, ವೇದಾಂತ ಕಾರಂತ ಗಮಕ ಕಾವ್ಯ ವಾಚನ ನಡೆಸಿದರು.



ಕಾಸರಗೋಡು ಪೇಟೆ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ವೆಂಕಟ್ರಮಣ ದೇವರ, ಶ್ರೀದುರ್ಗೆ, ಶ್ರೀ ಆಂಜನೇಯ ಸ್ವಾಮಿಯ , ಶ್ರೀ ರಾಘವೇಂದ್ರ ಸ್ವಾಮಿಯ ಪುನರ್ ಪ್ರತಿಷ್ಠಾ ವಾರ್ಷಿಕೋತ್ಸವವು ಕ್ಷೇತ್ರದ ಮೊಕ್ತೇಸರರು ಹಾಗೂ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಅಸ್ರ ಅವರ ನೇತೃತ್ವದಲ್ಲಿ ಜರಗಿತು. ಬೆಳಿಗ್ಗೆ ಗಣಪತಿಹೋಮ, ನವಾಭಿಷೇಕ, ಪಂಚಾಮೃತಾಭಿಷೇಕ ಭಜನೆ ಬಳಿಕ ದೇವರಿಗೆ ಶ್ರೀರಂಗ ಪೂಜೆಯೊಂದಿಗೆ ಸಂಪನ್ನಗೊಂಡಿತು.



ಕಾಸರಗೋಡು ಕೆಎಸ್‌ಆರ್‌ಟಿಸಿ ಬಳಿಯ ಬ್ಯಾಂಕ್ ರಸ್ತೆಯ ಶ್ರೀ ನಾಗರಾಜ ನಾಗಕನ್ನಿಕಾ ಸನ್ನಿಧಿಯಲ್ಲಿ ಬ್ರಹ್ಮಕಲಶದ ಅಂಗವಾಗಿ ಹೊಸ ದಿಗಂತ ಪತ್ರಿಕೆಯು ಹೊರತಂದ ವಿಶೇಷ ಪುಟವನ್ನು ಶ್ರೀ ಸನ್ನಿಧಿಯಲ್ಲಿ ಸಮಿತಿ ಪದಾಧಿಕಾರಿಗಳು ಸೋಮವಾರ ಬಿಡುಗಡೆಗೊಳಿಸಿದರು.

ಕಾಸರಗೋಡು ಬ್ಯಾಂಕ್ ರಸ್ತೆಯ ಶ್ರೀ ನಾಗರಾಜ ನಾಗಕನ್ನಿಕಾ ಸನ್ನಿಧಿಯಲ್ಲಿ ಬ್ರಹ್ಮಕಲಶದ ಸಂಭ್ರಮ

ನಾಗಾರಾಧನೆಯಿಂದ ರೋಗ ರುಜಿನಗಳು ಮಾಯ: ಎಡನೀರು ಶ್ರೀ

ಕಾಸರಗೋಡು: ನಾಗಾರಾಧನೆಯಿಂದ ಎಲ್ಲಾ ರೋಗ ರುಜಿನಗಳು ಮಾಯವಾಗುವುದು. ಪ್ರಕೃತಿಯನ್ನು ಪ್ರೀತಿಸಿದಂತೆ ಮಾನವನು ನಾಗಾರಾಧನೆಯನ್ನು ಹೆಚ್ಚು ಭಕ್ತಿಯಿಂದ ಮಾಡುತ್ತಾನೆ. ಈ ಮೂಲಕ ತಮ್ಮ ಮನದ ಎಲ್ಲಾ ಇಷ್ಟಾರ್ಥವನ್ನು ಸಿದ್ಧಿಸುತ್ತಾನೆ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಹೇಳಿದ್ದಾರೆ.

ಕಾಸರಗೋಡು ಬ್ಯಾಂಕ್ ರಸ್ತೆಯ ಶ್ರೀ ನಾಗರಾಜ ನಾಗಕನ್ನಿಕಾ ಸನ್ನಿಧಿಯಲ್ಲಿ ನಡೆದ ಬ್ರಹ್ಮಕಲಶೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಕೀಲ ಶಶಿಧರ ಆನೆಮಜಲ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ನಾಗರಾಜ ನಾಗ ಕನ್ನಿಕಾ ಸನ್ನಿಧಿಯ



ತಂತ್ರಿವರ್ಯ ಸುಖಾನಂದ ಭಟ್, ತಂತ್ರಿವರ್ಯ ಉಳಿಯತ್ತಾಯ ವಿಷ್ಣು ಆಸ್ರ ಅನುಗ್ರಹಿಸಿದರು.

ಆರೆಸ್ಸೆಸ್ ಅಖಿಲ ಭಾರತೀಯ ಕಾರ್ಯಕಾರಿಣಿ ವಿಶೇಷ ಆಹ್ವಾನಿತರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮುಖ್ಯ ಭಾಷಣ ಮಾಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ವಕೀಲ ಪಿ.ಮುರಳೀಧರನ್, ಗೌರವಾಧ್ಯಕ್ಷ ಸಿ.ವಿ.ಪೊದುವಾಳ್, ಸಮಿತಿ ಕಾರ್ಯಾಧ್ಯಕ್ಷ ಪಿ.ರಮೇಶ್, ಶ್ರೀ ಸನ್ನಿಧಿಯ ಪ್ರಧಾನ ಅರ್ಚಕ ದೇವಿಪ್ರಸಾದ್ ಭಟ್, ನಾಗೇಶ್ ಕಾರ್ನವರ್, ಗೌರವಾಧ್ಯಕ್ಷ ಎ.ಕೇಶವ ಮುಂತಾದವರು ಈ ಸಂದರ್ಭ ಉಪಸ್ಥಿತರಿದ್ದರು. ಬ್ರಹ್ಮಕಲಶ ಸಮಿತಿ ಕಾರ್ಯದರ್ಶಿ ದಿನೇಶ್ ಬಂಬ್ರಾಣ ಸ್ವಾಗತಿಸಿ, ಮೋಹನ್‌ದಾಸ್ ಕೊರಕೋಡು ವಂದಿಸಿ, ವರಪ್ರಸಾದ್ ಕೋಟೆಕಣಿ ನಿರೂಪಿಸಿದರು.

ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಿ

ಕಾಸರಗೋಡು ಹೃದಯ ಭಾಗದಲ್ಲಿರುವ ಈ ನಾಗ ಸಾನಿಧ್ಯವು ಅತ್ಯಂತ ಕಾರಣಿಕ ಹೊಂದಿದ್ದು, ಭಕ್ತರೆಲ್ಲರು ತಮಗೆ ಬರುವಂತಹ ಎಲ್ಲಾ ದೋಷ ಪರಿಹಾರಗಳಿಗೆ ಶ್ರೀ ನಾಗದೇವರ ಆರಾಧನೆ ಮಾಡಬೇಕು. ಬ್ರಹ್ಮಕಲಶ ದಂತಹ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಬೇಕು.

● ಎಡನೀರು ಶ್ರೀ

ಬ್ರಹ್ಮಕಲಶಾಭಿಷೇಕ



ಕಾಸರಗೋಡು ಕೆಎಸ್‌ಆರ್‌ಟಿಸಿ ಬ್ಯಾಂಕ್ ರಸ್ತೆಯ ಶ್ರೀ ನಾಗರಾಜ ನಾಗಕನ್ನಿಕಾ ಸನ್ನಿಧಿಯಲ್ಲಿ ಬ್ರಹ್ಮಕಲಶ ತಂತ್ರಿವರ್ಯ ಸುಖಾನಂದ ಭಟ್ ಅವರ ನೇತೃತ್ವದಲ್ಲಿ ಸೋಮವಾರ ಬ್ರಹ್ಮಕಲಶಾಭಿಷೇಕ ವಿಜೃಂಭಣೆಯಿಂದ ಜರಗಿತು. ಬಳಿಕ ಆಶ್ಲೇಷ ಬಲಿ , ವಿವಿಧ ವೈದಿಕ ಕಾರ್ಯಕ್ರಮಗಳು ಜರಗಿದವು.

ಸುತ್ತಮುತ್ತ

ಜೂನ್ 8, 10, 12: ಆನ್‌ಲೈನ್‌ನಲ್ಲಿ ಮೆಟಾ ಆಡ್ಸ್ ಮಾಸ್ಟರ್‌ಕ್ಲಾಸ್

ಮಣಿಪಾಲ: ಡಿಜಿಟಲ್ ಮಾರ್ಕೆಟಿಂಗ್ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ವಿಶೇಷ ತರಬೇತಿ ನೀಡುವ ಉದ್ದೇಶದಿಂದ 'ಮೆಟಾ ಆಡ್ಸ್ ಮಾಸ್ಟರ್‌ಕ್ಲಾಸ್' ಆನ್ ಲೈನ್ ಕೋರ್ಸ್‌ನ್ನು ಮಣಿಪಾಲ್ ಸ್ಕಿಲ್ ಡೆವಲಪ್ ಮೆಂಟ್ ಸೆಂಟರ್ ಆಯೋಜಿಸಿದ್ದು, ಜೂನ್ 8, 10 ಮತ್ತು 12ರಂದು ಸಂಜೆ 7ರಿಂದ 9 ಗಂಟೆಯವರೆಗೆ ತರಗತಿಗಳು ನಡೆಯಲಿವೆ. ಮೆಟಾ ಜಾಹೀರಾತು ವೇದಿಕೆಗಳಾದ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಹಾಗೂ ವಾಟ್ಸಾಪ್ ಬಿಸಿನೆಸ್‌ನಲ್ಲಿ ಜಾಹೀರಾತು ಕ್ಯಾಂಪೇನ್ ಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಕುರಿತು ಈ ತರಬೇತಿಯಲ್ಲಿ ತಿಳಿಸಿಕೊಡಲಾಗುತ್ತದೆ ಎಂದು ಸಂಸ್ಥೆ ಮಾಹಿತಿ ನೀಡಿದೆ. ಒಟ್ಟು 6 ಗಂಟೆಗಳ ಈ ಆನ್‌ಲೈನ್ ತರಬೇತಿ ಮೂರು ತರಗತಿಗಳ ಮೂಲಕ ನಡೆಯಲಿದ್ದು, ಕೋರ್ಸ್ ಶುಲ್ಕವನ್ನು 349 ರೂ.ಗಳಾಗಿ ನಿಗದಿಪಡಿಸಲಾಗಿದೆ. ತರಬೇತಿ ಪೂರ್ಣಗೊಳಿಸಿದವರಿಗೆ ಪ್ರಮಾಣಪತ್ರ ನೀಡಲಾಗುತ್ತಿದ್ದು, ತೃಪ್ತಿ ಇಲ್ಲದಿದ್ದರೆ ಹಣ ಮರುಪಾವತಿ ಸೌಲಭ್ಯವೂ ಇರುವುದಾಗಿ ಪೋಸ್ಟರ್‌ನಲ್ಲಿ ಉಲ್ಲೇಖಿಸಲಾಗಿದೆ. ದೇಶದ ಯಾವುದೇ ಭಾಗದಿಂದ ಆನ್‌ಲೈನ್ ಮೂಲಕ ತರಗತಿಗಳಿಗೆ ಹಾಜರಾಗುವ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 8296615560 ಹಾಗೂ 7975078498 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ.

ಬಿಜೆಪಿ ಪ್ರಕೋಷ್ಠಗಳಿಗೆ ಸಂಚಾಲಕರು, ಸಹ ಸಂಚಾಲಕರ ನಿಯುಕ್ತಿ

ಉಡುಪಿ: ಜಿಲ್ಲಾ ಬಿಜೆಪಿಯ ವಿವಿಧ ಪ್ರಕೋಷ್ಠಗಳ ಸಂಚಾಲಕರುಗಳು ಮತ್ತು ಸಹ ಸಂಚಾಲಕರುಗಳನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅನುಮೋದನೆ ಮೇರೆಗೆ ಜಿಲ್ಲಾ ಪ್ರಕೋಷ್ಠಗಳ ಸಂಯೋಜಕರುಗಳಾದ ದಿಲ್ಲೇಶ್ ಶೆಟ್ಟಿ ಬೆಳ್ಳಂಪಳ್ಳಿ ಮತ್ತು ವಿಜಯ ಕೊಡವೂರು ನಿಯುಕ್ತಿಗೊಳಿಸಿ ಪಟ್ಟಿ ಬಿಡುಗಡೆಗೊಳಿಸಿದ್ದಾರೆ. ಕಾನೂನು ಪ್ರಕೋಷ್ಠದ ಸಂಚಾಲಕರಾಗಿ ಸುದೀಪ್ ಶೆಟ್ಟಿ ನಿಟ್ಟೆ, ಸಹ ಸಂಚಾಲಕರಾಗಿ ಅಜಿತ್ ಜೋಗಿ ಯಡ್ತಾಡಿ, ಅಸಂಘಟಿತ ಕಾರ್ಮಿಕ ಪ್ರಕೋಷ್ಠದ ಸಂಚಾಲಕರಾಗಿ ಗೋಪಾಲ್ ಕೋಟ್ಯಾನ್ ತೆಂಕನಿಡಿಯೂರು, ಸಹ ಸಂಚಾಲಕರಾಗಿ ಕೃಷ್ಣ ಕುಲಾಲ್ ಪರ್ಕಾಡಿ, ನೇಕಾರರ ಪ್ರಕೋಷ್ಠದ ಸಂಚಾಲಕರಾಗಿ ಅವಿನಾಶ್ ಶೆಟ್ಟಿಗಾರ್ ಮಾರ್ಪಳ್ಳಿ, ಸಹ ಸಂಚಾಲಕರಾಗಿ ರಾಜಕೇಸರಿ ಶೆಟ್ಟಿಗಾರ್, ಹಾಲು ಉತ್ಪಾದಕರ ಪ್ರಕೋಷ್ಠದ ಸಂಚಾಲಕರಾಗಿ ಅಶೋಕ್ ರಾವ್ ಕಟಪಾಡಿ, ಸಹ ಸಂಚಾಲಕರಾಗಿ ರಂಜಿತಾ ಶೆಟ್ಟಿ ಕೆಮ್ತೂರು, ಕೈಗಾರಿಕಾ ಪ್ರಕೋಷ್ಠದ ಸಂಚಾಲಕರಾಗಿ ಸದಾನಂದ ಪ್ರಭು ಪೆರ್ಣಂಕಿಲ, ಸಹ ಸಂಚಾಲಕರಾಗಿ ರವಿ ಆರ್. ಆಚಾರ್ಯ, ಆರ್ಥಿಕ ಪ್ರಕೋಷ್ಠದ ಸಂಚಾಲಕರಾಗಿ ರಾಜ ಎಮ್. ಸಾಲ್ಯಾನ್, ಸಹ ಸಂಚಾಲಕರಾಗಿ ಸುಧೀರ್ ಭಟ್ ಇವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಕೇಂದ್ರ ಸರ್ಕಾರ ಆತ್ಮಾವಲೋಕ ಮಾಡಿಕೊಳ್ಳಲಿ: ಕಾಂಗ್ರೆಸ್

ಉಡುಪಿ: ದೇಶದಲ್ಲಿ ಬಡತನ ಹೆಚ್ಚಲು ಕಾರಣ ಮತ್ತು ಆಡಳಿತ ವೈಫಲ್ಯದ ಬಗ್ಗೆ ಕೇಂದ್ರ ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳುವುದು ಅಗತ್ಯ ಎಂದು ಉಡುಪಿ ಜಿಲ್ಲಾ ಕಾಂಗ್ರೆಸ್ ಟೀಕಿಸಿದೆ.
ಕಳೆದ ಹಲವಾರು ವರ್ಷಗಳಿಂದ ದೇಶದ ಸಂಪತ್ತಿನ ದೊಡ್ಡ ಭಾಗ ಕೆಲವೇ ಶ್ರೀಮಂತ ಕಾರ್ಪೊರೇಟ್ ಗಳು ಮತ್ತು ಆರ್ಥಿಕವಾಗಿ ಪ್ರಬಲ ವರ್ಗಗಳ ಕೈಯಲ್ಲಿ ಕೇಂದ್ರೀಕೃತವಾಗುವಲ್ಲಿ ಬಿಜೆಪಿಯ ಆಡಳಿತ ಪೂರಕವಾಗಿದೆ. ಈ ಹಿನ್ನಲೆಯಲ್ಲಿ ಕೋಟ್ಯಾಂತರ ಯುವಕರು ಉದ್ಯೋಗ ಕ್ಕಾಗಿ ಅಲೆದಾಡುತ್ತಿದ್ದಾರೆ. ಸಣ್ಣ ವ್ಯಾಪಾರಿಗಳು, ರೈತರು ಮತ್ತು ಕಾರ್ಮಿಕರು ದಿನದಿಂದ ದಿನಕೆ ಹೆಚ್ಚುತ್ತಿರುವ ಆರ್ಥಿಕ ಒತ್ತಡವನ್ನು ತರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿ ಯಲ್ಲಿ ಪ್ರಧಾನಿಗಳ ತನ ಬರುತ್ತದೆ ಹುಷಾರ್ ಎಂಬ ಎಚ್ಚರಿಕೆಯ ಹೇಳಿಕೆಯು ಜನರ ಆತಂಕವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಕಾಂಗ್ರೆಸ್ ತಿಳಿಸಿದೆ.
ಕೋಟ್ಯಾಂತರ ಯುವಕರು ಉದ್ಯೋಗ ಕ್ಕಾಗಿ ಅಲೆದಾಡುತ್ತಿದ್ದಾರೆ. ಸಣ್ಣ ವ್ಯಾಪಾರಿಗಳು, ರೈತರು ಮತ್ತು ಕಾರ್ಮಿಕರು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆರ್ಥಿಕ ಒತ್ತಡವನ್ನು ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿ ಯಲ್ಲಿ ಪ್ರಧಾನಿಗಳ ಬಡತನ ಬರುತ್ತದೆ ಎಂಬ ಎಚ್ಚರಿಕೆಯ ಹೇಳಿಕೆಯು ಜನರ ಆತಂಕವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಉಡುಪಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಭಾಸ್ಕರ ರಾವ್ ಕಿದಿಯೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಕುಂದಾಪುರ: ಮಾರ್ಗದಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ 33 ಕೆ.ವಿ ಕುಂದಾಪುರ-ತಲ್ಲೂರು-ಗಂಗೊಳ್ಳಿ ಮುಖ್ಯ ಮಾರ್ಗ ಹಾಗೂ ತಲ್ಲೂರು ಉಪಕೇಂದ್ರದಿಂದ ಹೊರಡುವ ಹೆಮ್ಮಾಡಿ, ಗುಲ್ವಾಡಿ, ವಂಡ್ಸೆ, ನೇರಳಕಟ್ಟೆ, ಬಾಂಡ್ಯ, ಕೆಂಚನೂರು, ದೇವಲ್ಕುಂದ ಮತ್ತು ಸಬ್ಲಾಡಿ, ಕೆ.ವಿ ಗಂಗೊಳ್ಳಿ ಉಪಕೇಂದ್ರದಿಂದ ಹೊರಡುವ ಮುಳ್ಳಿಕಟ್ಟೆ, ತ್ರಾಸಿ, ಗಂಗೊಳ್ಳಿ ಹಾಗೂ ನಾವುಂದ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಕೆ.ವಿ ಆಲೂರು, ಬಡಾಕೆರೆ ಫೀಡರುಗಳ ಹೇರಿಕುದ್ರು, ದೇವಲ್ಕುಂದ, ಕಟ್‌ಬೇಲ್ತೂರು, ಗುಲ್ವಾಡಿ, ಹೆಮ್ಮಾಡಿ, ತಲ್ಲೂರು, ಹಟ್ಟಿಯಂಗಡಿ, ಕನ್ಯಾನ, ಉಪ್ಪಿನಕುದ್ರು, ಕೆಂಚನೂರು, ನೇರಳಕಟ್ಟೆ, ಕೆರಾಡಿ ಚಿತ್ತೂರು, ವಂಡ್ಸೆ, ಬಾಂಡ್ಯ, ಮುಳ್ಳಿಕಟ್ಟೆ, ಗಂಗೊಳ್ಳಿ, ಹೊಸಾಡು, ಗುಜ್ಜಾಡಿ, ತ್ರಾಸಿ, ಆಲೂರು, ಬಡಾಕೆರೆ, ಸೇನಾಪುರ, ಹರ್ಕೂರು, ನಾಡಾ, ಹೆಮ್ಮುಂಜೆ ಮತ್ತು ನಾರ್ಕಳಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿಮೇ 26ರಂದು ಬೆಳಿಗ್ಗೆ 9.30ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ.

ರೂ. 394 ಕೋಟಿ ವೆಚ್ಚದ ಯೋಜನೆ | ಅರಣ್ಯ ಇಲಾಖೆ ಅನುಮತಿ ಸಹಿತ ಹಲವು ಕಾರಣಗಳಿಂದ ವಿಳಂಬ

ಕೊಲ್ಲೂರು-ರಾಣಿಬೆನ್ನೂರು ದ್ವಿಪಥ ರಸ್ತೆ ಕಾಮಗಾರಿ ಅರೆಬರೆ

ಬೈಂದೂರು: ಕೊಲ್ಲೂರು-ರಾಣಿಬೆನ್ನೂರು ದ್ವಿಪಥ ರಸ್ತೆ ಅರಣ್ಯ ಇಲಾಖೆ ಅನುಮತಿ ಸಹಿತ ಹಲವು ಕಾರಣಗಳಿಂದ ವಿಳಂಬವಾಗಿದ್ದು, ಬಹುತೇಕ ಕಡೆಗಳಲ್ಲಿ ಅರೆಬರೆ ಕಾಮಗಾರಿಯಿಂದಾಗಿ ಮಳೆಗಾಲದಲ್ಲಿ ಆತಂಕದ ಪರಿಸ್ಥಿತಿ ಎದುರಾಗಲಿದೆ.

ದೊರೆಯದ ಪೂರ್ಣ ಅನುಮತಿ

ಕೊಲ್ಲೂರಿನಿಂದ ಬೈಂದೂರಿನವರೆಗೆ ಒಟ್ಟು 38 ಕಿ.ಮೀ ವ್ಯಾಪ್ತಿ ಹೊಂದಿದ್ದು, ಮೊದಲ ಹಂತ ಬೈಂದೂರಿನಿಂದ ನಾಗೋಡಿಯವರೆಗೆ ರಸ್ತೆ ಕಾಮಗಾರಿ ನಡೆಯಲಿದೆ. ಒಟ್ಟು ರೂ.394 ಕೋಟಿ ಅನುದಾನ ಮೀಸಲಿಡಲಾಗಿದೆ. ಕೊಲ್ಲೂರಿನವರೆಗೆ ದ್ವಿಪಥ ರಸ್ತೆ ನಿರ್ಮಾಣವಾದರೆ ಘಾಟಿಗಳಲ್ಲಿ ಇರುವ ರಸ್ತೆಯನ್ನು ದುರಸ್ತಿ ಮಾಡಲಾಗುವುದು. ಕೊಲ್ಲೂರು-ಬೈಂದೂರು ಮಾರ್ಗದಲ್ಲಿ ಹತ್ತಾರು ತೊರೆಗಳಿಗೆ ಕಲ್ವರ್ಟ್ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಈಗಿರುವ ಮೂಲ ರಸ್ತೆಯನ್ನು ಬಗೆದು ಬದಲಿ ಮಾರ್ಗ ಮಾಡಿಕೊಡಲಾಗಿದೆ. ಆದರೆ ಮುಂಗಾರು ಆರಂಭವಾಗುವ ಮೊದಲು ಪೂರ್ಣಗೊಳ್ಳದಿದ್ದರೆ ಸಹ್ಯಾದ್ರಿ ಪರ್ವತದ ನೀರಿನ



ಒತ್ತಡ ತಡೆಯುವುದು ಕಷ್ಟ. ನೀರಿನ ಹರಿವು ಹೆಚ್ಚಾಗಿ ಅಪಾರ ಪ್ರಮಾಣದ ಕೃಷಿಭೂಮಿ, ಮನೆಗಳಿಗೂ ಕೂಡ ಹಾನಿಯಾಗುವ ಸಾಧ್ಯತೆಯಿದೆ. ಗುತ್ತಿಗೆದಾರರು ಮಂದಗತಿಯಲ್ಲಿ ಕಾಮಗಾರಿ ನಡೆಸುತ್ತಿದ್ದು, ಸಂಸದರು, ಶಾಸಕರು ಬಹುತೇಕ ಸಭೆಗಳಲ್ಲಿ ಈ ಸಮಸ್ಯೆ ಉಲ್ಲೇಖಿಸಿದ್ದರೂ ಕೂಡ ಅಧಿಕಾರಿಗಳು ಮಾತ್ರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿಲ್ಲ, ಹೀಗಾಗಿ ಈ ಬಾರಿಯ ಮಳೆಗಾಲ ಕೊಲ್ಲೂರು ಮಾರ್ಗದಲ್ಲಿ ಅವಾಂತರ ಸೃಷ್ಟಿಸುವ ಮುನ್ಸೂಚನೆ ಆರಂಭದಲ್ಲೇ ಗೋಚರಿಸುತ್ತಿದೆ. ಈ ವರೆಗೆ ಒಟ್ಟು 44 ಸಣ್ಣ ಕಲ್ವರ್ಟ್‌ಗಳಲ್ಲಿ 12 ದೊಡ್ಡ ಕಲ್ವರ್ಟ್ ಹಾಗೂ ಒಂದು ಸೇತುವೆ ನಿರ್ಮಾಣ ಹಂತದಲ್ಲಿದ್ದು, ಅವುಗಳಲ್ಲಿ 24 ಕಲ್ವರ್ಟ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಅರಣ್ಯ ಇಲಾಖೆ ಮೊದಲ ಹಂತದ ಅನುಮತಿ ನೀಡಿದ್ದು, ಎರಡನೇ ಹಂತದಲ್ಲಿ ಸರ್ಕಾರಕ್ಕೆ ಹಣ ಪಾವತಿಸಬೇಕು. ಆದರೆ ಅರಣ್ಯ ಇಲಾಖೆ ಮೊದಲ ಹಂತದ ಅನುಮತಿಯಲ್ಲಿ ಕೆಲವು ಸರ್ವೆ ನಂಬರ್‌ಗಳು ದಾಖಲಾಗಿಲ್ಲ ಎಂದು ಕಡತ ವಿಲೇವಾರಿ ಮಾಡದ ಕಾರಣ ಕೊಲ್ಲೂರು ರಸ್ತೆ ಕಾಮಗಾರಿ ವಿಳಂಬವಾಗುತ್ತಿದೆ. ಈ ವ್ಯಾಪ್ತಿ ಕಂದಾಯ ಇಲಾಖೆ ಸಂಬಂಧಪಟ್ಟಿದ್ದು ಎನ್ನುವುದು ಹೆದ್ದಾರಿ ಇಲಾಖೆ ವಾದ.

> **ಸಂಚಾರಕ್ಕೆ ಸಮಸ್ಯೆಯಾಗದು**
>
> ಕೊಲ್ಲೂರು ರಸ್ತೆ ಮೇ ಅಂತ್ಯದವರಗೆ ಎಷ್ಟು ಕಾಮಗಾರಿ ನಡೆದಿರುತ್ತದೆ ಅಷ್ಟಕ್ಕೆ ಕಾಮಗಾರಿ ಸ್ಥಗಿತಗೊಳಿಸಲಾಗುವುದು. ಕೊಲ್ಲೂರು ರಸ್ತೆ ಹೊರಭಾಗದ ಕಾಮಗಾರಿ ಮುಂದುವರಿಯುತ್ತದೆ. ಇದರಿಂದ ಸಂಚಾರಕ್ಕೆ ಸಮಸ್ಯೆಯಾಗದು. ಮಳೆಗಾಲದಲ್ಲಿ ರಸ್ತೆ ಕಾಮಗಾರಿಯಿಂದ ಯಾವುದೆ ರೀತಿ ಸಮಸ್ಯೆಯಾಗದು. ಯಂತ್ರಗಳು ಹಾಗೂ ಸಿಬ್ಬಂದಿ ತಂಡ ಸ್ಥಳದಲ್ಲಿರುತ್ತದೆ ಇದರಿಂದಾಗಿ ಯಾವುದೆ ಆತಂಕಪಡುವ ಅವಶ್ಯಕತೆಯಿಲ್ಲ.
>
> • ಶಶಿಧರ, ಇಂಜಿನಿಯರ್
> ಎನ್‌ಎಚ್‌ಎಐ, ಶೃಂಗೇರಿ ವಿಭಾಗ

> **ಅಧಿಕಾರಿಗಳು ಗಮನಹರಿಸಲಿ**
>
> ಎನ್‌ಎಚ್‌766 ಕಾಮಗಾರಿ ಅವ್ಯವಸ್ಥೆಯ ಗೂಡಾಗಿ ಮಾರ್ಪಟ್ಟಿದೆ. ಸೇತುವೆಯ ಪಕ್ಕದಲ್ಲಿ ತತ್ಕಾಲಕ್ಕೆ ನಿರ್ಮಾಣ ಮಾಡಿರುವ ಮಣ್ಣಿನ ರಸ್ತೆಯಲ್ಲಿ ಸಂಚರಿಸುವುದೇ ಪ್ರಯಾಸಕರ. ಇನ್ನು ಈ ತಾತ್ಕಾಲಿಕ ರಸ್ತೆಯ ಕೆಳಗಡೆ ನೀರು ಹಾದುಹೋಗಲು ಪೈಪುಗಳನ್ನು ಅಳವಡಿಸಿಲ್ಲ. ಈ ಮಳೆಗಾಲದಲ್ಲಿ ಈ ರಸ್ತೆಯೂ ಕೊಚ್ಚಿಕೊಂಡು ಹೋಗುವುದಂತೂ ಗ್ಯಾರಂಟಿ. ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಇತ್ತ ಕಡೆ ಗಮನಕೊಟ್ಟರೆ ಒಳ್ಳೆಯದು.
>
> • ಯಳಜಿತ್ ಮಂಗೇಶ ಶ್ಯಾನುಭಾಗ್,
> ವಕೀಲರು, ಬೈಂದೂರು

ಪರಿಹಾರ ಪಾವತಿಯಾಗಿಲ್ಲ

ಕೊಲ್ಲೂರು ರಸ್ತೆ ಜಾಗ ಕಳೆದುಕೊಂಡವರಿಗೆ ಪೂರ್ಣ ಪ್ರಮಾಣದ ಪರಿಹಾರ ದೊರೆತಿಲ್ಲ, ಈ ಬಗ್ಗೆ ಬೈಂದೂರಿನಲ್ಲಿ ಅಧಿಕಾರಿಗಳ ವಿಶೇಷ ಸಭೆ ನಡೆಸಿದ್ದು ಇದುವರಗೆ ಪರಿಹಾರ ಮಾತ್ರ ದೊರೆತಿಲ್ಲ, ಒಟ್ಟಾರೆಯಾಗಿ ಮಳೆಗಾಲ ಆರಂಭವಾಗುತ್ತಿದ್ದು, ಅತಿವೃಷ್ಟಿ ಸಮಸ್ಯೆ, ನೆರೆಹಾವಳಿ ನಡುವೆ ಪ್ರತಿದಿನ ಸಾವಿರಾರು ಜನರು ಪ್ರಯಾಣಿಸುವ ಈ ರಸ್ತೆ ಕಾಮಗಾರಿ ಕೂಡ ಜಿಲ್ಲಾಡಳಿತ ತಲೆನೋವಾಗಿ ಪರಿಣಮಿಸಿದೆ. ಹೀಗಾಗಿ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕೆನ್ನುವುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಗುಡ್ಡೆಯಂಗಡಿ | ಎಸ್‌ಕೆಎಫ್ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ ಉದ್ಘಾಟನೆ

ತರಬೇತಿ ಕೇಂದ್ರ ಸ್ಥಾಪನೆ ಶ್ಲಾಘನೀಯ: ಡಾ.ಆಳ್ವ

ಕುಂದಾಪುರ: ಏನೇ ಮಾಡುವಾಗ ವೃತ್ತಿಯ ಜೊತೆಗೆ ಸಮಾಜದ ಪರಿಕಲ್ಪನೆ ಇರಬೇಕು. ಬಂದ ಆದಾಯದಲ್ಲಿ ಬಹುಪಾಲನ್ನು ಸಮಾಜಕ್ಕೆ ನೀಡಬೇಕು. ಈಗಿನ ಕಾಲಕ್ಕೆ ಕೌಶಲ್ಯ ಆಧಾರಿತ ವ್ಯಕ್ತಿಗಳ ಅವಶ್ಯಕತೆ ಇದ್ದು ಇವರಿಗೆ ಜಾಗತಿಕವಾಗಿ ಬೇಡಿಕೆಯೂ ಇದೆ. ಇದನ್ನು ಗಮನಿಸಿಕೊಂಡು ಸಮಾಜದ ಪರಿಕಲ್ಪನೆಯಲ್ಲಿ, ಹುಟ್ಟೂರಿನ ಋಣ ತೀರಿಸಬೇಕೆಂಬ ಉದ್ದೇಶದಿಂದ ಮಕ್ಕಳಿಗೆ ಕೌಶಲ್ಯ ಆಧಾರಿತ ತರಬೇತಿಯನ್ನು ನೀಡಿ ಉದ್ಯೋಗ ಕಲ್ಪಿಸಬೇಕೆಂಬ ಡಾ.ರಾಮಕೃಷ್ಣ ಆಚಾರ್ ಅವರ ಉದ್ದೇಶ ಶ್ಲಾಘನೀಯ ಅಭಿನಂದನೀಯ ಎಂದು ಮೂಡಬಿದಿರೆ ಆಳ್ವಾಸ್ ಎಜುಕೇಶನ್ ಫೌಂಡೇಶನ್‌ನ ಅಧ್ಯಕ್ಷ ಡಾ.ಎಂ.ಮೋಹನ ಆಳ್ವಾ ಹೇಳಿದರು.
ಕುಂದಾಪುರ ತಾಲೂಕಿನ ಯಡಾಡಿ ಮತ್ಯಾಡಿಯ ಗುಡ್ಡೆ ಅಂಗಡಿಯಲ್ಲಿ ಡಾ. ಜಿ. ರಾಮಕೃಷ್ಣ ಆಚಾರ್ ಚಾರಿಟೇಬಲ್ ಟ್ರಸ್ಟ್ ಹಾಗೂ ಎಸ್‌ಕೆಎಫ್ ಎಲಿಕ್ಸರ್ ಇಂಡಿಯಾ ಪ್ರೈ. ಲಿಮಿಟೆಡ್, ಮೂಡುಬಿದಿರೆ ಇದರ ಎಸ್‌ಕೆಎಫ್ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್‌ನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.
ರಾಮಕೃಷ್ಣ ಆಚಾರ್ ಅವರು



ಹೋರಾಟ ಮನೋಭಾವದವರು, ಸೃಜನಶೀಲನೆ ಹೊಂದಿದವರು. ಇವರು ತನ್ನ ವಹಿವಾಟನ್ನು ಕೇವಲ ದ.ಕ.ಕ್ಕೆ ಸೀಮಿತವಾಗಿರಿಸದೆ, ರಾಜ್ಯ ಮತ್ತು ದೇಶಕ್ಕೆ ಅಲ್ಲದೆ ವಿಸ್ತರಿಸಿ 21 ಪರದೇಶಗಳಿಗೆ ತನ್ನ ವಹಿವಾಟನ್ನು ಮಾಡಿಕೊಂಡು, ಬರಿಗೈಯಲ್ಲಿ ಬಂದಂತಹ ವ್ಯಕ್ತಿ ಇಂದು ವಾರ್ಷಿಕವಾಗಿ 400 ಕೋಟಿ ವಹಿವಾಟನ್ನು ಮಾಡುವುದು ಸಂತೋಷವನ್ನುಂಟು ಮಾಡಿದೆ. ಈ ಮಣ್ಣನ್ನು ಹಾಗೂ ಪರಿಸರವನ್ನು ನಂಬಿ ಬಂದರೆ ಏನನ್ನೂ ಮಾಡಬಹುದು ಎಂದು ತೋರಿಸಿಕೊಟ್ಟ ವ್ಯಕ್ತಿ ರಾಮಕೃಷ್ಣ ಆಚಾರ್ ಎಂದರು.
ಅಧ್ಯಕ್ಷತೆ ವಹಿಸಿದ್ದ ಡಾ. ಜಿ. ರಾಮಕೃಷ್ಣ ಆಚಾರ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ, ಛೇರ್ಮನ್ ಡಾ. ಜಿ. ರಾಮಕೃಷ್ಣ ಆಚಾರ್ ಮಾತನಾಡಿ, ನಾವು ನೀಡುವ ತರಬೇತಿ ಸಂಪೂರ್ಣ ಕೌಶಲಾಧಾರಿತವಾಗಿದೆ. ಇಂಟರ್ನ್ ಶಿಪ್ ಮೂಲಕ ವಿದ್ಯಾರ್ಥಿಗಳಿಗೆ ನೈಜ ಕೈಗಾರಿಕಾ ಅನುಭವ ಸಿಗುತ್ತದೆ ಎಂದರು.
ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಶುಭ ಹಾರೈಸಿದರು. ಉದ್ಯಮಿ ಎಂ. ದಿನೇಶ್ ಹೆಗ್ಡೆ ಮೊಳಹಳ್ಳಿ, ಕಾರ್ಕಳ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ ಛೇರ್ಮನ್ ಡಾ. ಸುಧಾಕರ ಶೆಟ್ಟಿ, ಮಂಗಳೂರಿನ ಲೆಕ್ಕಪರಿಶೋಧಕ್ ಸಿಎ ಎಸ್. ಎಸ್. ನಾಯಕ್, ಪ್ರಥಮ ದರ್ಜೆ ಗುತ್ತಿಗೆದಾರ ಬಿ. ಅರುಣ್ ಕುಮಾರ್ ಹೆಗ್ಡೆ ಮೊಳಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ಸುಜ್ಞಾನ ಎಜುಕೇಶನ್ ಟ್ರಸ್ಟ್ ಛೇರ್ಮನ್ ಡಾ. ರಮೇಶ್ ಶೆಟ್ಟಿ ತಾಂತ್ರಿಕ ಸಲಹೆಗಾರ ಎ. ಬಾಲಕೃಷ್ಣ ಇದ್ದರು. ಪ್ರೊ. ಎಂ. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿ ಪ್ರಾಸ್ತವಿಕ ಮಾತುಗಳನ್ನಾಡಿದರು. ದಾಮೋದರ ಶರ್ಮ ಕಾರ್ಯಕ್ರಮ ನಿರ್ವಹಿಸಿದರು.

ಬೈಂದೂರು ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕೋತ್ಸವ, ಪ್ರತಿಭಾ ಪ್ರದರ್ಶನ

ಸಭಾಂಗಣ ಉದ್ಘಾಟನೆ, ಸಾಧಕರು, ದಾನಿಗಳಿಗೆ ಸನ್ಮಾನ

ಬೈಂದೂರು: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಹಾಗೂ ಸಾಂಸ್ಕೃತಿಕ ವೇದಿಕೆಗಳು ಅತ್ಯಂತ ಅಗತ್ಯವಾಗಿದೆ. ಕಾಲೇಜು ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಳ್ಳಲು ಇಂತಹ ಕಾರ್ಯಕ್ರಮಗಳು ಪ್ರೇರಣೆಯಾಗುತ್ತವೆ. ನೂತನ ಸಭಾಂಗಣವು ವಿದ್ಯಾರ್ಥಿಗಳ ಭವಿಷ್ಯದಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಹತ್ವದ ಕೇಂದ್ರವಾಗಲಿದೆಎಂದುಶ್ರೀಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಬಾಬು ಶೆಟ್ಟಿ ಹೇಳಿದರು.
ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2025-26ನೇ ಸಾಲಿನ ವಾರ್ಷಿಕೋತ್ಸವ ಸಮಾರಂಭ ಹಾಗೂ ಪ್ರತಿಭಾ ಪ್ರದರ್ಶನ ಹಾಗೂ ಉದ್ಘಾಟಿಸಿ ಮಾತನಾಡಿದರು, ಡೆಸಾಲ್ಟ್ ಸಿಸ್ಟಮ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಿಇಒ ವಿಶ್ವನಾಥ್ ಶೇಟ್ ನೂತನ ಸಭಾಂಗಣವನ್ನು ಉದ್ಘಾಟಿಸಿದರು.
ಶಾಸಕ ಗುರುರಾಜ್ ಗಂಟಿಹೊಳೆ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ದಾನಿಗಳು, ಸಾಧಕರಿಗೆ ಸನ್ಮಾನ

ಕಾಲೇಜು ಅಭಿವೃದ್ಧಿಗೆ ಸಹಕರಿಸಿದ ದಾನಿಗಳಿಗೆ ಮತ್ತು ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು



> **ಭವಿಷ್ಯದಲ್ಲಿ ಇನ್ನಷ್ಟು ಸಾಧನೆ**
>
> ನಮ್ಮ ಸಂಸ್ಥೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಾ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ. ಅತ್ಯುತ್ತಮ ಉಪನ್ಯಾಸಕರ ಮಾರ್ಗದರ್ಶನದ ಮೂಲಕ ವಿದ್ಯಾರ್ಥಿಗಳು ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡುತ್ತಿದ್ದಾರೆ. ಕಾಲೇಜು ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಬೆಳವಣಿಗೆ ಕೇಂದ್ರವಾಗಿದ್ದು, ಮುಂದೆ ಹೆಚ್ಚಿನ ಸಾಧನೆ ಮಾಡುವ ವಿಶ್ವಾಸವಿದೆ.
>
> • ನಾಗರಾಜ ಶೆಟ್ಟಿ
> ಪ್ರಾಂಶುಪಾಲರು ಸಪದ ಕಾಲೇಜು ಬೈಂದೂರು

ಉದ್ಯಮಿಗಳಾದ ನಾಕಟ್ಟೆ ಜಗನ್ನಾಥ ಶೆಟ್ಟಿ ಜಯಾನಂದ ಹೋಬಳಿದಾರ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಗಿರೀಶ ಬೈಂದೂರು, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಎಸ್. ರಾಜು ಪೂಜಾರಿ, ಸ್ಥಳೀಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವೆಂಕಟರಮಣ ಬಿ., ಪ್ರಕಾಶ್ಚಂದ್ರ ಶೆಟ್ಟಿ ಕಾಲ್ತೋಡು, ವಸಂತ ಪೂಜಾರಿ ಮೊದಲಾದವರು ಪಾಲ್ಗೊಂಡಿದ್ದರು.
ಸಂಸ್ಥೆಯ ಪ್ರಾಂಶುಪಾಲ ನಾಗರಾಜ ಶೆಟ್ಟಿ ಪ್ರಾಸ್ತಾವಿಸಿದರು. ಉಪನ್ಯಾಸಕರಾದ ಮಮತಾಸ್ವಾಗತಿಸಿದರು.ಶರ್ಮಿಳಾಹಾಗೂ ಸುಚಿತ್ರಾ ಕಾರ್ಯಕ್ರಮ ನಿರೂಪಿಸಿದರು, ಡಾ ಶಿವಕುಮಾರ್ ಪಿ. ವಿ. ವಂದಿಸಿದರು. ನಂತರ ವಿದ್ಯಾರ್ಥಿಗಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ಜರುಗಿತು.

ಬ್ರಹ್ಮಾವರ ರುಡ್‌ಸೆಟ್‌ನಲ್ಲಿ ಶಿಬಿರಾರ್ಥಿಗಳಿಗೆ ಕಾನೂನು ಜಾಗೃತಿ



ಬ್ರಹ್ಮಾವರ: ಇಂದಿನ ಸಮಾಜದಲ್ಲಿ ನಾವು ಸ್ವಾತಂತ್ರವಾಗಿ ಬದುಕಬೇಕೆಂದರೆ ಕಾನೂನು ಸುವ್ಯವಸ್ಥೆಗಳ ಕುರಿತು ಮಾಹಿತಿ ಎಲ್ಲರಿಗೂ ಅಗತ್ಯ ಎಂದು ಬ್ರಹ್ಮಾವರ ಪೊಲೀಸ್ ಠಾಣೆ ಉಪನಿರೀಕ್ಷಕಿ ಮುಕ್ತಾ ಬಾಯಿ ಹೇಳಿದ್ದಾರೆ.
ಬ್ರಹ್ಮಾವರ ರುಡ್‌ಸೆಟ್‌ನಲ್ಲಿ ಬ್ಯೂಟಿಪಾರ್ಲರ್ ಮತ್ತು ಕಂಪ್ಯೂಟರ್ ಡಿಟಿಪಿ ಶಿಬಿರಾರ್ಥಿಗಳಿಗೆ ಆಯೋಜಿಸಲಾದ ಕಾನೂನು ಅರಿವು ಕಾರ್ಯ ಕ್ರಮದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡುತಿದ್ದರು.
ಸೈಬರ್ ಕ್ರೈಮ್ ಬಗ್ಗೆ ವಾಟ್ಸಪ್ ಗ್ರೂಪ್ ಗಳಿಗೆ ಪರಿಚಯಲ್ಲದವರಿಂದ ಗ್ರೂಪ್‌ಗೆ ಸೇರಿಸಿದರೆ ಗ್ರೂಪ್‌ನಿಂದ ಹೊರ ಬಂದು ಸುರಕ್ಷಿತವಾಗಿರಬೇಕು ಹಾಗೂ ಪೋಕ್ಸೋ ಕಾಯ್ದೆಯ ಬಗ್ಗೆ ಅರಿತುಕೊಳ್ಳಬೇಕು. ಸ್ನಾಪ್ ಚಾಟ್ ಗಳನ್ನು ತುಂಬಾ ಜಾಗರೂಕತೆಯಿಂದ ಬಳಸಿ ಇದರಲ್ಲಿ ತೊಂದರೆ ಆಗುವ ಸಾಧ್ಯತೆ ಜಾಸ್ತಿ ಇರುತ್ತದೆ ಎಂದು ಅವರು ತಿಳಿಸಿದರು.
ಬ್ರಹ್ಮಾವರ ಠಾಣೆಯ ಪ್ರೊಬೆಷನರಿ ಉಪನಿರೀಕ್ಷಕಿ ಆಶ್ರೀತಾ ಸೈಬರ್ ಕ್ರೈಮ್ ಬಗ್ಗೆ ಮಾತನಾಡಿ, ಸೈಬರ್ ಕ್ರೈಮ್, ವಂಚನೆ ನಡೆದಾಗ ಸಹಾಯವಾಣಿ 1930 ದೂರು ದಾಖಲಿಸಬೇಕು. ಇತ್ತೀಚೆಗೆ ಅತೀ ಹೆಚ್ಚು ಸುದ್ದಿಯಾಗುತ್ತಿರುವ ಎಪಿಕೆ ಫೈಲ್‌ನ್ನು ಕ್ಲಿಕ್ ಮಾಡದೇ ಅದರ ಬಗ್ಗೆ ಜಾಗರೂಕರಾಗಬೇಕು ಎಂದು ಎಚ್ಚರಿಸಿದರು. ಬ್ರಹ್ಮಾವರ ಠಾಣೆಯ ಸಹಾಯಕ ಪೊಲೀಸ್ ಉಪನಿರೀಕ್ಷಕ ವಿಟ್ಟಲ್, ರಸ್ತೆ ಸುರಕ್ಷತೆಯ ನಿಯಮಗಳ ಬಗ್ಗೆ ಮಾಹಿತಿ ನೀಡಿದರು. ಅಧ್ಯಕ್ಷತೆಯನ್ನು ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ಡಾ.ಬೊಮ್ಮಯ್ಯ ಎಂ. ವಹಿಸಿದ್ದರು. ರುಡ್ ಸೆಟ್ ಉಪನ್ಯಾಸಕಿ ಚೈತ್ರಾ ಕೆ. ನಿರೂಪಿಸಿದರು. ಕಚೇರಿ ಸಹಾಯಕ ಶಾಂತಪ್ಪ ಸ್ವಾಗತಿಸಿದರು.

ಕುಂದಾಪುರ ರೋಜರಿ ಚರ್ಚ್‌ಗೆ ಧರ್ಮಾಧ್ಯಕ್ಷ ಡಾ. ಕ್ಲಿಫರ್ಡ್ ಭೇಟಿ



ಕುಂದಾಪುರ: ಚಾರಿತ್ರಿಕ ಪ್ರಸಿದ್ಧಿಯ ಕುಂದಾಪುರ ರೋಜರಿ ಚರ್ಚಿಗೆ ಧರ್ಮಾಧ್ಯಕ್ಷ ಡಾ. ಲೆಸ್ಲಿ ಕ್ಲಿಫರ್ಡ್ ಡಿಸೋಜ ಅವರು ಭಾನುವಾರ ಅಧಿಕೃತ ಭೇಟಿ ನೀಡಿದರು.
ಚರ್ಚಿನ ಪರವಾಗಿ ಅವರನ್ನು ಗೌರವಪೂರ್ವಕವಾಗಿ ಸ್ವಾಗತಿಸಲಾಯಿತು. ಅವರು ವಿವಿಧ ಪ್ರಾರ್ಥನೆಗಳನ್ನು ನಡೆಸಿ, ಪಾಲನ ಮಂಡಳಿ ಸದಸ್ಯರಿಗೆ ಪ್ರಮಾಣ ವಚನ ಭೋದಿಸಿದರು.
ನಂತರ ಸಮಾಧಿ ಭೂಮಿಯನ್ನು ಆಶೀರ್ವದಿಸಿದರು. ಪಾಲನ ಮಂಡಳಿಯವರ ಜೊತೆ ಮತ್ತು ವಿವಿಧ ಸಂಘಟನೆಗಳ ಜೊತೆ ಮಾತುಕತೆ, ಸಮಾಲೋಚನ ನಡೆಸಿದರು.
38 ಯುವಕ ಯುವತಿಯರಿಗೆ ದೃಢೀಕರಣ ಸಂಸ್ಕಾರ ನೆರವೇರಿಸಿ ಸಂದೇಶ ನೀಡಿದ ಅವರು, ಚರ್ಚ್ ವತಿಯಿಂದ ಬರ್ನಾಡ್ ಡಿಕೋಸ್ತಾ ಸಂಪಾದಕತ್ವದಲ್ಲಿ ಪ್ರಕಟವಾಗುವ ರೋಜಾರಿಯುಮ್ ಸಂಕಲನವನ್ನು ಬಿಡುಗಡೆಗೊಳಿಸಿದರು. ಚರ್ಚ್ ವತಿಯಿಂದ ಅನಾರೋಗ್ಯಸ್ಥರ ಹೊಂದಿರುವ ಎರಡು ಮನೆಗಳಿಗೆ ಭೇಟಿ ಮಾಡಿದರು.
ಕುಂದಾಪುರಚರ್ಚಿನಪ್ರಧಾನಧರ್ಮಗುರು ಪೌಲ್ ರೇಗೊ, ಪ್ರಾಂಶುಪಾಲರಾದ ರೊಲ್ವಿನ್ ಫೆರ್ನಾಂಡಿಸ್, ಬಿಷಪರ ಕಾರ್ಯದರ್ಶಿ ರಿತೇಶ್ ಕಾಸ್ಟೆಲೀನೊ ಬಲಿದಾನದಲ್ಲಿ ಭಾಗವಹಿಸಿದ್ದರು. ಪಾಲನ ಮಂಡಳಿ ಉಪಾಧ್ಯಕ್ಷೆ ವಾಲ್ಟರ್ ಡಿಸೋಜಾ, ಕಾರ್ಯದರ್ಶಿ ಡೋಮಿನಿಕ್ ಬ್ರಗಾಂಜಾ, ಆಯೋಗಗಳ ಸಂಯೋಜಕಿ ಶೋಭ ವಾಜ್, ಧರ್ಮ ಭಗಿನಿಯರು, ಪಾಲನ ಮಂಡಳಿ ಸದಸ್ಯರು, ಆರ್ಥಿಕ ಮಂಡಳಿ ಸದಸ್ಯರು ಮತ್ತು ಭಕ್ತಾಧಿಗಳು ಭಾಗಿಯಾದರು.



ವರುಣರಾಯನ ಅಬ್ಬರದ ನಡುವೆ ಕೋಟ ಹೋಬಳಿಯ ಕೋಟತಟ್ಟು ಭಾಗದಲ್ಲಿ ಭತ್ತದ ಬಿತ್ತನೆ ಕಾರ್ಯಕ್ಕೆ ರೈತ ಸಮುದಾಯ ಅಣಿಯಾಗಿದ್ದು ಎಂಓ4 ಸೇರಿದಂತೆ ಅನೇಕ ವಿವಿಧ ತಳಿಗಳನ್ನು ವಿವಿಧ ಭಾಗಗಳಲ್ಲಿ ಪ್ರಯೋಗಿಸಲಾಗುತ್ತಿದೆ.



ಉಡುಪಿ ಪರ್ಯಾಯ ಪೀಠಾಧೀಶ ಶ್ರೀ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯದ ಸಂದರ್ಭದಲ್ಲಿ ಸಚಿವ ಈಶ್ವರ್ ಖಂಡ್ರೆ ಇವರು ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಶೀರೂರು ಮಠದ ದಿವಾನ ಉದಯಕುಮಾರ್ ಸರಳತ್ತಾಯ ಇವರು ಶ್ರಿಕೃಷ್ಣ ಮಠದ ವತಿಯಿಂದ ಗೌರವಿಸಿದರು. ಈ ಸಂದರ್ಭದಲ್ಲಿ ಶೀರೂರು ಮಠದ ಪಾರುಪತ್ಯೆಗಾರ ಶ್ರೀಶ ಭಟ್ ಕಡೇಕಾರು ಹಾಗೂ ಉದ್ಯಮಿ ಪ್ರಸಾದ್ ರಾಜ್ ಕಾಂಚನ್ ಹಾಗೂ ಕಾಂಗ್ರೆಸ್ ಮುಖಂಡರು ಉಡುಪಿ ವಿಧಾನಸಭಾ ಕ್ಷೇತ್ರ ಉಪಸ್ಥಿತರಿದ್ದರು.

ಪಡುವರಿ | ವಿದ್ಯಾಪೋಷಕ್‌ನ ಪ್ರತಿಭಾವಂತ ವಿದ್ಯಾರ್ಥಿನಿ ಮಾನ್ಯಳಿಗೆ ಆಸರೆಯಾದ ಉಡುಪಿಯ ಕಲಾ ಸಂಘಟನೆ

ಯಕ್ಷಗಾನ ಕಲಾರಂಗದಿಂದ ಪುನರ್ ನವೀಕರಣಗೊಂಡ ಮನೆಯ ಹಸ್ತಾಂತರ

ಬೈಂದೂರು: ಸಮಾಜದಲ್ಲಿ ಉಳ್ಳವರು ಇಲ್ಲದವರಿಗೆ ಸಹಾಯ ಮಾಡಬೇಕಾದುದು ಕರ್ತವ್ಯ. ಆಗ ಸ್ವಸ್ಥ ಸಮಾಜ ನಿರ್ಮಾಣವಾಗುತ್ತದೆ. ನನಗೆ ಉಪಕಾರ ಮಾಡಿದ್ದೇನೆಂಬ ಭ್ರಮೆಯಿಲ್ಲ, ಯಕ್ಷಗಾನ ಕಲಾರಂಗ ಮಾಡುವ ಒಳ್ಳೆಯ ಕೆಲಸಕ್ಕೆ ಸಹಕರಿಸಿ ನನ್ನ ಕರ್ತವ್ಯ ನಿರ್ವಹಿಸಿದ್ದೇನೆ. ಮಾನ್ಯ ದೊಡ್ಡ ಗುರಿ ಇಟ್ಟುಕೊಂಡಿದ್ದಾಳೆ. ಅವಳ ಭವಿಷ್ಯದ ಕನಸು ನನಸಾಗಲಿ ಎಂದು ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಜಿಎಂ. ಕಾರ್ಕಳ ಕಲ್ಮಠದ ದೇವಾನಂದ ಉಪಾಧ್ಯಾಯ ಹೇಳಿದರು.
ಬೈಂದೂರು ತಾಲೂಕಿನ ಪಡುವರಿಯಲ್ಲಿ, ತನ್ನ ಮಾತಾಪಿತೃರಾದಸತ್ಯಭಾಮಮತ್ತುವೆಂಕಟನರಸಿಂಹ ಉಪಾಧ್ಯಾಯ ಇವರ ಸ್ಮರಣೆಯಲ್ಲಿ ಯಕ್ಷಗಾನ ಕಲಾರಂಗ ವಿದ್ಯಾಪೋಷಕ್‌ ದ್ವಿತೀಯ ಪಿಯುಸಿ



ವಿದ್ಯಾರ್ಥಿನಿ ಮಾನ್ಯ ಎಂ. (ಎಸ್ಸೆಸ್ಸೆಲ್ಸಿ 99.36%, ಪದ್ಮಾವತಿ ಮತ್ತು ದಿ. ಮಹಾಬಲ ಮರಕಾಲ ಅವರ ಪುತ್ರಿ) ಇವರಿಗೆ ಪತ್ನಿ ನಮಿತಾ ಉಪಾಧ್ಯಾಯರ ಪ್ರಾಯೋಜಕತ್ವದಲ್ಲಿ ಪುನರ್ನವೀಕರಣಗೊಂಡ ಮನೆಯನ್ನು ಹಸ್ತಾಂತರಿಸಿ ಮಾತನಾಡಿದರು.
ಯಕ್ಷಗಾನ ಕಲಾರಂಗವು ಪಾರದರ್ಶಕ ವ್ಯವಹಾರ ಮತ್ತು ಕೆಲಸದ ಬದ್ಧತೆಯಿಂದ ಸಮಾಜದಲ್ಲಿ ಎಲ್ಲರ ವಿಶ್ವಾಸಕ್ಕೆ ಪಾತ್ರವಾಗಿದೆ. ಸಂಸ್ಥೆಯ ನಾಯಕತ್ವ ಮತ್ತು ಕಾರ್ಯಕರ್ತರ ಅರ್ಪಣಾ ಮನೋಭಾವ ಎಲ್ಲಾ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಹೇಳಿದರು.
ಖಂಬದಕೋಣೆ ಸಂದೀಪನ್ ಆಂಗ್ಲ ಮಾಧ್ಯಮ ಶಾಲಾ ಅಧ್ಯಕ್ಷ ಸಂಜೀತ್ ಪ್ರಕಾಶ್ ರಾವ್ ಅಧ್ಯಕ್ಷತೆ ವಹಿಸಿದ್ದರು. ಯಕ್ಷಗಾನ ಕಲಾರಂಗ ಒಂದು ಸೇವಾ ಸಂಸ್ಥೆಯಾಗಿ ಸಾಮಾಜಿಕ-ಸಾಂಸ್ಕೃತಿಕ ಕಳಕಳಿಯಿಂದ ಏನೆಲ್ಲ ಒಳ್ಳೆಯ ಕೆಲಸ ಮಾಡಬಹುದು ಎಂಬುದಕ್ಕೆ ಯಕ್ಷಗಾನ ಅತ್ಯುತ್ತಮ ಉದಾಹರಣೆ. ಈ ಸಂಸ್ಥೆಯ ಸತ್ಕಾರ್ಯಕ್ಕೆ ನಾನು ಸದಾ ಬೆಂಬಲಿಸುತ್ತೇನೆ. ಎಂದ ಅವರು, ಬಡತನದ ನಡುವೆಯೂ ಅತ್ಯುತ್ತಮ ಶೈಕ್ಷಣಿಕ ಸಾಧನೆಗೈದ ಮಾನ್ಯಳನ್ನು ಅಭಿನಂದಿಸಿದರು. ಮಾನ್ಯಳ ಅಪೇಕ್ಷೆಯಂತೆ ಅವಳ ನೆಚ್ಚಿನ ಶಿಕ್ಷಕಿ ಕವಿತಾ ಅವರ ಜನ್ಮದಿನವನ್ನು ಆಚರಿಸಲಾಯಿತು. ಸಂದೀಪನ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಿಜೂರು ವಿಶ್ವೇಶ್ವರ ಅಡಿಗ, ಕೊಲ್ಲೂರು ಮೂಕಾಂಬಿಕಾ ದೇವಳದ ವ್ಯವಸ್ಥಾಪನ ಸಮಿತಿಯ ಸದಸ್ಯ ಮಹಾಲಿಂಗ ನಾಯ್ಕ್, ಕೊಲ್ಲೂರು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ನಾಗರಾಜ ಭಟ್, ನ್ಯಾಯವಾದಿ ದೇವರಾಜ ಶೆಟ್ಟಿಗಾರ್, ಮರವಂತೆ ಅಪ್ನಾ ಹಾಲಿಡೇಸ್‌ನ ನಾಗರಾಜ ಹೆಬ್ಬಾರ್, ಕಲಾರಂಗದ ಕೋಶಾಧಿಕಾರಿ ಪ್ರೊ. ಕೆ. ಸದಾಶಿವ ರಾವ್, ಸದಸ್ಯರಾದ ಯು. ವಿಶ್ವನಾಥ ಶೆಣೈ, ಯು. ಎಸ್. ರಾಜಗೋಪಾಲ ಆಚಾರ್ಯ, ವಿಜಯಕುಮಾರ್ ಮುದ್ರಾಡಿ, ಭುವನಪ್ರಸಾದ್ ಹೆಗ್ಡೆ, ಅನಂತರಾಜ್ ಉಪಾಧ್ಯಾಯ, ಹಿರಿಯಣ್ಣ ಕಿದಿಯೂರು, ಪ್ರಭಾಕರ ಬಂಡಿ, ಪ್ರಸನ್ನ ಹೆಗಡೆ ಉಪಸ್ಥಿತರಿದ್ದರು. ಕಲಾರಂಗ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವಿಸಿ, ಕಾರ್ಯಕ್ರಮ ನಿರೂಪಿಸಿದರು.